
ಮಂಗಳೂರು

ಚೆಲುಗನ್ನಡ
ಾಹಿತ್ಯಮಾಲೆ



ು. ಆರ್. ಶೆಟ್ಟಿ ಎಂಡ್ ಸನ್ಸ್, ಮಂಗಳೂರು.

ಚೆಲುಗನ್ನಡ ಸಾಹಿತ್ಯಮಾಲೆ

ಭಾಗ ಎರಡು

ಬರೆದವರು:

ಬಿ. ಶಂಕರ ಭಟ್ಟ,

ಬಿ. ಎಮ್. ಶರ್ಮಾ.

1949.

ಪ್ರಕಾಶಕರು:


ಯು. ಆರ್. ಶೆಣೈ, ಎಂಡ್ ಸನ್ಸ್,

ಮಂಗಳೂರು.

ಕ್ರಯ: 1—4—0.



ಕೆನರಾ ಛಾಪಖಾನೆ, ಮಂಗಳೂರು.



ನಮ್ಮ ಮಾತು

ಮದ್ರಾಸ್ ಸರಕಾರದ ಶಿಕ್ಷಣ ವಿಭಾಗವು ಪ್ರಕಟಿಸಿದ ಹೊಸ ಪಾಠಪಟ್ಟಿಗನುಸಾರವಾಗಿ ಚೆಲುಗನ್ನಡ ಸಾಹಿತ್ಯ ಮಾಲೆಯನ್ನು ಬರೆದಿದ್ದೇವೆ. ಈ ಮೂರು ಪುಸ್ತಕಗಳು ಒಂದು ಎರಡು ಮೂರನೆಯ ಈಯತ್ತೆಗಳಿಗಾಗುವಂತೆ ರಚಿತವಾಗಿವೆ. ಪಾಠಗಳ ಭಾಷೆಯ ಏಕ ರೂಪತೆಯಲ್ಲಿಯೂ, ವಿಷಯ ವೈವಿಧ್ಯದಲ್ಲಿಯೂ ಈ ಪುಸ್ತಕಗಳು ವಿದ್ಯಾರ್ಥಿಗಳಿಗೆ ಭಾಷಾಭ್ಯಾಸದಲ್ಲಿ ಉಪಯುಕ್ತವಾದ ಸುಯೋಗ್ಯ ಪಠ್ಯಪುಸ್ತಕಗಳಾಗಬಹುದೆಂದು ನಮ್ಮ ಹಾರೈಕೆ. ಈ ಪುಸ್ತಕಗಳಲ್ಲಿ ತಮ್ಮ ಕವನಗಳನ್ನು ಸೇರಿಸಿಕೊಳ್ಳಲು ನೆರವಾದ ಸನ್ಮಾನ್ಯ ಕವಿಗಳೆಲ್ಲರಿಗೂ ನಮ್ಮ ಕೃತಜ್ಞತೆಗಳು.

ವಿಜಯ ದಶಮಿ,
೧-೧೦-೧೯೪೯.

— ಬರೆದವರು.

ಪರಿವಿಡಿ

ಗದ್ಯಭಾಗ

ಪದ್ಯಭಾಗ

ಚೆಲುಗನ್ನಡ ಸಾಹಿತ್ಯಮಾಲೆ ೨

೧. ಭಾರತದ ಸ್ವಾತಂತ್ರ್ಯ

ಕ್ರಿಸ್ತಶಕ ಸಾವಿರದ ಒಂಬೈನೂರ ನಲ್ವತ್ತೇಳನೆಯ ಅಗಸ್ಟ್ ಹದಿನೈದು! ಭಾರತದ ಇತಿಹಾಸದಲ್ಲಿಯೇ ಅತ್ಯಂತ ಪವಿತ್ರವಾದ ದಿನ! ಪಾರತಂತ್ರ್ಯ ಶೃಂಖಲೆಯನ್ನು ಕಡಿದೊಗೆದು ಪವಿತ್ರ ಭಾರತ ಸ್ವತಂತ್ರವಾದ ದಿನ! ಭಾರತದ ಸ್ವಾತಂತ್ರ್ಯದ ಸುದಿನ.



ನಮ್ಮ ಭಾರತ—ನಮ್ಮ ಪುಣ್ಯಭೂಮಿ—ಇಂದು ನಿನ್ನೆ ನಾಗರಿಕತೆ ಹೊಂದಿದ ನಾಡಲ್ಲ; ನಮ್ಮ ಸಂಸ್ಕೃತಿ ನಿನ್ನೆ ಮೊನ್ನೆಯ ಸಂಸ್ಕೃತಿಯಲ್ಲ. ಶತಮಾನಗಳಿಗೂ ಹಿಂದೆ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗಿಂತಲೂ ಮೊದಲು

ಸಂಸ್ಕೃತಿಯು ಶಿಖರಕ್ಕೇರಿದ ರಾಷ್ಟ್ರ ನಮ್ಮ ಭಾರತ. ಆರ್ಯರು ಕಾಲಿಡು ವುದಕ್ಕೆ ಮೊದಲು ದ್ರಾವಿಡ ಜನಾಂಗದ ಸುವರ್ಣ ಸಂಸ್ಕೃತಿಯಿಂದ ಸಂಸ್ಕಾರ ಹೊಂದಿದ ನಾಡಿದು. ಆರ್ಯರು ಇಲ್ಲಿಗೆ ಆಗಮಿಸಿದರು; ನಮ್ಮ ರಾಷ್ಟ್ರ ಆರ್ಯಾವರ್ತವಾಯಿತು. ಪುಣ್ಯ ಪುರುಷ ಭರತ ಚಕ್ರವರ್ತಿ ಜನಿಸಿ ಜನ ಪಾಲನೆ ಮಾಡಿದ; ನಮ್ಮ ರಾಷ್ಟ್ರ ಭಾರತವಾಯಿತು; ನಮ್ಮ ನೆಲತಾಯಿ ಭಾರತಮಾತೆಯಾದಳು. ಆರ್ಯ ಜನಾಂಗದಿಂದ ನಮ್ಮ ರಾಷ್ಟ್ರ ಸಂಸ್ಕೃತಿಯು ತುತ್ತತುದಿಗೇರಿತು. ವಸಿಷ್ಠ, ವಿಶ್ವಾಮಿತ್ರ, ಗೌತಮ, ಭರದ್ವಾಜರಂತಹ ಮಹಾ ಮಹಾ ಋಷಿಗಳು ಆರ್ಯ ಜನಾಂಗದಲ್ಲಿ ಜನ್ಮ ವೆತ್ತಿ ವೇದಗಳ ರಚನೆಯೆಸಗಿದರು. ಪ್ರಪಂಚದಲ್ಲಿ ಆದಿ ಸಾಹಿತ್ಯವಾದ ವೇದಗಳನ್ನು ರಚಿಸಿದ ಆ ಮಹಾ ಮಹಿಮರು ನಮ್ಮ ಭಾರತದ ಸುಪುತ್ರ ರೆಂದು ಹೇಳಲು ನಮಗೆಷ್ಟು ಅಭಿಮಾನ! ಜನಕ, ಯಾಜ್ಞವಲ್ಕ್ಯರಂತಹ ಮಹಾಜ್ಞಾನಿಗಳು ನಮ್ಮ ಭಾರತದಲ್ಲಿ ಜನಿಸಿ ಭಾರತವನ್ನು ಜ್ಞಾನದ ಗಣಿಯಾಗಿಸಿದರು. ಸತ್ಯಕ್ಕಾಗಿ ಸಕಲವನ್ನೂ ತ್ಯಾಗಮಾಡಿದ ಹರಿಶ್ಚಂದ್ರ, ಬಂಧುಗಳಿಗಾಗಿ ಭಾಗೀರಥಿಯನ್ನೇ ಭೂಮಿಗಿಳಿಸಿದ ಭಗೀರಥ ಇವರೆಲ್ಲ ಭಾರತ ಪುತ್ರರಿಂದ ಭಾರತಮಾತೆ ಭಾಗ್ಯಶಾಲಿನಿಯೆನಿಸಿದಳು. ಪುಣ್ಯ ಪುರುಷ ರಾಮಚಂದ್ರ ಜನ್ಮತಾಳಿದ; ರಾಮರಾಜ್ಯ ಕಟ್ಟಿದ. ರಾಮರಾಜ್ಯ ಎಂದರೆ ಏನದು? ಬಡತನ ಬರಗಾಲ, ರೋಗರುಜೆ, ಅಶಾಂತಿ ಅಸುಖ ಮುಂತಾದ ನಷ್ಟಕಷ್ಟಗಳಿಲ್ಲದ ಸರ್ವತಂತ್ರಸ್ವತಂತ್ರವಾದ ರಾಜ್ಯವೇ ರಾಮ ರಾಜ್ಯ! ರಾಮರಾಜ್ಯದ ಸುಖವನ್ನನುಭವಿಸಿದ ರಾಷ್ಟ್ರ ನಮ್ಮ ಭಾರತ. ಸೀತಾ ಸಾವಿತ್ರಿಯರಂತಹ ಮಹಾಸತಿಯರಿಂದ ಭಾರತ ಪುಣ್ಯಭೂಮಿ ಯಾಯಿತು; ಪಾತಿವ್ರತ್ಯದ ಪವಿತ್ರಕ್ಷೇತ್ರವೆನಿಸಿತು. ಕೃಷ್ಣ ಭಗವಾನ್ ಜನಿಸಿದ; ಗೀತೆ ಸಾರಿದ; ಭಾರತವನ್ನು ಅಮರವಾಗಿಸಿದ.

ಇನ್ನೂ ಎಂತೆಂತಹ ಎಷ್ಟೋ ಮಂದಿ ಪುಣ್ಯ ಪುರುಷರು ಭಾರತದಲ್ಲಿ ಜನ್ಮಪಡೆದು, ಪುಣ್ಯಭೂಮಿ ಎಂಬ ಹೆಸರನ್ನು ಸಾರ್ಥಕಗೊಳಿಸಿದರು. ಲೋಕದಲ್ಲಿ ಒಂದೇ ಒಂದು ಜೀವಿ ಅಸುಖದಲ್ಲಿ ನವೆಯುತ್ತಿರುವಷ್ಟು ದಿನ— ಅಶಾಂತಿಯಲ್ಲಿ ತೊಳಲುತ್ತಿರುವಷ್ಟರ ವರೆಗೆ— ತನಗೆ ನಿರ್ವಾಣವಿಲ್ಲ ವೆಂದು ಸಾರಿದ ಬುದ್ಧಭಗವಂತನಿಂದ ನಮ್ಮ ಭಾರತ ಲೋಕವಿಖ್ಯಾತವಾಗಿ


ಬೆಳಗಿತು; ಅಹಿಂಸಾಧರ್ಮದ ಶಾಂತಿಪಾಠವನ್ನು ಪ್ರಪಂಚಕ್ಕೇ ಸಂದೇಶಿಸಿತು. ಮತ್ತೆ ಅದೊಬ್ಬ ಮಹಾನ್ ಚಕ್ರವರ್ತಿಯಿಂದ ನಮ್ಮ ಭಾರತ ಬೃಹತ್ತರ ಭಾರತನೆನಿಸಿತು; ಅಶೋಕ ಭಾರತವಾಗಿ ಬುದ್ಧಗುರುವಿನ ಅಹಿಂಸಾಧರ್ಮದ ಶಾಂತಿಪಾಠವನ್ನು ಪುನರಾವರ್ತಿಸಿತು. ಆ ಮಹಾನ್ ಚಕ್ರವರ್ತಿ ಯಾರು? ಅವನೇ ನಮ್ಮ ರಾಷ್ಟ್ರಧ್ವಜಕ್ಕೆ ಚಕ್ರಚಿಹ್ನೆಯನ್ನಿತ್ತ ದೇವಾನಾಂಪ್ರಿಯ ಪ್ರಿಯದರ್ಶಿ ಅಶೋಕ. ಅಶೋಕನಂತಹ ಚಕ್ರವರ್ತಿ ಇಂದಿನ ತನಕ ಪ್ರಪಂಚದಲ್ಲಿ ಬೇರೊಬ್ಬ ಜನಿಸಲಿಲ್ಲ. ಯುದ್ಧದಲ್ಲಿ ಅಪಾರವಾದ ವಿಜಯಲಭಿಸಿದರೂ, ಯುದ್ಧದ ನರಕಯಾತನೆ ಕಂಡು ಮನಕರಗಿ ಸತ್ಯ ಪ್ರೇಮ ಅಹಿಂಸೆಗಳ ಬಲದಿಂದಲೇ ಸಾಮ್ರಾಜ್ಯವಾಳಿ ಧರ್ಮವಿಜಯ ಗಳಿಸಿದ ಮಹಾ ಪ್ರಭು ಪ್ರಿಯದರ್ಶಿ ಅಶೋಕ. ಆತನ ಕಾಲದಲ್ಲಿ ನಮ್ಮ ಭಾರತ ಅಫಘಾನಿಸ್ತಾನ ಬಲೂಚಿಸ್ತಾನಗಳನ್ನೂ ಒಳಗೊಂಡ ಬೃಹತ್ತರ ಭಾರತವೆಂಬ ಕೀರ್ತಿಗೆ ಪಾತ್ರವಾಗಿ ಮೆರೆಯಿತು. ಅಂದಿನ ಸ್ವತಂತ್ರ ಭಾರತದ ಸಂಪತ್ತೇನು! ವೈಭವವೇನು! ಗೌರವವೇನು! ಶಾಂತಿಯೇನು! ಸುಖಸೌಕರ್ಯಗಳೇನು! ನಿಜವಾಗಿಯೂ ಅಶೋಕನ ಭಾರತವೆಂದರೆ ಅ-ಶೋಕ ಭಾರತವೇ ಸರಿ.

ನಮ್ಮ ಭಾರತಕ್ಕೆ ಒಂದರಿಂದ ಮೇಲೆ ಒಂದರಂತೆ ಒಂದೊಂದೇ ಜನಾಂಗಗಳು ನುಗ್ಗಿದುವು; ಸ್ವತಂತ್ರ ಭಾರತವನ್ನು ಸೂರೆಮಾಡಲು ಹವಣಿಸಿದುವು. ಮೊದಲಾಗಿ ಆರ್ಯರು ಆಗಮಿಸಿದರು. ಈ ನೆಲವನ್ನು ಸಂಸ್ಕೃತಿ ಸಂಪತ್ತಿನಿಂದ, ಅಧ್ಯಾತ್ಮವಿದ್ಯೆಯಿಂದ ತುಂಬಿದರು. ಆರ್ಯರು ಈ ಪುಣ್ಯಭೂಮಿಗೆ ಭರತನಂತಹ ಮಹಾಮಹಿಮ ಚಕ್ರವರ್ತಿಯನ್ನಿತ್ತು ಆತನ ಹೆಸರಿನಿಂದಲೇ ಈ ಭೂಮಿ ವಿಖ್ಯಾತವಾಗುವಂತೆ ಮಾಡಿದರು. ಆ ಮೇಲೆ ಗ್ರೀಕರು, ಪರ್ಷಿಯನ್ನರು ಬಂದರು; ಮತ್ತೆ ಹೂಣರು ಒಳನುಗ್ಗಲು ಹವಣಿಸಿದರು; ಮುಂದೆ ಮಹಮ್ಮದೀಯರು ಆಕ್ರಮಿಸಿದರು. ಮಹಮ್ಮದೀಯರು ಇಲ್ಲಿ ರಾಜ್ಯ ಕಟ್ಟಿ ತಾವೂ ಭಾರತೀಯರಾಗಿ ಭಾರತೀಯ ಕಲೆಯಲ್ಲಿ ತಮ್ಮದೇ ಆದ ಒಂದು ವೈಶಿಷ್ಟ್ಯ ಬೆಳೆಯಿಸಿದರು. ಕೊನೆಕೊನೆಗೆ ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಇಂಗ್ಲಿಷರು ಮೊದಲಾದ ಪಾಶ್ಚಿಮಾತ್ಯರು ತಂಡತಂಡವಾಗಿ ಭಾರತಕ್ಕೆ ಧುಮುಕಿದರು.

ಹೀಗೆ ಭಾರತಕ್ಕೆ ನುಗ್ಗಿದ ಈ ಜನಾಂಗಗಳಲ್ಲಿ ಆರ್ಯರನ್ನು ಬಿಟ್ಟರೆ ಉಳಿದವರೆಲ್ಲ ಇಲ್ಲಿ ತಿಂಡುಂಡು ಸುಖವಾಗಿರಲು ಬಯಸದೆ, ಉಂಡಮನೆಗೆ ಎರಡೆಣಿಸಿ ಭಾರತದ ಸ್ವಾತಂತ್ರ್ಯವನ್ನೇ ಅಪಹರಿಸಲು ಯತ್ನಿಸಿದರು. ಒಂದೆರಡು ಜನಾಂಗಗಳು ಈ ದುಷ್ಕಾರ್ಯದಲ್ಲಿ ಜಯಪ್ರದರಾಗಿ ಹಲವು ಕಾಲ ಭಾರತದ ರಕ್ತಹೀರಿ ಕೊಬ್ಬಿ ಉಬ್ಬಿ ಮೆರೆದರು. ಮತ್ತೆ ತಮ್ಮ ಕಾಲ ಸಂದಾಗ ಕಾಲುಕಿತ್ತರು. ಹೀಗೆ ಆರ್ಯರ ಕಾಲದಿಂದ ಇಂದಿನ ವರೆಗೆ ನಮ್ಮ ಭಾರತ ಒಂದೆರಡುಬಾರಿ ಅನೇಕ ವರ್ಷಗಳ ತನಕ ಪಾರತಂತ್ರ್ಯದ ನರಕಯಾತನೆಯನ್ನು ಅನುಭವಿಸಬೇಕಾಯಿತು. ಪರಕೀಯರ ಸೆಳವು ಸುಲಿಗೆಗಳಿಗೆ ಈಡಾಗಬೇಕಾಯಿತು.

ಈ ತೆರನಾಗಿ ಭಾರತದ ಒಳಹೊಕ್ಕು ಭಾರತೀಯರ ಸರ್ವಸ್ವಾತಂತ್ರ್ಯವನ್ನು ಅಪಹರಿಸಿ ಒಂದುವರೆ ಎರಡು ಶತಮಾನಗಳ ಕಾಲ ಸಂಪತ್ತು ಸಂಸ್ಕೃತಿ ಕಲೆ ವಿದ್ಯೆಯೆಲ್ಲವನ್ನೂ ಅಡಿಮೇಲಾಗಿಸಿದ ಇಂಗ್ಲಿಷರ ಬಿಳಿ ಮುಖವನ್ನು ಭಾರತೀಯರು ಕಂಡದ್ದು ಕ್ರಿ. ಶ. 1615ನೆಯ ವರ್ಷದಲ್ಲಿ. ಆಗ ಇಂಗ್ಲೆಂಡಿನ ರಾಯಭಾರಿಯೊಬ್ಬ ಭಾರತದ ಮೊಗಲ ಚಕ್ರವರ್ತಿಯ ಆಸ್ಥಾನಕ್ಕೆ ಬಂದು ತನ್ನ ಜನಾಂಗದವರು ಇಲ್ಲಿ ಬಂದು ವ್ಯಾಪಾರ ನಡೆಯಿಸಲು ಅನುಮತಿ ಕೊಡಬೇಕೆಂದು ಬೇಡಿದ. ಹಾಗೆ ಅಪ್ಪಣೆ ಪಡೆದು ಈ ದೇಶದಲ್ಲಿ ವ್ಯಾಪಾರ ವ್ಯವಹಾರ ನಡೆಯಿಸುವುದಕ್ಕಾಗಿ ಬಂದ 'ಈಸ್ಟ್ ಇಂಡಿಯಾ ಕಂಪೆನಿ' ಮೆಲ್ಲ ಮೆಲ್ಲನೆ ದೇಶದ ಇತರ ವ್ಯವಹಾರಗಳಲ್ಲಿಯೂ ಕೈಹಾಕಿ, ಕೋಟೆ ಕಟ್ಟಿ, ಸೈನ್ಯ ಸೇರಿಸಿ ಉಂಡ ಮನೆಯ ಗಳ ಎಣಿಸುವ ಕೆಲಸಕ್ಕೆ ತೊಡಗಿತು. ಕಂಪೆನಿಯ ಸ್ವಾರ್ಥ ದಿನದಿಂದ ದಿನಕ್ಕೆ ಹೆಚ್ಚುತ್ತ ಬಂದು, ಅದೊಂದು ವ್ಯಾಪಾರೀ ಸಂಸ್ಥೆಯಾಗಿ ಮಾತ್ರ ಉಳಿಯದೆ "ಕುಂಪನಿ ಸರಕಾರ"ವೇ ಆಯಿತು. 'ಕುಂಪನಿ ಸರಕಾರ' ಭಾರತದ ಚಿಕ್ಕ ಚಿಕ್ಕ ರಾಜ್ಯಗಳನ್ನು ಪರಸ್ಪರ ತಾಗಿಸಿ, ಕಾದಾಡಿಸಿ ಇಬ್ಬರ ನ್ಯಾಯ ಮೂರನೆಯವನ ಆದಾಯ ಸಾಧಿಸಿತು. ಹೀಗೆ 'ಈಸ್ಟ್ ಇಂಡಿಯಾ ಕಂಪೆನಿ' ಭಾರತದ ಸರ್ವ ಸ್ವಾತಂತ್ರ್ಯವನ್ನೂ ಅಪಹರಿಸಿ ಒಂದು ನೂರು ವರ್ಷಕಾಲ ಸ್ವಚ್ಛಂದವಾಗಿ ಮುಂಗಮುಷ್ಟಿಯಿಂದ ಭಾರತವನ್ನು ಬಿಗಿಹಿಡಿದು ಆಳಿಕೊಂಡಿತು. ಸ್ವಾತಂತ್ರ್ಯವನ್ನು ಕಳಕೊಂಡ ಈ ನಮ್ಮ

ಪುಣ್ಯಭೂಮಿ ತನ್ನ ಭಾರತವೆಂಬ ಪವಿತ್ರನಾಮವನ್ನು ಕೂಡ ಕಳೆದುಕೊಂಡು 'ಇಂಡಿಯಾ' ಎನ್ನಿಸಿಕೊಳ್ಳಬೇಕಾಯಿತು.



'ಈಸ್ಟ್ ಇಂಡಿಯಾ ಕಂಪೆನಿ'ಯ ಕರಾಳ ಶಾಸನವನ್ನು ಕಿತ್ತೊಗೆದು ಭಾರತವನ್ನು ಪರಕೀಯರ ಬಂಧನದಿಂದ ಬಿಡುಗಡೆಮಾಡುವುದಕ್ಕಾಗಿ ಕ್ರಿ. ಶ. 1857ರಲ್ಲಿ ಮೊತ್ತಮೊದಲನೆಯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ನಡೆಯಿತು. ಬ್ರಿಟಿಷರಿದನ್ನು 'ಸಿಪಾಯಿ ದಂಗೆ' ಎಂದು

ಕರೆದರು. ನಾವಿದನ್ನು ಸ್ವಾತಂತ್ರ್ಯ ಸಂಗ್ರಾಮವೆಂದೇ ಹೇಳುವೆವು. ಭಾರತೀಯ ಸೈನಿಕರು ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಬಿಳಿಯರನ್ನು ಭಾರತದಿಂದೋಡಿಸಲು ಹವಣಿಸಿದರು. ವೀರ ಯೋಧರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸ್ವಾತಂತ್ರ್ಯ ಯಜ್ಞಕ್ಕಾಹುತಿಯಾದರು; ಝಾನ್ಸೀ ರಾಣಿ—ಭಾರತದ ಸ್ವಾತಂತ್ರ್ಯದ ಅಧಿದೇವಿ—ಸ್ವಾತಂತ್ರ್ಯ ಸಮರ ದಲ್ಲಿ ಪ್ರಾಣವನ್ನರ್ಪಿಸಿದಳು. ಆದರೆ ಭಾರತ ಪುತ್ರ ಪುತ್ರಿಯರ ಆ ಪ್ರಥಮ ಸ್ವಾತಂತ್ರ್ಯ ಸಮರ ಜಯಪ್ರದವಾಗಲಿಲ್ಲ; ಭಾರತದ ದುರದೃಷ್ಟ ಕಳೆಯ ಲಿಲ್ಲ. ಮತ್ತೂ ಒಂದು ಶತಮಾನದ ಕಾಲ ಪಾರತಂತ್ರ್ಯದಲ್ಲಿ ನವೆಯುವ ದುರದೃಷ್ಟ ನಮ್ಮ ಭಾರತದ ಹಣೆಯಲ್ಲಿ ಬರೆದಿತ್ತು. ಈ ಸ್ವಾತಂತ್ರ್ಯ ಸಮರದ ಫಲವಾಗಿ ಭಾರತ 'ಈಸ್ಟ್ ಈಂಡಿಯಾ ಕಂಪೆನಿ'ಯ ಕೈತಪ್ಪಿ ಬ್ರಿಟಿಷ್ ಚಕ್ರಾಧಿಪತ್ಯದ ವಶವಾಯಿತು; ಇದರ ಫಲವಾಗಿ ಬ್ರಿಟಿಷರ ಮತ, ಧರ್ಮ, ನಡೆ, ನುಡಿ, ವಿದ್ಯಾಭ್ಯಾಸ ಪದ್ಧತಿ, ಆಡಳಿತಕ್ರಮ ಎಲ್ಲವೂ ಭಾರತೀಯರ ತಲೆಯ ಮೇಲೆ ಹೇರಿಸಲ್ಪಟ್ಟು, ಭಾರತದ ಸಾಂಸ್ಕೃತಿಕ ಸ್ವಾತಂತ್ರ್ಯವೂ ನಾಶವಾಯಿತು.

ಭಾರತೀಯರು ಪರದಾಸ್ಯದ ನರಕದಲ್ಲಿ ಹಲವು ವರ್ಷ ನವೆದರು. ದಿನದಿನವೂ ಪಾರತಂತ್ರ್ಯದ ನರಕಯಾತನೆಯನ್ನನುಭವಿಸುತ್ತಲಿದ್ದ ಭಾರತೀ ಯರಲ್ಲಿ ಹಲವರ ಹೃದಯದಲ್ಲಿ ಸ್ವಾತಂತ್ರ್ಯದ ದಾಹ ಹುಟ್ಟಿತು; ದಿನದಿಂದ ದಿನಕ್ಕೆ ಆ ದಾಹ ಬೆಳೆಯಿತು. ಈ ಸ್ವಾತಂತ್ರ್ಯ ದಾಹವೇ 'ಅಖಿಲ ಭಾರತ ರಾಷ್ಟ್ರೀಯ ಮಹಾ ಸಭೆ'ಯ ಜನ್ಮಕ್ಕೆ ಕಾರಣವಾಯಿತು. ಕ್ರಿ. ಶ. 1885ರಲ್ಲಿ ಇಂದಿಗೆ ಭಾರತದ ಸ್ವಾತಂತ್ರ್ಯ ಸಾಧಿಸಿದ 'ಅಖಿಲ ಭಾರತ ರಾಷ್ಟ್ರೀಯ ಮಹಾ ಸಭೆ'ಯು ಜನ್ಮತಾಳಿತು. ಈ ಮಹಾ ಸಂಸ್ಥೆ ಹುಟ್ಟಿ ಕೊಂಡ ಕೂಡಲೇ ಭಾರತದ ಸ್ವಾತಂತ್ರ್ಯಕ್ಕಾಗಿ ಎಡೆಬಿಡದೆ ಹೆಣಗಾಡ ತೊಡಗಿತು; ಸ್ವಾತಂದ್ರ್ಯದ ಗುರಿಮುಟ್ಟಲು ಒಂದೊಂದೇ ಹಜ್ಜೆ ಮುಂದಿ ಟ್ಟಿತು. ಆಗಲೇ ಕ್ರಿ. ಶ. 1919ನೆಯ ವರ್ಷದಲ್ಲಿ ಭಾರತದ ಸ್ವಾತಂತ್ರ್ಯ ಸಾಧಿಸಿದ ಮಹಾಮಹಿಮ ನಮ್ಮ ರಾಷ್ಟ್ರಪಿತ ರಾಷ್ಟ್ರೀಯ ಮಹಾಸಭೆಯ ಮುಂದಾಳ್ತನ ವಹಿಸಿಕೊಂಡರು; ಭಾರತೀಯ ಸ್ವಾತಂತ್ರ್ಯ ಸಮರದ ಸರ್ವಸೇನಾಪತಿಯಾಗಿ ರಾಷ್ಟ್ರದ ಜನತೆಯನ್ನು ಸತ್ಯಾಗ್ರಹ ಸಮರಕ್ಕೆ

ಅಣಿಗೊಳಿಸಿದರು; ಸತ್ಯ ಅಹಿಂಸೆಗಳೆಂಬ ಅವೆರಡು ದಿವ್ಯಾಸ್ತ್ರಗಳ ಮೂಲಕ ಮೂರು ಮಹಾ ಸಮರಗಳನ್ನು ನಡೆಸಿದರು. ಕಟ್ಟಕಡೆಗೆ ಕ್ರಿ. ಶ, 1942ರಲ್ಲಿ ನಡೆದ ಭಾರತೀಯ ಸ್ವಾತಂತ್ರ್ಯದ ಅಂತಿಮ ಸಂಗ್ರಾಮ 'ಕ್ವಿಟ್ ಇಂಡಿಯಾ' ಚಳವಳ—ಸಂಪೂರ್ಣ ರಾಷ್ಟ್ರವನ್ನೇ ಪುನರುಜ್ಜೀವನ ಗೊಳಿಸಿತು; ಭಾರತದಿಂದ ಬ್ರಿಟಿಷರು ಕಾಲುಕೀಳುವಂತೆ ಮಾಡಿತು; ಭಾರತದ ಸ್ವಾತಂತ್ರ್ಯ ಸಾಧಿಸಿತು. ಕ್ರಿ. ಶ. 1947ನೆಯ ಅಗಸ್ಟ 15ರಂದು ಭಾರತ ಬಂಧಮುಕ್ತವಾಯಿತು! ಎರಡು ಶತಮಾನಗಳ ಪಾರತಂತ್ರ್ಯ ನಿಶೆ ಹರಿಯಿತು; ಸ್ವಾತಂತ್ರ್ಯ ರವಿಯು ಉದಯವಾಯಿತು!

ಭಾರತದ ಸ್ವಾತಂತ್ರ್ಯದ ಆದರ್ಶಯಾವುದು? ಪರರಾಜ್ಯವನ್ನು ಆಕ್ರಮಿಸಿ, ಅನ್ಯ ಜನಾಂಗವನ್ನು ಮೆಟ್ಟಿ ತುಳಿದು ರಾಜ್ಯವಿಸ್ತರಿಸುವುದು, ನಮ್ಮ ಸ್ವಾತಂತ್ರ್ಯದ ಉದ್ದೇಶವೆ? ಆದರ್ಶವೆ? ಅಲ್ಲ, ಎಂದಿಗೂ ಅಲ್ಲ. ಭಾರತದ ಸ್ವಾತಂತ್ರ್ಯದ ಆದರ್ಶ ಬುದ್ಧ ಭಗವಂತನ ಧರ್ಮಭಾರತದ ಆದರ್ಶ! ಪ್ರಿಯದರ್ಶಿ ಅಶೋಕ ಚಕ್ರವರ್ತಿಯ ಬೃಹತ್ತರ ಅಶೋಕ ಭಾರತದ ಆದರ್ಶ! ಮಹಾಮಹಿಮ ಮಹಾತ್ಮಾಜೀ ಕನಸುಕಂಡ ರಾಮ ರಾಜ್ಯ ಭಾರತದ ಆದರ್ಶ! ಸತ್ಯ ಅಹಿಂಸೆ ಶಾಂತಿ ನೀತಿಗಳ ಮೂಲಕ ಪ್ರಪಂಚದ ಸಕಲ ರಾಷ್ಟ್ರಗಳೂ, ಎಲ್ಲಾ ಜನಾಂಗಗಳೂ ಜಾತಿ, ಧರ್ಮ, ವರ್ಣಭೇದಗಳನ್ನು ಮರೆತು ಪರಸ್ಪರ ಸಹೋದರ ಪ್ರೇಮದಿಂದ ಸುಖ ಸಂಪತ್ತು ಸಾಧಿಸಬೇಕೆಂಬುದೇ ಭಾರತದ ಸ್ವಾತಂತ್ರ್ಯದ ಹಿರಿಯ ಗುರಿ ಯಾಗಿದೆ. ಬಲಪ್ರಯೋಗದಿಂದ ಸ್ವಜನರನ್ನಾಗಲೀ ಪರಜನರನ್ನಾಗಲೀ ಮೆಟ್ಟಿ ತುಳಿದು, ಮಂಗಮುಷ್ಟಿಯಿಂದ ಬಿಗಿಹಿಡಿದು ಆಳಬೇಕೆಂಬುದು ಭಾರತ ಸ್ವಾತಂತ್ರ್ಯ ಸಾಧಿಸಿದುದರ ಉದ್ದೇಶವಲ್ಲ. ನಮ್ಮ ರಾಷ್ಟ್ರಪಿತ ಹಾಗೆ ನಮಗೆ ಕಲಿಸಲಿಲ್ಲ. ಆತ ನಮಗಿತ್ತ ಸ್ವಾತಂತ್ರ್ಯದ ಸಂದೇಶವೇ ಬೇರೆ; ಬುದ್ಧಭಗವಂತ, ಪ್ರಿಯದರ್ಶಿ ಅಶೋಕ ಈ ಮಹಾಮಹಿಮರು ಅಂದಿನ ಸ್ವತಂತ್ರ ಭಾರತಕ್ಕೆ ಯಾವ ಸಂದೇಶ ಸಾರಿದರೋ ಅದೇ ಮಹಾ ಸಂದೇಶವನ್ನು ನಮ್ಮ ರಾಷ್ಟ್ರಪಿತ ಇಂದಿನ ಸ್ವತಂತ್ರ ಭಾರತಕ್ಕೆ ಸಾರಿದರು. ಆ ದಿವ್ಯ ಸಂದೇಶವೇನು? ಮಹಾತ್ಮಾಜೀ ಕನಸುಕಂಡ ರಾಮರಾಜ್ಯ ಭಾರತದ ಆದರ್ಶವೇನು?

ಎಲ್ಲಿ ಬಲು ಬಡವರು ಕೂಡ "ಇದು ನಮ್ಮ ನಾಡು, ಇದನ್ನು ರೂಪುಗೊಳಿಸುವುದರಲ್ಲಿ ನಾವೂ ಭಾಗಿಗಳು; ಇದನ್ನು ಪ್ರಗತಿಗೆ ತರುವ ಹೊಣೆಗಾರಿಕೆ ನಮ್ಮದು" ಎಂದೆಣಿಸುವರೋ—

ಎಲ್ಲಿನ ಜನತೆಯಲ್ಲಿ ಮೇಲು ಕೀಳು ಬಡವ ಬಲ್ಲಿದ ಎಂಬ ಭೇದ ವಿಲ್ಲವೋ—

ಎಲ್ಲಿ ಸಕಲ ಮತಧರ್ಮದವರೂ ಪರಸ್ಪರ ಪ್ರೇಮದಿಂದ ಸಹೋದರ ಸ್ನೇಹದಿಂದ ನೆಲಸಿರುವರೋ—

—ಅಂತಹ ಭಾರತಕ್ಕಾಗಿ ನಾನು ಹೆಣಗಾಡುತ್ತೇನೆ; ಅದೇ ಭಾರತದ ನಿಜವಾದ ಸ್ವಾತಂತ್ರ್ಯ!

—ಆ ನನ್ನ ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯತೆಯು ಕಳಂಕವಾಗಲೀ, ಮಾದಕ ವಸ್ತುಗಳ ಮದವಾಗಲೀ ಇರಲು ಎಡೆ ಇಲ್ಲ.

—ಆ ನನ್ನ ಕನಸಿನ ಭಾರತದ ರಾಮ ರಾಜ್ಯದಲ್ಲಿ ಪುರುಷರಿಗೆ ಎಷ್ಟರ ಮಟ್ಟಿನ ಅಧಿಕಾರವೋ ಸ್ತ್ರೀಯರಿಗೂ ಅಷ್ಟೇ ಅಧಿಕಾರ.

ಇದೇ ನಾನು ಕನಸುಕಾಣುವ ಸ್ವತಂತ್ರ ಭಾರತ; ಇದೇ ನನ್ನ ರಾಮ ರಾಜ್ಯ!

ಇದುವೇ ಬುದ್ಧ ಭಗವಂತನ ಧರ್ಮಭಾರತ! ಇದುವೇ ಪ್ರಿಯ ದರ್ಶಿ ಅಶೋಕ ಚಕ್ರವರ್ತಿಯ ಬೃಹತ್ತರ ಅ-ಶೋಕ ಭಾರತ! 1947ನೆಯ ಇಸವಿ ಅಗಸ್ಟ್ 15ರಂದು ನಮ್ಮ ಭಾರತದ ಸ್ವಾತಂತ್ರ್ಯ ವೇನೋ ಸಾಧಿಸಿತು. ಪೂಜ್ಯ ಮಹಾತ್ಮಾಜೀ ಭಾರತದ ಸ್ವಾತಂತ್ರ್ಯ ಸಾಧಿಸಿಕೊಟ್ಟರು. ಆ ಸ್ವಾತಂತ್ರ್ಯವನ್ನು ಅಕ್ಷುಣ್ಣವಾಗಿರಿಸುವುದು, ಭಾರತ ವನ್ನು ಬಾಪೂಜೀ ಕನಸುಕಂಡ ರಾಮರಾಜ್ಯವಾಗಿಸುವುದು ಇಂದಿನ ಮುಂದಿನ ಜನಾಂಗವಾದ ನಮ್ಮೆಲ್ಲರ ಕರ್ತವ್ಯ; ಅದೇ ನಮ್ಮೆಲ್ಲರ ಪವಿತ್ರ ಉದ್ದೇಶ. ವಿಶ್ವಶಾಂತಿ, ವಿಶ್ವಪ್ರೇಮ, ಸತ್ಯ ಅಹಿಂಸೆಗಳ ಪಾಲನೆ ಇದು ನಮ್ಮ ಹಿರಿಯ ಗುರಿ! ಈ ಹಿರಿಯ ಗುರಿ ಸಾಧಿಸುವುದಕ್ಕಾಗಿ ನಾವು ಸತತ ಶ್ರಮ ವಹಿಸಬೇಕು. ರಾಷ್ಟ್ರಪಿತನ ಕನಸನ್ನು ನೆನಸಾಗಿಸಲು ಸತತ ದುಡಿಯಬೇಕು. ಹಾಗೆ ಮಾಡಿದರೆ ಮಾತ್ರ ಭಾರತದ ಸ್ವಾತಂತ್ರ್ಯ ಸಫಲವಾಗುವುದು; ನಾವು ನಿಜವಾದ ಭಾರತೀಯರೆಂಬ ಹೆಸರು

ಅನ್ವರ್ಥವಾಗುವುದು. ನಮ್ಮ ಭಾರತಕ್ಕೆ ಗೆಲವಾಗಲಿ! ಭಾರತಮಾತೆಗೆ ಜಯವಾಗಲಿ!

ಅಭ್ಯಾಸ

1. ನಮ್ಮ ಪುಣ್ಯ ಭೂಮಿಗೆ ಆರ್ಯಾವರ್ತ ಭರತಭೂಮಿಗಳೆಂಬ ಹೆಸರುಗಳು ಹೇಗೆ ಬಂದುವು?

2. ಹರಿಶ್ಚಂದ್ರ ಭಗೀರಥರ ಕತೆಗಳನ್ನು ತಿಳಿದುಕೊಳ್ಳಿರಿ.

3. ಬುದ್ಧ ಭಗವಂತನು ಸಾರಿದುದೇನು?

4. ಭಾರತದಲ್ಲಿ ಅಶೋಕ ಚಕ್ರವರ್ತಿಗೆ ಅಷ್ಟೊಂದು ಮಹತ್ವವೇಕೆ?

5. ಭಾರತಕ್ಕೆ ಆಗಮಿಸಿದ ಬೇರೆ ಬೇರೆ ಜನಾಂಗಗಳಾವುವು?

6. ಇಂಗ್ಲಿಷರು ಭಾರತಕ್ಕೆ ಯಾವಾಗ ಕಾಲಿರಿಸಿದರು? ಅವರು ಬಂದು ಇಲ್ಲಿ ನೆಲಸಿದ ಬಗೆ ಹೇಗೆ?

7. ನಮ್ಮ ರಾಷ್ಟ್ರಪಿತ ಗಾಂಧೀಜಿ ನಡೆಯಿಸಿದ ಮೂರು ಮಹಾ ಸಮರಗಳ ವಿಷಯ ನಿಮಗೇನು ತಿಳಿದಿದೆ?

8. ಭಾರತದ ಸ್ವಾತಂತ್ರ್ಯದ ಆದರ್ಶ ಯಾವುದು?

9. ಮಹಾತ್ಮಾಜಿ ಕನಸು ಕಂಡ ರಾಮರಾಜ್ಯದ ಭಾರತದ ಆದರ್ಶವೇನು?

10. ಮುಂದಿನ ನುಡಿಗಟ್ಟುಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿರಿ:— ಸೂರೆಮಾಡು; ರಕ್ತಹೀರು; ಅಡಿಮೇಲಾಗಿಸು; ಉಂಡ ಮನೆಯ ಗಳ ಎಣಿಸು; ನರಕ ಯಾತನೆ; ಮಂಗಮುಷ್ಟಿ.

11. ಮುಂದಿನ ಪದಗಳಲ್ಲಿನ ಅಕ್ಷರಗಳಲ್ಲಿರುವ ಸ್ವರ ವ್ಯಂಜನಗಳನ್ನು ವಿಂಗಡಿಸಿ ಬರೆಯಿರಿ:—ಭಾರತ, ಸ್ವಾತಂತ್ರ್ಯ, ಪ್ರಾಣ, ಜನ್ಮ, ಸಮರ.

12. ಮುಂದಿನ ಪದಗಳಲ್ಲಿನ ಅಲ್ಪಪ್ರಾಣ ಮಹಾಪ್ರಾಣ ಅಕ್ಷರ ಗಳನ್ನು ಗುರುತಿಸಿರಿ:—ಭಾರತ; ಸ್ವಾತಂತ್ರ್ಯ; ಅಧಿದೇವಿ; ಬುದ್ಧಭಗವಂತ; ಸಾಧಿಸು; ಸುಖದುಃಖ.

೨. ವೀರ ಕೌರವ

ಭೀಷ್ಮ ಪಿತಾಮಹನು ಶರಶಯ್ಯೆಯಲ್ಲಿ ಮಲಗಿದುದನ್ನು ಕಂಡು ಕೌರವೇಶ್ವರನು ಹಿಂಜರಿಯಲಿಲ್ಲ. ದ್ರೋಣ, ಜಯದ್ರಥ, ಭಗದತ್ತಾದಿಗಳ ಮರಣದಿಂದ ಅಳುಕಲಿಲ್ಲ. ಅಚ್ಚು ಮೆಚ್ಚಿನ ಕರ್ಣ ದುಶ್ಶಾಸನರ



ಸಾವಿನಿಂದಾಗಿ ಎದೆಗೆಡಲಿಲ್ಲ. ಹನ್ನೊಂದು ಅಕ್ಷೋಹಿಣೀ ಸೈನ್ಯಕ್ಕೆ ಅಧೀಶನಾಗಿದ್ದ ಅವನಿಂದು ಏಕಾಂಗಿ. ಆದರೂ ಒಡನಿದ್ದ ಸಂಜಯನು ಸಂಧಿಯಾಗುವ ಮಾತೆತ್ತುತ್ತಲೇ, "ಸಂಜಯ! ಇನ್ನೂ ನನ್ನ ಸರ್ವನಾಶವಾಗಿಲ್ಲ ನೋಡು! ಈ ಬಾಹುದಂಡದ ಸಹಾಯವೂ, ಗದಾದಂಡದ ಬೆಂಬಲವೂ ನನಗಿರುವ ವರೆಗೆ ಸಂಧಿಯ ಮಾತೇ!" ಎಂದು ಹೇಳುತ್ತಾ ಸಮರಾಭಿಮುಖನಾಗಿ ಮುಂದುವರಿಯುವನು.

ಇತ್ತ ಸಮರಭೂಮಿಯಲ್ಲಿ ಮಗನನ್ನರಸುತ್ತಾ ಧೃತರಾಷ್ಟ್ರ ಗಾಂಧಾರಿಯರು ಬರುತ್ತಿದ್ದರು. ಕೌರವೇಶ್ವರನು ಅವರನ್ನು ಕಾಣುತ್ತಲೇ, "ತಮ್ಮಂದಿರನ್ನೂ, ಮಕ್ಕಳನ್ನೂ, ಆಪ್ತೇಷ್ಟರನ್ನೂ -- ಹೆಚ್ಚೇಕೆ — ನನ್ನ

ಸರ್ವಸ್ವವನ್ನೂ ಯುದ್ಧಕ್ಕಾಹುತಿ ಮಾಡಿ ಯಾವ ಮುಖದಿಂದ ಇವರನ್ನು ಕಾಣಲಿ?" ಎಂಬ ಕಳವಳದಿಂದ ಮೂರ್ಛಿತನಾಗುವನು. ಕಡೆಗೆ ಸಂಜಯನ ಶಿಶಿರೋಪಚಾರಗಳಿಂದ ಎಚ್ಚತ್ತು, ದುಃಖಿಸುತ್ತ ನಿಂತಿರುವ ಧೃತರಾಷ್ಟ್ರ ಗಾಂಧಾರಿಯರಿಗೆ ತಲೆಬಾಗಿ ವಂದಿಸುವನು. ಆಗ ಧೃತರಾಷ್ಟ್ರನು ಎಲ್ಲಾ ವ್ಯಸನವನ್ನೂ ಮರೆತು, ಮಗನನ್ನಾಶೀರ್ವದಿಸಿ ತಬ್ಬಿಕೊಂಡು, "ಮಗನೇ, ಸತ್ತವರೆಲ್ಲರೂ ಸತ್ತರು. ನೀನೊಬ್ಬನಾದರೂ ಉಳಿದೆಯಾದರೆ ಅದೇ ನಮಗೆ ಆನಂದ. ಆದುದರಿಂದ ಪಾಂಡವರ ಮೇಲಿನ ವೈರವನ್ನು ಮರೆತುಬಿಡು. ಅರ್ಧರಾಜ್ಯವನ್ನು ಅವರಿಗೆ ಕೊಡಲೊಪ್ಪು. ಯಮಸುತನು ಇನ್ನೂ ನನ್ನ ಮಾತು ಮೀರಲಾರ." ಎನ್ನುವನು. ಆ ಮಾತು ಕೇಳಿದ ದುರ್ಯೋಧನನು "ಅಪ್ಪಾ! ಸತ್ತವರೆಲ್ಲರೂ ಸತ್ತರು. ನಾನಿನ್ನು ಜೀವಿಸಿದ್ದು ಯಾವ ಸುಖಸಂತೋಷ ಅನುಭವಿಸಲಿದೆ? ನಾನು ಬದುಕಿ ಬಾಳುವೆನೆಂಬ ಬಯಲಾಸೆಯನ್ನು ಕಿತ್ತೊಗೆಯಿರಿ. ಕ್ಷತ್ರಿಯರ ಧರ್ಮಕ್ಕನುಸಾರವಾಗಿ ಸೆಳೆದುಕೊಂಡ ರಾಜ್ಯವನ್ನು ತಿರುಗಿ ಪಾಂಡವರಿಗಿತ್ತು, ರಣಹೇಡಿ ಎಂಬ ಬಿರುದನ್ನು ನಾನೀಗ ಪಡೆಯಲಾರೆ. ಆದುದರಿಂದ ಅಪ್ಪಾ, ಧರ್ಮನಂದನನೂ ನನ್ನಂತೆಯೇ ನಿಮ್ಮ ಮಗನೆಂದು ತಿಳಿಯಿರಿ. ಅವನೊಡನೆ ಸುಖವಾಗಿ ಬಾಳಿರಿ" ಎನ್ನುವನು. ದುರ್ಯೋಧನನ ಈ ಮಾತುಗಳನ್ನು ಕೇಳಿದ ಧೃತರಾಷ್ಟ್ರ ಗಾಂಧಾರಿಯರು "ಮಗನೇ, ನೀನೀಗ ನಮ್ಮ ಮಾತನ್ನು ಕೇಳಲೊಲ್ಲೆಯಾದರೆ, ಭೀಷ್ಮ ಪಿತಾಮಹರೊಡನೆ ಆಲೋಚಿಸಿ ಮುಂದಿನ ಕಾರ್ಯಕ್ಕೆ ತೊಡಗು" ಎಂದು ನುಡಿದು ಒಡಂಬಡಿಸಿ ಹೊರಟು ಹೋಗುವರು.

ದುರ್ಯೋಧನನು ಸಂಜಯನೊಡನೆ ಭೀಷ್ಮರಿರುವಲ್ಲಿಗೆ ನಡೆದನು. ಕುರುಕ್ಷೇತ್ರದ ಆ ಭಯಂಕರ ರಣರಂಗದಲ್ಲಿ ಎಲ್ಲೆಲ್ಲಿ ನೋಡಿದರೂ ರಕ್ತದ ಹೊನಲುಗಳು ಹರಿಯುತ್ತಿದ್ದುವು. ನರಿ ಹದ್ದು ಮೊದಲಾದ ಮೃಗಪಕ್ಷಿಗಳು ರಾಶಿರಾಶಿಯಾಗಿ ಬಿದ್ದಿದ್ದ ಮೂಳೆ ಮಾಂಸಗಳನ್ನು ತಿಂದು ತಿಂದು ತೇಗುತ್ತಿದ್ದುವು. ವೀರ ಯೋಧರ ಶವಗಳು ಕೊಳೆತು ದುರ್ಗಂಧ ಬೀರುತ್ತಿದ್ದುವು. ಇವೆಲ್ಲವನ್ನೂ ನೋಡುತ್ತ ನಡೆಯುತ್ತಿದ್ದ ಕೌರವೇಶ್ವರನು ಎದುರಲ್ಲೇ ಮಲಗಿದ್ದ ತನ್ನ ಯುದ್ಧ ವಿದ್ಯಾಗುರುವಾದ ದ್ರೋಣಾಚಾರ್ಯ

ನನ್ನು ನೋಡಿ, ವಂದಿಸಿ ಮುಂದಕ್ಕೆ ಹೊರಟನು. ಅಲ್ಲೇ ಅರೆಮುಚ್ಚಿದ ಕಣ್ಣುಗಳಿಂದಲೂ, ಪ್ರಸನ್ನ ವದನದಿಂದಲೂ, ಔಡುಗಚ್ಚಿ ಬಿದ್ದಿದ್ದ ವೀರ ಅಭಿಮನ್ಯುವಿನ ಕಳೇಬರವನ್ನು ಕಂಡನು. ಶತ್ರುವಾದರೇನು? ಅವನ ಪರಾಕ್ರಮವನ್ನು ನೆನಸಿ, ಕೌರವನು "ವೀರಪುತ್ರ ಅಭಿಮನ್ಯುವೆ, ದುರ್ಭೇದ್ಯವಾದ ಚಕ್ರವ್ಯೂಹವನ್ನು ಹೊಕ್ಕು ಪರಾಕ್ರಮದಿಂದ ಕಾದಾಡಿದ ನಿನಗೆ ಇದೋ ವಂದಿಸುವೆನು" ಎನ್ನುತ್ತಾ ಕೈಮುಗಿದು ಮುಂದಕ್ಕಡಿ ಇಡುತ್ತಲೇ ಮಗನಾದ ಲಕ್ಷಣಕುಮಾರನ ಹೆಣ! ಅದನ್ನು ನೋಡಿದ ಕೌರವನು ಕಂಬನಿಗರೆಯುತೊಡಗಿದನು. ಆಗ ಸಂಜಯನು ಅವನನ್ನು ಸಮಾಧಾನ ಪಡಿಸಿ ಮುಂದಕ್ಕೆ ಕರೆದೊಯ್ದನು. ಅಲ್ಲಿ ಪ್ರಾಣಹೀನವಾದ ದುಶ್ಶಾಸನನ ದೇಹವನ್ನು ಕಾಣುತ್ತಲೇ ದುರ್ಯೋಧನನ ಸಂತಾಪವು ಇಮ್ಮಡಿಸಿತು. ತಮ್ಮನ ದುರವಸ್ಥೆಗೆ ಮರುಗಿ ಮುಂದರಿಯಲು ಕಂಡು ಬಂದುದೇ ದಾನವೀರ ಕರ್ಣನ ನಿರ್ಜೀವ ಶರೀರ. ಕರ್ಣನ ಸ್ವಾಮಿಭಕ್ತಿಯನ್ನೂ, ಪವಿತ್ರ ಸ್ನೇಹವನ್ನೂ ನೆನೆನೆನೆದು ದುರ್ಯೋಧನನ ಹೃದಯವು ನೀರಾಗಿ ಪ್ರವಹಿಸತೊಡಗಿತು. ಹೀಗೆ ಸಂಜಯ ದುರ್ಯೋಧನರು ಯುದ್ಧರಂಗದ ನಾಲ್ಕೆಡೆಗಳಲ್ಲಿಯೂ ಮಲಗಿದ್ದ ಆಪ್ತೇಷ್ಟರ ಶವಗಳನ್ನು ದಿಟ್ಟಿಸುತ್ತಾ ಭೀಷ್ಮ ಪಿತಾಮಹನ ಸರಳಮಂಚದ ಬಳಿಗೆ ಬಂದರು.

ಪಾಪಿಯಾದ ತನ್ನಿಂದಾಗಿ ಇಚ್ಛಾಮರಣಿಯಾದ ಭೀಷ್ಮನಿಗುಂಟಾದ ಕ್ಲೇಷವನ್ನು ಕಂಡು ಮರುಗುತ್ತಾ ಕೌರವನು ಅಜ್ಜನಿಗೆ ವಂದಿಸುವನು. ದೇಹದಲ್ಲಿ ಪ್ರಾಣವಿರುವ ವರೆಗೂ ಯುದ್ಧವೇ ಸಿದ್ಧವೆಂಬ ತನ್ನ ನಿರ್ಧಾರವನ್ನು ಅವನಿಗೆ ತಿಳಿಸುವನು. ದುರ್ಯೋಧನನ ಅಸಹಾಯ ಸ್ಥಿತಿಯನ್ನು ಕಂಡ ಭೀಷ್ಮ ಪಿತಾಮಹನು ಬಹಳವಾಗಿ ದುಃಖಿಸಿದನು. ಆದರೆ ಅವನ ಛಲವನ್ನೂ, ಪರಾಕ್ರಮವನ್ನೂ ಮನದಲ್ಲಿಯೇ ಹೊಗಳಿ "ಮಗನೆ, ಯುದ್ಧವನ್ನೇ ಬಯಸುವೆಯಾದರೆ, ಬಲರಾಮನೂ ಅಶ್ವತ್ಥಾಮನೂ ಬರುವವರೆಗೆ ನಾನು ಉಪದೇಶಿಸುವ ಜಲಮಂತ್ರದ ಸಹಾಯದಿಂದ ವೈಶಂಪಾಯನ ಕೊಳದಲ್ಲಿ ಕುಳಿತು ಕಾಲಪಂಚನೆ ಮಾಡು; ಅನಂತರ ನಿನ್ನಿಷ್ಟದಂತಾಗಲಿ" ಎಂದು ಹೇಳಿ ಮಂತ್ರೋಪದೇಶವಾಡಿ, ಆಶೀರ್ವದಿಸಿ

ಕಳುಹಿಸುವನು. ಅಲ್ಲಿಂದ ಸಂಜಯನು ಈ ವಿಷಯವನ್ನು ಧೃತರಾಷ್ಟ್ರ ಗಾಂಧಾರಿಯರಿಗೆ ತಿಳಿಸಲು ಹೊರಟುಹೋಗುವರು.

ಅಲ್ಲಿಂದ ಹೊರಟ ಕೌರವನು ಅಜ್ಜನ ಮಾತನ್ನು ಮೀರಲಾರದೆ ವೈಶಂಪಾಯನ ಸರೋವರದ ಬಳಿಗೈದಿ, ಜಲದೇವತೆಯನ್ನು ವಂದಿಸಿ, ನೀರಿಗಿಳಿದು ಯೋಗಾಸನದಲ್ಲಿ ಮಂಡಿಸಿದನು. ಮತ್ತೆ ಪಿತಾಮಹನು ಉಪದೇಶಿಸಿದ್ದ ಮಂತ್ರವನ್ನು ಉಚ್ಚರಿಸುತ್ತಾ ಬಲದೇವಾದಿಗಳನ್ನು ನಿರೀಕ್ಷಿಸತೊಡಗಿದನು.

ಇತ್ತ ಪಾಂಡವರು ಶಲ್ಯವಧಾನಂತರ ಎಲ್ಲೆಲ್ಲಿ ಹುಡುಕಿದರೂ ಕೌರವನನ್ನು ಕಾಣದೆ ಚಡಪಡಿಸತೊಡಗಿದರು. ಭೀಮನಾದರೋ "ನನ್ನ ಪ್ರತಿಜ್ಞೆಗೆ ಭಂಗವುಂಟಾಗುವುದೇ? ಇನ್ನೂ ನನ್ನ ತೋಳತೀಟೆ ತೀರಿಲ್ಲವಲ್ಲ! ಶತ್ರುಸಂಹಾರಕ್ಕಾಗಿ ಏನು ಮಾಡಲಿ! ಹೇಗಾದೀತು!" ಎಂಬ ಹಂಬಲಗಳಿಂದ ಕುರುಕ್ಷೇತ್ರದ ನಾಲ್ಕೂ ದಿಕ್ಕುಗಳಲ್ಲಿ ಹುಡುಕತೊಡಗಿದನು. ಅಷ್ಟರಲ್ಲಿ ವೈಶಂಪಾಯನ ಕೊಳದೆಡೆಯಿಂದ ಬಂದ ಕಿರಾತನೊಬ್ಬನು ಕೌರವನ ಪಾದಚಿಹ್ನೆಗಳನ್ನು ಕಂಡುದಾಗಿ ತಿಳಿಸಿದನು. ಆಗ ಕೃಷ್ಣನು ಯುಧಿಷ್ಠಿರನೊಡನೆ "ಬಲರಾಮನು ಬರುವುದರೊಳಗಾಗಿಯೇ ಕೌರವನನ್ನು ಕೊನೆಗಾಣಿಸಬೇಕು" ಎಂದು ಅರುಹಿದನು. ಎಲ್ಲರೂ ಕೂಡಲೇ ವೈಶಂಪಾಯನ ಸರೋವರದ ತೀರಕ್ಕೆ ಬಂದು ಸೇರಿದರು.

ವೈಶಂಪಾಯನ ಸರೋವರದ ನಾಲ್ಕೂ ಬದಿಗಳಲ್ಲಿ ನಿಂತು ನಕುಲ ಸಹದೇವರೂ, ಅರ್ಜುನನೂ ಕೌರವನನ್ನು ಬಗೆಬಗೆಯಾಗಿ ಜರೆದು, ಹೊರಬಾರೆಂದು ಕರೆಯತೊಡಗಿದರು. ಧರ್ಮರಾಯನು ಮಧುರ ವಚನಗಳಿಂದ "ಸಂಧಿಯಾಗೋಣ, ಕೊಳದಿಂದ ಹೊರಡು" ಎಂದು ಕರೆದನು. ಆಗಲೂ ಕೌರವನು ಮೌನವಾಗಿಯೇ ಇದ್ದನಲ್ಲದೆ ಮಾತನಾಡಲಿಲ್ಲ. ಇದನ್ನು ಕಂಡ ಭೀಮನು "ನನ್ನ ಸ್ವರ ಕೇಳದೆ ಈ ಬೂತ ಹೊರಡದು" ಎಂದು ಹೇಳುತ್ತಾ ಕೋಪಪರವಶನಾಗಿ "ದ್ರೋಹಿಯೆ! ನನ್ನ ಸ್ವರವನ್ನು ಕೇಳಲಾರದೆ, ಸ್ವರೂಪವನ್ನು ನೋಡಲು ಬೆದರಿ, ಕಪ್ಪೆ ಮೀನುಗಳಂತೆ ನೀರಲ್ಲಡಗಿ, ಬದುಕುವೆನೆಂದು ಬಗೆದೆಯಾ? ಇದೋ! ಕುರುಕುಲಕ್ಕೆ ಕಾಲನಾದ ನಾನು ಬಂದಿರುವೆನು. ಆಯುಧವನ್ನು ಹಿಡಿದು ವೀರನಂತೆ ಕಾದಾಡು" ಎಂದು ಗರ್ಜಿಸಿದನು.

ಭೀಮನ ಗರ್ಜನೆ ಕೇಳುತ್ತಲೇ ಕೌರವನು ಕ್ರೋಧಾವೇಶದಿಂದ ಪರಿಪೂರ್ಣನಾದನು. ಜಲಮಂತ್ರವನ್ನು ಮರೆತುಬಿಟ್ಟು ಪ್ರಳಯಕಾಲದ ಭೈರವನಂತೆ ಕೊಳದಿಂದ ಮೇಲಕ್ಕೆದ್ದು, ನಾಲ್ಕೂ ದಿಕ್ಕುಗಳನ್ನು ದಿಟ್ಟಿಸಿ "ಭೀಮನೆಲ್ಲಿರುವನು?" ಎನ್ನುತ್ತ, ಗದೆಯನ್ನು ತಿರುಗಿಸುತ್ತಾ ಪಾಂಡವರ ಎದುರಿಗೇ ನಿಂತುಬಿಟ್ಟನು. ಭೀಮನೂ ಮುಗುಳು ನಕ್ಕು ಆತನಿಗೆ ಎದುರಾದನು. ಆಗ ಕೌರವನು ಪಂಚಪಾಂಡವರ ಕಡೆಗೆ ದಿಟ್ಟಿಸುತ್ತಾ, ತಾನು ತಮ್ಮಂದಿರನ್ನೆಲ್ಲಾ ಕಳೆದುಕೊಂಡಿದ್ದರೂ ಏಕಾಂಗವೀರನಂತೆ "ಭೀಮನೊಬ್ಬನೇ ಏಕೆ? ನೀವೈದು ಜನರು ಎದುರಾಗಿರಿ, ಬೆದರುವವನಲ್ಲ" ಎಂದು ಹೇಳುತ್ತಾ ಎಲ್ಲರನ್ನೂ ಯುದ್ಧಕ್ಕೆ ಕರೆದನು. ಅಷ್ಟರಲ್ಲಿ ಅನಿರೀಕ್ಷಿತ ವಾಗಿ ಬಲರಾಮನೂ ಬಂದನು. ಅವನನ್ನು ಕಾಣುತ್ತಲೇ ದುರ್ಯೋಧ ನನು ವಂದಿಸಿ ಎಲ್ಲಾ ಸಂಗತಿಗಳನ್ನು ವಿವರವಾಗಿ ತಿಳಿಸಿದನು; ಮಾತ್ರ ವಲ್ಲದೆ ಪಾಂಡವರು ನಿರ್ದೋಷಿಗಳೆಂದೂ, ನೀವು ಕೋಪಿಸಿಕೊಳ್ಳಬಾರ ದೆಂದೂ ಹೇಳಿದನು. ಆಗ ಬಲರಾಮನು "ಪಂಚಪಾಂಡವರಲ್ಲೊಬ್ಬನು ಕೌರವನೊಡನೆ ಕಾದಾಡಬೇಕು; ಕೌರವನು ಗೆದ್ದರೆ ಅವನೇ ರಾಜ್ಯವಾಳ ಬೇಕು: ಉಳಿದವರು ಅವನ ವಶವರ್ತಿಗಳಾಗಬೇಕು" ಎಂದು ಹೇಳಿದನು: ಕೃಷ್ಣನೂ ಪಾಂಡವರೂ ಅವನ ಮಾತನ್ನು ಅನುಮೋದಿಸಿದರು. ಭೀಮನೇ ಕೌರವನನ್ನು ಎದುರಿಸಬೇಕೆಂದು ನಿರ್ಣಯವಾಯಿತು.

ಭೀಮ ದುರ್ಯೋಧನರ ಗದಾಯುದ್ಧಕ್ಕೆ ಪ್ರಾರಂಭವಾಯಿತು. ಭಯಂಕರವಾದ ಗದೆಗಳನ್ನು ಹಿಡಿದುಕೊಂಡು ಒಬ್ಬರನ್ನೊಬ್ಬರು ಕೆಂಗಣ್ಣು ಗಳಿಂದ ದಿಟ್ಟಿಸುತ್ತಾ ಹೋರಾಡಲಾರಂಭಿಸಿದರು. ಅವರ ಪಾದಘಾತ ಗಳಿಂದ ಭೂಮಿಯೇ ನಡುಗಲಾರಂಭಿಸಿತು. ಗದೆಗಳು ತಾಗಿ ಅದರಿಂದ ಹುಟ್ಟಿದ ಬೆಂಕಿಯ ಕಿಡಿಗಳು ದಿಗಂತದಲ್ಲಿ ವ್ಯಾಪಿಸತೊಡಗಿದುವು. ಮದ್ದಾನೆ ಗಳಂತೆ ಪರಸ್ಪರ ಬಲು ಸಾಹಸದಿಂದ ಕಾದಾಡಿದರೂ, ಸೋಲುಗೆಲವು ಗಳ ನಿಶ್ಚಯವಾಗಲಿಲ್ಲ. ಅಷ್ಟರಲ್ಲಿ ದುರ್ಯೋಧನನು ತನ್ನ ಗದೆಯನ್ನು ತಿರುಗಿಸುತ್ತಾ, ಆಕಾಶಕ್ಕೆ ನೆಗೆದು ಸಿಂಹಗರ್ಜನೆ ಮಾಡಿ, ಸಿಡಿಲೆರಗಿದಂತೆ ಎರಗಿ ಗದಾಪರಿಘದಿಂದ ಭೀಮನನ್ನು ಅಪ್ಪಳಿಸಿಬಿಟ್ಟನು. ಆ ಪ್ರಹಾರ ದಿಂದ ಭೀಮನು ಮೂರ್ಛೆತಪ್ಪಿ ಧರೆಗುರುಳಿದನು. ಆಗ ಉಳಿದ

ಪಾಂಡವರು ಹಾಹಾಕಾರ ಮಾಡತೊಡಗಿದರು. ಆದರೆ ದುರ್ಯೋಧನನು ಬಿದ್ದವನನ್ನು ಕೊಲ್ಲಲಾಗದೆಂದು ಬಗೆದು, ಗದೆಯನ್ನು ತಿರುಗಿಸುತ್ತ ಸುಮ್ಮನೆ ನಿಂತುಕೊಂಡನು. ತುಸು ಹೊತ್ತಿನಲ್ಲಿ ಅವನ ಗದೆಯ ಗಾಳಿ ಯಿಂದಲೇ ಭೀಮನು ಎಚ್ಚರಗೊಂಡನು. ಅವನು ಮೇಲಕ್ಕೇಳುತ್ತಲೇ ಕಪಟಿ ಕೃಷ್ಣನು ತನ್ನ ತೊಡೆಗೆ ಕೈಯಿಂದ ತಟ್ಟುತ್ತಾ, ಕೌರವನ ಮರ್ಮ ಸ್ಥಾನವನ್ನು ಸೂಚಿಸಿದನು.

ಪುನಃ ದ್ವಂದ್ವಯುದ್ಧಕ್ಕೆ ಪ್ರಾರಂಭವಾಯಿತು. ಭೀಮನು ಗದೆ ಯಿಂದ ನೆಲವನ್ನಪ್ಪಳಿಸುತ್ತ, ಮೇಲಕ್ಕೆ ಹಾರಿ ಧರ್ಮಯುದ್ಧವನ್ನು ಮರೆತು, ಗದೆಯನ್ನು ಬೀಸಿ ಕೌರವೇಶ್ವರನ ತೊಡೆಗೆ ಬಲವಾಗಿ ಹೊಡೆದು ಬಿಟ್ಟನು. ಕೂಡಲೇ ಕೌರವನು ತೊಡೆ ಮುರಿದು ನೆಲಕ್ಕುರುಳಿದನು. ಅನಂತರ ಧೂರ್ತಭೀಮನು ಬಲರಾಮಾದಿಗಳು ಬೇಡಬೇಡವೆಂದರೂ ಲೆಕ್ಕಿಸದೆ, ಕೌರವೇಶ್ವರನ ರಾಜಮುಕುಟವನ್ನು ಎಡಗಾಲಿನಿಂದ ಒದೆದು ಬಿಟ್ಟು, ತನ್ನ ಪ್ರತಿಜ್ಞೆ ತೀರಿಸಿಕೊಂಡನು. ರಾಜರಾಜೇಶ್ವರನಾಗಿದ್ದ ಕೌರವನ ಮೇಲೆ ನಡೆದುಹೋದ ಅತ್ಯಾಚಾರವನ್ನು ನೋಡಲಾರದೆ ಬಲರಾಮನು ದ್ವಾರಾವತಿಗೆ ಹೊರಟುಹೋದನು. ಪಾಂಡವರು ತಮ್ಮ ಶಿಬಿರವನ್ನು ಸೇರಿದರು.

ಇತ್ತ ತೊಡೆಮುರಿದು ನಿಸ್ಸಹಾಯನಾಗಿ ಬಿದ್ದಿದ್ದ ಕುರುಕುಲ ಚಕ್ರವರ್ತಿಯ ಬಳಿಗೆ ಗುರುಪುತ್ರನಾದ ಅಶ್ವತ್ಥಾಮನು ಬಂದು ಸೇರಿದನು. ತನ್ನೊಡೆಯನ ದುಸ್ಥಿತಿಯನ್ನು ಕಂಡು ಅಶ್ವತ್ಥಾಮನು ಬಹಳವಾಗಿ ಶೋಕಾಕುಲನಾದನು. ಕಡೆಗೆ ಆತನು ಕೌರವೇಶ್ವರನೆದುರಿಗೆ ಪಾಂಡವರ ತಲೆಗಡಿದು ತರುವೆನೆಂದು ಶಪಥ ಹಾಕಿಕೊಂಡು ಪಾಂಡವರ ಶಿಬಿರದ ಕಡೆಗೆ ಹೊರಟನು. ಈ ಸಂಗತಿ ತಿಳಿದ ಕೃಷ್ಣನು ಪಂಚಪಾಂಡವರನ್ನು ಕರೆದುಕೊಂಡು ಮೊದಲಾಗಿಯೇ ಸುರಕ್ಷಿತವಾದ ಸ್ಥಳ ಸೇರಿದ್ದನು. ಕೌರವನ ಬಳಿಯಿಂದ ಹೊರಟ ಅಶ್ವತ್ಥಾಮನು ರಾತ್ರಿಯ ವೇಳೆ ಪಾಂಡವರ ಶಿಬಿರವನ್ನು ಹೊಕ್ಕು, ಸಿಕ್ಕಸಿಕ್ಕವರನ್ನೆಲ್ಲಾ ಸಂಹರಿಸಿ, ಪಾಂಡವರೆಂದೇ ಬಗೆದು ದ್ರೌಪದಿಯ ಪುತ್ರರೈವರ ತಲೆಗಡಿದುಕೊಂಡು ಬಂದನು. ಆ ತಲೆಗಳನ್ನು ನೋಡಿದ ಕೌರವೇಶ್ವರನು ಬಹಳವಾಗಿ ನೊಂದು "ಗುರು

ಪುತ್ರನೇ, ನಿರ್ದೋಷಿಗಳಾದ ಈ ಬಾಲಕರ ತಲೆಗಳನ್ನು ಅನ್ಯಾಯವಾಗಿ ಕಡಿದುತಂದು ಪಾಪ ಕಟ್ಟಿಕೊಂಡೆಯಲ್ಲ?" ಎಂದು ಬಿಸುಸುಯ್ದನು. ಅಶ್ವತ್ಥಾಮನು ಎಚ್ಚರಗೊಂಡು ಪಶ್ಚಾತ್ತಾಪದಿಂದ ಬೇಯುತ್ತ ತಪಸ್ಸಿಗಾಗಿ ನಡೆದನು.

ರಾಜರಾಜೇಶ್ವರನಾಗಿದ್ದ ಕೌರವ ಚಕ್ರವರ್ತಿಯ ಅಂತ್ಯಕಾಲವು ಸಮೀಪಿಸಿತು. ಕುರುಕುಲಕ್ಕೆ ದಿನಮಣಿಯಂತಿದ್ದ ಅವನೊಡನೆ ಲೋಕ ಬಾಂಧವನಾದ ಸೂರ್ಯನೂ ಅಸ್ತಂಗತನಾಗತೊಡಗಿದನು. ಮಹಾನು ಭಾವನಾದ ಕೌರವನ ದುರ್ಮರಣಕ್ಕಾಗಿ ಲೋಕವೇ ತರಹರಿಸತೊಡಗಿತು. ಕ್ಷತ್ರಿಯ ಕುಲಶಿರೋಮಣಿಯಾದ ಅವನ ಮರಣವನ್ನು ನೋಡಲಾರದೆ ಪ್ರಕೃತಿಮಾತೆಯು ಕರಿಯ ಮುಸುಕನ್ನು ಎಳೆದುಕೊಂಡಳೋ ಎಂಬಂತೆ ಎಲ್ಲೆಲ್ಲಿಯೂ ಅಂಧಕಾರವು ವ್ಯಾಪಿಸಿತು. ವೀರ ಕೌರವನು ಕಡೆಯ ತನಕವೂ ಹಿಂದಡಿ ಇಡದೆ, ಹಿಡಿದ ಛಲವನ್ನು ಬಿಡದೆ, ಬಾಹುಬಲದಿಂದ ಕಾದಾಡಿ ಕುರುಕ್ಷೇತ್ರದಲ್ಲಿ ದೇಹವಿಟ್ಟನು.

ಅಭ್ಯಾಸ

1. ಭೀಮ ದುರ್ಯೋಧನರ ಗದಾಯುದ್ಧವನ್ನು ಬಣ್ಣಿಸಿರಿ.

2. ಕೌರವ ಚಕ್ರವರ್ತಿಯ ಅಂತ್ಯಕಾಲವನ್ನು ವರ್ಣಿಸಿರಿ.

3. ಮುಂದಿನ ಪದಗಳಲ್ಲಿ ಸರಳಾಕ್ಷರ ಪರುಷಾಕ್ಷರ ಅನುನಾಸಿಕ ಗಳನ್ನು ಹೆಕ್ಕಿ ತೆಗೆಯಿರಿ:—ಏಕಾಂಗಿ, ವ್ಯಸನ, ಪರಾಕ್ರಮ, ಇಚ್ಛಾಮರಣೆ, ಪಾದ ಚಿಹ್ನೆ.

4. ಮುಂದಿನ ಪದಗಳಲ್ಲಿ ತಪ್ಪಾಗಿ ಬರೆದಿರುವ ಮಹಾ ಪ್ರಾಣ ಗಳನ್ನೂ ಅಲ್ಪ ಪ್ರಾಣಗಳನ್ನೂ ಸರಿಗೊಳಿಸಿ ಬರೆಯಿರಿ:—ಚಢಪಡಿಸು; ಬೀಮ; ಗಧೆ; ಯುಧ್ದ; ದರ್ಮಯುದ್ದ; ಸ್ತಳ; ಶಿಭಿರ; ಗಾಂದಾರಿ; ದೃಥರಾಷ್ಟ್ರ; ದುರ್ಬೇಧ್ಯ.

5. ಚಕ್ರವ್ಯೂಹ, ದುರ್ಭೇದ್ಯ, ಇಚ್ಛಾಮರಣೆ, ಪಾದಘಾತ, ಕಾಲ—ಈ ನುಡಿಗಳ ಅರ್ಥವೇನು?

೩. ಆನೆ ಬೇಟೆ

ಗೆಳೆಯ ನಾರಾಯಣ ರಾಯರು ಕೆಲ ದಿನಗಳ ಮಟ್ಟಿಗೆ ನನ್ನಲ್ಲಿ ಉಳಕೊಂಡಿದ್ದರು. ಅವರು ಕೊಡಗಿನವರು; ಮಲೆನಾಡಿನ ಅನುಭವವಿರುವವರು. ಅವರಿಗೆ ಪರಿಚಯವಿಲ್ಲದ ಕಾಡುಪ್ರಾಣಿ ಇಲ್ಲ. ಯಾವ



ಪ್ರಾಣಿಯ ವಿಷಯ ಬೇಕು? ಹುಲಿಯೊ? ಕರಡಿಯೊ? ಆನೆಯೊ? ಕಾಟಿಯೊ? ಕಡವೆಯೊ? ಯಾವುದರ ವಿಷಯ ಬೇಕಾದರೂ ಸೊಗಸಾಗಿ ವಿವರಿಸಿ ಹೇಳುವ ಜಾಣ್ಮೆ ನಾರಾಯಣ ರಾಯರಿಗಿದೆ. ಒಂದು ದಿನ ಆ ಮಾತು ಈ ಮಾತು ಮಾತನಾಡುತ್ತ ನಾರಾಯಣ ರಾಯರು ಆನೆಯ ಸಂಗತಿ ತೆಗೆದರು; ಆನೆ ಬೇಟೆಯ ಕುರಿತಾಗಿ ಒಂದೆರಡು ಸಂಗತಿ ಸ್ವಾರಸ್ಯವಾಗಿ ಬಣ್ಣಿಸಿ ಹೇಳಿದರು. ಅವರು ಹೇಳಿದ ಆನೆ ಬೇಟೆಯ ಕತೆಯೇ ಇದು.

ಒಮ್ಮೆ ದಕ್ಷಿಣ ಕೊಡಗಿನಲ್ಲಿ ಒಂಟಿ ಆನೆಯೊಂದು ತುಂಬಾ ಹಾವಳಿ ಮಾಡತೊಡಗಿತು. ಕೊಡಗು ವೈನಾಡುಗಳ ಗಡಿಯಲ್ಲಿಯ ಅಡವಿಯಲ್ಲಿಯೇ ಆ ಆನೆ ನೆಲಸಿತ್ತು. ಒಮ್ಮೆ ಅದು ಕಾಡಿಗೆ ಬಿದಿರು ಕಡಿಯಲು

ಹೋದ ಅಂಡೆ ಕುರುಬನೊಬ್ಬನನ್ನು ಮುರಿದಿಕ್ಕಿತಂತೆ; ಮತ್ತೊಂದು ದಿನ ವೈನಾಡಿನಿಂದ ವೀರರಾಜ ಪೇಟೆಗೆ ಬರುವ ಲಾರಿಯೊಂದನ್ನು ಅಡ್ಡಗಟ್ಟಿತಂತೆ. ಡ್ರೈವರ್ ಮತ್ತು ಕಂಡಕ್ಟರ್ ಹೇಗೋ ತಪ್ಪಿಸಿಕೊಂಡರೂ ಲಾರಿ ಮಾತ್ರ ಆನೆಯ ಸಿಟ್ಟಿಗೆ ತುತ್ತಾಯಿತಂತೆ. ಆದರೆ ಆ ಒಂಟಿ ಆನೆ ಮನುಷ್ಯರ ಸಂಚಾರವಿಲ್ಲದಲ್ಲಿ ಸುಳಿದಾಡುತ್ತಿರಲಿಲ್ಲ. ಒಂಟಿ ಆನೆ; ಅದರಲ್ಲಿಯೂ ಒಂದೇ ದಂತದ ಹಿರಿಯ ಗಂಡಾನೆ; ಕಾಡಾನೆಯದು ಎಷ್ಟು ಭಯಂಕರವಾಗಿತ್ತೆಂದರೆ, ಆನೆಯ ಕಾಟ ಸಹಿಸದೆ ಕಾಡಿನ ಸಮೀಪ ನೆಲಸಿದ್ದ ಒಂದೆರಡು ಕುರುಬರ ಕುಟುಂಬಗಳೂ ಒಕ್ಕಲು ತೆಗೆದು ನೆರೆ ಹಳ್ಳಿಗೆ—ಜನವಾಸವಿರುವಲ್ಲಿಗೆ—ಹೋಗಿ ನೆಲಸಬೇಕಾಯಿತು.

ಕೊಡಗು ವೈನಾಡುಗಳಲ್ಲಿ ಕೆಲವು ಕಾಲ ಈ ಆನೆಯದೇ ಸುದ್ದಿ. ಸಂಜೆಯಾದ ಮೇಲೆ ಆ ಗಡಿನಾಡಿನ ಅಡವಿಯ ಬಳಿ ಸುಳಿಯುವವರೇ ಇಲ್ಲ. ಅಡವಿಯ ಬಳಿಯ ಮಾರ್ಗಗಳಲ್ಲಿಯೂ ಜನ ಸಂಚಾರವಿಲ್ಲ. ಹೀಗೆ ಆನೆಯ ಉಪಟಳದಿಂದ ಜನಸಂಚಾರಕ್ಕೇ ತಡೆಯಾಗಿ ಎಲ್ಲರೂ 'ತ್ರಾಹಿ ತ್ರಾಹಿ' ಎನ್ನತೊಡಗಿದರು. ಆ ಊರಿನ ಹಲಮಂದಿ ಎದೆಗಾರರು ಆನೆಯನ್ನು ಬೇಟೆಯಾಡಲು ಯತ್ನಿಸಿದರು. ಅವರ ಯತ್ನವೇನೋ ಸಾಗಿತು. ಆದರೆ ಆನೆ ಮಾತ್ರ ಬೇಟೆಗೆ ಸಿಗಲಿಲ್ಲ.

ಹೀಗಿರಲು ಅದೊಮ್ಮೆ ಸಂಪಾಜೆಯವರೊಬ್ಬರು ಆ ಊರಿಗೆ ಬಂದರು. ಅವರ ಹೆಸರು ನರಸಿಂಹಯ್ಯ. ಆನೆಯ ಸುದ್ದಿ ಕೇಳಿದ ಅವರು ಎರಡು ಮೂರು ದಿನ ಊರೆಲ್ಲಾ ಸುತ್ತಾಡಿ ಆನೆ ಬರುವ ಹೋಗುವ ಕಳ್ಳ ಗಂಡಿಗಳನ್ನೆಲ್ಲ ತಿಳಿದುಕೊಂಡರು. ನರಸಿಂಹಯ್ಯನಿಗೆ ಬೇಟೆಯೆಂದರೆ ಜೀವ. ಬೇಟೆ ಸಿಕ್ಕಿದರೆ ಊಟವೂ ಬೇಡ ಅವರಿಗೆ. ಜನರ ಹೇಳಿಕೆಯಿಂದಲೂ, ಹಜ್ಜೆಯ ಗುರುತಿನಿಂದಲೂ, ಅದು ಮಾಡಿದ ಹಾವಳಿಯಿಂದಲೂ ಆನೆ ಎಂತಹದೆಂಬುದು ನರಸಿಂಹಯ್ಯನಿಗೆ ತಿಳಿಯಿತು. ಆ ಒಂಟಿ ಆನೆ ಕೊಡಗು ವೈನಾಡುಗಳ ಗಡಿಯಲ್ಲಿರುವ ಕುಟ್ಟಮೇಲು ಮಲೆಯಲ್ಲೇ ಹೆಚ್ಚಾಗಿ ಅಲೆದಾಡುತ್ತಿತ್ತೆಂಬುದೂ ಅವರಿಗರಿಯಿತು.

ಮತ್ತೆ ನರಸಿಂಹಯ್ಯ ತನ್ನ ತೋಟಿ ಕೋವಿಯನ್ನು ಹೆಗಲ ಮೇಲೇರಿಸಿ, ಬಗಲಲ್ಲಿ ಬುತ್ತಿಯ ಚೀಲ ಸಿಕ್ಕಿಸಿ, ಬೇಟೆಯಲ್ಲಿ ತುಂಬಾ ಪಳಗಿದ

ಕುಡಿಯನೊಬ್ಬನನ್ನೂ ಸಂಗಡ ಕರಕೊಂಡು ಹೊರಟರು. ಆ ಮೇಲಿನ ಸಂಗತಿ ಅವರ ಮಾತಿನಿಂದಲೇ ಕೇಳಿದರೆ ಸ್ವಾರಸ್ಯ; ಅವರು ಹೇಳಿದಂತೆಯೇ ಬರೆಯುತ್ತೇನೆ.

"ನಾನೂ ನನ್ನ ಜೊತೆಗಾರ ಕುಡಿಯರ ಕರಿಯನೂ ಕಾಡು ಸೇರಿ ನಾಲ್ಕಾರು ತಾಸು ಅಲ್ಲಲ್ಲಿ ಅಲೆದಾಡಿದೆವು. ದೂರದಿಂದ ಆನೆ ಬಿದಿರು ಮುರಿಯುವ ಸದ್ದು ಕೇಳತೊಡಗಿತು. ಅದು ನಾವು ಹುಡುಕುತ್ತಿದ್ದ ಏಕ ದಂತ ಒಂಟಿ ಆನೆಯೋ ಅಥವಾ ಬೇರೆ ಆನೆಯೋ ಎಂಬುದು ನಮಗೆ ತಿಳಿಯಲಿಲ್ಲ. ನಾವು ಆ ಸದ್ದನ್ನೇ ಆಲಿಸುತ್ತ ಜಾಗ್ರತೆಯಾಗಿ ಮುಂದೊ ತ್ತಿದೆವು. ಪುಣ್ಯಕ್ಕೆ ಗಾಳಿಯೂ ನಮಗನುಕೂಲವಾಗಿ ಆನೆಯಿದ್ದ ಕಡೆ ಯಿಂದಲೇ ಬೀಸುತ್ತಿತ್ತು. ನಾವಿದ್ದ ಕಡೆಯಿಂದ ಆನೆಯಿರುವ ಕಡೆಗೆ ಗಾಳಿ ಬೀಸುತ್ತಿದ್ದರೆ ನಮ್ಮ ಗತಿ ಅಧೋಗತಿ ಆಗುತ್ತಿತ್ತು. ಆನೆಗೆ ನಮ್ಮ ವಾಸನೆ ಸಿಕ್ಕಿದರೆ ಅದು ನಮ್ಮ ಮೇಲೇರಿ ಬರುವುದು ನಿಶ್ಚಯ. ಹೇಗೂ ನಮಗೆ ಆನೆಯ ಇರವು ತಿಳಿಯಿತು. ಆನೆಯನ್ನು ಮಾತ್ರ ನಾವು ಕಾಣ ಲಿಲ್ಲ. ಮುಂದಿನ ದಾರಿ ಬಹಳ ತೊಡಕು. ಬಿದಿರ ಮೆಳೆಗಳ ಎಡೆಯಿಂದ ಹಾದು ಹೋಗಬೇಕು. ಬಿದಿರ ಕಣೆಗಳು ಬೇಲಿಯಂತೆ ಹೆಣೆದಿದ್ದುವು. ಬಿದಿರ ಹಿಂಡಿಲು ಚಪ್ಪರದಂತೆ ಹರಡಿ ಸರಿಯಾಗಿ ಬೆಳಕು ಕೂಡ ಇರಲಿಲ್ಲ. ದಾರಿಗೆ ಅಡ್ಡವಾಗಿರುವ ಬಿದಿರ ಕಣೆಗಳನ್ನು ಕಡಿದು ದಾರಿ ಬಿಡಿಸಿಕೊಂಡು ಮುಂದುವರಿಯಬಹುದೆಂದರೆ ಕಡಿಯುವ ಸದ್ದು ಆನೆಗೆಲ್ಲಾದರೂ ಕೇಳಿ ಸಿದರೆ ನಮ್ಮ ಗತಿಯೇನು? ಹೇಗೂ ಮಾಡಿ ಬಿದಿರ ಮೆಳೆಗಳೆಡೆ ನುಸು ಳುತ್ತಾ ಮುಂದೊತ್ತಿದೆವು. ಸುಮಾರು ಮುನ್ನೂರು ಮಾರುಗಳಷ್ಟು ದೂರ ಹಾಗೆಯೇ ನುಸುಳಿಕೊಂಡು ಹೋದೆವು. ಆನೆ ತನ್ನ ಕಿವಿಗಳನ್ನು ಹೊಡೆದುಕೊಳ್ಳುವ ಸದ್ದು ಕೇಳಿಸುವಷ್ಟು ಹತ್ತಿರಕ್ಕೆ ಸರಿದೆವು. ಅಷ್ಟರಲ್ಲಿ ಆನೆ ನಮ್ಮ ದೃಷ್ಟಿಗೆ ಬಿದ್ದಿತು. ನಮ್ಮಿಂದ ಸಾಧಾರಣ ಐವತ್ತು ಮಾರು ದೂರದಲ್ಲಿ ಆನೆ ನಿಂತಿತ್ತು. ಬಿದಿರು ಮುರಿಮುರಿದು ಗಬಾಯಿಸುತ್ತಿತ್ತು. ಆದರೆ ಅದು ನಮಗೆದುರಾಗಿ ಮೋರೆ ಮಾಡಿ ನಿಂತಿರಲಿಲ್ಲ. ನಮ್ಮ ದೃಷ್ಟಿಗೆ ಅಡ್ಡವಾಗಿ ನಿಂತಿತ್ತೆಂದು ತೋರುತ್ತದೆ. ಏಕೆಂದರೆ ನಮಗೆ ಕಾಣಿಸುತ್ತಿದ್ದುದು ಅದರ ಒಂದು ಕಿವಿ ಮಾತ್ರ. ನಾವು ಒಂದೆಡೆ ಸುಮ್ಮನೆ

ನಿಂತು ತುಸು ಹೊತ್ತು ನೋಡುತ್ತಿದ್ದಂತೆಯೇ ಆನೆ ಮುಂದುವರಿಯು ವುದು ಕಂಡಿತು. ಆಗ ನಮಗೆ ಆ ಭಯಂಕರ ಗಜ ಸರಿಯಾಗಿ ಕಾಣಿ ಸಿತು. ಅಬ್ಬ! ಎಂತಹ ಭಯಂಕರ! ನಾನು ಈ ಮೊದಲು ಎಷ್ಟೋ ಆನೆಗಳನ್ನು ಕಂಡಿದ್ದೆನಾದರೂ, ನಾಲ್ಕಾರು ಆನೆಗಳನ್ನು ಮಣ್ಣುಮುಕ್ಕಿ ಸಿದ್ದೆನಾದರೂ ಈ ಏಕದಂತನನ್ನು ಕಂಡು ನನ್ನ ಮೈ ನಡುಗಿತು; ಕೂದ ಲೆಲ್ಲ ನೆಟ್ಟಗೆ ನಿಂತುವು. ಕೈಕಾಲು ನಡುಗ ತೊಡಗಿದವು. ಏಕದಂತ! ದೊಡ್ಡ ಮರದ ಕೊರಡಿನಂತಹ ಒಂದೇ ಒಂದು ದಂತ! ಆ ದಂತ ಬಿಸಿಲಿನ ಜಳಕ್ಕೆ ತಳತಳ ಹೊಳೆಯುತ್ತಿದೆ. ಬರೇ ನಸ್ಯ ಸೇದುವಷ್ಟು ಹೊತ್ತು ನಾವು ಆನೆಯನ್ನು ನೋಡುತ್ತ ನಿಂತಿದ್ದೆವಷ್ಟೆ. ಅಷ್ಟರಲ್ಲಿ ಗಾಳಿಯು ಬೀಸಾಟ ಬದಲಾಗಿ ನಮ್ಮ ಕಡೆಯಿಂದ ಆನೆಯ ಕಡೆಗೆ ಬೀಸತೊಡಗಿತು. ಆನೆಗೆ ನಮ್ಮ ಸೋವು ಸಿಕ್ಕಿತೆಂದು ಕಾಣುತ್ತದೆ. ಆನಂದದಿಂದ ಉತ್ಸಾಹ ದಿಂದ ಎಳೆ ಬಿದಿರು ಮುರಿಯುತ್ತಿದ್ದ ಏಕದಂತ ಒಮ್ಮೆಯೇ ತನ್ನ ಕೆಲಸ ನಿಲ್ಲಿಸಿತು. ಒಂದು ಕ್ಷಣ ಸುಮ್ಮನೆ ನಿಂತು ಒಂದೇ ಸವನೆ ಕಣ್ಣು ಕೆರಳಿಸಿ ನಮ್ಮ ಕಡೆಗೆ ನೋಡಿತು; ಮತ್ತೆ ಮೆಲ್ಲನೆ ತಿರುಗಿತು. ಇನ್ನೇನು? ಯೋಚಿ ಸಲಿಕ್ಕೂ ಎಡೆ ಇಲ್ಲ. ಕೋವಿ ಎತ್ತಿ ಗುರಿ ಹಿಡಿದು ಹೊಡೆದೇ ಬಿಟ್ಟೆ. ಕೋವಿಯ ಸದ್ದಿನೊಂದಿಗೇ ಆನೆ ಘೀಳಿಡುತ್ತ ಮುಂದೆ ನುಗ್ಗಿತು. ನೆತ್ತಿಗೇ ಗುರಿ ಇಟ್ಟು ಇನ್ನೊಂದು ಗುಂಡು ಹಾರಿಸಿದೆ. ಗಾಯಗೊಂಡ ಏಕದಂತ ಭಯಂಕರವಾಗಿ ಗರ್ಜಿಸುತ್ತ ಬಿದಿರ ಹಿಂಡಲುಗಳನ್ನೆಲ್ಲ ಪುಡಿ ಪುಡಿ ಮಾಡುತ್ತ ಮತ್ತೂ ಮುಂದೆ ನುಗ್ಗಿತು. ಆ ದೃಶ್ಯವನ್ನು ನೋಡಿಯೇ ತೀರಬೇಕಲ್ಲದೆ ಮಾತಿನಿಂದ ಬಣ್ಣಿಸಲು ಸಾಧ್ಯವಿಲ್ಲ. ಆಗ ಆ ಏಕದಂತ ನನ್ನು ಕಂಡರೆ ಎಂತಹ ಎದೆಗಾರನಾದರೂ ಎದೆಗೆಡಬೇಕು.

ಆನೆ ಸಾಯಲಿಲ್ಲ; ಬದಲಾಗಿ ಗಾಯಗೊಂಡಿತ್ತು. ಹೀಗೆ ಗಾಯ ಗೊಂಡ ಆನೆಯನ್ನು ಅದರಷ್ಟಕ್ಕೆ ಹೋಗಗೊಡುವುದು ಮತ್ತಷ್ಟು ಅಪಾಯ ಕರ. ಆನೆ ಗುಂಡಿನೇಟು ತೆಗೆದುಕೊಂಡು ರಕ್ತ ಸುರಿಸುತ್ತಾ ಒಂದೇ ಸವನೆ ಓಡುತ್ತ ಓಡುತ್ತ ನಮ್ಮ ಕಣ್ಮರೆಯಾಯಿತು. ಆ ಕಾರ್ಗಾಡಿನಲ್ಲಿ ಅದನ್ನು ಫಕ್ಕನೆ ಹುಡುಕಿ ಹಿಡಿಯುವುದೂ ಕಷ್ಟ. ಇಷ್ಟಾಗುವಾಗ ಬಾನೆಲ್ಲ ಕಾರ್ಮುಗಿಲಿನಿಂದ ಕವಿಯಿತು. ನಾನೂ ಕುರುಬರ ಕರಿಯನೂ

ಆಗ ಬೇರೇನೂ ಮಾಡಲು ಉಪಾಯವಿಲ್ಲದೆ ಬಿಡಾರಕ್ಕೆ ಹಿಂದಿರುಗಿದೆವು. ಮೈಗೆ ಎಣ್ಣೆ ಹಚ್ಚಿ ಬಿಸಿ ನೀರು ಮಿಂದೆವು. ಬಿದಿರು ಕಣೆಗಳ, ಕಲ್ಲು ಮುಳ್ಳುಗಳ ಗಾಯದಿಂದ ಮೈಯೆಲ್ಲಾ ಉರಿಯುತ್ತಿತ್ತು. ಇದಕ್ಕೂ ಹೆಚ್ಚಾಗಿ ಆನೆ ಸಾಯದೆ ತಪ್ಪಿಸಿಕೊಂಡಿತಲ್ಲಾ ಎಂಬ ಚಿಂತೆ ಬೇರೆ. ಹೇಗೂ ಆ ಇರುಳು ನಿದ್ದೆ ಹತ್ತಲಿಲ್ಲ.

ಮರುದಿನ ಬೆಳಗ್ಗೆ ಊರ ಗೌಡ ಗಾಯದ ಆನೆ ಎಲ್ಲಾದರೂ ಇದೆಯೋ ಎಂದು ನೋಡಿ ಬರಲು ಇಬ್ಬರು ಮಲೆ ಕುಡಿಯರನ್ನು ಕಾಡಿಗೆ ಕಳುಹಿಸಿದ. ಆ ಕುಡಿಯರು ಹಗಲೆಲ್ಲಾ ಕಾಡಿನಲ್ಲಿ ಹುಡುಕಾಡಿ ಆನೆಯ ಸುಳಿವು ಸಿಕ್ಕದೆ ಸಂಜೆಯ ವೇಳೆಗೆ ಊರಿಗೆ ಬಂದು ತಿಳಿಸಿದರು. ಆಗ ಆನೆ ಕೊಲ್ಲುವ ನನ್ನ ಆಸೆಯೆಲ್ಲಾ ನಿರಾಸೆಯಾಯಿತು. ಇನ್ನೇನು ಮಾಡುವುದೆಂದು ಯೋಚಿಸುತ್ತಿದ್ದಾಗಲೇ ನನ್ನ ಗುರುತಿನ ಟಪ್ಪಾಲು ಪೇದೆಯೊಬ್ಬ ಬಂದ. ಹಿಂದಿನ ದಿನ ಗಾಯಗೊಂಡ ಆನೆ ತಪ್ಪಿಸಿ ಓಡಿದುದು ಅವನಿಗೆ ತಿಳಿದಿತ್ತು. ಪೇದೆ ಬಂದವನೇ "ಇಂದು ಮಧ್ಯಾಹ್ನ ಮಂಚನ ಕಾಡಿನ ಬಳಿ ಕಟ್ಟಿಗೆ ಹೆಕ್ಕುತ್ತಿದ್ದ ಕುಡಿಯರ ಹೆಂಗಸೊಬ್ಬಳನ್ನು ನಿಮ್ಮ ಏಕದಂತ ಸೀಳಿ ಹಾಕಿತಂತೆ. ಆ ಮೇಲೆ ಆನೆ ಮಂಚನ ಹಳ್ಳಿಯನ್ನು ದಾಟಿ ರಾಮನ ಕಾಡಿಗೆ ಓಡಿತಂತೆ. ಮಂಚನ ಹಳ್ಳಿಯ ಜನವೆಲ್ಲಾ ಕಕ್ಕಾವಿಕ್ಕಿಯಾಗಿದ್ದಾರೆ." ಎಂದು ಹೇಳಿದ. ಮಂಚನ ಹಳ್ಳಿ ನಾನಿದ್ದ ಹಳ್ಳಿಯಿಂದ ಹತ್ತು ಹನ್ನೆರಡು ಮೈಲು ದೂರ. ರಾಮನ ಕಾಡೆಂದರೆ ಇಪ್ಪತ್ತು ಇಪ್ಪತ್ತೈದು ಮೈಲು ವಿಸ್ತಾರವಾದ ದಟ್ಟಡವಿ. ಆ ಅಡವಿಯಲ್ಲಿ ಆನೆಯನ್ನು ಹುಡುಕಿ ಹಿಡಿಯುವುದೆಂದರೆ ಭಗೀರಥ ಪ್ರಯತ್ನಪಡಬೇಕು. ಏನೇ ಆಗಲಿ ಮರುದಿನ ಬೆಳಗ್ಗೆ ರಾಮನ ಕಾಡಿಗೆ ನಡೆದೇ ಬಿಡುವುದೆಂದು ನಿಶ್ಚಯಿಸಿದೆ. ನನ್ನ ಜೊತೆಗಾರ ಕರಿಯನೂ ಮುಂದಾದ. ಅಂತೂ ಆ ರಾತ್ರಿ ನಮಗಿಬ್ಬರಿಗೂ ಸಮಾಧಾನದಿಂದ ನಿದ್ದೆ ಬಂತು.

ಮರುದಿನ ಬೆಳಗ್ಗೆ ನಸುಕಿಗೇ ಎದ್ದು ಮೋರೆ ತೊಳೆದು, ಕಾಫಿ ತೀರಿಸಿ ನಾನೂ ಕರಿಯನೂ ರಾಮನ ಕಾಡಿಗೆ ಹೊರಟೆವು. ಸಾಧಾರಣ ಹತ್ತು ಗಳಿಗೆ ಹೊತ್ತೇರುವಾಗ ಮಂಚನ ಹಳ್ಳಿಯನ್ನು ತಲಪಿದೆವು. ಮಂಚನ ಹಳ್ಳಿಯಿಂದ ಇನ್ನಿಬ್ಬರು ಬೇಟೆಯ ಬಿರ್ಸರು ನಮ್ಮ ಜೊತೆಗೂಡಿ

ದರು. ಮಂಚನ ಹಳ್ಳಿಯು ಬಳಿಯೇ ರಾಮನ ಕಾಡು. ಮತ್ತೆ ಫಲಾಹಾರ ತೀರಿಸಿ ನಾವು ನಾಲ್ವರೂ ರಾಮನ ಕಾಡಿಗೆ ತಲಪಿದೆವು. ಕಾಡಿನಲ್ಲಿ ಆನೆಯು ಸೋವುಸುಳಿವು ಎಲ್ಲಾದರೂ ಕಾಣಬರುವುದೋ ಎಂದು ಹುಡುಕುತ್ತ ಮುಂದುವರಿದೆವು. ಮುಂದುವರಿದಂತೆ ಒಂದೆರಡು ಕಡೆ ಹಜ್ಜೆಯು ಗುರುತುಗಳೂ, ಮುರಿದು ಹಾಕಿದ ಬಿದಿರುಗಳೂ, ಮರಗಳೂ ಕಾಣಬಂದುವು. ರಾಮನ ಕಾಡೆಂದರೆ ಬಲು ಭಯಂಕರ. ಒಂದು ಹಜ್ಜೆ ಇಡಬೇಕಾದರೆ ಒಂದು ಗಳಿಗೆ ಬೇಕು.

ನಾವು ನಾಲ್ವರೂ ಆನೆ ಹೋದ ಹಾದಿಯನ್ನೇ ಗುರುತಿಸಿ ಬಲು ದೂರ ಹೋದೆವು. ನಡೆದು ನಡೆದು ಕಾಡಿನ ಮೂಡು ಬದಿಗೆ ಬಂದೆವು. ಆನೆ ಕಾಡಿನ ಬದಿಯಲ್ಲಿಯೇ ಮುಂದೆ ಹೋದಂತೆ ಹಜ್ಜೆಯು ಗುರುತಿನಿಂದ ತಿಳಿಯಿತು. ಹಾಗೆಯೇ ಮುಂದುವರಿದು ಹೋದರೆ ಅಲ್ಲೊಂದು ಹಳ್ಳವಿದೆ ಎಂದೂ, ಒಂದು ವೇಳೆ ಮಧ್ಯಾಹ್ನದ ಉರಿಬಿಸಿಲಿಗೆ ಆನೆ ಹಳ್ಳದಲ್ಲಿ ಬಿದ್ದುಕೊಂಡಿರಲೂ ಬಹುದೆಂದೂ, ನಮ್ಮ ಜೊತೆಗಾರನೊಬ್ಬ ಸೂಚಿಸಿದ. ಮುಂದೆ ಹೋದಾಗ ಅವನ ಮಾತೇ ಸತ್ಯವಾಯಿತು. ಸುತ್ತಲೂ ದಟ್ಟಡವಿ; ನಡುವೆ ಅರ್ಧಮೈಲು ವಿಸ್ತೀರ್ಣವಾದೊಂದು ಬಯಲು; ಬಯಲಿನ ನಡುವೆ ಹಳ್ಳ. ಬಯಲಿನಲ್ಲಿ ಆಳೆತ್ತರಕ್ಕೆ ಹುಲ್ಲು ಬೆಳೆದಿತ್ತು. ನಾವು ನಾಲ್ವರೂ ಬಯಲಿನ ಬಳಿಯ ವರೆಗೆ ಜಾಗ್ರತೆಯಾಗಿ ನಡೆದು ಹೋದೆವು. ನಮ್ಮ ಜೊತೆಗಾರನೊಬ್ಬ ಮರವೊಂದನ್ನೇರಿ ಆನೆ ಎಲ್ಲಿದೆ ಎಂದು ನೋಡಿದ. ಆನೆ ಹಳ್ಳದಲ್ಲಿಯೇ ಹೊರಳಾಡುತ್ತಿತ್ತು. ಇನ್ನೇನು? ಆನೆ ಸಿಕ್ಕಿತು; ಗುಂಡು ಹಾರಿಸುವುದೊಂದೇ ಉಳಿದುದು.

ಮತ್ತೆ ನಾವು ನಾಲ್ವರೂ ಬಯಲಿನ ಹುಲ್ಲಿನೆಡೆಯಲ್ಲಿ ಹರಿದಾಡಿಕೊಂಡೇ ಹತ್ತು ಹನ್ನೆರಡು ಮಾರು ಮುಂದೊತ್ತಿದೆವು. ಹುಲ್ಲಿನೆಡೆಯಿಂದ ತಲೆ ಎತ್ತಿ ನೋಡಿದಾಗ ಹಳ್ಳದಲ್ಲಿರುವ ಆನೆ ಕಂಡಿತು. ಅಷ್ಟರಲ್ಲಿ ಆನೆಗೆ ನಮ್ಮ ವಾಸನೆ ಸಿಕ್ಕಿತೋ ಏನೋ! ಸೊಂಡಿಲನ್ನೆತ್ತಿ ಘೀಳಿಡಲು ಅಣಿ ಮಾಡಿತು. ಕೂಡಲೇ ನಾನು ನನ್ನ ಜೋಡು ನಳಿಗೆಯ ಕೋವಿಯನ್ನು ಗುರಿಹಿಡಿದು ಒಮ್ಮೆ ಎರಡು ಕುದುರೆಗಳನ್ನೂ ಎಳೆದು ಬಿಟ್ಟೆ. 'ಧಡಾಂ' 'ಧಡಾಂ' ಎಂಬ ಸದ್ದು ಜೊತೆಯಾಗಿಯೇ ಕೇಳಿಸಿತು. ನನ್ನ ಹಿಂದೆಯೇ

ಉಳಿಪವರೂ ಈಡು ಹೊಡೆದು ತಮ್ಮ ಬೇಟೆಯ ಹುಚ್ಚು ತೀರಿಸಿಕೊಂಡರು. ಸೊಂಡಿಲನ್ನು ಮೇಲೆತ್ತಿನ ಏಕದಂತ ಮತ್ತೆ ಏಳಲಿಲ್ಲ. ಎತ್ತಿದ ಸೊಂಡಿಲು ಕೆಳಗುರುಳಿತು. ಆನೆ ಬೇಟೆ ಮುಗಿಯಿತು; ಏಕದಂತ ಮಣ್ಣು ಮುಕ್ಕಿತು. ನಮಗಾಗ ಉಂಟಾದ ಆನಂದ ಹೇಳಲು ಸಾಧ್ಯವಿಲ್ಲ."

ಒಂಟಿ ಆನೆಯನ್ನು ಕೊಂದು ನಾಡಿಗೇ ಉಪಕಾರ ಮಾಡಿದ ನರಸಿಂಹಯ್ಯನವರನ್ನು ಕೊಡಗು ಸರಕಾರದ ಅಧಿಕಾರಿಗಳು ಬರಮಾಡಿ ಮನ್ನಿಸಿದರು; ರೈಫಲ್ ಒಂದನ್ನು ಅವರಿಗೆ ಬಹುಮಾನವಿತ್ತು ಸನ್ಮಾನಿಸಿದರು. ಮಲಬಾರಿನ ಅಧಿಕಾರಿಗಳೂ ಅಭಿನಂದನೀಯ ಪತ್ರ ಬರೆದಿದ್ದರಂತೆ. ಹೀಗೂ ನರಸಿಂಹಯ್ಯನ ದಯದಿಂದ ಏಕದಂತನ ಹಾವಳಿ ನೀಗಿತು.

ಅಭ್ಯಾಸ

1. ಒಂಟಿ ಆನೆ ಜನರಿಗೆ ಏನೆಲ್ಲ ಉಪದ್ರವ ಕೊಟ್ಟಿತು?

2. ಆನೆ ಬೇಟೆ ಮಾಡಿದ ಮೊದಲ ದಿನ ನರಸಿಂಹಯ್ಯನವರಿಗೆ ನಿದ್ದೆ ಹತ್ತದಿರಲು ಕಾರಣವೇನು?

3. ನರಸಿಂಹಯ್ಯನವರು ಏಕದಂತನನ್ನು ಎಲ್ಲಿ ಹೇಗೆ ಹೊಡೆದರು?

4. ಆನೆಬೇಟೆಯ ಕತೆಯನ್ನು ಸಂಕ್ಷೇಪಿಸಿ ಬರೆಯಿರಿ.

5. ಮುಂದಿನ ಪದಗಳಲ್ಲಿ ಅನ್ಯದೇಶ್ಯ ಶಬ್ದಗಳನ್ನು ಹೆಕ್ಕಿ ತೆಗೆದು ಅವು ಯಾವ ಭಾಷೆಯುವುಗಳೆಂದು ಹೇಳಿರಿ:—ಸಾಧ್ಯ, ತೋಟೆ, ಕೋವಿ, ಅಪಾಯ, ಏಕದಂತ, ಆನೆ, ಸುಳಿವು, ಕಾಫಿ, ಸರಕಾರ, ಹಜ್ಜೆ.

6. ಮುಂದಿನ ನುಡಿಗಟ್ಟುಗಳಿಂದ ಒಂದೊಂದು ವಾಕ್ಯ ಮಾಡಿರಿ:—ಕಕ್ಕಾವಿಕ್ಕಿಯಾಗು; ಎದೆಗಾರ; ಗುರಿಹಿಡಿ; ಭಗೀರಥ ಪ್ರಯತ್ನ; ಆಳೆತ್ತರ; ಅಣಿಮಾಡು.

7. ಅರ್ಘ, ಭಯಂಕರ, ಮಧ್ಯಾಹ್ನ, ಕ್ಷಣ, ಪುಣ್ಯ, ಪ್ರಾಣಿ—ಈ ಶಬ್ದಗಳು ಸಂಸ್ಕೃತ ಶಬ್ದಗಳಾಗಿವೆ ಎಂದು ಹೇಗೆ ತಿಳಿಯುವುದು?

8. ನಿಮ್ಮ ಪುಸ್ತಕ ಭಂಡಾರದಿಂದ ಬೇಟೆಯ ಕುರಿತಾದ ಕತೆಗಳನ್ನು ಆರಿಸಿ ಓದಿರಿ.

೪. ದಯೆಯೇ ಧರ್ಮ

ದೃಶ್ಯ ಒಂದು

[ಸಂಜೆಯ ಹೊತ್ತು. ನೇಸರು ಹೊಂಬಿಸಿಲು ಬೀರುತ್ತ ಬಾನಲ್ಲಿ ಪಡುಗಡೆಗೆ ಇಳಿಯುತ್ತಿರುವನು. ಕಪಿಲವಾಸ್ತುವಿನ ರಾಜೋದ್ಯಾನದಲ್ಲಿ ರಾಜಕುಮಾರ ಸಿದ್ಧಾರ್ಥನೂ ಆತನ ಗೆಳೆಯ ಸುಮನನೂ ಮಾತನಾಡುತ್ತ ಬರುತ್ತಿರುವರು.]



ಸಿದ್ಧಾರ್ಥ:—ಸುಮನ, ಏನೊಂದು ಸಂತಸ! ಎಂತಹ ಸುಖ! ನೋಡಲ್ಲಿ, ದನಗಳು ಅಂಬಾ ಎನ್ನುತ್ತ ತಂತಮ್ಮ ಕರುಗಳಿಗೆ ಹಾಲುಣಿಸ ಲೆಂದು ಓಡಿಬರುತ್ತಿವೆ! ಹಕ್ಕಿಗಳು ಚಿಲಿಪಿಲಿಗುಟ್ಟುತ್ತ ತಂತಮ್ಮ ಮರಿಗಳಿಗೆ ಗುಟುಕು ಕೊಡಲು ಬರುತ್ತಿವೆ! ಆಹಾ! ಎಂತಹ ಸೊಬಗಿನ ಸುಗ್ಗಿ!

ಸುಮನ:—ಹೌದು, ನಿಜ. ಮನೆಮನೆಗಳಲ್ಲಿರುವ ಕರುಗಳೂ ತಾಯಂದಿರನ್ನು ನೆನೆನೆನೆದು 'ಅಂಬಾ ಅಂಬಾ' ಎಂದು ಕರೆಯುತ್ತಿವೆ. ಮರಮರಗಳ ಮೇಲಿನ ಗೂಡುಗಳಲ್ಲಿರುವ ಮರಿಹಕ್ಕಿಗಳೂ ಚಿಲಿಪಿಲಿ ದನಿ ಯಲ್ಲಿ ಹಾಡುತ್ತಿವೆ. ಸೊಬಗಿನ ಸುಗ್ಗಿಯೇ ಇದು.

ಸಿದ್ಧಾರ್ಥ:—ಸರಿ, ಅದೆಲ್ಲಾ ನಿಜ ಸುಮನ. ಹೊಟ್ಟೆ ಹಸಿದಾಗ ನಮಗೆ ಮನೆಯು ನೆನಪಾಗುವುದು. ಸೂರ್ಯನು ಬೆಳಗ್ಗೆ ಮೂಡಲಲ್ಲಿ ಮೂಡಿ ಸಂಜೆ ಪಡುವಲಲ್ಲಿ ಮುಳುಗುವನು. ಬೇಸಿಗೆ ಕಾಲ, ಚಳಿಗಾಲ, ಮಳೆಗಾಲ—ಇವು ನಿಯಮ ತಪ್ಪದೆ ಬರುವವು. ಇದನ್ನೇ ಪ್ರಕೃತಿ ನಿಯಮವೆನ್ನುವುದು. (ಅಷ್ಟರಲ್ಲಿ ಆಕಾಶದಲ್ಲಿ ಹಕ್ಕಿಗಳು ಹಾರಾಡುವಾಗ ರೆಕ್ಕೆ ಬಡಿಯುವ ಸದ್ದು ಕೇಳಿಬರುವುದು.)

ಸುಮನ:—(ಮೇಲೆ ನೋಡುತ್ತ) ಹೌದು, ಸಿದ್ಧಾರ್ಥ! ನೀನು ಹೇಳಿದುದು ಸತ್ಯ. ಅಲ್ಲಿ ನೋಡು, ಆಕಾಶದಲ್ಲಿ ಆ ಹಕ್ಕಿಗಳೆಲ್ಲ ಎಷ್ಟೊಂದು ಸೊಗಸಾಗಿ ಹಾರಾಡುತ್ತ ಹೋಗುತ್ತಿವೆ! ಇಷ್ಟೊಂದು ಬಿಳಿಯಾದ ಈ ಹಕ್ಕಿಗಳು ಎಂತಹ ಹಕ್ಕಿಗಳಪ್ಪಾ!

ಸಿದ್ಧಾರ್ಥ:—(ಮೇಲೆ ನೋಡುತ್ತಾ) ಹೋ! ರಾಜ ಹಂಸಗಳು! ಕಾಣುವುದಿಲ್ಲವೆ, ನೀಳವಾದ ಕತ್ತು ನೀಡಿ ಮುಂದೆ ಮುಂದೆ ತೇಲಾಡುತ್ತ ಹೋಗುವುದು?

ಸುಮನ:—ತೇಲಾಡುವುದು! ತೇಲಾಡುವುದಲ್ಲ; ಗಾಳಿಯಲ್ಲಿ ಹಾರಾಡುವುದು. ತೇಲಾಡುವುದು ನೀರಿನಲ್ಲಿ.

ಸಿದ್ಧಾರ್ಥ:—(ನಗುತ್ತಾ) ಸುಮನಾ, ನೀನು ಬುದ್ಧಿವಂತನಪ್ಪಾ! ಚೆನ್ನಾಗಿ ತಿಳಿದಿರುವೆ.

ಸುಮನ:—ನಿನ್ನಷ್ಟು ಬುದ್ಧಿವಂತ ನಾನಲ್ಲ ಸಿದ್ಧಾರ್ಥ! ಅದು ಕಂಡಿತ. ನೀನು ತುಂಬಾ ತಿಳುವಳಿಕೆಯುಳ್ಳವನೆಂದು ನಮ್ಮ ಗುರುಗಳೇ ಆಗಾಗ ಹೇಳುತ್ತಾರೆ.

ಸಿದ್ಧಾರ್ಥ:—ಹಾಗೇನೂ ಇಲ್ಲ; ಗುರುಗಳು ಸುಮ್ಮಸುಮ್ಮನೆ ನನ್ನನ್ನು ಹೊಗಳುವುದಷ್ಟೆ.

ಸುಮನ:—ಅದೇನಲ್ಲ; ನೀನು ಬುದ್ಧಿವಂತನೆಂಬುದು ನಿಜ. (ಆಕಾಶದ ಕಡೆ ನೋಡಿ) ಆಹಾ! ನೋಡು, ನೋಡು, ಅದೇನಾಯಿತು?

ಸಿದ್ಧಾರ್ಥ:—(ಆಕಾಶದ ಕಡೆನೋಡಿ) ಹಾ! ಇದೇನು? ಆ ಹಂಸ ಅದೇಕೆ ಅಷ್ಟೊಂದು ವೇಗವಾಗಿ ಕೆಳಗಿಳಿಯುತ್ತಿದೆ!

ಸುಮನ:—ಹೋ! ಯಾರೋ ಬಾಣ ಹೊಡೆದರೆಂದು ತೋರುತ್ತದೆ.

ಇಲ್ಲವಾದರೆ ಹಾಗೆ ತಲೆ ಕೆಳಗೆ ಮಾಡಿ ಬೀಳಲಾರದು. ಅದರ ಜೊತೆಯ ಉಳಿದ ಹಕ್ಕಿಗಳನ್ನು ನೋಡು. ಎಲ್ಲಾ ಹೆದರಿ ಚದರಿ ಬಿಟ್ಟಿವೆ.

[ಅಷ್ಟರಲ್ಲಿ ಗಾಯಗೊಂಡ ಹಂಸ ಸಿದ್ಧಾರ್ಥನ ಪಾದದ ಬಳಿಯೇ ಬಂದು ಬೀಳುವುದು. ಕೂಡಲೇ ಸಿದ್ಧಾರ್ಥ ಹಕ್ಕಿಯನ್ನೆತ್ತಿಕೊಂಡು ತಾಗಿದ್ದ ಬಾಣವನ್ನು ಮೆಲ್ಲನೆ ಸೆಳೆದು ತೆಗೆಯುವನು. ಮತ್ತೆ ತನ್ನ ಉತ್ತರೀಯದಿಂದ ಹಕ್ಕಿಯ ನೆತ್ತರನ್ನೊರಸುವನು.]

ಸಿದ್ಧಾರ್ಥ:—(ಒಂದು ಕೈಯಲ್ಲಿ ಹಂಸವನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಉತ್ತರೀಯದಿಂದ ಗಾಳಿ ಹಾಕುತ್ತ) ಯಾರಪ್ಪಾ ಇದನ್ನು ಹೊಡೆದರು? ಇದು ಯಾರಿಗೇನು ಮಾಡಿತು? ಪಾಪದ ಹಕ್ಕಿ!

ಸುಮನ:—ಯಾರೋ ಬೇಟೆಯಾಡಿರಬೇಕು. ಬೇಟೆಯಾಡುವುದು ಕ್ಷತ್ರಿಯರ ಧರ್ಮವಲ್ಲವೆ ಸಿದ್ಧಾರ್ಥ?

ಸಿದ್ಧಾರ್ಥ:—ಅದೆಂತಹ ಕ್ಷತ್ರಿಯರ ಧರ್ಮ? ಇಂತಹ ಬಡಹಕ್ಕಿಯನ್ನು ಕೊಲ್ಲುವುದೂ ಕ್ಷತ್ರಿಯರ ಧರ್ಮವೆ? ಯಾವನೋ ಒಬ್ಬ ಕ್ಷತ್ರಿಯ ತನ್ನ ರಟ್ಟೆಯಲ್ಲಿ ಬಲವಿದೆಯೆಂದು, ಬೇಟೆಯೂ ಕ್ಷತ್ರಿಯರ ಧರ್ಮವೆಂದು ನಿರ್ಣಯಿಸಿರಬೇಕು. ನೀನೇ ಹೇಳು, ನೀನೀಗ ಈ ಹಕ್ಕಿಯನ್ನು ಕೊಲ್ಲಬಲ್ಲೆಯಾ? (ಹಕ್ಕಿಗೆ ಉತ್ತರೀಯ ಹೊದಿಸುವನು).

ಸುಮನ:—ನಾನು ಕೊಲ್ಲಲಾರೆ. ಇಷ್ಟೊಂದು ಸೊಗಸಾದ ಹಕ್ಕಿಯನ್ನು ಕೊಲ್ಲುವುದಾದರೂ ಹೇಗೆ ಸಿದ್ಧಾರ್ಥ.

ಸಿದ್ಧಾರ್ಥ:—ನೀನು ಮಾತ್ರವಲ್ಲ ಸುಮನ, ಹೃದಯವಿರುವ ಯಾವ ಮನುಷ್ಯನಾದರೂ ಈ ಹಕ್ಕಿಗೆ ಬಾಣ ಹೊಡಲಾರ; ಇದನ್ನು ಕೊಲ್ಲಲಾರ. ಅದಿರಲಿ, ನೀನೀಗ ಬೇಗನೆ ಹೋಗಿ ಅರಮನೆಯ ವೈದ್ಯನಿಂದ ಹಕ್ಕಿಯ ಗಾಯಕ್ಕೆ ಹಚ್ಚಲಿಕ್ಕೆ ಏನಾದರೂ ಮದ್ದು ಕೇಳಿ ತಾ. ನಾನು ಹೇಳಿದೆನೆಂದು ಹೇಳು; ಬೇಗನೆ ತಾ.

ಸುಮನ:—(ಹೊರಡುತ್ತ) ಈಗಲೇ ತರುತ್ತೇನೆ; ನೀನಿಲ್ಲೇ ಇರು.

(ಸುಮನನು ಹೋಗುವನು. ರಾಜಕುಮಾರ ದೇವದತ್ತನು ಏನನ್ನೋ ಹುಡುಕುತ್ತ ಅತ್ತಿತ್ತ ನೋಡುತ್ತ ಬರುವನು.)

ಸಿದ್ಧಾರ್ಥ:—ಇದೇನು ದೇವದತ್ತ? ಏನು ಹುಡುಕುತ್ತಿರುವೆ?

ದೇವದತ್ತ:—(ಸಿದ್ಧಾರ್ಥನ ಕಡೆ ತಿರುಗಿ) ಸಿದ್ಧಾರ್ಥ! ನೀನಿರುವೆಯಾ ಇಲ್ಲಿ? ನಾನೀಗ ಬಾಣ ಹೂಡಿ ಬೀಳಿಸಿದ ಹಂಸವನ್ನು ಕಂಡೆಯಾ ಸಿದ್ಧಾರ್ಥ?

ಸಿದ್ಧಾರ್ಥ:—ಹಂಸ! ನೀನು ಬಾಣ ಹೂಡಿ ಬೀಳಿಸಿದ್ದು?

ದೇವದತ್ತ:—ಹೌದು, ಹೌದು. ನಾನೀಗ ತಾನೇ ಬಾಣಹೊಡೆದು ಕೆಡೆಯಿಸಿದ್ದು. ಇಲ್ಲೇ ಎಲ್ಲಿಯೋ ಬೀಳುವುದನ್ನು ದೂರದಿಂದ ದಿಟ್ಟಿಸಿದೆ. ಎಲ್ಲಿ ಬಿದ್ದಿದೆ ಹೇಳು. ನೀನು ಕಂಡಿರಬೇಕು. (ಬಟ್ಟೆ ಮುಚ್ಚಿದ ಹಂಸವನ್ನು ಕಂಡು) ಹಾ! ನನ್ನ ಹಂಸ! ಕೊಡು, ಕೊಡು.

ಸಿದ್ಧಾರ್ಥ:—ನಿನ್ನ ಹಂಸ! ನೀನೇನು ಸಾಕಿ ಸಲಹಿದ್ದೆಯಾ ಇದನ್ನು?

ದೇವದತ್ತ:—ಹೌದು ನನ್ನ ಹಂಸ! ನಾನು ಬಾಣ ಹೂಡಿ ಬೀಳಿಸಿದ್ದು! ನನ್ನದೇ ಹಂಸ! ಬೇಗನೇ ಕೊಡು. ಇಲ್ಲವಾದರೆ ಮಹಾರಾಜನಲ್ಲಿ ದೂರು ಕೊಡುತ್ತೇನೆ.

ಸಿದ್ಧಾರ್ಥ:—ನೀನೇಕೆ ದೂರು ಕೊಡಬೇಕು? ನಾನೇ ದೂರು ಕೊಡುತ್ತೇನೆ. ನಿರ್ದೋಷಿಯಾದ ಈ ಹಂಸವನ್ನು ದೇವದತ್ತ ಹೊಡೆದು ಬೀಳಿಸಿದನೆಂದು ದೂರು ಕೊಡುತ್ತೇನೆ. ನೋಡಿಲ್ಲಿ! ನಿನ್ನ ಅನ್ಯಾಯದಿಂದ ಗಾಯಗೊಂಡು ಮೂರ್ಛೆ ಹೋದ ಹಂಸ!

ದೇವದತ್ತ:—ಸಿದ್ಧಾರ್ಥ! ಒಳ್ಳೆಯ ಮಾತಿನಲ್ಲಿ ನನ್ನ ಹಂಸ ಕೊಡುವೆಯಾ? ಇಲ್ಲ, ಈಗಲೇ ಹೋಗಿ ದೂರು ಕೊಡಬೇಕೆ?

ಸಿದ್ಧಾರ್ಥ:—ಹಂಸ ನಿನ್ನದಾಗುವುದು ಹೇಗೆ ದೇವದತ್ತ? ನೀನಿದರ ಪ್ರಾಣ ತೆಗೆಯಲು ಪ್ರಯತ್ನಿಸಿದೆ!

ದೇವದತ್ತ:—ಪ್ರಾಣವೋ ಗೀಣವೋ ನನಗೆ ತಿಳಿಯದು. ಬಾಣ ಹೊಡೆದು ಅದನ್ನು ಬೀಳಿಸಿದವ ನಾನಲ್ಲವೆ? ಆದಕಾರಣ ಅದು ನನ್ನದು.

ಸಿದ್ಧಾರ್ಥ:—ನೀನಿದರ ಪ್ರಾಣ ತೆಗಿಯಲಿಕ್ಕಾಗಿ ಬಾಣ ಹೊಡೆದು ಬೀಳಿಸಿದೆ. ನಾನಿದನ್ನು ಪ್ರಾಣ ಉಳಿಸಲಿಕ್ಕಾಗಿ ಹಿಡಿದೆ. ಆದುದರಿಂದ ಈ ಹಂಸ ನನ್ನದು. ನಾನಿದನ್ನು ನಿನಗೆ ಕೊಡಲಾರೆ; ಎಂದೂ ಕೊಡಲಾರೆ.

ದೇವದತ್ತ:—ಸಿದ್ಧಾರ್ಥ! ನೀನು ರಾಜಕುಮಾರನೆಂದು ನನಗೆ ಗೊತ್ತಿದೆ. ನಿನ್ನ ಹಾಗೆ ನಾನೂ ರಾಜಕುಮಾರ! ಹಂಸದ ಪ್ರಾಣ ಉಳಿಸಲಿಕ್ಕಾಗಿ ಹಿಡಿದೆನೆಂಬ ಗರ್ವದ ಮಾತೆಲ್ಲ ನನ್ನಲ್ಲಿ ಬೇಡ.

ಸಿದ್ಧಾರ್ಥ:—ನೀನು ರಾಜಕುಮಾರನಲ್ಲವೆಂದು ನಾನೆಲ್ಲಿ ಹೇಳಿದೆ ದೇವದತ್ತ? ನಾನಿದರ ಪ್ರಾಣವನ್ನು ಹೇಗಾದರೂ ಮಾಡಿ ಉಳಿಸಬೇಕು. ಅದಕ್ಕಾಗಿ ನಿನಗೆ ಕೊಡಲಾರೆನೆಂದು ಹೇಳಿದೆ. ಅದರಲ್ಲಿ ಗರ್ವಕ್ಕೇನಿದೆ ದೇವದತ್ತ?

(ಸುಮನನು ಮದ್ದು ತರುವನು. ಸಿದ್ಧಾರ್ಥನು ನೆಲದಲ್ಲಿ ಕುಳಿತು ಹಂಸವನ್ನು ಮಡಿಲಲ್ಲಿ ಮಲಗಿಸಿಕೊಂಡು ಮದ್ದು ಹಚ್ಚುವನು. ಆ ಹಂಸ ಒಮ್ಮೆ ಪಟಪಟ ರೆಕ್ಕೆ ಬಡಿದು ಮತ್ತೆ ಸುಮ್ಮನೆ ಮಲಗುವುದು.)

ದೇವದತ್ತ:—ಸಿದ್ಧಾರ್ಥ! ಹಾಗಾದರೆ ಹಂಸ ಕೊಡುವುದಿಲ್ಲ ವೆಂಬುದು ಕಂಡಿತವಷ್ಟೆ? ನೋಡೋಣ! ನಾನೂ ನಿನ್ನಂತೆ ಕ್ಷತ್ರಿಯ ಕುಮಾರ. ಹೊಡೆದ ಬೇಟೆಯನ್ನು ಎಂದಿಗೂ ಬಿಡಲಾರೆ. ಕ್ಷತ್ರಿಯನ ಧರ್ಮ ಅದು!

ಸಿದ್ಧಾರ್ಥ:—ಹೌದು; ಕ್ಷತ್ರಿಯ ಧರ್ಮ. ಹಾಗೆಯೇ ಮರೆಹೊಕ್ಕ ವರನ್ನು ಕಾಪಾಡುವುದೂ ಕ್ಷತ್ರಿಯನ ಧರ್ಮ! ಈ ಹಂಸ ನನ್ನನ್ನು ಮರೆ ಹೊಕ್ಕಿದೆ.

ಸುಮನ:—ಕ್ಷಮಿಸಿರಿ ರಾಜಕುಮಾರರೆ, ನೀವಿಬ್ಬರೂ ಕ್ಷತ್ರಿಯರು. ನಿಮ್ಮ ಈ ವಿವಾದ ಸುಲಭವಾಗಿ ತೀರಲಾರದು. ನಾವೀಗ ಮಹಾರಾಜರ ಮುಂದೆ ಹೋದರೆ ಅವರು ಸುಲಭವಾಗಿ ತೀರ್ಮಾನಿಸಿ ಬಿಡುವರು.

ದೇವದತ್ತ:—ನಾನೀಗಲೇ ಮಹಾರಾಜರ ಮುಂದೆ ದೂರುಕೊಡು ತ್ತೇನೆ. ನಾನು ಹೊಡೆದ ಹಂಸ ನನಗೆ ಸಿಕ್ಕದೆ ಎಲ್ಲಿ ಹೋಗುವುದು ನೋಡುವ! (ಸಿಟ್ಟಿನಿಂದ ವೇಗವಾಗಿ ನಡೆಯುವನು.)

ಸಿದ್ಧಾರ್ಥ:—ಸುಮನ, ನಾವು ಮಹಾರಾಜರ ಮುಂದೆ ನಡೆಯುವ. ಅವರೇ ತೀರ್ಮಾನಿಸಲಿ. (ಹಂಸವನ್ನೆತ್ತಿಕೊಂಡು ಸಿದ್ಧಾರ್ಥನು ಹೊರ ಡುವನು. ಅವನ ಹಿಂದೆ ಸುಮನನೂ ಸರಿಯುವನು.)

ದೃಶ್ಯ ಎರಡು

[ರಾಜಾ ಶುದ್ಧೋದನನ ಸಭೆ. ಶುದ್ಧೋದನನು ಸಿಂಹಾಸನದಲ್ಲಿ ಮಂಡಿಸಿರುವನು. ಮಂತ್ರಿಗಳೇ ಮೊದಲಾದವರೆಲ್ಲ ತಂತಮ್ಮ ಆಸನಗಳಲ್ಲಿ

ಕುಳಿತಿರುವರು. ರಾಜನು ಮಂತ್ರಿಗಳೊಡನೆ ಮಾತನಾಡುತ್ತಿರುವನು. ಅಷ್ಟರಲ್ಲಿ ದೇವದತ್ತನು ಪ್ರವೇಶಿಸುವನು.]

ದೇವದತ್ತ:—(ಬಗ್ಗಿ ನಮಸ್ಕರಿಸುತ್ತ) ಮಹಾರಾಜರಿಗೆ ವಂದನೆ.

ಶುದ್ಧೋದನ:—ದೇವದತ್ತ! ಇದೇನು ಇಲ್ಲಿಗೆ ಬಂದೆ? ನೀನೇನು ಉದ್ಯಾನ ವಿಹಾರಕ್ಕೆ ಹೋಗಿಲ್ಲವೆ?

ದೇವದತ್ತ:—ಹೋಗಿದ್ದೆ ಮಹಾರಾಜ, ಈಗ ಉದ್ಯಾನದಿಂದಲೇ ಬಂದೆ; ಸಿದ್ಧಾರ್ಥ ನನ್ನ ಹಂಸ ಕೊಡುವುದಿಲ್ಲವೆಂದು ದೂರು ಕೊಡಲು ಬಂದೆ.

ಶುದ್ಧೋದನ:—ಏನು? ಸಿದ್ಧಾರ್ಥ ಏನು ಮಾಡಿದ?

ದೇವದತ್ತ:—ಹೌದು, ಸಿದ್ಧಾರ್ಥ ನನ್ನ ಹಂಸ ಕೊಡುವುದಿಲ್ಲ. ನೀವು ಕೊಡಿಸಬೇಕು ನನಗೆ. ಅದು ನನ್ನ ಹಂಸ.

ಶುದ್ಧೋದನ:—ಏನು ದೇವದತ್ತ? ಸಿದ್ಧಾರ್ಥ ನಿನ್ನ ಹಂಸ ಸೆಳೆದು ಕೊಂಡನೆ? ಎಲ್ಲಿಯ ಹಂಸ? ಏನು ಸಂಗತಿ?

ದೇವದತ್ತ:—ಹೌದು ಮಹಾರಾಜ. ಆಕಾಶದಲ್ಲಿ ಹಾರಾಡುತ್ತಿದ್ದ ಹಂಸಕ್ಕೆ ಬಾಣ ಹೊಡೆದು ನಾನು ಕೆಳಗೆ ಬೀಳಿಸಿದೆ. ಅದು ಸಿದ್ಧಾರ್ಥನ ಬಳಿಯಲ್ಲಿ ಬಿದ್ದಿತು. ಅದನ್ನವನು ಹಿಡಿದುಕೊಂಡು ಈಗ ನನಗೆ ಕೊಡುವುದಿಲ್ಲ.

ಶುದ್ಧೋದನ:—ಸಿದ್ಧಾರ್ಥ ಈಗೆಲ್ಲಿದ್ದಾನೆ?

ದೇವದತ್ತ:—ಅಲ್ಲೇ ಉದ್ಯಾನದಲ್ಲಿದ್ದಾನೆ.

(ಸಿದ್ಧಾರ್ಥನು ಹಂಸವನ್ನೆತ್ತಿಕೊಂಡು ಸುಮನನೊಡನೆ ಬರುವನು.)

ಸಿದ್ಧಾರ್ಥ:—ಮಹಾರಾಜರಿಗೆ ವಂದನೆ. (ವಂದಿಸುವನು.)

ಸುಮನ:—ವಂದನೆ ಮಹಾರಾಜರಿಗೆ. (ನಮಸ್ಕರಿಸುವನು.)

ಶುದ್ಧೋದನ:—ಏನು ಸಿದ್ಧಾರ್ಥ! ನೀನು ದೇವದತ್ತನ ಹಂಸವನ್ನು ತೆಗೆದುಕೊಂಡೆಯಾ? ಆ ಹಂಸ ಅವನದೋ?

ಸಿದ್ಧಾರ್ಥ:—ಹೌದು, ಅದೇ ಹಂಸ ಇದು.

ಶುದ್ಧೋದನ:—ಏನು? ದೇವದತ್ತನ ಹಂಸವೆ ಅದು?

ಸಿದ್ಧಾರ್ಥ:—ಅಲ್ಲ, ಅವನದಲ್ಲ; ನನ್ನ ಹಂಸ ಇದು.

ಶುದ್ಧೋದನ:—ನಿನ್ನದು?

ದೇವದತ್ತ:—ಅಲ್ಲ, ಮಹಾರಾಜ! ನನ್ನದೇ ಹಂಸ ಅದು. ನಾನೇ ಅದನ್ನು ಹೊಡೆದು ಕೆಡವಿಸಿದೆ.

ಶುದ್ಧೋದನ:—ದೇವದತ್ತ! ಅವಸರ ಮಾಡಬೇಡ. ನೀನು ಬಾಣ ಹೊಡೆದು ಕೆಡವಿಸಿದುದರಿಂದ ಹಂಸ ನಿನ್ನದೆಂದು ಹೇಳುವುದಲ್ಲವೆ ನೀನು?

ದೇವದತ್ತ:—ಹೌದು, ಮಹಾರಾಜ.

ಶುದ್ಧೋದನ:—ಏನು ಸಿದ್ಧಾರ್ಥ? ದೇವದತ್ತ ಹೇಳುವುದು ಸರಿಯೇ?

ಸಿದ್ಧಾರ್ಥ:—ಹೌದು ಮಹಾರಾಜ! ಹಂಸವನ್ನು ಅವನೇ ಬಾಣ ಹೊಡೆದು ಕೆಡವಿಸಿದ್ದು.

ಶುದ್ಧೋದನ:—ಹಾಗಾದರೆ ಹಂಸ ನಿನ್ನದಾಗುವುದು ಹೇಗೆ?

ಸಿದ್ಧಾರ್ಥ:—ಹಂಸದ ಪ್ರಾಣ ತೆಗೆಯಬೇಕೆಂದು ಬಾಣ ಹೊಡೆದವನು ದೇವದತ್ತ. ಅದರ ಪ್ರಾಣ ಉಳಿಸಬೇಕೆಂದು ಹಿಡಿದುಕೊಂಡವನು ನಾನು. ಪ್ರಾಣ ತೆಗೆಯುವವನಿಗಿಂತ ಪ್ರಾಣ ಉಳಿಸುವವನೇ ಮೇಲಲ್ಲವೆ?

(ಈ ಮಾತು ಕೇಳಿ ಸಭಿಕರೆಲ್ಲ ಸಂತೋಷಗೊಳ್ಳುವರು)

ಶುದ್ಧೋದನ:—ದೇವದತ್ತ ಹೊಡೆದ ಹಂಸವಿದು. ಕ್ಷತ್ರಿಯನಾದವನು ತಾನು ಹೊಡೆದ ಬೇಟೆಯನ್ನು ಬೇರೆಯವರಿಗೆ ಬಿಟ್ಟುಕೊಡಲಾರನಷ್ಟೆ?

ಸಿದ್ಧಾರ್ಥ:—ಮಹಾರಾಜರೆನ್ನುವುದು ಸರಿ. ಕ್ಷತ್ರಿಯನಾದವನು ತಾನು ಹೊಡೆದ ಬೇಟೆಯನ್ನು ಬಿಟ್ಟುಕೊಡಲಾರನೆಂಬುದು ಎಷ್ಟು ನ್ಯಾಯವೋ, ಕ್ಷತ್ರಿಯನಾದವನು ಮರೆಹೊಕ್ಕವರನ್ನು ಬಿಟ್ಟುಬಿಡಲಾರನೆಂಬುದೂ ಅಷ್ಟೇ ಸತ್ಯವಾಗಿದೆಯಲ್ಲ? ಆದುದರಿಂದ ನನ್ನ ಮರೆಹೊಕ್ಕ ಹಕ್ಕಿಯನ್ನು—ನಾನು ಬದುಕಿಸಿದ ಈ ಹಂಸವನ್ನು—ಬಿಟ್ಟುಕೊಡಲಾರೆ.

(ಸಿದ್ಧಾರ್ಥನ ಮಾತು ಕೇಳಿದ ಸಭಿಕರೆಲ್ಲ "ಸರಿ, ಸರಿ" ಎಂದು ಕೋಲಾಹಲವೆಬ್ಬಿಸುವರು. ದೇವದತ್ತ ಗಲಿಬಿಲಿಗೊಳ್ಳುವನು. ಸಿದ್ಧಾರ್ಥ ಶಾಂತನಾಗಿರುವನು.)

ದೇವದತ್ತ:—ಮಹಾರಾಜ! ಹಂಸವನ್ನು ಮೊದಲು ಹೊಡೆದವನು ನಾನು. ಆದುದರಿಂದ ಅದು ನನಗೇ ಸಿಗಬೇಕು.

ಸಿದ್ಧಾರ್ಥ:—ಮಹಾರಾಜ! ಇಲ್ಲಿ ತರ್ಕದ ವೇಳೆ ಬೇಯದು. ದೇವದತ್ತ ಹೊಡೆದು ಕೆಡವಿಸಿದ ಈ ಹಕ್ಕಿ ನನ್ನ ಮರೆಹೊಕ್ಕಿದೆ. ಮರೆ ಹೊಕ್ಕ ಹಕ್ಕಿಯನ್ನು ಕಾಪಾಡುವುದು ನನ್ನ ಧರ್ಮ.

ಶುದ್ಧೋದನ:—ಮಂತ್ರಿಗಳೇ, ಈ ಕಲಹವನ್ನು ಬಗೆಹರಿಸಲು ಏನಾದರೂ ಉಪಾಯವಿದ್ದರೆ ಹೇಳಿರಿ. ನ್ಯಾಯದ ತೀರ್ಮಾನವಾಗಬೇಕು.

ಮಂತ್ರಿ:—ಇದೇನೂ ಅಷ್ಟೊಂದು ಗಹನವಾದ ಕಲಹವಲ್ಲ ಮಹಾ ರಾಜ. ಸುಲಭವಾಗಿ ಬಗೆಹರಿಸಬಹುದು.

ಶುದ್ಧೋದನ:—ಅದೇ ಬೇಕು. ನಮಗೆ ಬೇಕಾದುದೂ ಅದೇ.

ದೇವದತ್ತ:—ಹಂಸ ಮಾತ್ರ ನನ್ನದು. ಅದು ನನಗೇ ಸಿಗ ಬೇಕು.

ಸಿದ್ಧಾರ್ಥ:—ಮಂತ್ರಿಗಳೇ, ಹಂಸದ ಪ್ರಾಣ ಉಳಿಸಿದವನು ನಾನು.

ಮಂತ್ರಿ:—ಸರಿ, ಸರಿ. ಕಲಹವು ನಮಗೆ ಸರಿಯಾಗಿ ತಿಳಿಯಿತು. ಈಗ ಆ ಹಂಸವನ್ನು ಈ ಪೀಠದ ಮೇಲೆ ಇರಿಸು ಸಿದ್ಧಾರ್ಥ.

ಸಿದ್ಧಾರ್ಥ:—(ಮುಂದೆ ಬಂದು ಹಂಸವನ್ನು ಮಂತ್ರಿ ತೋರಿಸಿದ ಪೀಠದ ಮೇಲೆ ಬಿಡುತ್ತ) ಇದೋ, ಇರಿಸಿದೆ. (ಹಂಸ ಸಿದ್ಧಾರ್ಥನನ್ನೇ ನೋಡುತ್ತ ರೆಕ್ಕೆ ಬಡಿಯುವುದು.)

ಮಂತ್ರಿ:—ದೇವದತ್ತ! ನೀನೀಗ ದೂರ ನಿಂತು ಹಂಸವನ್ನು ಕರೆ ನೋಡುವ.

(ಸಭಿಕರು ಸೋಜಿಗದಿಂದ ದೇವದತ್ತನನ್ನೂ ಹಂಸವನ್ನೂ ನೋಡ ತೊಡಗುವರು)

ದೇವದತ್ತ:—(ಕೈಸನ್ನೆ ಮಾಡುತ್ತ) ಬಾ, ಬಾ, ಬಡಹಕ್ಕಿಯೇ, ಇಲ್ಲಿ ಬಾ. (ಹಂಸವು ಭಯದಿಂದ ರೆಕ್ಕೆ ಬಡಿಯುತ್ತ ಚೀರಿಡುವುದು.)

ಮಂತ್ರಿ:—ದೇವದತ್ತ, ಈ ಹಕ್ಕಿಗೆ ನಿನ್ನ ಸ್ವರ ಕೇಳಿದರೇ ಭಯವಾ ಗುವುದು. ಹಾಗಿರುವಲ್ಲಿ ಅದು ನಿನ್ನ ಬಳಿ ಬರುವುದಾದರೂ ಹೇಗೆ? (ಸಿದ್ಧಾರ್ಥನ ಕಡೆಗೆ ತಿರುಗಿ) ಸಿದ್ಧಾರ್ಥ! ನೀನೀಗ ಹಂಸವನ್ನು ಕರೆ.

ಸಿದ್ಧಾರ್ಥ:—(ಕೈಸನ್ನೆ ಮಾಡುತ್ತ) ಬಾ, ಗೆಳೆಯಾ, ಬಾ. ಇಲ್ಲಿ ಬಾ. (ಕೂಡಲೇ ಹಂಸ ರೆಕ್ಕೆ ಬಡಿಯುತ್ತ ಸಿದ್ಧಾರ್ಥನ ಬಳಿ ಹಾರಿ ಹೋಗಿ

ಹೆಗಲ ಮೇಲೆ ಕುಳಿತುಕೊಂಡಿತು. ಸಭಿಕರೆಲ್ಲ ಸಂತಸದಿಂದ ಕೈಚಪ್ಪಾಳೆ ಹೊಡೆಯುವರು.)

ಮಂತ್ರಿ:—ಮಹಾರಾಜ! ಗಮನಿಸಬೇಕು. ಇವರಿಬ್ಬರ ಈ ನ್ಯಾಯವನ್ನು ಹಕ್ಕಿಯೇ ತೀರಿಸಿತು. ಇದು ಸಿದ್ಧಾರ್ಥನ ಬಳಿಯೇ ಇರಲು ಬಯಸುತ್ತಿದೆ. ಆದುದರಿಂದ ಅವನ ಬಳಿಯೇ ಇರಲಿ.

ಶುದ್ಧೋದನ:—ಮಂತ್ರಿಗಳೇ, ನಿಮ್ಮ ತೀರ್ಮಾನ ನ್ಯಾಯಸಮ್ಮತವಾದುದು. ಹಂಸ ಸಿದ್ಧಾರ್ಥನ ಬಳಿಯೇ ಇರಲಿ. ಆತನ ದಯೆ ಅದರ ಮೇಲಿದೆ. ದಯೆಯೇ ನಿಜವಾದ ಧರ್ಮ!

(ಸಭಿಕರೆಲ್ಲಾ ಉಲ್ಲಾಸದಿಂದ ಜಯ ಜಯಕಾರ ಮಾಡುವರು. ದೇವದತ್ತ ತಲೆತಗ್ಗಿಸಿ ಹೊರಟು ಹೋಗುವನು. ಸಿದ್ಧಾರ್ಥ ಹಂಸವನ್ನೆತ್ತಿಕೊಂಡು ಗೆಳೆಯ ಸುಮನನೊಡನೆ ನಡೆಯುವನು.)

ಅಭ್ಯಾಸ

1. ದೇವದತ್ತನು ರಾಜನ ಮುಂದೆ ದೂರಿತ್ತುದೇನು?

2. ಈ ನಾಟಕವನ್ನು ಕಥಾರೂಪದಲ್ಲಿ ಬರೆಯಿರಿ.

3. 'ದಯೆಯೇ ಧರ್ಮವೆಂಬ'—ಈ ಎರಡು ದೃಶ್ಯಗಳನ್ನು ಅಭಿನಯಿಸಿರಿ.

4. ಸಿದ್ಧಾರ್ಥನು ಬುದ್ಧನಾದ ಸಂಗತಿಯನ್ನು ತಿಳಿದುಕೊಳ್ಳಿರಿ.

5. ಮುಂದಿನ ವಾಕ್ಯಗಳಲ್ಲಿರುವ ನಾಮಪದಗಳ ಪ್ರಕೃತಿಗಳನ್ನೂ ಕ್ರಿಯಾಪದಗಳ ಧಾತುಗಳನ್ನೂ ಹೆಕ್ಕಿತೆಗಿಯಿರಿ:—(ಅ) ನೀನಿದರ ಪ್ರಾಣ ತೆಗೆಯಲಿಕ್ಕಾಗಿ ಬಾಣ ಹೊಡೆದು ಬೀಳಿಸಿದೆ. (ಆ) ನೀನು ರಾಜಕುಮಾರನಲ್ಲವೆಂದು ನಾನೆಲ್ಲಿ ಹೇಳಿದೆ ದೇವದತ್ತ? (ಇ) ಆಕಾಶದಲ್ಲಿ ಹಾರುತ್ತಿದ್ದ ಹಂಸಕ್ಕೆ ಬಾಣಹೊಡೆದು ನಾನು ಬೀಳಿಸಿದೆ. (ಈ) ನನ್ನ ಮರೆಹೊಕ್ಕ ಹಕ್ಕಿಯನ್ನು—ನಾನು ಬದುಕಿಸಿದ ಈ ಹಂಸವನ್ನು—ಬಿಟ್ಟುಕೊಡಲಾರೆ.

6. ಮುಂದಿನ ಪದಗಳನ್ನು ವಿಂಗಡಿಸಿ ಪದಾಂತ್ಯ ಸಂಧಿಗಳಾವುವು, ಪದಮಧ್ಯ ಸಂಧಿಗಳಾವುವು ಎಂದು ಹೇಳಿರಿ:—ಬೇಟೆಯನ್ನು; ಹೇಳಿದೆನೆಂದು; ಅನ್ಯಾಯದಿಂದ; ನಾನೆಲ್ಲಿ; ನಾವೀಗ; ಅದನ್ನು; ಮೇಲಲ್ಲವೆ.

೫. ಕುಮಾರ ವ್ಯಾಸ

ಕನ್ನಡಿಗರ ಮನೆಮನೆಗಳನ್ನು ಬೆಳಗುತ್ತಿರುವ ಕನ್ನಡ ಭಾರತದ ಕರ್ತೃವಾದ ಕುಮಾರವ್ಯಾಸನ ಹೆಸರು ಕೇಳದವನು ಕನ್ನಡಿಗನೆ? ನಿಜಕ್ಕೂ ಅಲ್ಲ; ಕನ್ನಡ ಭಾರತವೆಂದರೆ ಅದು ಕನ್ನಡ ಸಾಹಿತ್ಯದ ನಿಧಿ; ಕುಮಾರ ವ್ಯಾಸನ ಉದ್ಯಮ ಅಗಾಧವಾದುದು. ಕುಮಾರವ್ಯಾಸನೆಂಬುದು ಕವಿ ನಾರಣಪ್ಪನ ಬಿರುದು. ಗದುಗಿನ ಸಮೀಪದ ಕೋಳಿವಾಡವೆಂಬ ಹಳ್ಳಿಯೇ ನಾರಣಪ್ಪ ಕವಿಯ ಹುಟ್ಟೂರು. ಕೋಳಿವಾಡದ ಕರಣಿಕರ ಕುಲದಲ್ಲಿ ಕ್ರಿ. ಶ. ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ನಾರಣಪ್ಪನ ಜನನ ವಾಯಿತು. ನಾರಣಪ್ಪನ ತಂದೆ ಲಕ್ಕರಸಯ್ಯ ಕರಣಿಕ ವೃತ್ತಿಯಿಂದ ಬಾಳುವೆ ಸಾಗಿಸುತ್ತಿದ್ದನು. ನಾರಣಪ್ಪನೂ ಅದೇ ವೃತ್ತಿಯನ್ನು ಅವ ಲಂಬಿಸಿದನು. ಕನ್ನಡದ ಕವಿಚಕ್ರವರ್ತಿಗಳಂತೆ ನಾರಣಪ್ಪಕವಿ ಯಾವ ರಾಜನ ಆಶ್ರಯವನ್ನೂ ಆಶಿಸಲಿಲ್ಲ; ಪಡೆಯಲಿಲ್ಲ. ಕುಲಕ್ರಮಾಗತವಾದ ಕರಣಿಕವೃತ್ತಿಯನ್ನೇ ಮೆಚ್ಚಿ ಅವಲಂಬಿಸಿದನು. ಗದುಗಿನ ವೀರನಾರಾ ಯಣ ದೇವರು ಕವಿ ನಾರಣಪ್ಪನ ಇಷ್ಟದೈವ. ಆತನು ತನ್ನ ಭಾರತದ ಪ್ರತಿಯೊಂದು ಸಂಧಿಯ ಕಡೆಗೂ ಗದುಗಿನ ವೀರನಾರಾಯಣನನ್ನು ಹೊಗ ಳಿದ್ದಾನೆ; ಅವನ ಅನುಗ್ರಹ ಯಾಚಿಸಿದ್ದಾನೆ.

ಕವಿ ನಾರಣಪ್ಪನ ಪಾಂಡಿತ್ಯದ ವಿಚಾರದಲ್ಲಿ ಹಲವಾರು ಕಟ್ಟುಕತೆ ಗಳಿವೆ. ಒಂದು ಕತೆಯಲ್ಲಿ ಅವನು ಓದು ಬರೆಹ ಬಾರದವನೆಂದೂ, ಯಾವನೋ ಒಬ್ಬ ಅಧಿಕಾರಿಯ ಬಳಿ ಆಳಾಗಿ ದುಡಿಯುತ್ತಿದ್ದನೆಂದೂ, ಅಲ್ಲಿ ಓದುತ್ತಿದ್ದ ಸಂಸ್ಕೃತ ಭಾರತವನ್ನು ಕೇಳಿ ತಾನೂ ಕನ್ನಡದಲ್ಲಿ ಭಾರತ ವನ್ನು ರಚಿಸಿದನೆಂದೂ ಹೇಳಿದೆ. ಇನ್ನೊಂದು ಕತೆಯಂತೆಯೂ ನಾರ ಣಪ್ಪ ನಿರಕ್ಷರಕುಕ್ಷಿ; ಕೋಳಿವಾಡದ ಕರಣಿಕ. ತನ್ನ ದೇವರ ವಿಷಯ ದಲ್ಲಿ ಗ್ರಂಥವೊಂದನ್ನು ರಚಿಸಲು ಆಸೆಪಟ್ಟುಕೊಂಡಿದ್ದನಂತೆ. ಹೀಗಿರಲು ಒಂದು ದಿನ ಸ್ವಪ್ನದಲ್ಲಿ ಗದುಗಿನ ನಾರಾಯಣನು ಕಾಣಿಸಿಕೊಂಡು ಆಜ್ಞೆ ಇತ್ತನಂತೆ. ದೇವರ ಅನುಗ್ರಹದಿಂದ ಆತನು ಅಶ್ವತ್ಥಾಮನನ್ನು ಕಂಡು ಉಪದೇಶ ಪಡೆದು ಭಾರತ ಬರೆಯಲು ತೊಡಗಿದನಂತೆ. ಇವೆಲ್ಲ ಕತೆ

ಗಳನ್ನು ನಂಬಲು ಬಾರದು. ಕುರುಬನೊಬ್ಬ ಕಾಳಿದಾಸನಾದ ಕತೆಯಂತೆ ಇವೆಲ್ಲಾ ಕಟ್ಟುಕತೆಗಳೇ ಅಲ್ಲದೆ ನಿಜವಲ್ಲ. ಏನಿದ್ದರೂ ಕವಿ ನಾರಣಪ್ಪ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಮಹಾ ಪಂಡಿತನೆಂಬುದು ಸತ್ಯ. ಇಲ್ಲವಾದರೆ ವ್ಯಾಸ ಮಹಾಕವಿಯ ಮಹಾಕೃತಿ ಮಹಾಭಾರತವನ್ನು ಆಮೂಲಾಗ್ರ ವಾಗಿ ಅಭ್ಯಸಿಸಿ ಕನ್ನಡದಲ್ಲಿ ಬರೆಯುವುದು ಅಸಾಧ್ಯವಾದ ಮಾತು. ಲೋಕಾನುಭವದಲ್ಲಿ ನಾರಣಪ್ಪನನ್ನು ಮೀರಿದ ಕವಿಯಿಲ್ಲ. ಸಂಗೀತ, ಜ್ಯೋತಿಷ, ಸ್ಮೃತಿ, ಶಾಸ್ತ್ರ ಎಲ್ಲವುಗಳಲ್ಲಿಯೂ ಈ ಕನ್ನಡ ಕವಿಗೆ ಅಗಾಧ ವಾದ ಪರಿಜ್ಞಾನವಿದ್ದಿತು. ಕನ್ನಡದ ಸಾಮಾನ್ಯ ಕವಿಗಳೆಲ್ಲ ಕುಮಾರ ವ್ಯಾಸನ ಮುಂದೆ ಬಣಗು ಕವಿಗಳು. ತಾನು ವ್ಯಾಸ ರೂಪನೆಂದು ಅವನಿಗೆ ಹೆಮ್ಮೆ. ಆ ಹೆಮ್ಮೆ ಯೋಗ್ಯವಾದುದು; ಹಾಗೆ ಹೆಮ್ಮೆ ಪಡಲು ತಕ್ಕವನೇ ಕುಮಾರವ್ಯಾಸ. ಒಟ್ಟಿನಲ್ಲಿ ಹೇಳುವುದಾದರೆ ನಾರಣಪ್ಪ ಮಹಾವ್ಯಕ್ತಿ; ಮಹಾಕವಿ. ಕನ್ನಡಿಗರ ಹೆಮ್ಮೆಯ ಕವಿ; ಕನ್ನಡದ ಹಿರಿಯ ಪುರುಷ; ಕನ್ನಡಿಗರೆಲ್ಲ ಕೈಯೆತ್ತಿ ವಂದಿಸಲು ಅರ್ಹ.

ಕವಿ ಕುಮಾರ ವ್ಯಾಸನು ಹತ್ತು ಪರ್ವಗಳ ಭಾರತ ಕಥೆಯನ್ನು ನಡುಗನ್ನಡದ ಸೊಗಸಾದ ನುಡಿಯಲ್ಲಿ ಭಾಮಿನೀ ಷಟ್ಪದಿಯ ರೂಪದಲ್ಲಿ ರಚಿಸಿದನು. ನಾರಣಪ್ಪನು ಕನ್ನಡ ಗುಡಿಗೆ ಕಿರೀಟವನ್ನಿಟ್ಟಂತೆ ಮಹಾ ಭಾರತವನ್ನು ಸರಳವಾಗಿ ಅರ್ಥರಸವತ್ತಾಗಿ ಕನ್ನಡಿಸಿದ್ದಾನೆ. ತನ್ನ ನುಡಿ, ತನ್ನ ಸಂಸ್ಕೃತಿ ಎಂದರೆ ನಾರಣಪ್ಪನಿಗೆ ಪ್ರಾಣ. ಪೂರ್ವಾಚಾರದ ಕಟ್ಟುಕಟ್ಟಳೆಯ ಕಾವ್ಯಪದ್ಧತಿ ಅವನ ಮನಸ್ಸಿಗೆ ಒಪ್ಪದು; ಹಿಂದಿನವರ ವ್ಯಾಕರಣ ನಿಯಮಗಳನ್ನೂ ಅವನು ಲೆಕ್ಕಿಸಲಿಲ್ಲ; ತನ್ನದೇ ಆದ ಬೆಡಗು ನುಡಿಯ ಶೈಲಿಯಲ್ಲಿ ಅಚ್ಚಗನ್ನಡದ ಮಾತಿನಲ್ಲಿ ಕಾವ್ಯ ಬರೆದ ಸುದ್ದಗನ್ನಡದ ಕವಿ ನಾರಣಪ್ಪ. ಎಂತಹ ಸಂದರ್ಭದಲ್ಲಾದರೂ, ಯಾವ ಪಾತ್ರದ ಬಾಯಿಯಲ್ಲಾದರೂ ಸುದ್ದಗನ್ನಡವನ್ನಿಡಲು ಕುಮಾರವ್ಯಾಸ ಹಿಂಜರಿದಿಲ್ಲ. ನೋಡಿರಿ ಆತನ ಕನ್ನಡದ ಬೆಡಗು: "ಭೀಮನದರ್ಪಕರ್ಜುನನುಬ್ಬಟೆಗೆ ಮಾಡಿದೆವು ಮದ್ದುಗಳ", "ಇಂದಿನಾಹವದೊಳಗೆ ಕುಂತೀ ನಂದನರ ಬೊಬ್ಬಾಟ ಬಲುಹಾಯ್ತೆಂದು ಮೆಲ್ಲನೆ ಮಾತು ತೆಗೆದನು ಕೌರವರರಾಯ", "ನಿಮ್ಮಡಿಯೆ ಬಲ್ಲಿರಿ ರಾಜಕಾರಿಯವ," "ಮೀಸೆಯೇಕಿದು ಸುಡಲಿ

ಸುಭಟರ ವೇಷವೇಕಿದು ಧರ್ಮವಧುಗಳು ಹೇಸರೇ?" ಕನ್ನಡದ ಅಭಿಮಾನದಲ್ಲಿ ಸಂಸ್ಕೃತವನ್ನೇನೂ ಆತ ತಿರಸ್ಕರಿಸಲಿಲ್ಲ. ಸಮ ಸಂಸ್ಕೃತ ಪದಗಳನ್ನು ಬೇಕಾದೆಡೆ ಬೇಕಾದಂತೆ ಉಪಯೋಗಿಸಿ ಕೊಂಡಿದ್ದಾನೆ. ಹೀಗೆ ನಾರಣಪ್ಪನೆಂದರೆ ವಚನಗಾರುಡಿ ಎನ್ನಬಹುದು. ಕನ್ನಡ, ಸಂಸ್ಕೃತ ಮಾತುಗಳ ಹದವಾದ ಬೆರಕೆಯಿಂದ ಆತನ ಕಾವ್ಯಶೈಲಿ ಸುಮನೋಹರವಾಗಿ ಹರಿದಿದೆ. ಸಂಪೂರ್ಣ ಭಾರತದಲ್ಲಿ ಎಲ್ಲಿ ನೋಡಿದರೂ ನೀರಸವಾದ ಭಾಗ ಕಾಣಲಾರದು. ಮಾತುಗಳನ್ನು ಕುಮಾರವ್ಯಾಸನಂತೆ ಬಳಸಿಕೊಳ್ಳುವ ಕವಿ ಕನ್ನಡದಲ್ಲಿ ಇನ್ನೊಬ್ಬನಿಲ್ಲ.

ಇನ್ನೀಗ ಕವಿ ನಾರಣಪ್ಪನ ಕವಿತಾಕೌಶಲವನ್ನು ಪರಿಶೀಲಿಸುವ. ಹುಟ್ಟು ಕವಿಯಾದ ನಾರಣಪ್ಪನಲ್ಲಿ ಪ್ರತಿಭೆಯೆಂಬುದು ಪರಿಪೂರ್ಣವಾಗಿದೆ. ಆತನ ವರ್ಣನೆಯ ವೈಖರಿಯಂತೂ ಅಪೂರ್ವವಾದುದು. ನಾರಣಪ್ಪನ ವಸ್ತು ವರ್ಣನೆಯೆಂದರೆ ಅದೊಂದು ಪ್ರತ್ಯಕ್ಷ ಚಿತ್ರವೇ ಆಗಿದೆ. ಓದಿದಾಗ ಆ ವರ್ಣನೆಯ ಚಿತ್ರ ನಮ್ಮ ಕಣ್ಣ ಮುಂದೆ ಕಟ್ಟುವುದು. ಕನ್ನಡದ ಆಧುನಿಕ ಕವಿಯೊಬ್ಬ "ಕುಮಾರ ವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು; ಭಾರತ ಕಣ್ಣಲಿ ಕುಣಿಯುವುದು." ಎಂದು ಹಾಡಿದ್ದಾನೆ. ಈ ಮಾತು ಸಂಪೂರ್ಣ ಸತ್ಯ. ಸಂಧಾನಕ್ಕಾಗಿ ಕೌರವನಸಭೆಗೆ ಆಗಮಿಸಿದ ಶ್ರೀ ಕೃಷ್ಣನನ್ನು ಕೌರವನು ಹುರಿನೇಣುಗಳಿಂದ ಬಂಧಿಸಲು ಬಂದಾಗ ಆತನು ತೋರಿದ ವಿಶ್ವರೂಪದ ವರ್ಣನೆಯೊಂದು ಇದಕ್ಕೆ ನಿದರ್ಶನ. ನೋಡಿರಿ ಇಲ್ಲಿದೆ ಆ ವಿಶ್ವರೂಪದ ವರ್ಣನೆ:—

. . . . ಮಿಂಚಿನ
ಹೊದರು ಹುರಿಗೊಂಡಂತೆ ರವಿಶತ
ವುದುರಿದುವು ಮೈಮುರಿದು ನಿಂದೊಡೆ ದೇವನಂಗದೊಳು.

ಸದೆದುವಾಸ್ಥಾನವನು ಘನತೇ
ಜದೊಳು ಹರಿ ತಾಂ ಲೀಲೆ ಮಿಗೆ ತೋ
ರಿದನು ನಿರುಪಮ ವಿಶ್ವರೂಪವನಾ ಮಹಾಸಭೆಗೆ.

ಚರಣದುಂಗುಟದಲ್ಲಿ ದೇವರು
ತುರುಗಿದರು ನೊಸಲಿನೊಳು ಕಮಲಜ
ನುರದೊಳಗ್ಗದ ರುದ್ರನಾಸ್ಯದೊಳಗ್ನಿ ವಾಯುಗಳು
ಬೆರಳೊಳಿಂದ್ರಾದಿಗಳು ನಯನಾಂ
ಬುರುಹದೊಳು ರವಿ ನಾಭಿಯೊಳ್ ನಭ
ವರ ಭುಜಾಗ್ರದೊಳಖಿಳ ದಿಕ್ಪಾಲಕತತಿ ರಂಜಿಸಿತು.

ಕವಿ ನಾರಣಪ್ಪನ ಪಾತ್ರ ಸೃಷ್ಟಿಯಂತೂ ಅತಿ ಸ್ಪಷ್ಟ. ಆತನು ತನ್ನ ಮಹಾ ಕೃತಿಯಲ್ಲಿ ಚಿತ್ರಿಸಿದ ಮಹಾ ಪಾತ್ರಗಳೆಲ್ಲ ಎದ್ದು ಬರುವಂತೆ ಕಾಣುತ್ತವೆ. ಇಂದು ಕನ್ನಡ ಜನತೆಯ ಹೃದಯದಲ್ಲಿ ನೆಲಸಿರುವ ಕೌರವ ಪಾಂಡವರ ಚಿತ್ರವೆಂದರೆ ಅದು ನಾರಣಪ್ಪ ಚಿತ್ರಿಸಿದ ಚಿತ್ರ; ಅವನ ಪಾತ್ರ ಸೃಷ್ಟಿ. ಕುಮಾರವ್ಯಾಸನ ಆ ಭೀಮಭಯಂಕರ ವಾಯುಪುತ್ರ ನನ್ನು ನೋಡಿರಿ: "ಸುಳಿದಲೆಯ ಕೆವಿಮ್ರಾಸೆಗಳ ಕರ್ಕಶದ ಕೆಂದಳದ ಕೇಸರಿಯ ಕಂಗಳ ಕುಲಿಶರದನಚ್ಛವಿಯ" ಭಯಂಕರ ಮೂರ್ತಿ ಆ ಭೀಮ ಸೇನ. ಇಂತಹ ಮಹಾವ್ಯಕ್ತಿಯನ್ನು—ವೀರ ಯೋಧನನ್ನು—ಕಂಡರೆ ಯಾರ ಎದೆಯಲ್ಲಿ ನಡುಕವುಂಟಾಗಲಾರದು? ಈ ಭೀಮ ಹಸುಗೂಸಾ ಗಿದ್ದಾಗ ತಾಯ ತೊಡೆಯಿಂ ಉರುಳಿ ಬೀಳಲು "ತಚ್ಛೈಲಶಿಲೆ ನಿರ್ನಾಮವಾ ದುದು." ಕುಮಾರ ವ್ಯಾಸನ ಭೀಮನಿಗೆ ವಜ್ರಕಾಯನಾದ ರಾಮಭಕ್ತ ಹನುಮನೂ ಅಚ್ಚರಿಗೊಳ್ಳುವನು. ರಾಮಧ್ಯಾನದಲ್ಲಿ ಮಗ್ನನಾಗಿದ್ದ ಹನುಮ, ಭೀಮನ ಆರ್ಭಟಕ್ಕೆ ಎಚ್ಚತ್ತು "ಇವನಾರೊ? ಮಹಾದೇವಾ! ಪ್ರಚಂಡನಲ!" ಎನ್ನುವನು. ನಾರಣಪ್ಪ ಸೃಷ್ಟಿಸಿದ ಭೀಮ ಗದೆಗೊಂಡು ರಣಾಂಗಣಕ್ಕೆ ಧುಮ್ಮಿಕ್ಕಿದನೆಂದರೆ ವಿಂಧ್ಯಾಚಲ ತನ್ನ ತಳದ ಕೀಲುಗಳನ್ನು ಕಳಚಿ ಕೆಳಕ್ಕುರುಳುವುದಂತೆ. ಅವನ ಕೈಸೋಕಿದರೆ ಸಾಕು, ಕುರುಕ್ಷೇತ್ರಕ್ಕೆ ಭೂಕಂಪದ ಬವಣೆ! ಕುಮಾರವ್ಯಾಸನ ಭೀಮನೆಂದರೆ ಪ್ರಾಚೀನ ಭಾರತದ ಬಲಪರ್ವತವೇ ಸರಿ. ಆತ ತನ್ನ ಸಮರ ವಿದ್ಯಾಗುರುವಿನ ರಥವನ್ನೇ "ಇದು ನಿಮಗೆ ವಂದನೆಯೆನುತ ನಿಜಗದೆಯಲಿ ಹುಡಿಗುಟ್ಟಿ ದನು." ಭಾರತದ ಯೋಧ ಶ್ರೇಷ್ಠರಿಗೆಲ್ಲ ಸಮರ ವಿದ್ಯಾಗುರುವೆಂದರೆ ದ್ರೋಣ. ಆತನ ರಥವನ್ನೇ ಹುಡಿಗುಟ್ಟಬೇಕಾದರೆ ಆ ಭೀಮ ಎಂತಹ

ಬಲಶಾಲಿಯಾಗಿರಬೇಕು? ನಮ್ಮ ಕವಿ ಪುಂಗವನ ಪಾತ್ರ ಸೃಷ್ಟಿಯ ಜಾಣ್ಮೆಗೆ ಭೀಮನ ದೃಷ್ಟಾಂತವೊಂದೇ ಸಾಕಾಗಿದೆ. ಇನ್ನುಳಿದ ಪಾತ್ರಗಳೂ ಹಾಗೆಯೇ ಶುದ್ಧ ಜೀವಂತ ಪ್ರತಿಮೆಗಳು. ಹೆಚ್ಚೇಕೆ? ಪಾತ್ರ ಸೃಷ್ಟಿಯಲ್ಲಿ ಕುಮಾರವ್ಯಾಸನೆಂದರೆ ಅವನೊಬ್ಬ ನೂತನ ಬ್ರಹ್ಮನೆಂದೇ ಹೇಳಬಹುದು.

ಇನ್ನು ಕವಿಯ ಕಾವ್ಯೋದ್ದೇಶವೇನೆಂದು ನೋಡುವ. ಕುಮಾರವ್ಯಾಸ ಭಾರತವನ್ನು ಬರೆದುದರ ಮುಖ್ಯ ಉದ್ದೇಶವೆಂದರೆ ನೀತಿಬೋಧೆ. ಜನತೆಯು ನೀತಿಮಾರ್ಗದಲ್ಲಿ ಅಡಿಯಿಡಬೇಕೆಂಬುದೇ ನಾರಣಪ್ಪನ ಹೆಬ್ಬಯಕೆ. ಅವನ ಅಭಿಪ್ರಾಯದಂತೆ "ವರ ಮಹಾಭಾರತವಿದೊಂದೇ ದುರಿತದುರ್ಗವಿಭೇದಕರವೀರೇಳು ಲೋಕದಲಿ." ಕುಮಾರವ್ಯಾಸನ ಭಾರತದಲ್ಲಿ ಬರುವ ಕೃಷ್ಣ, ಯುಧಿಷ್ಠಿರ, ನಾರದ, ಶುಕ, ಸನತ್ಸುಜಾತ, ನಹುಶ, ಧೌಮ್ಯ, ವೇದವ್ಯಾಸ ಮುಂತಾದವರೆಲ್ಲ ನೀತಿಧರ್ಮದ ಹಿರಿಯ ಪ್ರತಿನಿಧಿಗಳು. ನೀತಿಯನ್ನು ಸಾರುವಲ್ಲಿ ಸಂಸ್ಕೃತ ಭಾರತವನ್ನೂ ಮೀರಿಸಿದೆ ನಾರಣಪ್ಪನ ಭಾರತ. ನಾರಣಪ್ಪನ ಭಾರತಶ್ರವಣಮಾಡಿದ ಯಾವ ವ್ಯಕ್ತಿಗೆ ತಾನೇ ಕೌರವರ ಅನೀತಿ ಅನ್ಯಾಯಗಳ ಹೊಲಬಾಗಲಾರದು? ಅದರಿಂದ ತಾನೂ ಕೌರವರಂತಾಗದೆ ಪಾಂಡವರಂತಾಗಬೇಕೆಂಬ ಭಾವನೆ ಉಂಟಾಗಲಾರದು? ಕನ್ನಡ ಜನತೆಯ ನೀತಿಯ ಮಟ್ಟ ಮೇಲೇರಲು ನಾರಣಪ್ಪನ ಭಾರತ ಹಲಕೆಲವು ಮಟ್ಟಿಗಾದರೂ ನೆರವಾಗದೆ ಉಳಿದಿಲ್ಲ. ಕನ್ನಡ ನಾಡಿನ ಹಳ್ಳಿಹಳ್ಳಿಗಳಲ್ಲಿ ಭಾರತ ಶ್ರವಣ ನಡೆಯುತ್ತಿದೆ; ಇದರಿಂದ ಪುಣ್ಯ ಸಂಪಾದನೆಯ ಕಾರ್ಯ ಮಾತ್ರ ಸಾಧಿಸುವುದಲ್ಲ. ಜನತೆಯ ನೀತಿಯಮಟ್ಟ ಏರುವ ಕಾರ್ಯದಲ್ಲಿಯೂ ಇದು ನೆರವು ನೀಡುತ್ತಿದೆ.

ನವರಸಗಳನ್ನು ಚಿತ್ರಿಸುವುದರಲ್ಲಂತೂ ನಾರಣಪ್ಪನದು ಎತ್ತಿದ ಕೈ. ವೀರರಸ ಹಾಸ್ಯರಸಗಳೆಂದರೆ ನಾರಣಪ್ಪನು ಕೊಟ್ಟರೆ ಉಳಿದ ಕವಿಗಳಿಗುಂಟು. ಕುಮಾರ ವ್ಯಾಸನ ಭೀಮನಂತೂ ವೀರತ್ವದ ಪ್ರತ್ಯಕ್ಷ ಮೂರ್ತಿಯೇ ಆಗಿದ್ದಾನೆ. ಅರ್ಜುನನ ಪಾತ್ರ ಅವನು ಚಿತ್ರಿಸಿದ ಇನ್ನೊಂದು ವೀರ ಮೂರ್ತಿ. ಅವನ ಹಾಸ್ಯವಂತೂ ಎಂತಹ ಗಂಭೀರ ವ್ಯಕ್ತಿಗಳನ್ನೂ ಹೊಟ್ಟೆ ಹುಣ್ಣಾಗುವಂತೆ ನಗಿಸಬಲ್ಲುದು. ಆತನ ಹಾಸ್ಯರಸದ ಹೊನಲು

ಉತ್ತರನ ಕಡೆಯಲ್ಲಿ ಕೋಡಿಹರಿಯುವುದು. ಉತ್ತರನ ಪಾತ್ರವನ್ನು ಇಷ್ಟೊಂದು ಸಮಗ್ರವಾಗಿ ಸೃಷ್ಟಿಸಿದ ಭಾರತಕಾರ ಕುಮಾರ ವ್ಯಾಸನೊಬ್ಬನೇ ಎನ್ನಬಹುದು. ಅವನ ಉತ್ತರಕುಮಾರನೆಂದರೆ ಪಲಾಯನ ಪಂಡಿತ; ಜೀವಗಳ್ಳರ ಗುರು; ನರಗುರಿ. ಗೋಗ್ರಹಣದ ಯುದ್ಧಭೂಮಿಯಲ್ಲಿ ಅರ್ಜುನ ಉತ್ತರನ ರಥವನ್ನು ನಡೆಸುತ್ತಾ ಮುಂದುವರಿಯುವನು. "ನೃಪತಿಲಕ ರಥವನು ಅತಿವೇಗದಲಿ ಕೊಳುಗುಳಕೆ ತರೆ, ಕಂಡನುತ್ತರ ಮುಂದೆ ದೂರದಲಿ ಸಕಲ ಮೋಹರವ. ಪಡೆ ವಿರಾಟನ ಸುತನಕಂಗಳಿಗೊಡನೆ ದಾವಾಗ್ನಿಯಂತಿರೆ ತೋರಿತಿದಿರಿನಲಿ." "ಸಾರೆ ಬರಲು ಅವನ ಅವಯವವಡಿಗಡಿಗೆ ನಡುಗಿ, ತಾಳಿಗೆ ನೀರುತೆಗೆದುದು; ತುಟಿಯೊಣಗಿ ಸುಕುಮಾರ ಕಣ್ಣಿವೆ ಸೀಯೆ ಕೈಯಲಿ ಮುಚ್ಚಿದನು ಮುಖವ." ಇಂತಹ ಪಲಾಯನ ಪಂಡಿತ ಉತ್ತರಕುಮಾರ ಎಷ್ಟು ಬೇಡಿಕೊಂಡರೂ ಅರ್ಜುನ ರಥವನ್ನು ಹಿಂದಿರುಗಿಸಲಿಲ್ಲ. ಅವನ ಹೇಡಿತನದ ಮಾತುಗಳನ್ನಾಲಿಸಿದ ಅರ್ಜುನ ನಸುನಗುತ್ತಾ ಮತ್ತೂ ನಾಲ್ಕೆಂಟಡಿ ಮುಂದೂಡುವನು. ಆಗ ಆ ನರಗುರಿ "ಸಂವರಿಸಿ ಮುಂಜೆರಗ ಮೆಲ್ಲನೆ ರಥದ ಹಿಂದಕೆ ಬಂದು ಧುಮ್ಮಿಕ್ಕಿದನು. ಬದುಕಿದೆನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ. ಕೆಟ್ಟೋಡುತಿರಲು, ಪಾಪಿ ಹಾಯ್ದನು ಹಿಡಿಯಬೇಕೆನುತ ಅರ್ಜುನ ಉತ್ತರನ ಬೆಂಬತ್ತಿದನು. ಅತ್ತಲು ನೋಡಿ ಕೌರವ ಸೇನೆ ಎಲೆಲೆ, ಕಾದಲು ಬಂದ ವೀರನ ಬಲುಹು ನೋಡಾ ಎನುತ ಕಡೆದುದು ನಗೆಯು ಕಡಲೊಳಗೆ." ನಾರಣಪ್ಪನ ಈ ಪಲಾಯನ ಪಂಡಿತನ ಪೌರುಷ ಓದಿದಾಗ ಯಾವ ಓದುಗನು ತಾನೇ ಕೌರವ ಸೈನ್ಯದಂತೆ ತಾನೂ ನಗೆಗಡಲಲ್ಲಿ ಮುಳುಗಾಡಲಾರ? ಉತ್ತರ ಕುಮಾರನ ಕತೆಯೊಂದೇ ಸಾಕು ಕುಮಾರ ವ್ಯಾಸನ ಹಾಸ್ಯ ಪ್ರವೃತ್ತಿಗೆ.

ಕುಮಾರವ್ಯಾಸನ ಕೃತಿಯ ಸೌಂದರ್ಯವನ್ನು ಓದಿಯೇ ಸವಿಯಬೇಕಲ್ಲದೆ, ಬಣ್ಣಿಸಿ ಕೇಳಿ ಸವಿಯಲು ಸಾಧ್ಯವಿಲ್ಲ. ಈ ಕನ್ನಡ ಭಾರತದಲ್ಲಿ ಎಲ್ಲಿ ಹುಡುಕಿದರೂ ನೀರಸವಾದ ಸಂದರ್ಭವೊಂದೂ ಸಿಗಲಾರದು. ಒಟ್ಟಿನಲ್ಲಿ ಹೇಳುವುದಾದರೆ ಕುಮಾರವ್ಯಾಸನೆಂದರೆ ಕನ್ನಡಿಗರ ಕವಿಕುಲದ ಕುಲದೈವ. ಕುಮಾರ ವ್ಯಾಸನಂತಹ ಉದ್ದಾಮ ಕವಿ ಕನ್ನಡ

ಸಾಹಿತ್ಯದಲ್ಲಿ ಇನ್ನೊಬ್ಬನಿಲ್ಲ; ಕನ್ನಡ ಭಾರತದಂತಹ ಉದ್ದಾಮಕಾವ್ಯ ಬೇರೊಂದಿಲ್ಲ.

ಅಭ್ಯಾಸ

1. ಕುಮಾರ ವ್ಯಾಸನು ಯಾರು? ನಾಲ್ಕಾರು ಪಂಕ್ತಿಗಳಲ್ಲಿ ಪರಿಚಯ ಕೊಡಿರಿ.

2. ಕವಿ ನಾರಣಪ್ಪನ ಪಾಂಡಿತ್ಯದ ವಿಚಾರದಲ್ಲಿ ನಿಮಗೇನು ತಿಳಿದಿದೆ?

3. ಕುಮಾರ ವ್ಯಾಸನ ಕನ್ನಡದ ಬೆಡಗಿಗೆ ಒಂದೆರಡು ಉದಾಹರಣೆ ಕೊಡಿರಿ.

4. ನಾರಣಪ್ಪನು ಕಟ್ಟಿದ ಭೀಮನ ಪಾತ್ರ ಹೇಗಿದೆ?

5. ನಾರಣಪ್ಪನ ಕಾವ್ಯದ ಉದ್ದೇಶವೇನು?

6. ಕುಮಾರ ವ್ಯಾಸನ ಹಾಸ್ಯರಸವನ್ನು ಬಣ್ಣಿಸಿರಿ.

7. ಕುಮಾರ ವ್ಯಾಸನ ಕುರಿತು ಒಂದು ಪ್ರಬಂಧ ಬರೆಯಿರಿ.

8. ಮುಂದಿನ ವಾಕ್ಯಗಳ ಅರ್ಥ ವಿವರಿಸಿರಿ:— (ಅ) ಇಂದಿನಾಹವದೊಳಗೆ ಕುಂತೀ ನಂದನರ ಬೊಬ್ಬಾಟ ಬಲುಹಾಯ್ತೆಂದು ಮೆಲ್ಲನೆ ಮಾತು ತೆಗೆದನು ಕೌರವರರಾಯ. (ಆ) ಮಿಂಚಿನ ಹೊದರು ಹುರಿಗೊಂಡಂತೆ ರವಿಶತವುದುರಿದುವು ಮೈಮುರಿದು ನಿಂದೊಡೆ ದೇವನಂಗದೊಳು. (ಇ) ನೃಪತಿಲಕ ರಥವನು ಅತಿವೇಗದಲಿ ಕೊಳುಗುಳಕೆ ತರೆ, ಕಂಡನು ತ್ತರ ಮುಂದೆ ದೂರದಲಿ ಸಕಲ ಮೋಹರವ.

9. ಮುಂದಿನ ಪದಗಳನ್ನು ವಿಂಗಡಿಸಿ ಸಂಧಿನಾಮ ಸಂಧಿಕಾರ್ಯಗಳನ್ನು ಸೂಚಿಸಿರಿ:—ಕೈಯೆತ್ತು; ಮಿಾಸೆಯೇಕಿದು; ಹುರಿಗೊಳ್ಳು; ಹುಡಿಗುಟ್ಟು; ಸಂದರ್ಭವೊಂದು; ವಂದನೆಯೆನುತ; ಹೊಲಬಾಗಲಾರದು.

10. ಮುಂದಿನ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿರಿ:— ಧುಮ್ಮಿಕ್ಕು; ಹುಡಿಗುಟ್ಟು; ಭಾಸವಾಗು; ಕೈಸೋಕು; ಜೀವಂತ ಪ್ರತಿಮೆ; ಪಲಾಯನ ಪಂಡಿತ.

---

೬. ಭಾರತದ ಭಾಷೆಗಳು

ನಮ್ಮ ಮನಸ್ಸಿನಲ್ಲಿರುವ ವಿಷಯವನ್ನು ಇನ್ನೊಬ್ಬರಿಗೆ ತಿಳಿಸಲು ಎರಡು ದಾರಿಗಳಿವೆ. ಬಾಯಿ ಮಾತು ಒಂದು; ಬರವಣಿಗೆ ಇನ್ನೊಂದು. ಇವೆರಡು ರೀತಿಗಳಿಂದಲ್ಲದೆ ಬೇರೆ ತರದಿಂದ ನಮ್ಮ ಮನಸ್ಸಿನ ಭಾವನೆಗಳನ್ನು ಇನ್ನೊಬ್ಬರಿಗೆ ತಿಳಿಸಲು ಸಾಧ್ಯವಿದೆಯೆ? ಇದೆ. ಆದರೆ ಅದು ಬಲು ಕಷ್ಟ. ಕೈಸನ್ನೆಗಳ ಮೂಲಕ ನಾವು ನಮ್ಮ ಭಾವನೆಗಳನ್ನು ಬೇರೊಬ್ಬರಿಗೆ ಗೊತ್ತುಪಡಿಸಬಹುದು. ನಮ್ಮ ಕೈಸನ್ನೆಗಳನ್ನು ಬೇರೆಯವರು ಅರ್ಥಮಾಡಿಕೊಳ್ಳುವುದು ಕಷ್ಟ. ಆದಕಾರಣ ನಮ್ಮ ಮನಸ್ಸಿನಲ್ಲಿರುವುದೊಂದು, ಬೇರೊಬ್ಬರು ಅರ್ಥ ಮಾಡಿಕೊಳ್ಳುವುದು ಇನ್ನೊಂದು; ಹೀಗಾಗಿ ಬಿಡಬಹುದು. ಕೈಸನ್ನೆಗಳಿಂದ ನಾವು ಯಾವುದನ್ನೂ ಬೇರೊಬ್ಬರಿಗೆ ಸ್ಪಷ್ಟವಾಗಿ ತಿಳಿಸಲಾರೆವು. ಬಾಯಿಬಾರದ ಮೂಕರ ಅವಸ್ಥೆ ನಾವು ಕಾಣುವುದಿಲ್ಲವೆ? ತಮ್ಮ ಮನಸ್ಸಿನಲ್ಲಿರುವುದನ್ನು ಬೇರೆಯವರಿಗೆ ತಿಳಿಸುವುದಕ್ಕಾಗಿ ಅವರೆಷ್ಟು ಪಾಡುಪಡುವರು! ಭಾಷೆಯೆಂದರೆ ನಾವು ನಮ್ಮ ಮನಸ್ಸಿನ ಭಾವನೆಗಳನ್ನು ಬೇರೆಯವರಿಗೆ ತಿಳಿಸಲಿಕ್ಕಾಗಿ ಇರುವ ಒಂದು ಸಾಧನ.

ಮನುಷ್ಯನು ತುಂಬಾ ಅನಾಗರಿಕ ಸ್ಥಿತಿಯಲ್ಲಿದ್ದಾಗ ತನ್ನ ಮನಸ್ಸಿನ ಭಾವನೆಗಳನ್ನು ಬೇರೆಯವರಿಗೆ ಕೈಸನ್ನೆಗಳಿಂದಲೋ ಮತ್ತೆ ಹೇಗೋ ತಿಳಿಸುತ್ತಿದ್ದನು. ಅವನು ನಾಗರಿಕನಾಗುತ್ತ ಬಂದಂತೆ ಮಾತನಾಡುವುದಕ್ಕೆ ಕಲಿತನು. ಒಂದೊಂದು ಮಾತಿಗೂ ಒಂದೊಂದು ಅರ್ಥವನ್ನು ಕಲ್ಪಿಸಿಕೊಂಡನು. ಮಾತುಗಳನ್ನು ಒಂದಕ್ಕೊಂದು ಜೋಡಿಸಿ ಉಪಯೋಗಿಸಲಾರಂಭಿಸಿದನು. ಅದೇ ಮಾತನಾಡುವ ಭಾಷೆಯಾಯಿತು. ಮಾತನಾಡುವ ಭಾಷೆಯನ್ನು ಮನುಷ್ಯನು ಬರೆಯಲು ಕಲಿತುದು ತುಂಬಾ ವಿಚಿತ್ರ. ಈಗಿನಂತೆ ಆಗ ಅವನಿಗೆ ಅಕ್ಷರಗಳು ಗೊತ್ತಿರಲಿಲ್ಲ. ಅಂದಿನ ಅವನ ಅಕ್ಷರಗಳೆಂದರೆ ಎಲ್ಲಾ ಚಿತ್ರಗಳು. ಒಂದೊಂದು ಶಬ್ದಕ್ಕೂ ಒಂದೊಂದು ಚಿತ್ರ. ಆನೆ ಎಂದು ಬರೆಯಬೇಕಾದರೆ ಆನೆಯ ಚಿತ್ರವೊಂದನ್ನು ಬರೆದು ಬಿಡುತ್ತಿದ್ದನು. ದಿನ ಹೋದಂತೆ, ತಾನು ನಾಗರಿಕನಾಗುತ್ತ ಬಂದಂತೆ ಮನುಷ್ಯನು ಆ ಚಿತ್ರ

ಗಳನ್ನೇ ಅಕ್ಷರಗಳ ರೂಪಕ್ಕೆ ತಂದನು. ಒಂದೊಂದು ಧ್ವನಿಗೂ ಒಂದೊಂದು ಗುರುತನ್ನು ಉಪಯೋಗಿಸಲು ತೊಡಗಿದನು. ಅದೇ ಅಕ್ಷರವಾಯಿತು. ಬಾಯಿ ಮಾತನ್ನು ಈ ಅಕ್ಷರಗಳ ಸಹಾಯದಿಂದ ಮರದ ತೊಗಟೆಗಳಲ್ಲೋ ತಾಳೆಯೋಲೆಗಳಲ್ಲೋ ಬರೆಯಲಾರಂಭಿಸಿದನು. ಅದು ಬರೆಯುವ ಭಾಷೆಯಾಯಿತು. ಹೀಗೆ ಲೋಕದಲ್ಲಿ ಸಾವಿರಾರು ಭಾಷೆಗಳು ಉಂಟಾದುವು.

ಲೋಕದಲ್ಲಿರುವ ಭಾಷೆಗಳು ಎಷ್ಟೋ ಏನೋ! ನಮ್ಮ ಭಾರತದಲ್ಲಿಯೇ ಮುನ್ನೂರಕ್ಕಿಂತಲೂ ಹೆಚ್ಚು ಭಾಷೆಗಳಿವೆ. ಇವುಗಳಲ್ಲಿ ಹೆಚ್ಚಿನ ಭಾಷೆಗಳು ಬರವಣಿಗೆಯಲ್ಲಿಲ್ಲ; ಇನ್ನೂ ಬಾಯಿ ಮಾತಿನಲ್ಲಿಯೇ ಇವೆ. ಕೆಲವು ಮಾತ್ರ ಬರವಣಿಗೆಯಲ್ಲಿದ್ದು ಲೆಕ್ಕವಿಲ್ಲದಷ್ಟು ಗ್ರಂಥಗಳು ಹುಟ್ಟಿಕೊಂಡಿವೆ. ಭಾರತದ ಮುಖ್ಯ ಭಾಷೆಗಳು ಹತ್ತೋ ಹದಿನಾಲ್ಕೋ, ಅಷ್ಟೆ.

ಭಾರತದ ಭಾಷೆಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ಮಾಡಿರುವರು. ಆರ್ಯಭಾಷೆಗಳು ಮತ್ತು ದ್ರಾವಿಡ ಭಾಷೆಗಳು. ಆರ್ಯಭಾಷೆಗಳು ಉತ್ತರ ಭಾರತದಲ್ಲಿಯೂ, ದ್ರಾವಿಡ ಭಾಷೆಗಳು ದಕ್ಷಿಣ ಭಾರತದಲ್ಲಿಯೂ ಬಳಕೆಯಲ್ಲಿವೆ. ದ್ರಾವಿಡ ಭಾಷೆಗಳು ಬಹು ಪ್ರಾಚೀನ ಭಾಷೆಗಳಾಗಿವೆ; ಆರ್ಯ ಭಾಷೆಗಳು ದ್ರಾವಿಡ ಭಾಷೆಗಳಷ್ಟು ಹಿಂದಿನವುಗಳಲ್ಲ. ಆರ್ಯ ಭಾಷೆಗಳೆಂದರೆ ಆರ್ಯ ಜನರಿಂದ ಹುಟ್ಟಿದ ಭಾಷೆಗಳು. ದ್ರಾವಿಡ ಭಾಷೆಗಳು ದ್ರಾವಿಡ ಜನರಿಂದ ಉಂಟಾದವುಗಳು. ದ್ರಾವಿಡರೆಂದರೆ ಆರ್ಯರು ಭಾರತಕ್ಕೆ ಕಾಲಿರಿಸುವ ಮೊದಲೇ ಇಲ್ಲಿ ನೆಲಸಿದ್ದ ಜನ. ಆರ್ಯರು ಬರುವಾಗ ಅವರ ಭಾಷೆಯೂ ಇಲ್ಲಿಗೆ ಬಂತು. ಆರ್ಯರ ಭಾಷೆಯ ಹೆಸರು ಪ್ರಾಕೃತ. ಆ ಪ್ರಾಕೃತ ಭಾಷೆಯೇ ಕಾಲ ಕಳೆದಂತೆ ಸಂಸ್ಕಾರ ಹೊಂದುತ್ತಾ ಬಂದು ಸಂಸ್ಕೃತ ಭಾಷೆಯಾಯಿತು. ಅದೇ ಪ್ರಾಕೃತದಿಂದ ಆರ್ಯ ಭಾಷೆಗಳಾದ ಹಿಂದೀ, ಬಂಗಾಲಿ, ಗುಜರಾತಿ, ಮರಾಠಿ, ಉರಿಯಾ ಮೊದಲಾದ ಆರ್ಯ ಭಾಷೆಗಳು ಹುಟ್ಟಿದುವು. ಇದೇ ಆರ್ಯ ಭಾಷೆಗಳ ಬಳಗದ ಹುಟ್ಟು.

ಸಂಸ್ಕೃತವು ಬಹು ಪ್ರಾಚೀನವೂ ವಿಸ್ತಾರವೂ ಆದ ಭಾಷೆ. ಜಗತ್ತಿನ ಆದಿ ಗ್ರಂಥಗಳಾದ ವೇದಗಳಿರುವುದು ಸಂಸ್ಕೃತದಲ್ಲಿ. ಆರ್ಯ ಋಷಿಗಳು ಅನೇಕ ಸ್ಮೃತಿ ಶಾಸ್ತ್ರಗಳನ್ನು ಸಂಸ್ಕೃತದಲ್ಲಿ ಬರೆದರು. ಕವಿಗಳು ಬರೆದ

ಕಾವ್ಯಗಳಿಗೆ ಲೆಕ್ಕವಿಲ್ಲ. ಸಂಸ್ಕೃತಕ್ಕೆ ಆರ್ಯ ರಾಜರ ಬೆಂಬಲವಿತ್ತು; ಆಶ್ರಯವಿತ್ತು. ಆದುದರಿಂದ ಸಂಸ್ಕೃತ ಭಾಷೆ ಬೆಳೆಯಿತು; ಎಷ್ಟೋ ನೂರು ವರ್ಷಗಳ ಕಾಲ ವೈಭವದಿಂದ ಮೆರೆಯಿತು. ಹೀಗೆ ಸಂಸ್ಕೃತವೆಂದರೆ ಸಾಗರದಂತಾಯಿತು. ಈಗಲೂ ಜಗತ್ತಿನಲ್ಲಿ ಸಂಸ್ಕೃತದಷ್ಟು ವೈಭವಸಂಪನ್ನವಾದ ಭಾಷೆ ಬೇರೊಂದಿಲ್ಲ.

ಹಿಂದೀ, ಗುಜರಾತೀ, ಬಂಗಾಲಿ, ಮರಾಠಿ, ಉರಿಯಾ ಮೊದಲಾದ ಆರ್ಯ ಭಾಷೆಗಳಲ್ಲಿ ಗ್ರಂಥ ರಚನೆಯಾಗತೊಡಗಿದುದು ಎಷ್ಟೋ ಹುತ್ತೆ. ಆದರೂ ಈಗ ಆ ಭಾಷೆಗಳಲ್ಲಿ ಬೇಕಾದಷ್ಟು ಗ್ರಂಥಗಳು ಹುಟ್ಟಿವೆ. ಹಿಂದೀ ಭಾಷೆಯನ್ನು ನಮ್ಮ ದೇಶದ ಜನರಲ್ಲಿ ಹೆಚ್ಚಿನ ಜನರು ತಿಳಿದಿರುವರು. ಭಾರತದಲ್ಲಿ ಇಷ್ಟು ಹೆಚ್ಚು ಜನರು ತಿಳಿದಿರುವ ಭಾಷೆ ಬೇರೊಂದಿಲ್ಲ.

ಇನ್ನು ದ್ರಾವಿಡ ಭಾಷೆಗಳ ಬಳಗವು ಹೇಗಿದೆ ಎಂದು ನೋಡುವ. ದ್ರಾವಿಡ ಭಾಷೆಯು ಮೊದಲು 'ಮೂಲ ದ್ರಾವಿಡ'ವೆಂಬ ಹೆಸರಿನಿಂದ ಒಂದೇ ಭಾಷೆಯಾಗಿತ್ತಂತೆ. ಆ ಮೂಲ ದ್ರಾವಿಡದಿಂದಲೇ ತೆಲುಗು, ತಮಿಳು, ಕನ್ನಡ, ಮಲೆಯಾಳ, ತುಳು—ಈ ದ್ರಾವಿಡ ಭಾಷೆಗಳು ಹುಟ್ಟಿದುವು. ಮೊದಲಿನ ನಾಲ್ಕು ಭಾಷೆಗಳಲ್ಲಿ ಅನೇಕ ಗ್ರಂಥಗಳಿವೆ; ಈಗಲೂ ಗ್ರಂಥ ರಚನೆಯಾಗುತ್ತಿದೆ. ತುಳು ಭಾಷೆಯು ಬರವಣಿಗೆಯಲ್ಲಿಲ್ಲವೆಂದೇ ಹೇಳಬಹುದು. ಆದರೆ ತುಳುವಿನಲ್ಲಿ ಪಾಡ್ದನಗಳೆಂಬ ಹೆಸರಿನ ಸೊಗಸಾದ ಹಳೆಯ ಹಾಡುಗಳಿವೆ. ಈ ಹಾಡುಗಳನ್ನು ಬಾಯಿಯಿಂದ ಕೇಳಿ ಕಲಿತು ಹಾಡುವರು. ದ್ರಾವಿಡ ಭಾಷೆಗಳಲ್ಲಿ ತಮಿಳು ಅತಿ ಪ್ರಾಚೀನವಾದ ಭಾಷೆ. ತಮಿಳು ಪ್ರಾಚೀನತೆಯಲ್ಲಿ ಪ್ರಾಕೃತಕ್ಕೆ ಸಮಾನವಾದುದು. ಕನ್ನಡ, ತೆಲುಗು, ಮಲೆಯಾಳಿಗಳೆಲ್ಲಾ ಮತ್ತಿನ ಭಾಷೆಗಳು. ಆದರೆ ಆರ್ಯ ಭಾಷೆಗಳಾದ ಬಂಗಾಲೀ, ಹಿಂದೀ ಮೊದಲಾದವುಗಳಿಗಿಂತ ಹಿಂದಿನವುಗಳಾಗಿವೆ.

ಈ ಭಾಷೆಗಳೆಲ್ಲಾ ಸದಾಕಾಲವೂ ಒಂದೇ ತೆರನಾಗಿರುವುದಿಲ್ಲ. ಸಮಯ ಹೋದಂತೆ ಅವುಗಳ ರೂಪ ಬದಲಾಯಿಸುತ್ತಾ ಬರುತ್ತದೆ. ಎರಡು ಸಾವಿರ ವರ್ಷಕ್ಕೆ ಹಿಂದಿನ ತಮಿಳಿಗೂ ಇಂದಿನದಕ್ಕೂ ಎಷ್ಟೋ ಹೆಚ್ಚು ಕಡಿಮೆ ಇದೆ. ಒಂದು ಸಾವಿರ ವರ್ಷಗಳ ಹಿಂದಿನ ಕನ್ನಡ ಇಂದಿನ ಕನ್ನಡದಿಂದ ಬೇರೆಯೇ ಆಗಿತ್ತು. ಆ ಕಾಲದ ಕನ್ನಡವನ್ನು ಕೇಳುವಾಗ

ನಮಗೆ ಗುರುತಿಲ್ಲದ ಭಾಷೆಯೊಂದನ್ನು ಕೇಳಿದಂತಾಗುತ್ತದೆ. ಅದೇಕೆ ಹೀಗೆ? ಭಾಷೆಯ ಬೆಳವಣಿಗೆ ಬದಲಾವಣೆಗಳೆಂದರೆ ಇದೇ.

ಭಾರತದಲ್ಲಿ ಈ ಆರ್ಯ ದ್ರಾವಿಡ ಭಾಷೆಗಳಲ್ಲದೆ ಉರ್ದು ಎಂಬ ಇನ್ನೊಂದು ಭಾಷೆ ಇದೆ. ಇದು ಮುಸಲ್ಮಾನರ ಆಳಿಕೆಯ ಕಾಲದಲ್ಲಿ ಫಾರ್ಸಿ, ಅರಬಿ, ಭಾಷೆಗಳ ಮಾತುಗಳು ಹಿಂದೀ ಭಾಷೆಯೊಡನೆ ಸೇರಿ ಉಂಟಾದ ಭಾಷೆ. ಇದನ್ನು ಹೆಚ್ಚಾಗಿ ಭಾರತದ ಮುಸಲ್ಮಾನರು ಆಡುತ್ತಾರೆ. ಉರ್ದು ಭಾಷೆಯನ್ನು ಬರೆಯುವುದು ಉಳಿದ ಭಾಷೆಗಳಂತೆ ಎಡದಿಂದ ಬಲಕ್ಕಲ್ಲ; ಬಲದಿಂದ ಎಡಕ್ಕೆ. ಈ ಭಾಷೆಯ ಪುಸ್ತಕಗಳೂ ಹಾಗೆಯೇ; ಅವುಗಳ ಪುಟಗಳನ್ನು ಹಿಂದೆ ಹಿಂದೆ ಮಗುಚಬೇಕು. ಇದೇನೆಂದು ಹಲವರಿಗೆ ವಿಚಿತ್ರವಾಗಿ ತೋರಬಹುದು. ವಿಚಿತ್ರವೇನೂ ಅಲ್ಲ. ಅದು ಉರ್ದು ಭಾಷೆಯ ಪದ್ಧತಿ. ಉರ್ದುವಿನಲ್ಲಿಯೂ ತುಂಬಾ ಗ್ರಂಥಗಳಿವೆ. ಈ ಭಾಷೆಯನ್ನು ಅರಬಿ ಅಕ್ಷರಗಳಲ್ಲಿ ಬರೆಯುವರು. ಆ ಅಕ್ಷರಗಳಿಂದಾಗಿ ಉರ್ದುವಿಗೂ ಬಲದಿಂದ ಎಡಕ್ಕೆ ಬರೆಯುವ ಪದ್ಧತಿಬಂತು.

ಭಾರತದಲ್ಲಿ ಇಷ್ಟೆಲ್ಲಾ ಭಾಷೆಗಳಿದ್ದರೂ ಇವುಗಳನ್ನು ಬರೆಯುವ ಲಿಪಿಗಳೂ ಬೇರೆಬೇರೆಯೇ ಆಗಿವೆ. ಆರ್ಯ ಭಾಷೆಗಳಲ್ಲಿ ಹಿಂದಿ ಮರಾಠಿಗಳನ್ನು ನಾಗರಿ ಎಂದರೆ ಸಂಸ್ಕೃತ ಭಾಷೆಯ ಲಿಪಿಯಲ್ಲಿ ಬರೆಯುತ್ತಾರೆ. ಬಂಗಾಲಿ ಗುಜರಾತಿ ಮೊದಲಾದ ಭಾಷೆಯ ಲಿಪಿಗಳನ್ನು ನಾಗರಿ ಲಿಪಿಗಿಂತ ತುಸು ಹೆಚ್ಚುಕಡಿಮೆ ಮಾಡಿರುವರು. ಹಾಗೆಯೇ ದ್ರಾವಿಡ ಭಾಷೆಗಳ ಲಿಪಿಗಳಲ್ಲಿಯೂ ಅಲ್ಪಸ್ವಲ್ಪ ಭೇದಗಳಿವೆ. ಕನ್ನಡ ತೆಲುಗು ಲಿಪಿಗಳು ಸಾಮಾನ್ಯ ಒಂದೇ ರೀತಿಯಾಗಿಯೂ, ತಮಿಳು ಮಲೆಯಾಳಿ ಲಿಪಿಗಳು ಸುಮಾರು ಒಂದೇತೆರನಾಗಿಯೂ ಬರೆಯಲ್ಪಡುತ್ತವೆ. ಕನ್ನಡ ತೆಲುಗು ಅಕ್ಷರಗಳಲ್ಲಿ ಹೆಚ್ಚಿನ ಭೇದ ತೋರುವುದಿಲ್ಲ; ಹಾಗೆಯೇ ತಮಿಳು ಮಲೆಯಾಳಿಗಳ ಲಿಪಿಗಳಲ್ಲಿಯೂ ಹೆಚ್ಚಿನ ಅಂತರವಿಲ್ಲ. ಆದರೆ ಕನ್ನಡ ತಮಿಳು ಲಿಪಿಗಳು ಬೇರೆ ಬೇರೆಯೇ ಆಗಿವೆ.

ಭಾರತದ ಒಂದೊಂದು ಪ್ರಾಂತದಲ್ಲಿ ಒಂದೊಂದು ಭಾಷೆಯನ್ನಾಡುವರು. ಪ್ರಾಂತಗಳ ಹೆಸರುಗಳು ಭಾಷೆಗಳ ಹೆಸರುಗಳಿಂದಲೇ ಉಂಟಾಗಿವೆ. ಬಂಗಾಲಿ ಮಾತನಾಡುವ ಪ್ರಾಂತ ಬಂಗಾಲ; ತಮಿಳು ಮಾತನಾಡುವ

ನಾಡು ತಮಿಳು ನಾಡು. ಒಂದು ಪ್ರಾಂತದವರ ಭಾಷೆ ಇನ್ನೊಂದು ಪ್ರಾಂತದವರಿಗೆ ಅರ್ಥವಾಗುವುದಿಲ್ಲ. ಕನ್ನಡಿಗನೊಬ್ಬ ತಮಿಳು ನಾಡಿಗೆ ಹೋದರೆ ಮೂಕನಂತೆ ಸುಮ್ಮನೆ ಬಾಯಿಮುಚ್ಚಿ ಕುಳಿತುಕೊಳ್ಳಬೇಕು. ತಮಿಳನು ಗುಜರಾತಿಗೆ ಹೋದರೂ ಹಾಗೆಯೇ. ಇದೊಂದು ಕಷ್ಟ ನಮ್ಮ ದೇಶದಲ್ಲಿ. ಅದಕ್ಕಾಗಿ ಎಲ್ಲಾ ಪ್ರಾಂತದವರಿಗೂ ತಿಳಿದಿರುವಂತಹ ಒಂದು ಭಾಷೆ ಇದೆ. ಅದು ಯಾವುದು? ಅದೇ ಹಿಂದಿ, ನಮ್ಮ ರಾಷ್ಟ್ರ ಭಾಷೆ. ಹಿಂದಿಯನ್ನು ಕಲಿತುಕೊಂಡರೆ ದೇಶದ ಎಲ್ಲೆಡೆಗಳಲ್ಲಿಯೂ ಅಲೆದಾಡಬಹುದು; ವ್ಯವಹಾರ ನಡೆಸಬಹುದು. ಹಿಂದಿ ತಿಳಿದರೆ ಭಾಷೆ ಬರುವುದಿಲ್ಲವೆಂಬ ಭಯವಿಲ್ಲ. ಏಕೆಂದರೆ ಹಿಂದಿ ಭಾರತದ ರಾಷ್ಟ್ರ ಭಾಷೆಯಾದುದರಿಂದ ದೇಶದ ಅಧಿಕಾಂಶ ಜನರೂ ಅದನ್ನು ತಿಳಿದಿದ್ದಾರೆ. ಆದುದರಿಂದ ಯಾವ ಪ್ರಾಂತದವನು ಯಾವ ಪ್ರಾಂತಕ್ಕೆ ಹೋದರೂ ಕಷ್ಟವಿಲ್ಲದೆ ಕೆಲಸ ಸಾಗಿಸಬಹುದು.

ಇಷ್ಟೆಲ್ಲಾ ಭಾಷೆಗಳಿದ್ದರೂ ನಾವು ಕಲಿಯಬೇಕಾದ ಭಾಷೆ ಯಾವುದು? ಭಾರತದಲ್ಲಿ ಇಷ್ಟೊಂದು ಭಾಷೆಗಳಿರುವಾಗ ಯಾವುದನ್ನು ಬಿಡಬೇಕು? ಯಾವುದನ್ನು ಹಿಡಿಯಬೇಕು? ನಾವು ನಮ್ಮ ಪ್ರಾಂತದ ಭಾಷೆಯನ್ನು ಮೊದಲು ಅಭ್ಯಾಸಮಾಡಬೇಕು. ಆ ಮೇಲೆ ರಾಷ್ಟ್ರಭಾಷೆಯನ್ನು ಕಲಿಯಬೇಕು. ಪ್ರಾಂತದ ಭಾಷೆ ನಮ್ಮ ನಿತ್ಯದ ವ್ಯವಹಾರಕ್ಕಾಯಿತು; ರಾಷ್ಟ್ರಭಾಷೆ ಇತರ ಪ್ರಾಂತಗಳೊಡನೆ ವ್ಯವಹಾರ ಮಾಡಲಿಕ್ಕಾಯಿತು. ನಮ್ಮ ಪ್ರಾಂತದ ಭಾಷೆಯೆಂದರೆ ನಾಡಿನ ಭಾಷೆ, ಕನ್ನಡ. ಕನ್ನಡ ಬಿಟ್ಟರೆ ಕನ್ನಡಿಗರಾದ ನಮಗೆ ಗತಿ ಇದೆಯೇ? ಈ ಎರಡು ಭಾಷೆಗಳನ್ನು ಕಲಿಯುವುದಲ್ಲದೆ ಇನ್ನೂ ಒಂದು ಭಾಷೆಯ ಪರಿಚಯ ನಾವು ಮಾಡಿಕೊಂಡರೆ ಒಳ್ಳೆಯದು. ಅದು ಸಂಸ್ಕೃತ. ಭಾರತದ ಜನಕ್ಕೆ ಸಂಸ್ಕೃತದ ಅಭ್ಯಾಸವಿದ್ದರೆ ಬಹು ಉತ್ತಮ. ಏಕೆಂದರೆ ಭಾರತೀಯರಾದ ನಮ್ಮ ಪ್ರಾಚೀನ ಗ್ರಂಥಗಳೆಲ್ಲಾ ಸಂಸ್ಕೃತ ಭಾಷೆಯಲ್ಲಿವೆ. ಅವುಗಳನ್ನೆಲ್ಲಾ ಓದಬೇಕಾದರೆ ಸಂಸ್ಕೃತಕ್ಕೆ ಶರಣಾಗದೆ ನಿರ್ವಾಹವಿಲ್ಲ. ಅಲ್ಲದೆ ಭಾರತದ ಭಾಷೆಗಳ ಮೇಲೆ ಸಂಸ್ಕೃತವು ಬಲವಾಗಿ ತನ್ನ ಪ್ರಭಾವ ಬೀರಿದೆ. ಆರ್ಯ ಭಾಷೆಗಳ ಮಾತುಗಳಂತೂ ಸಂಸ್ಕೃತ ಶಬ್ದಗಳಿಂದಲೇ ಹುಟ್ಟಿವೆ; ಕೆಲವು

ಮಾತುಗಳು ಸಂಸ್ಕೃತದ ರೂಪದಲ್ಲಿಯೇ ಇವೆ; ಕೆಲವು ತುಸು ಬದಲಾವಣೆ ಹೊಂದಿವೆ. ದ್ರಾವಿಡ ಭಾಷೆಗಳಲ್ಲಿಯೂ ಇರುವುದು ಅರ್ಧಕ್ಕರ್ಧ ಸಂಸ್ಕೃತ ಶಬ್ದಗಳು. ಸಂಸ್ಕೃತವನ್ನು ಬಿಟ್ಟು ಕನ್ನಡವನ್ನೋ ಹಿಂದಿ ಯನ್ನೋ ಕಲಿತುಕೊಳ್ಳುತ್ತೇನೆನ್ನಲು ಸಾಧ್ಯವೇ ಇಲ್ಲ. ಏಕೆಂದರೆ ಭಾರತದ ಯಾವ ಭಾಷೆಯಾದರೂ ಸಂಸ್ಕೃತವನ್ನು ಬಿಟ್ಟಿಲ್ಲ. ಉದಾಹರಣೆ ಗಾಗಿ ಭಾಷೆಯೆಂಬ ಶಬ್ದವನ್ನೇ ನೋಡುವ; ಅದೂ ಸಂಸ್ಕೃತ ಶಬ್ದ. ನಾವು ಯಾವ ಭಾಷೆಯನ್ನಾಡುವುದಿದ್ದರೂ ಬರೆಯುವುದಿದ್ದರೂ ಸಂಸ್ಕೃತ ಶಬ್ದಗಳನ್ನು ಬಿಡಲು ಸಾಧ್ಯವೇ ಇಲ್ಲ. ಆದುದರಿಂದ ನಾವು ನಮ್ಮ ಪ್ರಾಂತ ಭಾಷೆಯೊಂದಿಗೆ ಸಂಸ್ಕೃತದ ಪರಿಚಯವನ್ನೂ ಮಾಡಿಕೊಂಡರೆ ಒಳ್ಳೆಯದು.

ಈಗ ಭಾರತದ ಮುಖ್ಯ ಭಾಷೆಗಳ ಪರಿಚಯವಾಯಿತು. ಇನ್ನೂ ಎಷ್ಟೋ ಭಾರತೀಯ ಭಾಷೆಗಳು ಬರವಣಿಗೆಯ ರೂಪಕ್ಕೆ ಬಾರದೆ ಬಾಯಿ ಮಾತಿನಲ್ಲಿಯೇ ಇವೆ. ಹೇಗಿದ್ದರೂ ಭಾರತದ ಭಾಷೆಗಳ ಬಳಗವು ಬಲು ದೊಡ್ಡದು. ಪ್ರಪಂಚದ ಬೇರೆ ಯಾವ ದೇಶದಲ್ಲಿ ನೋಡಿದರೂ ಇಷ್ಟೊಂದು ಭಾಷೆಗಳು ಇಲ್ಲವೇ ಇಲ್ಲ. ಈ ವಿಚಿತ್ರ ಭಾರತದ ವಿಶೇಷತೆಯಲ್ಲದೆ ಮತ್ತೇನು?

ಅಭ್ಯಾಸ

1. ಭಾಷೆ ಎಂದರೇನು? ನಾಲ್ಕಾರು ಪಂಕ್ತಿಗಳಲ್ಲಿ ವಿವರಿಸಿರಿ.
2. ಬರೆಯುವ ಭಾಷೆ ಉಂಟಾಗುವ ಬಗೆ ಹೇಗೆ?
3. ರಾಷ್ಟ್ರಭಾಷೆಯ ಅಗತ್ಯವೇನು?
4. ಭಾರತದ ಭಾಷೆಗಳ ಕುರಿತು ಒಂದು ಪ್ರಬಂಧ ಬರೆಯಿರಿ:
5. ಮುಂದಿನ ಸಮಾಸಗಳನ್ನು ಬಿಡಿಪದಗಳಾಗಿ ಬರೆಯಿರಿ:— ಕೈಸನ್ನೆ; ಬಾಯಿಮಾತು; ಸ್ಮೃತಿಶಾಸ್ತ್ರ; ಮುಖ್ಯಭಾಷೆ.
6. ಮುಂದಿನ ಶಬ್ದಗಳಲ್ಲಿ ತದ್ಭವಗಳಿಗೆ ಸಂಸ್ಕೃತ ರೂಪಗಳನ್ನೂ, ಸಂಸ್ಕೃತಗಳಿಗೆ ತದ್ಭವಗಳನ್ನೂ ಕೊಡಿರಿ:—ಭಾಷೆ; ಆರ್ಯ; ಅಕ್ಕರ.
7. ಮುಂದಿನ ನಾಮಪದಗಳಲ್ಲಿ ರೂಢ ನಾಮಗಳನ್ನೂ, ಅಂಕಿತ ನಾಮಗಳನ್ನೂ ಹೆಕ್ಕಿ ತೆಗೆಯಿರಿ:—ಭಾಷೆ; ಸಂಸ್ಕೃತ; ಲೋಕ; ಹಿಂದಿ.

೭. ಹೊನ್ನಿಯ ಮದುವೆ

ನಮ್ಮ ನಾಡಿನ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಕನ್ನಡದ ಅಧ್ಯಾಪಕರೂ 'ರಾಷ್ಟ್ರಬಂಧು' ಪತ್ರಿಕೆಯ ಸಂಪಾದಕರೂ ಆಗಿರುವರು. ಇವರು ಕನ್ನಡದಲ್ಲಿ ಅನೇಕ ಕವನ, ಕತೆ, ಕಾದಂಬರಿ, ನಾಟಕ ಮುಂತಾದುವುಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ; ಕಾಣಿಕೆ, ಹಣ್ಣುಕಾಯಿ, ನಲ್ಮೆ ಮುಂತಾದುವು ಇವರ ಕವನ ಸಂಗ್ರಹಗಳಾಗಿವೆ; ಹಿಂದಿನ ಕತೆಗಳು, ಗಾಜಿನ ಬಳೆ ಮತ್ತು ಇತರ ಕತೆಗಳು ಮೊದಲಾದುವು ಇವರ ಕಥಾ ಸಂಗ್ರಹಗಳು. ಧೂಮಕೇತು, ದೇವತಾ ಮನುಷ್ಯ, ಲೋಕದ ಕಣ್ಣು ಇವು ಇವರ ಕಾದಂಬರಿಗಳು. ಗುರುದಕ್ಷಿಣೆ, ಯಜ್ಞಕುಂಡಗಳು ಇವರು ಬರೆದ ನಾಟಕಗಳು. ಶ್ರೀ ಶಂಕರ ಭಟ್ಟರು ಏನೇ ಬರೆಯಲಿ ಅದು ಅತ್ಯುಚ್ಚ ತರಗತಿಯ ಸಾಹಿತ್ಯವಾಗುವುದು. ಇವರ ಸಾಹಿತ್ಯದ ಸ್ವಾರಸ್ಯ ತಿಳಿಯಬೇಕಾದರೆ, ಓದಿಯೇ ತಿಳಿಯಬೇಕು. ಹೊನ್ನಿಯ ಮದುವೆ ಎಂಬುದು ಇವರು ಬರೆದ ಒಂದು ನೀಳ್ಗವಿತೆ; ಆ ನೀಳ್ಗವಿತೆಯ ಸಂಗ್ರಹಿಸಿದ ಕಥಾರೂಪವೇ ಇದು.

ಪಡುವಣ ಕಡಲ ದಡದಲ್ಲಿ ತೆಂಗಿನ ಮಡಲ ಮರೆಯಲ್ಲಿ ನಾಡೊಂದು ಸೊಗಯಿಸುತ್ತಿದೆ. ಹೆಸರಾದ ದೊರೆಗಳಾರೂ ಆ ನಾಡ ನ್ನಾಳಲಿಲ್ಲ; ಪ್ರಸಿದ್ಧ ಕವಿಗಳಾಗಲೀ, ಗಮಕಿಗಳಾಗಲೀ ಆ ನಾಡಿನ ಕೀರ್ತಿಯನ್ನು ಹಾಡಿ ಹೊಗಳಲಿಲ್ಲ. ಸದಾಕಾಲವೂ ಹೊಲಗದ್ದೆಯಲ್ಲಿ ಉಳುತ್ತ ಗೆಯ್ಯುತ್ತ ಬೆವರಿಳಿಸಿ ದುಡಿಯುವವರ ನಾಡದು. ಆ ನಾಡ ವರು ಚಿಂದಿಯನ್ನುಟ್ಟೇ, ಮುಟ್ಟಾಳೆಯಿಟ್ಟೇ ಅದೇ ಸಿಂಗಾರವೆಂದು ತೃಪ್ತಿಪಡುವರು. ಓದಿ ಕಲಿತು ಬಲ್ಲಿದರೆನಿಸದಿದ್ದರೆ, ಕಾದಿ ಬಲಿದು ವೀರರೆನಿಸದಿದ್ದರೆ ಅಂತಹರಿಗೂ ಮನೆಯಿರಬಾರದೆಂದಿದೆಯೇ? ಆ ನಾಡ ವರು ಮುಗಿಲು ಮುಟ್ಟುವ ಉಪ್ಪರಿಗೆ ಮನೆಗಳನ್ನು ಬಯಸದೆ ಗುಡಿಸಲು ಗಳನ್ನೇ ಮೆಚ್ಚಿ ಅವುಗಳಲ್ಲಿಯೇ ತೃಪ್ತಿಯಿಂದಿರುವರು. ಆ ನಾಡಿನ ಸೊಬಗನ್ನೇನು ಬಣ್ಣಿಸಲಿ? ನಾಡಿನ ಬಳಿ ನೀರುತುಂಬಿ ಹರಿಯುವ

ಕೆರೆತೊರೆಗಳೂ, ಅಚ್ಚ ಹಸುರಾದ ಮರಬಳ್ಳಿಗಳೂ ಸದಾ ಸೊಗಯಿಸುತ್ತಿವೆ. ನಾಡವರ ಅಂಗಳದಲ್ಲಿ ಹುಲ್ಲೊಟ್ಟಿಲ ಮೇಲೆ ಕರುಮಂದೆಗಳು ಯಾವಾಗಲೂ ನಲಿದಾಡುತ್ತಿರುತ್ತವೆ. ನಾಡಿನಲ್ಲಿ ಎಲ್ಲಿನೋಡಿದರಲ್ಲಿ ನೆಲ್ಲುಗದ್ದೆಗಳು; ಗದ್ದೆಗಳಲ್ಲಿ ಕಳವೆಯತೆನೆಗಳು. ನಾಡಿಗೆ ಕಾವಲು ನಿಂತಂತೆ ತೋರುವ ತೆಂಗಿನ ಕೌಂಗಿನ ಸಾಲುಗಳು ಅಲ್ಲಲ್ಲಿ. ಇನ್ನು ಸದಾ ಸುಯ್ಯುತ್ತಿರುವ ಗಾಳಿಯ ಮರಗಳು.

ಆ ಪಡುಗನ್ನಡ ನಾಡಿನ ಒಂದು ಹಳ್ಳಿಯಲ್ಲಿ ದೆವ್ವದ ಒಂದು ಗುಡಿ ಇದೆ. ಆ ಗುಡಿಯ ಬಳಿಯೇ ಗ್ರಾಮದ ದೈವವನ್ನು ನುಡಿಯಿಸುವ ನಾಡುಗರನ್ನು ದಾರಿತೋರಿ ನಡೆಯಿಸುವ ಗುರಿಕಾರನ ಮನೆಯಿದೆ. ಆ ಗುರಿಕಾರನೆಂದರೆ ನಾಡಿಗೆಲ್ಲ ಬೇಕಾದವನು. ನಾಡವರಿಗೆಲ್ಲ ಹಬ್ಬ-ಹುಣ್ಣಿಮೆಗಳ ದಿನ ಹೇಳಲು ಆತನೇ ಜೋಯಿಸ. ನ್ಯಾಯದ ರೀತಿನೀತಿ ತಿಳಿದು ತೀರ್ಮಾನ ಮಾಡಲು ಆತನೇ ನ್ಯಾಯಾಧಿಪತಿ. ಆತನಿಗೆ ಓದು ಬರಹ ಬಾರದಿದ್ದರೂ, ತನ್ನ ನೆನಪಿನಿಂದ ರೀತಿನೀತಿಗಳ ಕತೆ ಹೇಳಿ ನಾಡುಗರ ಕಲಹ ಕಿರುಕುಳ ತೀರಿಸುವನು. ಆ ನಾಡಿಗೆ ಆ ಗುರಿಕಾರನೇ ರಾಜ; ಹೊಲವೇ ಅವನ ರಾಜ್ಯ; ಆತನಿಗೆ ಆಲೋಚನೆ ಹೇಳುವ ಮಂತ್ರಿಯೆಂದರೆ ಒಬ್ಬಳೇ ಒಬ್ಬಳಾದ ಮಗಳು ಹೊನ್ನಿ. ಹೊನ್ನಿಗೆ ತಾಯಿಯಿಲ್ಲ. ಚಿಕ್ಕಂದಿನಿಂದಲೇ ತಂದೆಯ ಪೋಷಣೆಯಲ್ಲಿ ಬಳೆದಳು. ಮುದುಕ ಗುರಿಕಾರನ ಜೀವದ ಪುತ್ತಳಿ ಆಕೆ. ಹೊನ್ನಿಯನ್ನು ಬಿಟ್ಟು ಅವನಿಗೆ ಬೇರೆ ಸಂಪತ್ತಿಲ್ಲ; ಬೇರೆ ಬದುಕಿಲ್ಲ. ಹೊನ್ನಿಯ ಮೇಲಿನ ಪ್ರೀತಿಯಿಂದಲೇ ಗುರಿಕಾರ ಎರಡನೆಯ ಮದುವೆ ಮಾಡಿಕೊಳ್ಳಲಿಲ್ಲ. ಹಾಗೆಯೇ ಮುದುಕನಾದ; ಕಣ್ಣುಗಳೂ ಹೋದುವು; ಕೈಕಾಲುಗಳ ಶಕ್ತಿಯೂ ಕುಂದಿತು. ಹೊನ್ನಿ ಮುದುಕ ಗುರಿಕಾರನ ಊರುಗೋಲಾಗಿಯೇ ಪರಿಣಮಿಸಿದಳು.

ತಂದೆಯ ಪ್ರೀತಿಯಲ್ಲಿ ಬಳೆದ ಹೊನ್ನಿ ಯೌವನದಲ್ಲಿ ಕಾಲಿರಿಸಿದಳು. ಆಕೆಯ ನಡೆನುಡಿಗಳಲ್ಲಿ ನಾಚಿಕೆ ತಲೆದೋರಿತು. ಹೀಗಿರಲೊಂದು ದಿನ ಎಂದಿನಂತೆ ಅವಳು ದನಕರು ಮೇಯಿಸಲೆಂದು ಬಳಿಯ ಮಾವಿನ ತೋಪಿಗೆ ನಡೆದಳು. ದನಕರುಗಳೆಲ್ಲ ಮೇಯುತ್ತಿರಲು ಹೊನ್ನಿ ಮಾವಿನ

ನೀಳ್ಗೊಂಬಿನಲ್ಲಿ ತೊಟ್ಟಿಲು ತೂಗುತ್ತಾ ರಾಗವಾಗಿ ಹಾಡತೊಡಗಿದಳು. ಆಗಲೇ ಆ ರಾಗಕ್ಕೆ ಪ್ರತಿಯಾಗಿ ರಾಗವೊಂದು ಕೇಳಿಸಿತು. ಹೊನ್ನಿ ತಲೆಯೆತ್ತಿ ನೋಡಿದಳು; ಯಾರೂ ಕಾಣಿಸಲಿಲ್ಲ. ನನ್ನ ರಾಗವನ್ನು ಕದ್ದವರಾರೆಂದು ಮತ್ತೊಮ್ಮೆ ಹಾಡಿದಳು; ಪುನಃ ಪಡಿನುಡಿ ಕೇಳಿಸಿತು. ಆಗ ಹೊನ್ನಿ ಹೆದರಿಹೋಗಿ ಥಟ್ಟನೆ ಮಾವಿನ ಕೊಂಬೆಯಿಂದ ಕೆಳಗೆ ನೆಗೆದಳು. ದನಕರುಗಳನ್ನೆಲ್ಲ ಕರೆದು ಮನೆಗೆ ಹೋಗಲು ಅನುವಾದಳು.



ಅಷ್ಟರಲ್ಲಿ ಫಕ್ಕನೆ ಎಲ್ಲಿಂದಲೋ ಹಾರಿಬಂದ ಜವ್ವನಿಗನೊಬ್ಬ ಆಕೆಯ ದಾರಿಗಡ್ಡಬಂದು ನಿಂತುದು ಕಂಡಿತು. ಹೊನ್ನಿ ಬೆಚ್ಚಿ ಬಿದ್ದು ಕಣ್ಣು ಕಣ್ಣು ಬಿಟ್ಟು ಅತ್ತಿತ್ತ ನೋಡತೊಡಗಿದಳು. ಜವ್ವನಿಗ ಆಕೆಯನ್ನೇ ದಿಟ್ಟಿಸುತ್ತ "ಚೆಲುವೆ! ಏಕೆ ಬೆದರುವೆ? ನಿನ್ನ ಹಾಡನ್ನು ಹಿಡಿದುದು ನನ್ನ ತಪ್ಪೆ? ಎಷ್ಟೋ ಸಂಜೆಗಳನ್ನು ನಿನ್ನ ಹಾಡು ಕೇಳುತ್ತ ಕಳೆದೆ. ನಿನ್ನ ಹಾಡಿನಲ್ಲಿ ನನ್ನ ಹೆಸರೊಂದನ್ನು ಬೆರಸು. ಇಷ್ಟೇ ನನ್ನ ಬಯಕೆ. ನನ್ನ ಹೆಸರು ಚೆನ್ನ. ನಾನು ನಿನ್ನನ್ನು ಪ್ರೀತಿಸುತ್ತೇನೆ; ನಿನ್ನ ಮೇಲೆ

ನನ್ನೊಲವು ಮೂಡಿದೆ. ಒಂದೂಟಕ್ಕೂ ಗತಿಯಿಲ್ಲದ ಬಡವ ನಾನು. ನೀನೆಂದರೆ ನಾಡಿನ ಗುರಿಕಾರನ ಮಗಳು. ನಿನಗೂ ನನಗೂ ಬಲು ದೂರವೆಂಬುದು ನನಗೆ ತಿಳಿದಿದೆ. ಎರಡುದಿನ ದುಡಿದರೆ ಒಂದೂಟಕ್ಕೆ ಸಿಗುವ ಸಂಪತ್ತು ನನ್ನದು. ಸೌಭಾಗ್ಯ ಸಾಗರದ ಆ ದಡ ನಿನ್ನದು. ಆದರೂ ನಿನ್ನೊಲಿದ ನನ್ನ ಹೃದಯವನ್ನು ಹಿಂದಿರುಗಿಸಲಾರೆ. ಏನು ಮಾಡಲಿ?" ಎಂದು ಹೇಳುತ್ತ ಹೊನ್ನಿಯು ಪಾದಗಳಿಗೇ ಅಡ್ಡಬಿದ್ದ.

ಆಗ ಹೊನ್ನಿ "ಜವ್ವನ! ಲೋಕದ ರೀತಿನೀತಿ ತಿಳಿಯದೆ ಏನೇನೋ ಗಳಹುತ್ತಿರುವೆಯಲ್ಲ? ನೀನಾರು? ನನ್ನ ತಂದೆಯೆಂದರೆ ನಾಡಿನ ಮುಂದಿಗೆ ದಾರಿತೋರಿ ನಡೆಯಿಸುವ ಗುರಿಕಾರನಲ್ಲವೆ? ಕಟ್ಟು ಕಟ್ಟಳೆಗಳೆಂದರೆ ಆತ ನಡೆಯುವ ದಾರಿ. ಹೆತ್ತವನೆಂದರೆ ನನ್ನನ್ನು ಹೊತ್ತು ಸಾಕಿದ ವನಲ್ಲವೆ? ಈ ದೇಹವೋ ಜೀವವೋ ಎಲ್ಲಾ ಆತನಿತ್ತ ಸಂಪತ್ತಲ್ಲವೆ? ಹಾಗಿರುವಾಗ ತಂದೆಯ ಮಾತು ಕೇಳದೆ ಕಂಡವರ ಕೈಹಿಡಿಯಲು ಬರುವುದೆ? ಹಾಗೆ ಕೈಹಿಡಿದರೆ ಕುಲದೈವದ ಚಾವಡಿಗುಡಿದೈವದ ಶಾಪ ನಮ್ಮನ್ನು ಸುಡದಿರುವುದೆ? ಉತ್ತಮ ಅಥವಾ ನೀಚಕುಲದಲ್ಲಿ ಜನ್ಮ ತಾಳುವುದು ನಮ್ಮಿಷ್ಟವೇನು? ಈ ರೀತಿ ಇಷ್ಟಬಂದವರನ್ನು ಕೈಹಿಡಿಯು ವುದು ಅಥವಾ ಬಿಡುವುದು ನಮ್ಮ ಅಧಿಕಾರದಲ್ಲಿಲ್ಲ. ಮನೆತನಗಳ ನಡೆವಳಿಯಂತೆ ನಡೆಯುವುದೇ ನಮ್ಮ ಕುಲಬಿರುದು" ಎಂದು ಹೇಳಿ ನಿಟ್ಟುಸಿರಿಟ್ಟಳು; ಆಕೆಯ ಮೊಗ ಬಾಡಿತು; ಕಂಬನಿ ತುಂಬಿತು. ಅಷ್ಟರಲ್ಲಿ ಹೊತ್ತು ಮುಳುಗುವ ಹೊತ್ತೂ ಆಯಿತು. ಹೊನ್ನಿ ಮತ್ತಲ್ಲಿ ನಿಲ್ಲದೆ ದನಕರುಗಳನ್ನಟ್ಟಿಕೊಂಡು ಹಿಂದೆ ತಿರುತಿರುಗಿ ಚೆನ್ನನನ್ನೇ ದಿಟ್ಟಿಸುತ್ತಾ ಮನೆಯ ಕಡೆ ಮರಳಿದಳು. ಕಟ್ಟಳೆ ಮೀರುವವಳೂ ಹೆಣ್ಣೆ! ಎನ್ನುತ್ತ ಓಡಿಬಂದು ಮನೆ ಸೇರಿದಳು. ಅಂದಿನಿಂದ ಹೊನ್ನಿ ಚೆನ್ನರ ಪ್ರೀತಿ ದಿನದಿನಕ್ಕೆ ಬೆಳೆಯ ತೊಡಗಿತು.

ಹೀಗಿರಲೊಂದು ದಿನ ನಾಡುಗಾರರೋ ಬಂದು ಗುರಿಕಾರನೊಡನೆ "ಏನಿದು ಪದ್ಧತಿ? ಮಗಳನ್ನು ಮನೆಯಲ್ಲಿರಿಸಿಕೊಳ್ಳಲೆಂದೇ ಪಡೆದಿರಾ? ನಮ್ಮ ನಾಡಿನಲ್ಲಿ ಜವ್ವನಿಗರಾರೂ ಇಲ್ಲವೆ? ಯಾರಾದರೂ ಗುತ್ತಿನವರ ಮಕ್ಕಳನ್ನಾರಿಸಿ ಧಾರೆಯೆರೆದು ಕೊಡಬಾರದೆ? ಕನ್ನಿಕೆಯರು ಮದು

ಯಾಗದೆ ಮೆರೆಯುವುದು ಸರಿಯಲ್ಲ. ಚೆಲುವೆಯರಿಗೆ ಸಂಜಿನ ಗಾಳಿ ಸೋಕಿಸುವ ಹಲವು ಭೂತಗಳಿವೆ ಈ ನಾಡಿನಲ್ಲಿ. ಒಂದು ಕೆಟ್ಟಮಾತು ಬಂತೆಂದರೆ ಹರೆಯದ ಬಾಲೆಗೆ ಅದೇ ಸಾಕು. ಹೆಣ್ಣೆಂದರೆ ಅನ್ನಿಗರೊಡವೆ; ಆದುದರಿಂದ ಅದನ್ನು ಬೇಗನೇ ಗಡಿದಾಟಿಸಬೇಕು" ಎಂದು ನುಡಿದರು. ಇದಕ್ಕಾ ಮುದುಕನು "ತಕ್ಕ ಸಮಯದಲ್ಲಿ ಬುದ್ಧಿವಾದ ಬಂತು. ನಾಡಿನ ಗೌಡನ ಮಗನಿಗೆ ಮಗಳನ್ನು ಧಾರೆಯೆರೆದು ಕೊಡುವೆನು" ಎಂದು ಉಸುರಿದ. ಆಗ ಬಾಗಿಲೆಡೆ ನಿಂತಿದ್ದ ಹೊನ್ನಿ ಇದೆಲ್ಲ ಕೇಳಿ ನಿಟ್ಟುಸಿರಿಟ್ಟು ಕಂಬನಿ ತುಂಬಿದಳು.

ಪಡುವಣತೀರದ ಆ ಕನ್ನಡನಾಡಿನಲ್ಲಿ ಮಳೆಗಾಲ ಕಳೆಯಿತು. ಮಳೆ ಕುಂದಿ ನೆರೆಯಿಳಿಯಿತು. ಆಗಸದಲ್ಲಿ ಕರಿಮೋಡಗಳೆಲ್ಲ ಮಾಯ ವಾಗಿ ಬಿಳಿ ಮೋಡಗಳು ಕಾಣಿಸತೊಡಗಿದುವು. ಆಗಲೇ ಗುರಿಕಾರನ ಮನೆಯಲ್ಲಿ ಮದುವೆಯ ಸನ್ನಾಹಕ್ಕೆ ತೊಡಗಿತು. ಸಿರಿವಂತ ಗುರಿಕಾರನ ಒಬ್ಬಳೇ ಮಗಳ ಮದುವೆಯಲ್ಲವೆ? ಆತನ ಜೀವನದ ಕೊನೆಯ ಉತ್ಸವ ಅದು. ಸಂಭ್ರಮದಿಂದ ಜರಗದೆ ಉಳಿಯುವುದೆ? ಗೌಡನ ಮಗ ಗುರಿ ಕಾರನ ಮಗಳನ್ನು ವರಿಸಲು ಅಂದಣವೇರಿಯೋ, ಕುದುರೆಯನ್ನೇರಿಯೋ ಬರಬಹುದಲ್ಲ? ಹೊನ್ನಿಯನ್ನು ಸಿಂಗರಿಸಲು ಪಟ್ಟೆಸೀರೆಗಳನ್ನೋ ಜರಿಕುಪ್ಪ ಸಗಳನ್ನೋ ತರಬಹುದಲ್ಲ? ಗುರಿಕಾರನ ಅಂಗಳದಲ್ಲಿ ಹಸುರುಹಂದರ ಹಾಕಿದರು; ಬಾಳೆಯ ತೋರಣ ನಿಲ್ಲಿಸಿದರು; ಚಿಗುರಿನ ಜಲ್ಲರಿ ಕಟ್ಟಿದರು; ಸುರಗಿಯ ತೊಂಗಲ ಜಲ್ಲಿ ಇಳಿಸಿದರು; ಹಣ್ಣಡಕೆ ಹೊಂಬಾಳೆ ಗಳ ಗೊನೆಗಳನ್ನು ಚಪ್ಪರಕ್ಕೆ ತೂಗಿಸಿದರು. ಮದುಮಗ ಆನೆಯೇರಿ ಬಂದರೂ ಸಾಕಾಗುವಷ್ಟು ಎತ್ತರವಾಗಿತ್ತು ಆ ಮಂಟಪ. ನೆಂಟರಿಷ್ಟರೆಲ್ಲಾ ಕರೆಯದೆ ಬಂದು ಮದುವೆಗೆ ಬೇಕಾದ್ದನ್ನೆಲ್ಲಾ ಅಣಿಮಾಡಿದರು; ಮದು ವೆಯ ಹಂದರವನ್ನು ಸಿಂಗರಿಸಿದರು.

ಆದರೇನು? ಬಡಹೊನ್ನಿಯ ಮನಸ್ಸಿನ ಉಮ್ಮಳನನ್ನು ತಿಳಿದ ವರಾರು? ಗೌಡನ ಮಗನೆಂದ ಮಾತ್ರಕ್ಕೆ ಅವಳ ಮನಮೆಚ್ಚುವುದೆ? ಹೀಗೆಂದು ಹೆತ್ತವರ ಮುಂದೆ ಮರುಮಾತಿಗೆಡೆಯಿದೆಯೆ? ಆಕೆ ಚೆನ್ನನನ್ನೇ ಒಲ್ಲಿದಿದ್ದಾಳೆ; ಅವನನ್ನೇ ವರಿಸಲು ಬಯಸುತ್ತಾಳೆ. ಅದಾರಿಗೆ ಗೊತ್ತು?

ಒಂದೊಂದೇ ಹನಿಕೂಡಿದಂತೆ ನೆಂಟರೆಲ್ಲಾ ನೆರೆದರು. ಹಾಗೆಯೇ ಹೊನ್ನಿಯ ಹೊಟ್ಟೆಯೊಳಗೇ ಕುದಿಯುವ ಮರುಕ ಒಂದೊಂದೇ ಮಡಿ ಹೆಚ್ಚಿತು. ಗೆಳತಿಯರೆಲ್ಲಾ ಬಂದು ಹಾಸ್ಯಮಾಡಲೆಂದು ಸರಸವಾಡ ಲೆಂದು ಹೊನ್ನಿಯನ್ನು ಕರೆದರು. ಆಕೆ ಯಾರೊಡನೆಯೂ ಮಾತನಾ ಡಲಿಲ್ಲ; ಯಾರೊಡನೆಯೂ ಸೇರಿ ನಲಿಯಲಿಲ್ಲ; "ಮನಸ್ಸಿಲ್ಲದ ಮಗಳೊ ಬ್ಬಳನ್ನು ಗಂಡನ ಮನೆಗೆ ನೂಕುವುದೆಂದರೆ ಅದು ಹೆಣ್ಗೊಲೆಯಲ್ಲವೆ? ನೋಡಬಾರದೆ, ವಾದ್ಯದವರೂ ತಂಬಟೆಯವರೂ ಬಂದರು. ಬೆಳಗಾ ದೊಡನೆಯೇ ನನ್ನನ್ನು ಧಾರೆಯೆರೆದು ಕೊಡುವರಂತೆ! ಮದುವೆಯ ಆನಂದದಲ್ಲಿ ಸೋಬಾನೆ ಹಾಡುವರಂತೆ! ಆದರೆ ನಾನೆಲ್ಲಿ? ಪಡುಗಡಲಿನ ತಡಗುಂಡಿಯಲ್ಲೊಂದೆಡೆ ನನಗಾಗಿ ವಿಧಿಯೇ ಹಾಸಿಗೆ ಹಾಸಿದ್ದಾನೆ! ಅಲ್ಲಿ ಸಿಂಗಾರಕ್ಕಾಗಿ ಮರಿಮೀನುಗಳು ಮಣಿಗಳನ್ನೂ ಬಿಳಿ ಮುತ್ತುಗಳನ್ನೂ ಸುರಿಸುತ್ತಿವೆ ಈಗ. ಆ ತಡಗುಂಡಿಯಲ್ಲಿ ಕಡಲಿನ ಮಂದಿಯು ಬಳಗ ದೊಡನೆ ನಾನೂ ಚೆನ್ನನೂ ಒಂದೇ ಹಂದರದಲ್ಲಿ ಒಂದೇ ಭಾವದಿಂದ ಸುಖಶಾಂತಿಯಲ್ಲಿ ಒಂದುಗೂಡುವೆವು. ಹುಟ್ಟಿನ ತೊಟ್ಟಿನ ತಂದೆಯನ್ನೂ ಮರೆಯುವೆನು; ಹುಟ್ಟಿದ ಮನೆಯನ್ನೂ ಮರೆವೆನು; ಕನ್ನಡನಾಡಿನ ಪಡು ಗಡಲಲ್ಲಿ ಕಣ್ಮುಚ್ಚಿ ನಿದ್ರಿಸುವೆವು" ಹೀಗೆಂದು ಹೊನ್ನಿ ಮನದಲ್ಲೇ ಹಲುಬುತ್ತ ನಿಶ್ಚಯ ಮಾಡಿದಳು.

ಮದುವೆಯ ದಿನ ಮುಂಜಾವದ ಕೋಳಿ ಕೂಗುವ ಮೊದಲೇ ಗುರಿಕಾರನ ಮನೆಯಲ್ಲಿ ಗಜಬಜವಾಯಿತು; ಮದುವೆಯ ಗದ್ದಲ ತೊಡ ಗಿತು. ಎಲ್ಲರೂ ಮದುಮಗಳನ್ನು ಹುಡುಕುವವರೇ. ಮದುಮಗಳು ಮೊಗವನ್ನೇ ತೋರಿಸಳು. ಮದುವೆಯ ಮುಹೂರ್ತವೂ ಬಂತು. ದಿಬ್ಬಣ ಬಂದು ಮನೆಯಂಗಳಕ್ಕೇ ಇಳಿಯಿತು. ಅಯ್ಯೋ! ಮದುಮ ಗಳಿಲ್ಲ! ಕಿರಿಹೆಣ್ಣಲ್ಲವೆ? ನಾಚುತ್ತಾ ಎಲ್ಲಾದರೂ ಅಡಗಿರಬಹುದೆಂದು ಮನೆಯೊಳಗೆ, ಹೊರಗೆ, ಹಿತ್ತಿಲಲ್ಲಿ, ಬಯಲಲ್ಲಿ ಎಲ್ಲಾ ಹುಡುಕಿದರು. ಎಲ್ಲಿ ಹುಡುಕಿದರೂ ಹೊನ್ನಿ ಇಲ್ಲ; ಮದುಮಗಳಿಲ್ಲ.

"ಅಯ್ಯೋ! ಮದುಮಗಳಿಲ್ಲದೆ ಮದುವೆಯೆ! ಎಲೆಲೇ, ವಾದ್ಯ ಊದಬೇಡಿರಿ. ದಿಬ್ಬಣ ಈಗಲೇ ಹಿಂದಿರುಗಲಿ! ಮಗಳು ದೊರೆಕ

ಭೂತಕ್ಕೆ ಹರಕೆ ಹೊರಿಸುವೆ" ಎನ್ನುತ್ತಾ ಮುದುಕ ಗುರಿಕಾರ ಗೋಳಿಟ್ಟ; ಮದುವೆಯ ಮನೆ ಕಳಕಳಿಸಿತು; ಹುಟ್ಟು ಹರಿದ ಜೇನು ಗೂಡಿನಂತೆ ಗಜಬಜಿಸಿತು. ಮುದುಕ ಹೊನ್ನಿಯನ್ನೇ ಗಟ್ಟಿಯಾಗಿ ಕೂಗುತ್ತ "ಹೊನ್ನೀ! ನನ್ನ ಜೀವವೆ! ನನ್ನ ಕಣ್ಣೇ! ಮಗಳೇ! ನಿನಗೆ ಮದುವೆ ಮಾಡುವುದಿಲ್ಲ! ಕಟ್ಟುಕಟ್ಟಳೆ ಎಲ್ಲಾ ಮೀರುವೆನು! ತಿಳಿಯದೆ ನಿಶ್ಚಯ ಮಾಡಿದೆ. ತಂದೆಯ ಮಾತನ್ನು ದೇವ್ವದ ಮಾತೆಂದೇ ಭಾವಿಸಿದ ನೀನು ಮರುನುಡಿಯಲಿಲ್ಲ. ಈ ಕುರುಡನ ಬುದ್ಧಿಯೂ ಕುರುಡಾಗಿ ಹೋಯಿತು. ಮರೆತುಬಿಡದನ್ನು! ಯಾರೇ ಆಗಲಿ, ನಿನ್ನ ಬಗೆ ಮೆಚ್ಚಿದವನಿಗೆ ನಿನ್ನನ್ನು ಧಾರೆಯೆರೆಯುವೆನು." ಎಂದು ಗಟ್ಟಿಯಾಗಿ ಗೋಳಿಟ್ಟನು. ಆಗಲೇ ನೇಸರೂ ಮೇಲೇರಿದನು. ನೆರೆದ ನೆಂಟರೆಲ್ಲಾ ಊರೂರು ಅಲೆದಾಡಿದರು. ಆದರೆ ಎಲ್ಲಿಯೂ ಹೊನ್ನಿ ಕಾಣಸಿಗಲಿಲ್ಲ.

ಅಷ್ಟರಲ್ಲಿ ಅಂಬಿಗನೊಬ್ಬ ನಿಟ್ಟುಸಿರಿಡುತ್ತಾ ಓಡಿಬಂದ. ಬಂದವನೇ ಗುರಿಕಾರನ ಮುಂದೋಡಿ ನುಡಿಯತೊಡಗಿದ. "ಅಯ್ಯಯ್ಯೋ! ಏನೆನ್ನಲಿ ಒಡೆಯ? ಮುಂಜಾವದಲ್ಲಿ ಕಡಲಿಗೆ ಹೋದ ನಮಗೆ ಅದ್ಭುತವೊಂದು ಕಂಡಿತು. ಅದನ್ನು ಹೇಳಲು ನಾಲಗೆಯೇ ಬಾರದು. ನೆರೆಮನೆಯಲ್ಲಿ ನೆಲಸಿದ್ದ ಚೆನ್ನನೊಡನೆ ನಿಮ್ಮ ಚೆಲುವಿನ ಪುತ್ತಳಿ, ಸಿರಿಗಣ್ಣಿನ ಪುತ್ರಿಕೆ ತೆರೆಯಮೇಲಾಡುತ್ತ ನಡೆದಳು. ಆಗ ಆಕೆಯ ಮೊಗದಲ್ಲಿ ಗೆಲವಿದ್ದಿತೋ ಕಂಬನಿಯಿದ್ದುದೋ ಎಂದು ತಿಳಿಯಲಿಲ್ಲ. ಅವರು ಕಡಲಲ್ಲಿ ಮಿಾಯು ವರೋ ಮುಳುಗುವರೋ ಎಂಬುದೂ ಅರಿಯಲಿಲ್ಲ. ನಾವು ಬಲೆಗಣ್ಣಿ ಹೆಣೆಯುತ್ತಿರಲು ಇಬ್ಬರೂ ತೆರೆಯೊಳಗೆ ಧುಮುಕಿದರು. ತೆರೆಗಳು ಹೆಬ್ಬುಲಿಗಳಂತೆ ಅವರ ಮೇಲೇರಿಬಂದುವು. ನಾವು ಕೂಡಲೇ ಕಡಲ ಪಡಕ್ಕೋಡಿದೆವು. ಕಡಲೊಡೆಯನು ಮುನಿದಿದ್ದಾನೆ! ದೋಣಿ ಬಿಡಲಾರ ದಾದೆವು. ಹೇಗೆ ಬಿಡಲೆಂದೇ ಯೋಚಿಸುತ್ತ ನಿಂತೆವು. ಅಷ್ಟರಲ್ಲಿ ಕಂಡು ದೇನು? ಕರಿಗೂದಲು ಸುತ್ತಿದ ತಲೆಯೊಂದು! ತಳತಳಿಸುವ ಹಣೆ ಇನ್ನೊಂದು! ಒಡೆಯರೇ, ನಾವೆಷ್ಟೋ ಮಂದಿಯನ್ನು ಕಡಲಿಂದ ತಂದಿರು ವೆವು. ಇಂದೀಗ ನಾವು ಈ ಸಾವನ್ನು ನೋಡುತ್ತ ಬೆದರಿ ನಿಂತುಬಿಟ್ಟೆವು. ಇಂದೀಗ ಈ ಜೀವಿಗಳನ್ನುಳಿಸಲಾರದೆ ಪಾಪಕಟ್ಟಿಕೊಂಡೆವು." ಅಂಬಿಗನ

ಮಾತುಕೇಳಿ ಕುರುಡ ಗುರಿಕಾರನ ಕಿವಿಯೂ ಕಿವುಡಾಯಿತು; ಆತನ ಕಣ್ಣಾಲಿ ಕಳೆಗೆಟ್ಟುವು! ದೇಹದ ಮಿಡುಕ ನಿಂತು ಆತನ ಜೀವ ಶಾಂತಿಯಲ್ಲಿ ತೇಲಿಹೋಯಿತು! ತನ್ನ ಜೀವದ ಪುತ್ತಳಿಯನ್ನು ಹುಡುಕುವುದಕ್ಕಾಗಿ ಆ ಕುರುಡ ಗುರಿಕಾರನ ಜೀವ ಅದೆಲ್ಲೋ ಮರೆಯಾಯಿತು. ಆ ಮದುವೆಯ ಹಂದರ ಹಸುರಿನಮಂಟಪ ಆ ತಂದೆಮಕ್ಕಳ ಮಸಣದ ಮಾಡವಾಯಿತು.

ದಿನಗಳನೇಕ ಕಳೆದುವು; ವರ್ಷಗಳೂ ಸಂದುವು. ಹೊನ್ನಿಚೆನ್ನರ ಕತೆ ನೆನಹಿನ ನಾಡಿಗೆ ಹರಿಯಿತು; ವಿಧಿ ಅದನ್ನೂ ಇನ್ನು ಕಾಲದ ಪರದೆ ಇಳಿಸಿ ಮರೆಮಾಜುವನು. ಇಂದಿಗೂ ಆ ಕಡಲತಡಿಯಲ್ಲಿ ಒಮ್ಮೊಮ್ಮೆ ಕೂಗು ಕೇಳಿಸುವುದಂತೆ! ಸುಯ್ಯುವಂತೆ, ಹಲುಬುವಂತೆ, ಬಯ್ಯುವಂತೆ ದನಿ ಕೇಳುವುದಂತೆ! ಒಮ್ಮೊಮ್ಮೆ ಇರುಳ ಮುಂಜಾವದ ತಿಂಗಳು ಬೆಳಕಿಗೆ ನೆಳಲಂತೆ ಏನೋ ಕಾಣಿಸುವುದಂತೆ! ಭೂತದ ದಂಪತಿ ಅಲ್ಲಿ ಕುಣಿಯುವುವೆಂದು ಸುದ್ದಿ. ಒಡಲೊಳಗೆ ಜೀವಕುಣಿಯುವಾಗ ನಾವದನ್ನು ನೋಡಲಾರೆವು! ಸತ್ತಮೇಲೆ ಭೂತವಾಗಿ ಕುಣಿಯುವುದನ್ನು ಮಾತ್ರ ಕಾಣುವೆವು! ನಮ್ಮಂತಹ ಗಟ್ಟಿಗರೂ ಇದ್ದಾರೆಯೆ! ಹೊನ್ನಿಚೆನ್ನರ ದೇಹಹಿಡಿದಿದ್ದ ಈ ನೆಲದಲ್ಲಿ ಕಟ್ಟಳೆಕಟ್ಟಿತ್ತು. ಆದರೆ ಪಡುಗಡಲಿನ ತೆರೆಯಾಳದಲ್ಲಿ ಕಟ್ಟುಗಳಾಗಲೀ ಕಟ್ಟಳೆಗಳಾಗಲೀ ಇವೆಯೇ?

ಅಭ್ಯಾಸ

1. ಹೊನ್ನಿಯ ಮದುವೆಯನ್ನು ಬರೆದ ಶ್ರೀ ಕಡೆಂಗೋಡ್ಲು ಶಂಕರಭಟ್ಟರ ಕುರಿತು ನಿಮಗೇನು ತಿಳಿದಿದೆ?
2. ಪಡುಗನ್ನಡ ನಾಡನ್ನು ಬಣ್ಣಿಸಿರಿ.
3. ಗ್ರಾಮದ ಗುರಿಕಾರನಿಗೆ ಅಷ್ಟೊಂದು ಮಹತ್ವವೇಕೆ?
4. ಹೊನ್ನಿ ಚೆನ್ನರಿಗೆ ಪ್ರೀತಿಯುಂಟಾದ ಸಂದರ್ಭವನ್ನು ವಿವರಿಸಿರಿ.
5. ನಾಡುಗರು ಬಂದು ಗುರಿಕಾರನೊಡನೆ ಏನೆಂದರು?
6. ಮದುವೆಯ ಸನ್ನಾಹ ಕಂಡ ಹೊನ್ನಿ ಏನೆಂದು ಹಲುಬಿದಳು?

7. ಮದುವೆಯ ಹಂದರ ಹಸುರಿನ ಮಂಟಪ ಆ ತಂದೆ ಮಕ್ಕಳ ಮಸಣದ ಮಾಡವಾಗಲು ಕಾರಣವೇನು?

8. ಮುಂದಿನ ಪದಗಳಲ್ಲಿ ಸಂಸ್ಕೃತಗಳಿಗೆ ತದ್ಭವಗಳನ್ನೂ, ತದ್ಭವಗಳಿಗೆ ಸಂಸ್ಕೃತಗಳನ್ನೂ ಕೊಡಿರಿ:—ಕೀರ್ತಿ; ಜೋಯಿಸ; ಪುತ್ತಳಿ; ಸಂಜೆ ಜನ್ಮ; ಶೃಂಗಾರ; ಶೋಭನ.

9. ಮುಂದಿನ ವಾಕ್ಯಗಳಲ್ಲಿ ಸಮಾಸಪದಗಳನ್ನು ಹೆಕ್ಕಿ ತೆಗೆದು ಅವುಗಳ ವಿಗ್ರಹ ವಾಕ್ಯ ಬರೆಯಿರಿ:—ಪಡುವಣ ತೀರದ ಕನ್ನಡ ನಾಡಿನಲ್ಲಿ ಮಳೆಗಾಲ ಕಳೆಯಿತು. ಮಳೆ ಕುಂದಿ ನೆರೆಯಿಳಿಯಿತು. ಆಗಸದಲ್ಲಿ ಕರಿಮೋಡಗಳೆಲ್ಲ ಮಾಯವಾಗಿ ಬಿಳಿ ಮೋಡಗಳು ಕಾಣಿಸ ತೊಡಗಿದುವು.

10. ಮುಂದಿನ ಪದಗಳನ್ನು ವಿಂಗಡಿಸಿ ಅವು ಯಾವ ಸಂಧಿಯೆಂದು ಹೇಳಿರಿ:—ತಲೆದೋರು; ಧಾರೆಯೆರೆ; ನೆತ್ತಿಗೇರು; ಗೆಲವಿದ್ದಿತೋ; ಒಮ್ಮೊಮ್ಮೆ; ಕಡಲೊಡೆಯ.

ಹಗೆಯಿಂದ ಹಗೆ ಎಂದಿಗೂ ತೀರದು; ದ್ವೇಷ ಕಳೆವುದು ಅದ್ವೇಷದಿಂದಲೆ—ಇದುವೆ ಸನಾತನ ಧರ್ಮ.

ಹೂಗಳ ಬಣ್ಣವನ್ನೂ ಕಂಪನ್ನೂ ಆರಯ್ಯದೆ ಜೇನೆಯ್ಯನೆ ಹೀರಿ ಹೂವಿಂದ ಹೂವಿಗೆ ಹಾರಾಡುವ ತುಂಬಿಯಂತೆ ಯಾರ ಮನಸ್ಸು ಇಂದ್ರಿಯ ಸಮೂಹದಲ್ಲಿ ಸಿಲುಕದೆ ಮುಂದೆ ಚಲಿಸುವುದೋ ಆತನೇ ನಿಜವಾದ ಜ್ಞಾನಿ.

ಇಚ್ಛೆ, ದ್ವೇಷ, ಭಯ ಮೋಹಗಳಿಂದ ಧರ್ಮವನ್ನು ಮೀರಿ ನಡೆಯುವವನ ಕೀರ್ತಿ ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣವಾಗುವುದು.

ಇಚ್ಛೆ, ದ್ವೇಷ, ಭಯ ಮೋಹಗಳಿಂದ ಧರ್ಮವನ್ನು ಮೀರಿ ನಡೆಯದವನ ಕೀರ್ತಿ ಶುಕ್ಲಪಕ್ಷದ ಚಂದ್ರನಂತೆ ಬೆಳಗುವುದು.

—ಭಗವಾನ್ ಬುದ್ಧದೇವ

---

೮. ಅನ್ನ — ವಸ್ತ್ರ

ಮಾನವನ ಜೀವನಕ್ಕೆ ಅತ್ಯಗತ್ಯವಾದ ವಸ್ತುಗಳು ಎರಡು, ಅನ್ನ-ವಸ್ತ್ರ. ಇವೆರಡಿಲ್ಲವಾದರೆ ಮಾನವನ ಜೀವನ ಸಾಗಲಾರದು. ಮನುಷ್ಯ ಬದುಕಿ ಬಾಳಬೇಕಾದರೆ ಹೊಟ್ಟೆಗೂ ಬಟ್ಟೆಗೂ ಬೇಕು. ಹೊಟ್ಟೆ ಬಟ್ಟೆಗಳು ಮೊದಲು; ಉಳಿದ ವಸ್ತುಗಳೆಲ್ಲ ಮತ್ತೆ. ಹೊಟ್ಟೆ ಬಟ್ಟೆಗಳಿಗಿಲ್ಲದ



ನೇಗಿಲ ಯೋಗಿ

ಬಾಳುವೆ ಬಾಳುವೆಯಲ್ಲ. ಅನ್ನ ವಸ್ತ್ರಗಳಿಗೆ ಕೊರತೆಯುಂಟಾದರೆ ಅಂತಹ ಮನುಷ್ಯನ ಪಾಡು ಹೇಳಿತೀರದು; ನಾಯ ಬಾಳಿಗಿಂತಲೂ ಕೀಳು ಅದು.

ಹಿಂದೆ ನಮ್ಮ ಭಾರತ ಸ್ವತಂತ್ರವಾಗಿದ್ದ ಪ್ರಾಚೀನ ಕಾಲದಲ್ಲಿ ಈ ದೇಶದಲ್ಲಿ ಅನ್ನಕ್ಕಾಗಲೀ ವಸ್ತ್ರಕ್ಕಾಗಲೀ ಯಾವ ತರದ ಕುಂದು ಕೊರತೆಗಳೂ ಬಂದಿರಲಿಲ್ಲ. ಅನ್ನ ವಸ್ತ್ರಗಳೆರಡೂ ನಮ್ಮ ದೇಶಕ್ಕೆ ಸಾಕಾಗಿ ಉಳಿದುದನ್ನು ಪರದೇಶೀಯರು ಕೊಳ್ಳುತ್ತಿದ್ದರು. ನಮ್ಮ ಸ್ವಾತಂತ್ರ್ಯ ನಾಶದೊಂದಿಗೆ ನಮ್ಮ ಅನ್ನ ವಸ್ತ್ರಗಳ ಸಮೃದ್ಧಿಯೂ ನಾಶವಾಯಿತು.

ಸಮೃದ್ಧವಾದ ಭಾರತ ದರಿದ್ರ ಭಾರತವೆನ್ನಿಸಿತು. ಈಗ ಕೆಲ ವರ್ಷಗಳಿಂದಂತೂ ದೇಶದ ಮುಕ್ಕಾಲು ಪಾಲು ಜನ ಅರೆಹೊಟ್ಟೆಯಿಂದ ಅರೆ ಬತ್ತಲೆಯಿಂದ ಬಾಳುವೆ ಸಾಗಿಸುವ ಸ್ಥಿತಿ ಬಂದಿದೆ. ಮೊನ್ನೆಮೊನ್ನೆಯ ವರೆಗೆ ಹೊರನಾಡುಗಳಿಗೆ ಅನ್ನದಾನ ಮಾಡುತ್ತಿದ್ದ ಭಾರತಕ್ಕೆ ಇಂದು ಹೊರಗಿನಿಂದ ಅನ್ನವನ್ನು ಆಯಾತ ಮಾಡಿಕೊಳ್ಳುವ ಸ್ಥಿತಿಯೊದಗಿದೆ. ಅರೆ ಹೊಟ್ಟೆ ಉಣ್ಣುವುದಕ್ಕಾದರೂ ಭಾರತೀಯರು ಪರಕೀಯರ ಮುಖ ನೋಡುವಂತಾಗಿದೆ. ವಿದೇಶೀ ವಸ್ತ್ರಗಳಿಗಾಗಿ ಅರುವತ್ತು ಕೋಟಿಗಳಷ್ಟು ರೂಪಾಯಿಗಳನ್ನು ಚೆಲ್ಲುತ್ತಿದ್ದ ಭಾರತೀಯರು ಅದನ್ನು ಉಳಿಸಿ ಕೊಂಡ ರೆನ್ನುವಷ್ಟರಲ್ಲಿ ಅನ್ನಕ್ಕಾಗಿ ನೂರ ಮೂವತ್ತು ಕೋಟಿ ರೂಪಾಯಿಗಳನ್ನು ತೆರುವ ಸ್ಥಿತಿ ಬಂದೊದಗಿತು. ಈ ವೇಳೆಯಲ್ಲಿ ಈಗ ಭಾರತೀಯರಿಗೆ ಅನ್ನ ದೇವರು ಪ್ರತ್ಯಕ್ಷನಾಗಬೇಕು. ಅದಕ್ಕಾಗಿ ಅನ್ನ ದೇವರ ಪೂಜಾರಿ ಯಾದ ನಮ್ಮ ನೇಗಿಲ ಯೋಗಿಯ ತಪಸ್ಸು ವೃದ್ಧಿಯಾಗಬೇಕು. ಪೂಜ್ಯ ಬಾಪೂಜಿ "ಒಕ್ಕಲತನವು ನಮ್ಮ ಮೊತ್ತ ಮೊದಲನೆಯ ಉದ್ಯೋಗ; ಅದರ ಕಡೆಗೆ ಪ್ರಥಮ ಲಕ್ಷ್ಯ ಕೊಡಬೇಕು" ಎಂದು ಆಗಾಗ ಹೇಳು ತ್ತಿದ್ದರು. ಅನ್ನದ ವಿಷಯದಲ್ಲಿ ಭಾರತೀಯರು ಪರಕೀಯರ ಮುಂದೆ ಕೈನೀಡದಂತಾಗಬೇಕು. ಅದಕ್ಕಾಗಿ ಪ್ರತಿಯೊಬ್ಬ ಭಾರತೀಯನೂ ಭೂಮಿಯ ಸುಧಾರಣೆ, ಬೀಜಗಳ ಆಯ್ಕೆ, ದನಗಳ ಪೀಳಿಗೆಯ ಬೆಳವಣಿಗೆ, ಗೊಬ್ಬರದ ಉತ್ಪನ್ನ ಮೊದಲಾದುವುಗಳ ಕಡೆಗೆ ಹೆಚ್ಚು ಗಮನವೀಯ ಬೇಕು.

ಅನ್ನದ ಕುರಿತು ಹೇಳುವಾಗ 'ಅನ್ನಂ ನ ನಿಂದ್ಯಾತ್' ಎಂಬ ಉಪನಿಷತ್ತಿನ ವಾಕ್ಯ ನಮ್ಮ ನೆನಪಿಗೆ ಬರಬೇಕು. ಉಪನಿಷತ್ತಿನ ಕಾಲದಲ್ಲಿ ನಮ್ಮ ಹಿರಿಯರು ಅನ್ನಕ್ಕೆ ಎಷ್ಟೊಂದು ಬೆಲೆಕೊಡುತ್ತಿದ್ದರೆಂದು ಇದರಿಂದ ತಿಳಿದುಬರುವುದು. ಇಂದು ನಮಗೆ ಅನ್ನದ ಕೊರತೆಯುಂಟಾಗಲು ಮುಖ್ಯವಾಗಿ ಅನ್ನವನ್ನು ಉತ್ಪನ್ನಮಾಡುವ ನಮ್ಮ ಒಕ್ಕಲಿಗರ ಹೀನ ಸ್ಥಿತಿಯೇ ಕಾರಣ. ನಮ್ಮ ಒಕ್ಕಲಿಗರು ಬಡತನ ಅಜ್ಞಾನ ರೋಗರುಜಿ ಗಳಿಂದ ಪಾಡುಪಡುತ್ತಿದ್ದಾರೆ; ಸಾಲದ ಹೊರೆಯಿಂದ ನಮ್ಮ ನೇಗಿಲ ಯೋಗಿಗಳ ಬೆನ್ನೆಲುಬೇ ಬಾಗಿಹೋಗಿದೆ; ಅವರ ಪಾಡು ಹೇಳುವುದಲ್ಲ;

ವಿದ್ಯಾವಂತರೆನ್ನಿಸಿಕೊಂಡವರ ಲಕ್ಷ್ಯ ಕೃಷಿಯ ಕಡೆಗೆ ಹರಿಯುವುದಿಲ್ಲ. ತುಸು ವಿದ್ಯೆಕಲಿತರೆ ಸಾಕು ನಮ್ಮ ಜನ ಪೇಟೆಪಟ್ಟಣಗಳ ಕಡೆಗೆ ಉದ್ಯೋಗವನ್ನರಸುತ್ತ ಓಡತೊಡಗುವರು. ಕೃಷಿಯೆಂದರೆ ಕೀಳುಕೆಲಸ ವೆಂಬ ಭಾವನೆ ನಮ್ಮ ಜನರಲ್ಲಿ ನೆಲಸಿದೆ. ಮೊದಲಾಗಿ ಆ ಭಾವನೆ ಅಳಿಯಬೇಕು. ಸುಶಿಕ್ಷಿತರು ಕೃಷಿಯ ಕೆಲಸಕ್ಕೆ ಕೈಯಿಕ್ಕಿ ನಮ್ಮ ಒಕ್ಕಲಿ ಗರನ್ನೂ ಸುಶಿಕ್ಷಿತರನ್ನಾಗಿ ಮಾಡಬೇಕು. ಒಕ್ಕಲಿಗರನ್ನು ಸುಶಿಕ್ಷಿತರನ್ನಾಗಿ ಮಾಡುವಮೊದಲು ಅವರನ್ನು ಬಡತನ ಅಜ್ಞಾನ ರೋಗರುಜೆ ಸಾಲ ಗಾರಿಕೆಗಳಿಂದ ಪಾರುಗೊಳಿಸಬೇಕು. ಒಕ್ಕಲಿಗರ ಬಾಳಿನ ಮಟ್ಟ ಮೇಲೇ ರದೆ ಅನ್ನ ಹುಟ್ಟಲಾರದು; ಕೃಷಿಸುಧಾರಣೆ ಮುಂತಾದುವು ಮತ್ತಿನ ಕೆಲಸ.

ನಾವಿಂದು ಮಾತಿನ ಮಲ್ಲರಾಗಿದ್ದೇವೆ; 'ಅಧಿಕ ಆಹಾರ ಬೆಳೆಸಿರಿ' ಎಂದು ಮುಂತಾಗಿ ಪ್ರಚಾರಮಾಡುತ್ತೇವೆ; ಉದ್ದುದ್ದವಾಗಿ ಮಾತನಾಡು ತ್ತೇವೆ. ಕೃತಿಯಿಂದ ಯಾರೂ ತೋರಿಸುವುದಿಲ್ಲ. ನಮ್ಮ ಮಾತು ಕಾರ್ಯರೂಪಕ್ಕೆ ಬಂದರೆ ಅನ್ನದ ಕೊರತೆ ನೀಗಬಹುದು. ದೃಷ್ಟಾಂತ ಕ್ಕಾಗಿ ನಾವು ನಮ್ಮ ನಮ್ಮ ಮನೆಗಳ ಮುಂದೆಯೂ ಶಾಲೆಗಳ ಮುಂದೆಯೂ ದೊಡ್ಡದೊಡ್ಡ ಹೂದೋಟಗಳನ್ನು ಮಾಡುತ್ತೇವೆ; ಹೂದೋಟಗಳಿಂದ ನಮಗೆ ಸಿಗುವ ಪ್ರಯೋಜನವೆಂದರೆ ಸೌಂದರ್ಯ ಮತ್ತು ಸುವಾಸನೆ. ನಮ್ಮ ಹೊಟ್ಟೆಗೆ ಅವುಗಳಿಂದೇನೂ ಸಿಗಲಾರದು. ಅದಕ್ಕಾಗಿ ನಾವು ಹೂದೋಟಗಳ ಸ್ಥಳದಲ್ಲಿ ತರಕಾರಿ ತೋಟ ಮಾಡಬೇಕು; ಅಲ್ಪಸ್ವಲ್ಪ ಧಾನ್ಯ ಬೆಳೆಯಿಸಬೇಕು. ಆಗ ನಮ್ಮ ಹೊಟ್ಟೆ ತುಂಬುವುದು. ಹಾಗೆಯೇ ಪ್ರತಿಯೊಬ್ಬ ಭಾರತೀಯನೂ ಅನ್ನ ಹುಟ್ಟಿಸುವ ಕಾರ್ಯದಲ್ಲಿ ತನ್ನಿಂದಾಗು ವಷ್ಟರ ಮಟ್ಟಿಗೆ ಕೆಲಸಮಾಡಿದರೆ ಬೇಗನೆ ನಮ್ಮ ಅನ್ನದ ಕೊರತೆ ಹೋಗ ಬಹುದು. ಅನ್ನದ ವಿಷಯದಲ್ಲಿ ನಮ್ಮ ಸ್ವತಂತ್ರ ಭಾರತ ಎಷ್ಟುಕಾಲ ತಾನೇ ಪರಾವಲಂಬಿಯಾಗಿರಲು ಸಾಧ್ಯ? ಎಷ್ಟು ಕಾಲ ನಾವು ಪರಕೀಯರ ಮುಖನೋಡುತ್ತ ಕುಳಿತಿರಲು ಬರುವುದು?

ಯಾವ ಸ್ವತಂತ್ರ ರಾಷ್ಟ್ರವೂ ತನ್ನ ಜನತೆಯ ಹೊಟ್ಟೆಬಟ್ಟೆಗಳಿಗೆ ಬೇಕಾಗುವಷ್ಟು ಬೆಳೆಯಿಸುವುದಿಲ್ಲವೋ ನೇಯುವುದಿಲ್ಲವೋ ಅದು ಎಂದಿಗೂ ಪ್ರಗತಿಹೊಂದಲಾರದು. ದೇಶದ ಉತ್ಪನ್ನದಲ್ಲಿ ಎಷ್ಟೋ

ಅನ್ನ ವಸ್ತ್ರಗಳಿಗಾಗಿ ಪರಕೀಯರ ಕೈಸೇರಿದರೆ ನಮ್ಮ ಹಣಕಾಸಿನ ಸ್ಥಿತಿ ಮೇಲೇರುವುದೆಂತು? ಆದುದರಿಂದ ದೇಶದ ಉನ್ನತಿಯಾಗಲೀ ಅವನತಿಯಾಗಲೀ ಅನ್ನವನ್ನೇ ಹೊಂದಿಕೊಂಡಿದೆ ಎನ್ನಬಹುದು.

ಅನ್ನದ ಸಮಸ್ಯೆಯಂತೆ ನಮ್ಮ ವಸ್ತ್ರದ ಪ್ರಶ್ನೆಯೂ ಜಟಿಲವಾಗಿದೆ. ಹಿಂದಿನಕಾಲದಲ್ಲಿ ಭಾರತದಿಂದ ಅಪಾರವಾದ ವಸ್ತ್ರ ಪರದೇಶಗಳಿಗೆ ಹೋಗುತ್ತಿತ್ತು. ಭಾರತದ ವಸ್ತ್ರವೆಂದರೆ ಪ್ರಪಂಚದಲ್ಲೆಲ್ಲಾ ಹೆಸರಾಗಿತ್ತು. ಪ್ರಪಂಚಕ್ಕೆ ಬಟ್ಟೆಯುಡಿಸಿ ಭಾರತೀಯರಿಂದು ಅರೆಬತ್ತಲೆ ಅಲೆದಾಡುತ್ತಿದ್ದಾರೆಂದರೆ ಇದಕ್ಕಿಂತ ಹೀನಸ್ಥಿತಿ ಇನ್ನಾವುದಿದೆ? ನಮ್ಮ ಸ್ವಾತಂತ್ರ್ಯದ ನಾಶದೊಂದಿಗೆ ನಮ್ಮ ಬಟ್ಟೆಯ ಕೈಗಾರಿಕೆಯೂ ನಾಶವಾಯಿತು. ಹಾಗೆ ನಾಶವಾದ ನೂತು ನೇಯುವ ಕೆಲಸ ಪೂಜ್ಯಬಾಪೂಜಿಯಿಂದ ಪುನರ್ಜೀವಿತವಾಯಿತು. ಖಾದಿಯ ಕೈಗಾರಿಕೆ ತೊಡಗಿತು. ಭಾರತೀಯರು ಇಂದು ಅನೇಕ ಗಿರಣಿಗಳನ್ನು ನಡೆಸುತ್ತಿರುವರಾದರೂ, ದೇಶದ ಜನತೆಯೆಲ್ಲಾ ಗಿರಣಿಯ ಬಟ್ಟೆಯನ್ನೇ ನಂಬಿಕೊಂಡಿರಲು ಸಾಧ್ಯವಿಲ್ಲ. ನಮ್ಮ ಕೈಮಗ್ಗಗಳು ಹೆಚ್ಚಬೇಕು. ಭಾರತದಲ್ಲಿ ಇಪ್ಪತ್ತು ಲಕ್ಷ ಕೈಮಗ್ಗಗಳಿಂದ ಒಂದು ಕೋಟಿ ಜನರ ಜೀವನ ಸಾಗುತ್ತಿದೆ. ಈಗ ಈ ಕೈಮಗ್ಗಗಳೆಲ್ಲಾ ಗಿರಣಿಯ ನೂಲನ್ನೇ ಉಪಯೋಗಿಸುತ್ತಿವೆ; ಕೈನೂಲನ್ನು ಕೈಬಿಟ್ಟಿದ್ದಾವೆ. ಈ ಮಗ್ಗಗಳೆಲ್ಲಾ ಕೈನೂಲು ನೇಯುವುದನ್ನು ಪ್ರಾರಂಭಿಸಿದರೆ ಇಪ್ಪತ್ತು ಲಕ್ಷವೇಕೆ? ಐವತ್ತು ಲಕ್ಷ ಮಗ್ಗಗಳು ಹಿಂದುಸ್ತಾನದಲ್ಲಿ ನಡೆಯಬಲ್ಲುವು. ಭಾರತದ ಜನತೆಯೆಲ್ಲ ಖಾದಿ ಧರಿಸುವ ನಿರ್ಧಾರ ಮಾಡಿದರೆ, ಹಳ್ಳಿ ಹಳ್ಳಿಗಳಲ್ಲಿ ಮನೆಮನೆಗಳಲ್ಲಿ ಒಂದೊಂದು ಗಿರಣಿಯಾಗಿ ನಮ್ಮ ಜನರ ಅರೆಬತ್ತಲೆಯ ಅವಸ್ಥೆ ಮಾಯವಾಗಿ ಮೈತುಂಬ ವಸ್ತ್ರಧರಿಸುವ ಯೋಗ್ಯತೆ ಬರುವುದರಲ್ಲಿ ಸಂಶಯವಿಲ್ಲ. ಖಾದಿಯನ್ನು ಭಾರತದೊಳಗೆ ಉಪಯೋಗಿಸಿ ನಮ್ಮ ಗಿರಣಿಗಳಲ್ಲಿ ಸಿದ್ಧವಾಗುವ ವಸ್ತ್ರಗಳನ್ನು ಹೊರಗೆ ಕಳುಹಿಸುವ ಸ್ಥಿತಿ ಬರಬೇಕು; ಆಗ ನಮ್ಮ ಹಳ್ಳಿಗಳು ವಸ್ತ್ರಸ್ವಾವಲಂಬಿಗಳಾಗಿ ಭಾರತದ ಜನವೆಲ್ಲ ಬಟ್ಟೆಗಾಗಿ ಗಿರಣಿಗಳನ್ನೇ ನಂಬಿಕೊಂಡಿರುವ ಸ್ಥಿತಿ ತಪ್ಪುವುದು. ನಮ್ಮ ಗಿರಣಿ ಬಟ್ಟೆಯನ್ನು ಹೊರದೇಶಗಳಿಗೆ ನಿರ್ಯಾತಮಾಡಿ, ಇತರ ಆವಶ್ಯಕ ಯಂತ್ರಗಳನ್ನೂ ವಸ್ತುಗಳನ್ನೂ

ನಾವಲ್ಲಿಂದ ಪಡಕೊಳ್ಳಬಹುದು. ನಮ್ಮ ಅನ್ನದ ಉತ್ಪನ್ನ ಹೆಚ್ಚಿಸುವುದಕ್ಕಾಗಿ ಕೃಷಿಗೆ ಸಂಬಂಧಿಸಿದ ಅನೇಕ ತರದ ಯಂತ್ರಗಳು ನಮಗೆ ಬೇಕಾಗಿವೆ. ಬಟ್ಟೆಯಿಂದ ಹುಟ್ಟುವ ಹಣದಿಂದ ನಾವವನ್ನು ಪರದೇಶಗಳಿಂದ ತರಿಸಿಕೊಳ್ಳಬಹುದು. ಆಗ ಎರಡೆರಡು ಕಾರ್ಯಗಳನ್ನೂ ನಾವು ಒಮ್ಮೆಯೇ ಸಾಧಿಸಿದಂತಾಗುತ್ತದೆ. ಖಾದಿಯ ಗುಡಿಕೈಗಾರಿಕೆ ಅಭಿವೃದ್ಧಿಯಾಗಿ ನಮ್ಮ ಜನತೆ ವಸ್ತ್ರಸ್ವಾವಲಂಬಿಯಾಗುವುದು.

ನಮ್ಮ ಗುಡಿಕೈಗಾರಿಕೆಯಲ್ಲಿ ಖಾದಿಯ-ಕೈಮಗ್ಗದ-ಸ್ಥಾನ ಪ್ರಾಮುಖ್ಯವಾದುದು. ಖಾದಿಯೆಂದರೆ ಎಲ್ಲಾ ಗುಡಿಕೈಗಾರಿಕೆಗಳ ನಡುವೆ ಗ್ರಹಮಂಡಲದಲ್ಲಿ ಸೂರ್ಯನಿದ್ದಂತೆ ಎಂದಿದ್ದಾರೆ ಬಾಪೂಜಿ. ನಮ್ಮ ಹಳ್ಳಿಹಳ್ಳಿಗಳಲ್ಲಿ ಖಾದಿಯ ಕೈಗಾರಿಕೆ ಹರಡಿದರೆ ಒಕ್ಕಲಿಗರಿಗೆ ಎರಡು ಉದ್ಯೋಗ ದೊರಕಿದಂತಾಗುವುದು. ಹೊಲಗದ್ದೆಗಳಲ್ಲಿ ಕೆಲಸವಿಲ್ಲದಾಗ ನಮ್ಮ ಒಕ್ಕಲಿಗರು ಸಮಯವನ್ನು ವ್ಯರ್ಥವಾಗಿ ಕಳೆಯುವರು. ಅವರು ನೂಲು ನೇಯುವ ಉದ್ಯೋಗ ಕೈಕೊಂಡರೆ ಅನ್ನವಸ್ತ್ರ ಎರಡನ್ನೂ ಸಾಧಿಸಿದಂತಾಗುತ್ತದೆ; ವ್ಯರ್ಥವಾಗುವ ಸಮಯವೂ ಸಫಲವಾಗುವುದು.

ರಾಷ್ಟ್ರದ ಪ್ರಗತಿಯೆಂದರೆ ಹಳ್ಳಿಗಳ ಪ್ರಗತಿ. ಹಳ್ಳಿಗಳು ಪ್ರಗತಿಯ ದಾರಿ ಹಿಡಿದರೆ ರಾಷ್ಟ್ರವೂ ಪ್ರಗತಿ ಹೊಂದುವುದು. ಭಾರತದ ಜೀವಾಳವೆಂದರೆ ಹಳ್ಳಿಗಳು. ಆದುದರಿಂದಲೇ ಬಾಪೂಜಿ ಆಗಾಗ ಸುಶಿಕ್ಷಿತ ಜನರಿಗೆ "ನೀವೆಲ್ಲ ಹಳ್ಳಿಗಳಿಗೆ ನಡೆಯಿರಿ; ಹಳ್ಳಿಗಳ ಏಳಿಗೆ ಸಾಧಿಸಿರಿ; ಅದೇ ಸ್ವರಾಜ್ಯ ಸಂಪಾದನೆಯ ದಾರಿ" ಎಂದು ಹೇಳುತ್ತಿದ್ದರು. ನಮಗೆ ದೊರೆತ ಸ್ವಾತಂತ್ರ್ಯ ಸ್ಥಿರವಾಗಿ ಉಳಿಯಬೇಕಾದರೆ, ಸಾರ್ಥಕವಾಗಿ ಸಫಲವಾಗಬೇಕಾದರೆ ಮೊದಲಾಗಿ ನಾವು ನಮ್ಮ ಅನ್ನ ವಸ್ತ್ರಗಳ ಹುಟ್ಟುವಳಿ ಹೆಚ್ಚಿಸಬೇಕು. ಅನ್ನ ವಸ್ತ್ರಗಳ ಕೊರತೆ ನೀಗಿದರೆ—ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಭಾರತೀಯರಿಗೆಲ್ಲ ದೊರೆತರೆ—ನಾವು ಗಳಿಸಿದ ಸ್ವಾತಂತ್ರ್ಯ ಸ್ಥಿರವಾಗುವುದು; ಸಾರ್ಥಕವಾಗುವುದು; ಸಫಲವಾಗುವುದು. ಬಾಪೂಜಿ ಕಂಡ ರಾಮ ರಾಜ್ಯದ ಕನಸು ನೆನಸಾಗುವುದು.

ಇಂದೀಗ ಸಾಗುತ್ತಿರುವ ಪಡಿಪದ್ಧತಿಯಂತೆ ನಾವು ಎಷ್ಟುಕಾಲ ಅನ್ನ ಹಂಚಿಕೊಂಡು ಬಾಳುವೆ ಸಾಗಿಸಲು ಸಾಧ್ಯ? ಅರೆಹೊಟ್ಟೆ, ಉ...

ಅರೆಬತ್ತಲೆ ಅಲೆದಾಡುವ ಜನತೆಯಿಂದ ಯಾವ ಮಹತ್ಕಾರ್ಯ ಸಾಧಿಸಲ್ಪಡಬೇಕು? ಹೊಟ್ಟೆ ಬಟ್ಟೆಗಳಿಗೆ ಸರಿಯಾಗಿಲ್ಲದ ಮುಂದಿನ ಜನಾಂಗವಾದ ಇಂದಿನ ಮಕ್ಕಳ ಶಾರೀರಿಕ ಬೌದ್ಧಿಕ ಬೆಳವಣಿಗೆ ಎಂತಾಗಬೇಕು? ಹೊಟ್ಟೆಗಿದ್ದರಲ್ಲವೆ ಉಳಿದ ಕೆಲಸಗಳು? ಹೊಟ್ಟೆಗೇ ಸರಿಯಾಗಿಲ್ಲವಾದರೆ ಯಾವ ಕೆಲಸವಾದರೂ ಸಾಗುವ ಬಗೆ ಹೇಗೆ? ಅನ್ನ ವಸ್ತ್ರಗಳ ಅಭಾವ ನಮ್ಮ ದೇಶದ ಉನ್ನತಿಯ ಮಾರ್ಗದಲ್ಲಿ ಅತಿದೊಡ್ಡ ಕಂಟಕಗಳಾಗಿವೆ. ಈ ಎರಡು ಕಂಟಕಗಳನ್ನು ಕಿತ್ತೊಗೆಯುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಅನ್ನವಸ್ತ್ರಗಳೆರಡು ಸಾಕಷ್ಟು ಉತ್ಪನ್ನವಾಗುವ ತನಕ ಪ್ರತಿಯೊಬ್ಬ ಭಾರತೀಯನೂ ಅದಕ್ಕಾಗಿ ಸೊಂಟಕಟ್ಟಬೇಕು. ಬಡವಬಲ್ಲಿದ ಕೀಳು ಮೇಲು ಎಂಬ ಅಂತರವಿಲ್ಲದೆ, ಶಿಕ್ಷಕರು, ವರ್ತಕರು, ಸರಕಾರದ ಅಧಿಕಾರಿಗಳು, ಸೈನಿಕರು, ವೈಜ್ಞಾನಿಕರು, ಔದ್ಯೋಗಿಕ ಕೆಲಸಗಾರರು ಎಂದು ಮುಂತಾದ ಭೇದಗಳಿಲ್ಲದೆ ಅಧಿಕ ಅನ್ನ ಬೆಳೆಸುವ ಕಾರ್ಯದಲ್ಲಿ ಸಕಲರೂ ಸಹಕರಿಸಬೇಕು. ಸಹಕರಿಸಬೇಕೆಂದರೆ ಇವರೆಲ್ಲ ತಂತಮ್ಮ ಕಾರ್ಯಬಿಟ್ಟು ಅನ್ನವಸ್ತ್ರಗಳ ಉತ್ಪನ್ನಕ್ಕಾಗಿಯೇ ದುಡಿಯಬೇಕೆಂದು ಅರ್ಥವಲ್ಲ. ಪ್ರತಿಯೊಬ್ಬ ಪ್ರಜೆಯೂ ತನ್ನ ಬಿಡುವಿನ ವೇಳೆಯಲ್ಲಿ ಅನ್ನ ವಸ್ತ್ರಗಳ ಸಮಸ್ಯೆ ಬಗೆಹರಿಸಲು ತನ್ನಿಂದಾದ ಸಹಕಾರ ನೀಡಬೇಕು. ವಿದ್ಯಾವಂತರಾದವರೂ ವಿದ್ಯಾರ್ಥಿಗಳೂ ಆಗಾಗ ಹಳ್ಳಿಗಳನ್ನು ಸಂದರ್ಶಿಸಿ ತಾವು ಕೀಳ್ಮಟ್ಟದವರೆಂದು ಇನ್ನೂ ಇನ್ನೂ ಅವನತಿಯ ದಾರಿಯನ್ನೇ ತುಳಿಯುತ್ತಿರುವ ಒಕ್ಕಲಿಗರನ್ನು ಮೇಲೆತ್ತಲು, ಅವರನ್ನು ಶಿಕ್ಷಿತರನ್ನಾಗಿ ಮಾಡಲು ಪ್ರಯತ್ನಿಸಬೇಕು. ಮುಖ್ಯವಾಗಿ ನಮ್ಮ ಒಕ್ಕಲಿಗರಲ್ಲಿ ತಾವೂ ನಾಡಿನ ಪ್ರಜೆಗಳು. ತಾವು ಮೇಲೇರದಿದ್ದರೆ ತಮ್ಮ ನಾಡೂ ಮೇಲೇರಲಾರದು. ದೇಶದ ಆಗು ಹೋಗು ನಮ್ಮನ್ನು ಹೊಂದಿಕೊಂಡಿದೆ ಎಂಬ ಭಾವನೆ ತಲೆದೋರಬೇಕು. ಹೀಗೆ ನಮ್ಮ ನೇಗಿಲಯೋಗಿಗಳ ಬಾಗಿದ ಬೆನ್ನೆಲುಬು ನೆಟ್ಟಗಾದರೆ ಅನ್ನವಸ್ತ್ರಗಳ ಸಮಸ್ಯೆ ತಾನಾಗಿಯೇ ತೀರುವುದು. ಭಾರತ ಅರೆಹೊಟ್ಟೆಯ ಅರೆಬತ್ತಲೆಯ ಪರದೇಶ ಎಂಬ ಅಪನಾಮ ನೀಗುವುದು; ಸ್ವತಂತ್ರ ಭಾರತ ಅಶೋಕ ಭಾರತವಾಗಿ ಸುಖಸಮೃದ್ಧವಾಗಿ [illegible]ವುದು.

ಅಭ್ಯಾಸ

1. ಎಂತಹ ಮನುಷ್ಯನ ಬಾಳು ನಾಯಬಾಳಿಗಿಂತಲೂ ಕೀಳು?

2. ಅನ್ನದ ಕೊರತೆ ನೀಗಿಸಲು ನಾವು ಯಾವ ಉಪಾಯಗಳನ್ನು ಕೈಕೊಳ್ಳಬಹುದು?

3. ದೇಶದ ಉನ್ನತಿ ಅವನತಿಗಳು ಅನ್ನವನ್ನೇ ಹೊಂದಿಕೊಂಡಿವೆ ಎಂಬುದೇಕೆ?

4. ನಮ್ಮ ಜನತೆ ವಸ್ತ್ರಸ್ವಾವಲಂಬಿಯಾಗುವ ಅಗತ್ಯವೇನು?

5. ಬಾಪೂಜಿ ಕಂಡ ರಾಮರಾಜ್ಯದ ಕನಸು ನೆನಸಾಗಬೇಕಾದರೆ ನಾವು ಏನುಮಾಡಬೇಕು?

6. ಮುಂದಿನ ವಾಕ್ಯಗಳಲ್ಲಿ ತಪ್ಪಾದ ಭಾಗವನ್ನು ಸರಿಗೊಳಿಸಿ ಬರೆಯಿರಿ:— ಹಿಂದೆ ನಮ್ಮ ಭಾರತ ಸ್ವಾತಂತ್ರ್ಯವಾಗಿದ್ದ ಅರ್ವಾಚೀನ ಕಾಲದಲ್ಲಿ ಈ ದೇಶವು ಅನ್ನಕ್ಕಾಗಲೀ ವಸ್ತ್ರಕ್ಕಾಗಲೀ ಯಾವ ಕಂದು ಕೊರತೆಗಳೂ ಬಂದಿದ್ದುವು ಅನ್ನವಸ್ತ್ರಗಳೆರಡೂ ನಮ್ಮ ದೇಶಕ್ಕೆ ಸಾಕಾಗದೆ ಉಳಿದುದನ್ನು ಪರದೇಶಿಯರು ಕೊಳ್ಳುತಿರಲಿಲ್ಲ. ನಮ್ಮ ಸ್ವಾತಂತ್ರ್ಯದೊಂದಿಗೆ ಅನ್ನ ವಸ್ತ್ರದ ಅಭಿವೃದ್ಧಿಯೂ ಬೆಳೆಯಿತು.


7. ಮುಂಡೆ ಕೊಡುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಕೊಡಿರಿ:— ಸ್ವಾತಂತ್ರ್ಯ, ಪ್ರಾಚೀನ, ವಿದೇಶೀ, ಪರಕೀಯ, ಮಹತ್ಕಾರ್ಯ, ಅಂತರ, ಸಫಲ, ಉದ್ಯೋಗಿ.

8. ಮುಂದಿನ ಮಾತುಗಳಿಂದ ಒಂದೊಂದು ವಾಕ್ಯಮಾಡಿರಿ:— ಹೊಟ್ಟೆಬಟ್ಟೆ; ಕುಂದುಕೊರತೆ, ಮೇಲುಕೀಳು. ಸಫಲವಾಗು, ಸುರಕ್ಷಿತ.

---

೯. ಕನ್ನಡದ ಹಳೆಯ ಹಿರಿಮೆ

ಕನ್ನಡದ ಹಳೆಯ ಹಿರಿಮೆ ಎಂಬುದು ಇಂದು ಇತಿಹಾಸದ ಮಾತಾಗಿದೆ. ಕನ್ನಡದ ವೀರ ಬಂಟರು ಇಂದು ಬರಿಬಂಟರಾಗಿದ್ದಾರೆ. ಕನ್ನಡಿಗರು ಇಂದು ಹರಿಹಂಚಾಗಿ ಹಲವು ಹದಿನೆಂಟು ಆಡಳಿತೆಗಳಿಗೆ ಒಳಗಾಗಿದ್ದಾರೆ. ಇಷ್ಟಾದರೂ ಭಾರತ ರಾಷ್ಟ್ರದಲ್ಲಿ ಕನ್ನಡರು ತಲೆಎತ್ತದೆ ಇಲ್ಲ.



ಪುಲಿಕೇಶಿಯ ಹಿರಿಯೋಲಗ

ಒಂದು ಸಾವಿರ ವರ್ಷಗಳ ಹಿಂದೆ ಕಾವೇರಿಯಿಂದ ಗೋದಾವರೀ ತೀರದ ವರೆಗೆ ಹರಡಿದ್ದ ಕನ್ನಡ ನಾಡು ಇಂದು ಗೋದಾವರಿ ತೀರವನ್ನು ಬಿಟ್ಟಿದೆ. ಕಾವೇರಿಯಿಂದ ತುಸು ದಕ್ಷಿಣಕ್ಕೆ ಮಾತ್ರ ಹರಡಿದೆ. ಇಂದಿನ ಕರ್ನಾಟಕವು ಸುಮಾರು ಒಂದು ಲಕ್ಷ ಚದರ ಮೈಲು ವಿಸ್ತಾರವಿದ್ದು ಎರಡು ಕೋಟಿ ಜನಸಂಖ್ಯೆಯುಳ್ಳದಾಗಿದೆ. ಮದ್ರಾಸು ಪ್ರಾಂತಕ್ಕೆ ಸೇರಿದ [illegible] ದಕ್ಷಿಣ ಕನ್ನಡ ಜಿಲ್ಲೆಗಳೂ, ಅನಂತಪುರ, ಕಾಲ್ಯ, ಕೊಯ

ಮುತ್ತೂರು, ನೀಲಗಿರಿ, ಮಲೆಯಾಳ ಜಿಲ್ಲೆಗಳ ಕೆಲವು ತಾಲೂಕುಗಳೂ, ಮುಂಬಾಯಿ ಪ್ರಾಂತದ ಉತ್ತರ ಕನ್ನಡ, ಧಾರವಾಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳೂ, ಶೋಲಾಪುರ, ಕೊಲ್ಲಾಪುರ, ಜಿಲ್ಲೆಗಳ ಭಾಗಗಳೂ, ಹೈದರಾಬಾದಿನ ರಾಯಚೂರು, ಕಲಬುರಗಿ, ಬೀದರ ಜಿಲ್ಲೆಗಳೂ, ಮೈಸೂರೂ ಸೇರಿದರೆ ಇಂದಿನ ಕರ್ಣಾಟಕವಾಗುವುದು.

ಇಂದಿನ ಕನ್ನಡನಾಡು ಪಶ್ಚಿಮದಲ್ಲಿ ಸುಮಾರು ಮುನ್ನೂರು ಮೈಲು ದೂರದಷ್ಟು ಸಮುದ್ರ ಕರಾವಳಿಯಿಂದಲೂ, ಕೃಷ್ಣಾ, ಕಾವೇರಿ, ತುಂಗ ಭದ್ರಾ ಮೊದಲಾದ ನದಿಗಳಿಂದಲೂ, ಪಶ್ಚಿಮ ಘಟ್ಟಗಳಿಂದಲೂ, ದಕ್ಷಿಣದ ಪೀಠ ಭೂಮಿಯಿಂದಲೂ, ಗೆರಸೊಪ್ಪೆ, ಶಿವಸಮುದ್ರ ಮೊದಲಾದ ಜಲ ಪಾತಗಳಿಂದಲೂ, ನೀಲಗಿರಿ, ಬ್ರಹ್ಮಗಿರಿ, ಸಹ್ಯಾದ್ರಿ, ಕುಟಜಾದ್ರಿ ಮೊದ ಲಾದ ಪರ್ವತ ಶಿಖರಗಳಿಂದಲೂ, ವನಪಂಕ್ತಿಯಿಂದಲೂ, ಕೂಡಿ ಪ್ರಾಕೃ ತಿಕ ಸೌಂದರ್ಯದಿಂದ ತುಂಬಿ ತುಳುಕುತ್ತಿದೆ. ಕರ್ಣಾಟಕದ ಪಶ್ಚಿಮ ಭಾಗದಲ್ಲಿ ಮತ್ತು ಮೈಸೂರಿನಲ್ಲಿ ತುಂಬಾ ಮಳೆಯೂ, ಬಳ್ಳಾರಿಯ ಭಾಗ ದಲ್ಲಿ ಕಡಿಮೆ ಮಳೆಯೂ, ಸುರಿಯುವುದರಿಂದ ಉಷ್ಣ ಪ್ರದೇಶವೂ, ತಂಪು ಪ್ರದೇಶವೂ ಕನ್ನಡದಲ್ಲಿ ಸಮಾವೇಶವಾಗಿವೆ. ಫಲವತ್ತಾದ ಕನ್ನಡದ ಮಣ್ಣಿನಲ್ಲಿ ಅಕ್ಕಿ, ರಾಗಿ, ಜೋಳ, ಗೋದಿ ಮೊದಲಾದ ಆಹಾರ ಧಾನ್ಯ ಗಳೂ, ತೆಂಗು, ಕಂಗು, ಮಾವು, ಹಲಸು, ಕಿತ್ತಳೆ ಮೊದಲಾದ ಫಲವೃಕ್ಷ ಗಳೂ, ಕಡಲೆ, ನೆಲಕಡಲೆ ಮೊದಲಾದ ದ್ವಿದಳ ಧಾನ್ಯಗಳೂ, ಕಾಫಿ, ಟೀ, ಸಿಂಕೋನ, ಏಲಕ್ಕಿ ಮೊದಲಾದುವೂ ಸಮೃದ್ಧಿಯಾಗಿ ಬೆಳೆಯುತ್ತವೆ. ಇವಲ್ಲದೆ ಹತ್ತಿ ಕಬ್ಬು ಮೊದಲಾದ ಇನ್ನೆಷ್ಟೋ ಬೆಳೆಗಳು ಕರ್ನಾಟಕದ ಬೆಳೆಗಳಾಗಿವೆ. ಪಶ್ಚಿಮ ಘಟ್ಟದ ಕಾಡುಗಳಲ್ಲಿ ಉತ್ತಮವಾದ ಮರಗಳು ಬೆಳೆಯುತ್ತವೆ. ಬಂಗಾರ, ಕಬ್ಬಿಣ, ಲೋಹಮಂಡೂರ ಮೊದಲಾದ ಖನಿಜಗಳೂ, ಕಟ್ಟಡಗಳಿಗೆ ಬೇಕಾದ ಕರಿಕಲ್ಲು, ಮುರಕಲ್ಲು ಮುಂತಾದ ಕಲ್ಲುಗಳೂ, ಹಂಚು ಇಟ್ಟಿಗೆಗಳ ತಯಾರಿಕೆಗೆ ಬೇಕಾದ ಆವೆಮಣ್ಣೂ, ಕನ್ನಡ ನಾಡಿನ ಸಂಪತ್ತುಗಳಾಗಿವೆ. ಕನ್ನಡ ನಾಡಿನಲ್ಲಿ ಗೋಕರ್ಣ, ಭಾಗಮಂಡಲ, ತಲೆಕಾವೇರಿ, ಶೃಂಗೇರಿ, ಉಡುಪಿ, ಹರಿಹರ, ಮೇಲು ಕೋಟೆ, ನಂಜನಗೂಡು, ಕೂಡಲಸಂಗಮ, ಶ್ರವಣಬೆಳಗೊಳ, ಪ[illegible]

ಬಿದರೆ, ಶ್ರೀರಂಗ ಮೊದಲಾದ ಪುಣ್ಯಕ್ಷೇತ್ರಗಳು ಭಾರತದ ಎಲ್ಲಾ ಪ್ರಾಂತ ಗಳ ಯಾತ್ರಿಕರನ್ನೂ ತಮ್ಮೆಡೆಗೆ ಸೆಳೆಯುತ್ತವೆ.


ಕನ್ನಡನಾಡಿನ ಮತ್ತು ಕನ್ನಡ ಜನರ ಚರಿತ್ರೆಯೇನೂ ಇಂದು ನಿನ್ನೆಯದಲ್ಲ. ಪುರಾಣಕಾಲದಿಂದಲೂ ಬೆಳೆದು ಬಂದ ಇತಿಹಾಸವಿದೆ ನಮ್ಮ ಕನ್ನಡಕ್ಕೆ. ಪುರಾಣಕಾಲದಲ್ಲಿ ನಮ್ಮ ಕನ್ನಡದ ನೆಲವನ್ನು



ವಿಜಯನಗರದ ಪದ್ಮಮಹಲು

ಕುಂತಲ, ವನವಾಸಿ, ಮಹಿಷಮಂಡಲ ಮುಂತಾದ ಹೆಸರುಗಳಿಂದ ಕರೆಯು ತ್ತಿದ್ದರು. ರಾಮಾಯಣದ ಕಾಲದಲ್ಲಿ ಕನ್ನಡನಾಡಿನ ಕಿಷ್ಕಿಂಧೆಯನ್ನು ವಾನರಜನಾಂಗದ ಅಧಿಪತಿಯಾದ ವಾಲಿ ಆಳುತಿದ್ದನು. ಅಂತೆಯೇ ಕರ್ಣಾಟಕದ ಪಶ್ಚಿಮ ತೀರವು ಲಂಕಾಧಿಪತಿ ರಾವಣನ ಅಧೀನದಲ್ಲಿದ್ದಿತು. ಅಯೋಧ್ಯೆಯ ರಾಮನು ಬಡಗುನಾಡಿನಿಂದ ಕನ್ನಡದ ತೆಂಕು ನಾಡಿಗೆ ಬಂದು, ಕನ್ನಡದ ಬೀರಬಂಟ ಹನುಮಂತನ ಸಹಾಯದಿಂದ ವಾನರ ಸೈನ್ಯ ಕೊಂಡೊಯ್ದು ರಾವಣನನ್ನು ಸೋಲಿಸಿದನು. ಮುಂದೆ ಮಹಾ ಭಾರತದ ಕಾಲದಲ್ಲಿ ಪಾಂಡವರು ತಮ್ಮ ಅಜ್ಞಾತವಾಸವನ್ನು ಕಳೆಯು

ವುದಕ್ಕಾಗಿ ಕನ್ನಡನಾಡಿಗೇ ಬಂದರು; ಕನ್ನಡದ ಅಂದಿನ ಅರಸು ವಿರಾಟ ನಲ್ಲಿ ಅಜ್ಞಾತವಾಸ ಕಳೆದರು. ವಿರಾಟನು ಭಾರತ ಯುದ್ಧದಲ್ಲಿ ನೆರವಾದನು. ಇದು ಸುಮಾರು ಐದು ಸಾವಿರ ವರ್ಷಗಳ ಹಿಂದಿನ ಕನ್ನಡದ ಸಂಗತಿ.



ಅಜಂತೆಯ ಕೆತ್ತನೆ

ಎರಡೂವರೆ ಸಾವಿರ ವರ್ಷಗಳ ಮೊದಲು ಉತ್ತರ ಭಾರತದಲ್ಲಿ ಬುದ್ಧದೇವನೂ ಮಹಾವೀರ ಸ್ವಾಮಿಯೂ ಅವತರಿಸಿದರು. ಆ ಕಾಲದಲ್ಲಿ ಬೌದ್ಧರೂ ಜೈನರೂ ಕರ್ಣಾಟಕಕ್ಕೆ ಬಂದರು. ಪ್ರಿಯದರ್ಶಿ ಅಶೋಕನು ಕನ್ನಡದ ಬನವಸೆ ಮಹಿಷ ಮಂಡಲಗಳಿಗೆ ಬೌದ್ಧ ಭಿಕ್ಷುಗಳನ್ನು ಧರ್ಮ ಪ್ರಚಾರಕ್ಕಾಗಿ ಕಳುಹಿಸಿದನು. ಚಂದ್ರಗುಪ್ತನ ಕಾಲದಲ್ಲಿ ಜೈನಯತಿಗಳು ಕರ್ಣಾಟಕಕ್ಕೆ ಬಂದು ಶ್ರವಣಬೆಳಗೊಳದಲ್ಲಿ ನೆಲೆನಿಂದರು. ಈ ಬೌದ್ಧರೂ ಜೈನರೂ ಅಹಿಂಸಾತತ್ವವನ್ನು ಕನ್ನಡದ ಜನತೆಯಲ್ಲಿ ಹರಡಿದರು. ಜೈನರೇ ಕನ್ನಡದ ಮೊದಲ ಗ್ರಂಥಕರ್ತರಾಗಿ ಕನ್ನಡ ಸಾಹಿತ್ಯ ಬೆಳೆಸಿದರು.

ಬುದ್ಧ ಮಹಾವೀರರ ಅನಂತರ ಎರಡು ಸಾವಿರ ವರ್ಷಗಳ

ಕನ್ನಡ ನಾಡನ್ನು ಹಲವಾರು ಅರಸೊತ್ತಿಗೆಗಳು ಆಳಿದುವು. ಇವರಲ್ಲಿ ಮೊದಲನೆಯವರು ಕದಂಬರು. ಕದಂಬರು ಬನವಸೆ ನಾಡಿನಲ್ಲಿ ರಾಜ್ಯವಾಳುತ್ತಿದ್ದರು. ಬನವಸೆಯ ಮಧುಕೇಶ್ವರ ದೇವರು ಕದಂಬರಾಜರ ಕುಲದೈವ. ಕದಂಬ ಕುಲದಲ್ಲಿ ಮುಕ್ಕಣ್ಣ ಕಾದಂಬ ಮುಂತಾದ ಹಲವರು ಹೆಸರಾಂತ ಅರಸರು ಆಳಿದರು. ಹೆಚ್ಚು ಕಡಿಮೆ ಕದಂಬರ ಕಾಲದಲ್ಲಿ ಪಡುಕನ್ನಡನಾಡು ಗ್ರೀಸ್ ಮೊದಲಾದ ಪಶ್ಚಿಮ ದೇಶಗಳೊಡನೆ ವ್ಯಾಪಾರ ನಡೆಯಿಸುತ್ತಿತ್ತು. ಕ್ರಿ.ಶ. ಎರಡನೆಯ ಶತಮಾನದ ಗ್ರೀಕ್ ಪ್ರಹಸನವೊಂದರಲ್ಲಿ ಕನ್ನಡದ ಹಲವಾರು ಮಾತುಗಳು ಬೆರೆದಿರುವುದೇ ಇದಕ್ಕೆ ಸಾಕ್ಷಿ. ಆ ಕಾಲದಲ್ಲಿ ಬಾರಕೂರು ಪ್ರಾಂತದ ಹಡಗುಗಳು ಕಡಲಲ್ಲಿ ಹಾಯಿಬಿಟ್ಟು ಹೊರನಾಡುಗಳಿಗೆ ಸಾಗುತ್ತಿದ್ದುವು. ಆ ಕಾಲದ ಕನ್ನಡ ನುಡಿ ಅಭಿವೃದ್ಧಿ ಸ್ಥಿತಿಯಲ್ಲಿದ್ದು ಗ್ರಂಥರಚನೆಯಾಗಿರಬೇಕು. ಆದರೆ ಅಂದಿನ ಗ್ರಂಥಗಳೊಂದೂ ದೊರಕಿರುವುದಿಲ್ಲ. ಶಾಸನಗಳು ಅನೇಕ ದೊರಕಿವೆ. ಕದಂಬರ ಕಾಲ ಕ್ರಿ. ಶ. ಐದನೆಯ ಶತಮಾನಕ್ಕೆ ಕೊನೆಗೊಂಡಿತು.

ಐದರಿಂದ ಹತ್ತನೆಯ ಶತಮಾನದ ವರೆಗಿನ ಐನೂರು ವರ್ಷಗಳ ಕಾಲದಲ್ಲಿ ಕನ್ನಡ ನಾಡನ್ನು ಬಾದಾಮಿಯ ಚಾಲುಕ್ಯರೂ, ಮಾನ್ಯಖೇಟದ ರಾಷ್ಟ್ರಕೂಟರೂ ಬಹಳ ವೈಭವದಿಂದ ಆಳಿದರು. ಬಾದಾಮಿಯ ಚಾಲುಕ್ಯರಿಗೆ ಪಶ್ಚಿಮದ ಚಾಲುಕ್ಯರೆಂಬ ಹೆಸರೂ ಇದೆ. ಪಶ್ಚಿಮದ ಚಾಲುಕ್ಯರು ಕರ್ಣಾಟಕವನ್ನಾಕ್ರಮಿಸಲು ಬಂದ ಕಂಚಿಯ ಪಲ್ಲವರನ್ನು ಹಿಂದಕ್ಕೋಡಿಸಿದರು. ಬಾದಾಮಿ ಇವರ ರಾಜಧಾನಿ. ಈ ಚಾಲುಕ್ಯರ ಕಾಲದಲ್ಲಿ ಕನ್ನಡ ಶಿಲ್ಪಕಲೆ ಅಭಿವೃದ್ಧಿಯನ್ನೈದಿತು. ಬಾದಾಮಿಯ ಕಲ್ಮನೆಗಳೂ, ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯವೂ ಇವರ ಶಿಲ್ಪಕಲಾಪ್ರೇಮದ ಪ್ರತೀಕಗಳಾಗಿವೆ. ಪಶ್ಚಿಮದ ಚಾಲುಕ್ಯರ ಎರಡನೆಯ ಪುಲಿಕೇಶಿಯು ಉತ್ತರದ ಹರ್ಷವರ್ಧನನ್ನು ನರ್ಮದಾತೀರದ ಕಾಳೆಗದಲ್ಲಿ ಹಿಮ್ಮೆಟ್ಟಿಸಿದನು. ಈ ಪುಲಿಕೇಶಿಯು ಈರಾನಿನ ರಾಯಭಾರಿಗೆ ಭೇಟಿಕೊಡುವ ಒಂದು ಚಿತ್ರ ಇಂದಿಗೂ ಅಜಂತೆಯ ಚಿತ್ರಾಗಾರದಲ್ಲಿ ಅಚ್ಚಳಿಯದೆ ಉಳಿದಿದೆ. ಕನ್ನಡರು ವೀರರೆಂದೂ, ಕೊಟ್ಟಮಾತಿಗೆ ತಪ್ಪುವವರಲ್ಲ

ವೆಂದು ಆ ಕಾಲದಲ್ಲಿ ಕನ್ನಡ ನಾಡಿನಲ್ಲಿ ಪ್ರವಾಸಮಾಡಿದ ಚೀನದ ಹ್ಯೂವೆನ್ ತ್ಸಾಂಗನು ಬರೆದಿದ್ದಾನೆ. ಪಶ್ಚಿಮದ ಚಾಲುಕ್ಯರ ಕಡೆಗಾಲದಲ್ಲಿ ರಾಷ್ಟ್ರಕೂಟರು ತಲೆಯೆತ್ತಿದರು. ರಾಷ್ಟ್ರಕೂಟ ಕುಲದ ಗೋವಿಂದ ರಾಜನು ಪ್ರತಿವಾದಿ ಭಯಂಕರನೆಂದು ಹೆಸರಾಂತನು. ಇವನು ಗುರ್ಜರ ಮಾಳವರನ್ನು ಸದೆಬಡಿದನು. ಗೋವಿಂದ ರಾಜನ ಅನಂತರ ಈ ಕುಲದಲ್ಲಿ ನೃಪತುಂಗನು ರಾಜನೂ ವಿದ್ವಾಂಸನೂ ಆಗಿದ್ದು ಅರವತ್ತು ವರ್ಷಗಳ ಕಾಲ ಕನ್ನಡನಾಡನ್ನು ಸುವ್ಯವಸ್ಥಿತವಾಗಿ ಆಳಿದನು. ಕನ್ನಡದಲ್ಲಿ ಇಂದಿನ ವರೆಗೆ ದೊರಕಿರುವ ಗ್ರಂಥಗಳಲ್ಲಿ ಮೊತ್ತ ಮೊದಲನೆಯದಾದ 'ಕವಿರಾಜ ಮಾರ್ಗ'ವನ್ನು ರಚಿಸಿ ಕನ್ನಡ ನಾಡುನುಡಿಗಳ, ಕನ್ನಡ ಜನರ ಕೀರ್ತಿ ಗೌರವಗಳನ್ನು ಹೆಚ್ಚಿಸಿದವನು ನೃಪತುಂಗನು. ಇವನ ಕಾಲದಲ್ಲಿ ಕನ್ನಡ ನಾಡಿನಲ್ಲಿ ಹಲವಾರು ಮಂದಿ ವಿದ್ವಾಂಸರಿದ್ದರು. ಮುಂದೆ ಇದೇ ರಾಷ್ಟ್ರ ಕೂಟ ವಂಶದ ಕೃಷ್ಣನು ವೇರೂಳಿನ ಸುಪ್ರಸಿದ್ಧ ಕೈಲಾಸಮಂದಿರವನ್ನು ಒಂದೇ ಕಲ್ಲಿನಲ್ಲಿ ಕೊರೆಯಿಸಿದನು; ಕನ್ನಡದ ಮಹಾಕವಿ ಪೊನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನಿತ್ತನು. ಇವನು ತೆಂಕಣ ಲಂಕೆಯ ತನಕವೂ ದಿಗ್ವಿಜಯ ಸಾಧಿಸಿದನು. ರಾಷ್ಟ್ರಕೂಟರ ಕಾಲದಲ್ಲಿ ಕೇರಳದಲ್ಲಿ ಜನಿಸಿದ ಶ್ರೀ ಶಂಕರಾಚಾರ್ಯರು ನೂತನ ಹಿಂದೂ ಧರ್ಮವನ್ನು ಪ್ರಚಾರ ಮಾಡಿ ಕರ್ಣಾಟಕದ ಶೃಂಗೇರಿ ಕೊಲ್ಲೂರುಗಳಲ್ಲಿ ಮಠ ದೇವಾಲಯಗಳನ್ನು ಸ್ಥಾಪಿಸಿದರು. ಈ ಕಾಲದಲ್ಲಿ ಕನ್ನಡದ ಜೈನ ಬ್ರಾಹ್ಮಣ ಧರ್ಮಗಳೆರಡೂ ಅತ್ಯುತ್ತಮ ಸ್ಥಿತಿಯಲ್ಲಿದ್ದವು; ವಿದ್ಯಾಮಂದಿರಗಳು ಮೆರೆಯುತ್ತಿದ್ದವು.

ರಾಷ್ಟ್ರಕೂಟರ ಕಡೆಗಾಲದಲ್ಲಿ ಪೂರ್ವದ ಚಾಲುಕ್ಯರು ತಲೆಯೆತ್ತಿದರು. ಪೂರ್ವದ ಚಾಲುಕ್ಯ ಕುಲದ ಅರಿಕೇಸರಿಯ ಆಸ್ಥಾನದಲ್ಲಿದ್ದು ನಾಡೋಜ ಪಂಪನು ಪಂಪಭಾರತ ಆದಿಪುರಾಣಗಳನ್ನು ರಚಿಸಿದನು; ಕನ್ನಡದಲ್ಲಿ ಮೊದಲ ಕಾವ್ಯ ಬರೆದು ಕನ್ನಡಕ್ಕೆ ವಾಲ್ಮೀಕಿಯೆನ್ನಿಸಿದನು. ಇದೇ ಚಾಲುಕ್ಯವಂಶದ ವಿಕ್ರಮಾದಿತ್ಯನು ಅಖಂಡ ದಕ್ಷಿಣಾ ಪಥವನ್ನು ಗೆದ್ದು, ಚಕ್ರವರ್ತಿ ಎನ್ನಿಸಿಕೊಂಡು ತನ್ನದೇ ಆದ ವಿಕ್ರಮ ಶಕವ[illegible] ಪ್ರಾರಂಭಿಸಿ ಶಕಪುರುಷನಾದನು. ಇವನ ಆಸ್ಥಾನದಲ್ಲಿದ್ದ ಬಿ[illegible]

ಕವಿಯು 'ವಿಕ್ರಮಾಂಕದೇವ ಚರಿತ'ವೆಂಬ ಅಮೋಘವಾದ ಸಂಸ್ಕೃತ ಕಾವ್ಯವನ್ನು ರಚಿಸಿದನು. ಇದೇ ಕಾಲದಲ್ಲಿ ಕರ್ಣಾಟಕದ ಇನ್ನೊಂದು ಭಾಗವನ್ನಾಳುತ್ತಿದ್ದ ಗಂಗರಾಜನ ಮಂತ್ರಿಯಾಗಿದ್ದ ಚಾವುಂಡರಾಯನು ಶ್ರವಣಬೆಳಗೊಳದ ಗೋಮಟ ಮಹಾವಿಗ್ರವನ್ನು ಪ್ರತಿಷ್ಠಾಪಿಸಿದನು. ಇವನು ಗ್ರಂಥ ಕರ್ತೃವಾಗಿದ್ದು 'ತ್ರಿಷಷ್ಠಿ ಶಲಾಕಾ ಪುರುಷಪುರಾಣ'ವೆಂಬ ಗದ್ಯ ಗ್ರಂಥವನ್ನು ಬರೆದನು. ಪೂರ್ವದ ಚಾಲುಕ್ಯರ ಕಾಲದಲ್ಲಿ ವಿಜ್ಞಾನೇಶ್ವರ ಮೊದಲಾದ ಪ್ರಸಿದ್ಧ ವಿದ್ವಾಂಸರೂ, ರನ್ನ ಮುಂತಾದ ಹೆಸರಾದ ಕವಿಗಳೂ ಮೆರೆದು ಬಾಳಿದರು. ಕನ್ನಡ ಸಾಹಿತ್ಯವು ದಿನದಿಂದ ದಿನಕ್ಕೆ ಪ್ರವರ್ಧಿಸುತ್ತಿತ್ತು. ಪೂರ್ವದ ಚಾಲುಕ್ಯರ ಪ್ರತಾಪವು ಹನ್ನೊಂದನೆಯ ಶತಮಾನದ ಕಡೆಯ ತನಕವೂ ಮೆರೆಯಿತು. ಆ ಕಾಲದಲ್ಲಿ ಕರ್ಣಾಟಕವು ಸುಖಸಂಪತ್ತುಗಳಲ್ಲಿ ಓಲಾಡಿತು. ಕನ್ನಡಿಗರು ಸುಸಂಸ್ಕೃತ ಜನಾಂಗವೆನ್ನಿಸಿ ಪರರಾಷ್ಟ್ರಗಳೊಳಗೂ ಕೀರ್ತಿ ಹರಡಿಸಿ ಮೆರೆದರು.

ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ ಕನ್ನಡ ನಾಡನ್ನು ಕಲಚೂರ್ಯರೂ, ಯಾದವರೂ, ಹೊಯ್ಸಳರೂ ಆಳಿದರು. ಕಲಚೂರ್ಯ ರಾಜನಾದ ಬಿಜ್ಜಳನ ಆಸ್ಥಾನದಲ್ಲಿ ಬಸವೇಶ್ವರರು ಮಂತ್ರಿಯಾಗಿದ್ದರು. ಬಸವೇಶ್ವರರು ವೀರಶೈವ ಮತವನ್ನು ಪ್ರಚಾರಮಾಡಿ ಜಾತಿಭೇದಗಳನ್ನು ಕಳೆದು ಶಿವನನ್ನು ಪ್ರೀತಿಸುವವರೆಲ್ಲರೂ ಸಮಾನರು, ಕಾಯಕವೆ ಕೈಲಾಸ ಎಂದು ಮುಂತಾಗಿ ಬೋಧಿಸಿ ಪವಾಡ ಪುರುಷರಾಗಿ ಮೆರೆದರು. ದೇವಗಿರಿಯ ಯಾದವ ವಂಶದಲ್ಲಿ ಶಂಕರದೇವನೂ, ಆನೆಗೊಂದಿಯಲ್ಲಿ ಕುಮಾರರಾಮನೂ ಕನ್ನಡದ ಬೀರಬಂಟರಾಗಿ ಹೆಸರುಗೊಂಡರು. ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ ಕರ್ಣಾಟಕವನ್ನು ಆಳಿದ ಹೊಯ್ಸಳ ಮನೆತನದ ವಿಷ್ಣುವರ್ಧನನು ಮೊದಲು ಜೈನನಾಗಿದ್ದು ಆ ಮೇಲೆ ರಾಮಾನುಜಾಚಾರ್ಯರಿಂದ ವೈಷ್ಣವ ಮತವನ್ನು ಸ್ವೀಕರಿಸಿದನು. ವಿಷ್ಣುವರ್ಧನನು ವೈಷ್ಣವನಾಗಿದ್ದರೂ ಆತನ ಪತ್ನಿ ಶಾಂತಲಾದೇವಿ ಜಿನಭಕ್ತಿಪರಾಯಣೆಯೇ ಆಗಿದ್ದಳು. ಇವಳು ಶ್ರವಣಬೆಳಗೊಳದಲ್ಲಿ ಬಸದಿಗಳನ್ನು ಕಟ್ಟಿಸಿದಳು. ವಿಷ್ಣುವರ್ಧನನು ಕಟ್ಟಿಸಿದ ಬೇಲೂರಿನ ಚೆನ್ನಕೇಶವ ದೇವಾಲಯವು ಶಿಲ್ಪಕಲಾ ದೃಷ್ಟಿಯಿಂದ ಬಲು

ಸೊಗಸಾದುದಾಗಿದೆ. ಈ ಶತಮಾನಗಳಲ್ಲಿ ರಾಘವಾಂಕ, ಹರಿಹರ ಮೊದಲಾದ ವೀರಶೈವ ಕವಿಗಳು ಜನಿಸಿ ಕಾವ್ಯರಚನೆಮಾಡಿದರು. ಜಗನ್ನಾಥ ವಿಜಯದ ಕ್ರರ್ತೃವಾದ ರುದ್ರಭಟ್ಟನೂ ಇದೇ ಕಾಲದವನು. ಇತ್ತ ಉಡುಪಿಯಲ್ಲಿ ಮಧ್ವಾಚಾರ್ಯರು, ಅತ್ತ ರಾಮಾನುಜಾಚಾರ್ಯರು, ಇನ್ನೊಂದೆಡೆ ಬಸವೇಶ್ವರರು—ಹೀಗೆ ಈ ಕಾಲವು ವೈಷ್ಣವ ಶೈವಧರ್ಮಗಳ ಉತ್ಕರ್ಷ ಕಾಲವಾಗಿ ಬೆಳಗಿತು.

ಹದಿನಾಲ್ಕು, ಹದಿನೈದು ಮತ್ತು ಹದಿನಾರನೆಯ ಶತಮಾನದ ಅರ್ಧಭಾಗದ ವರೆಗಿನ ಇನ್ನೂರೈವತ್ತು ವರ್ಷಗಳ ಕಾಲದ ಕರ್ಣಾಟಕವನ್ನು ವಿಜಯನಗರದ ಮೂರು ರಾಜ ಕುಟುಂಬಗಳು ಬಹು ವೈಭವದಿಂದ ಆಳಿದುವು. ವೇದಗಳ ಭಾಷ್ಯಕರ್ತರೂ ಶೃಂಗೇರಿ ಮಠಾಧೀಶರೂ ಆದ ವಿದ್ಯಾರಣ್ಯ ಮಹರ್ಷಿಗಳು ಹುಕ್ಕಬುಕ್ಕರೆಂಬ ರಾಜಕುಮಾರರ ಸಹಾಯದಿಂದ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆಮಾಡಿದರು. ವಿಜಯನಗರದಲ್ಲಿ ಆಳಿದ ಮೊದಲನೆಯ ರಾಜಮನೆತನಕ್ಕೆ ಸಂಗಮವಂಶವೆಂದು ಹೆಸರು; ಎರಡನೆಯದು ಸಾಳುವವಂಶ; ಮೂರನೆಯದು ತುಳುವವಂಶ. ವಿಜಯನಗರ ಸಾಮ್ರಾಜ್ಯವನ್ನು ವೈಭವದಿಂದ ಮೆರೆಯಿಸಿದ ಈ ಮೂರು ವಂಶಗಳಲ್ಲಿ ಹುಕ್ಕ, ಬುಕ್ಕ, ಪ್ರೌಢದೇವರಾಯ, ಸಾಳುವ ನರಸಿಂಹ, ಕೃಷ್ಣದೇವರಾಯ ಮುಂತಾದವರು ಜಗತ್ಪ್ರಸಿದ್ಧರಾದರು. ವಿಜಯನಗರ ಸಾಮ್ರಾಜ್ಯವು ಕನ್ನಡಿಗರ ಕೀರ್ತಿಯನ್ನು ಲೋಕದಲ್ಲೆಲ್ಲಾ ಹರಡಿಸಿತು. ಕಡೆಗೆ ಹದಿನಾರನೆಯ ಶತಮಾನದ ಮಧ್ಯಭಾಗದಲ್ಲಿ ರಾಮರಾಜನ ಕಾಲದಲ್ಲಿ ಬಿಜಾಪುರ ಗೋಲ್ಕೊಂಡಗಳ ಸುಲ್ತಾನರೊಡನೆ ಕಾದಾಡಿ ವಿಜಯನಗರ ಸಾಮ್ರಾಜ್ಯ ನಾಶಹೊಂದಿತು. ಈ ಮಹಾಸಾಮ್ರಾಜ್ಯದ ಇನ್ನೂರೈವತ್ತು ವರ್ಷಗಳ ಕಾಲದಲ್ಲಿ ಪರದೇಶದ ಪ್ರವಾಸಿಗಳನೇಕರು ಕನ್ನಡನಾಡಿಗೆ ಬಂದು ಇಲ್ಲಿನ ವೈಭವಸಂಪತ್ತುಗಳನ್ನು ಕಣ್ಣಾರೆಕಂಡು ಮನವಾರೆ ಹೊಗಳಿದರು. ಆ ಕಾಲದಲ್ಲಿ ಮಂಗಳೂರು ವಿಜಯನಗರದ ಹೊರದೇಶದ ವ್ಯಾಪಾರಕೆ ಬಂದರಾಗಿತ್ತು. ಈ ಸಾಮ್ರಾಜ್ಯದ ಕಾಲದಲ್ಲಿ ಕುಮಾರವ್ಯಾಸ, ಲಕ್ಕಿ ನರಹರಿ ಮೊದಲಾದ ಬ್ರಾಹ್ಮಣ ಕವಿಗಳೂ, ಚಾಮರಸ ಹರಿಹರ

ವೀರಶೈವ ಕವಿಗಳೂ, ರತ್ನಾಕರಸಿದ್ಧ ಮೊದಲಾದ ಜೈನಕವಿಗಳೂ ಕೃತಿ ರಚನೆಮಾಡಿ ಕನ್ನಡ ಸಾಹಿತ್ಯವನ್ನು ಬೆಳೆಯಿಸಿ ಬೆಳಗಿದರು. ವಿಜಯ ನಗರದ ಕಾಲದಲ್ಲಿ ಕನ್ನಡ, ತೆಲುಗು, ಸಂಸ್ಕೃತ ಸಾಹಿತ್ಯಗಳು ಘನತೆ ಗೇರಿದುವು. ಗಂಗಾದೇವಿ ಮೊದಲಾದ ಸ್ತ್ರೀಯರು ಅಂದು ಕಾವ್ಯ ರಚನೆ ಮಾಡಿದರು. ವಿಜಯನಗರದ ವಿರೂಪಾಕ್ಷ ದೇವಾಲಯ, ರಾಮಸ್ವಾಮಿ ದೇವಾಲಯ, ಗಜಶಾಲೆ ಮೊದಲಾದುವು ಆ ಕಾಲದ ಶಿಲ್ಪಕಲೆಯ ವೈಭವ ವನ್ನು ಸೂಚಿಸುತ್ತವೆ. ವಿಜಯನಗರದ ನಾಶದ ಅನಂತರ ಟಿಪ್ಪುಸುಲ್ತಾನನ ಕಾಲದ ವರೆಗೆ ಕನ್ನಡ ನಾಡನ್ನು ಅನೇಕಮಂದಿ ತುಂಡರಸರು ಆಳಿದರು. ಇವರಲ್ಲಿ ಬಿಜಾಪುರದ ಶಾಹರೂ, ಇಕ್ಕೇರಿಯ ನಾಯಕರೂ, ಮೈಸೂರಿನ ಒಡೆಯರೂ, ಹೈದರಾಲಿ ಟಿಪ್ಪುಸುಲ್ತಾನರೂ ಪ್ರಸಿದ್ಧರಾಗಿದ್ದಾರೆ. ವಿಜಯ ನಗರದ ಅಂತ್ಯದಲ್ಲಿ ಪೋರ್ಚುಗೀಸರೇ ಮುಂತಾದ ವಿದೇಶೀ ವ್ಯಾಪಾರಿ ಗಳು ಕನ್ನಡದ ಪಡುವಣ ತೀರದ ಮಂಗಳೂರು ಕುಂದಾಪುರ ಮೊದಲಾ ದೆಡೆಗಳಲ್ಲಿ ಭಂಡಸಾಲೆಗಳನ್ನು ತೆರೆದು ವ್ಯಾಪಾರಕ್ಕೆ ತೊಡಗಿದರು. ವಿಜಯ ನಗರದ ನಾಶದಿಂದ ಛಿನ್ನಭಿನ್ನವಾದ ಕನ್ನಡ ನಾಡು ಮೆಲ್ಲಮೆಲ್ಲನೆ ತನ್ನ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾ ಬಂತು. ಕಡೆಗೆ ಇಂದಿಗೆ ನೂರೈವತ್ತು ವರ್ಷಗಳ ಮೊದಲು ಸಂಪೂರ್ಣ ಕನ್ನಡನಾಡು ಇಂಗ್ಲೀಷರ ಅಧೀನವಾ ಯಿತು. ಹಿಂದಿನ ಎರಡುಸಾವಿರ ವರ್ಷಗಳನ್ನು ನೋಡಿದರೆ ಹಳೆಯ ಕನ್ನಡದ ಇತಿಹಾಸವು ಅತ್ಯಂತ ಉಜ್ವಲವಾಗಿ ಕಾಣುತ್ತದೆ. ಕನ್ನಡಿಗರು ಬುದ್ಧಿಶಕ್ತಿ, ದೇಹಶಕ್ತಿಗಳಲ್ಲಿ, ದಾನಧರ್ಮ ಪರೋಪಕಾರಗಳಲ್ಲಿಯೂ ಪ್ರಸಿದ್ಧರಾಗಿದ್ದರೆಂದು ತಿಳಿದುಬರುತ್ತದೆ.

ಇಂದಿನ ಕನ್ನಡನಾಡು ಒಂದೇ ಒಂದು ಆಡಳಿತೆಯ ಕೆಳಗೆ ಬಂದರೆ ಕರ್ಣಾಟಕದ ವಿದ್ಯೆ ಸಂಪತ್ತುಗಳು ಅಭಿವೃದ್ಧಿಗೊಂಡು ಕನ್ನಡನಾಡು ತನ್ನ ಹಳೆಯ ಹಿರಿಮೆಯನ್ನು, ಪ್ರಾಚೀನ ವೈಭವವನ್ನು ಪುನಃ ಪಡೆಯು ವುದರಲ್ಲಿ ಯಾವ ಸಂದೇಹವೂ ಇರಲಾರದು. ಆ ಒಂದಾಗುವ ದಿನವೂ ಸಮಿಪಿಸುತ್ತಿದೆ.

ಅಭ್ಯಾಸ

1. ಹಿಂದಿನ ಮತ್ತು ಇಂದಿನ ಕರ್ಣಾಟಕಗಳ ವಿಸ್ತಾರವೇನು?

2. ಕನ್ನಡದ ಪ್ರಾಕೃತಿಕ ಸಂಪತ್ತನ್ನು ವಿವರಿಸಿರಿ.

3. ಪೌರಾಣಿಕ ಕಾಲದಲ್ಲಿ ಕನ್ನಡನಾಡನ್ನು ಯಾರು ಯಾರು ಆಳಿದರು?

4. ಕದಂಬರ ಕಾಲದ ಕನ್ನಡನಾಡು ಹೇಗಿದ್ದಿತು?

5. ಪೂರ್ವದ ಚಾಲುಕ್ಯರ ಕಾಲದಲ್ಲಿ ಕನ್ನಡ ಸಾಹಿತ್ಯದ ಪರಿಸ್ಥಿತಿ ಯೇನು?

6. ವಿಜಯನಗರದ ಕಾಲದ ಕನ್ನಡ ನಾಡನ್ನು ಬಣ್ಣಿಸಿರಿ.

7. ಮುಂದಿನ ವಾಕ್ಯಗಳಲ್ಲಿ ಬಿಟ್ಟುಹೋದ ಪದಗಳನ್ನು ಸೇರಿಸಿರಿ:— ಹನ್ನೆರಡು ಹದಿಮೂರನೆಯ — — ನಾಡನ್ನು ಕಲಚೂರ್ಯ — — ಆಳಿದರು. — ರಾಜನಾದ — ಬಿಜ್ಜಳನ ಆಸ್ಥಾನದಲ್ಲಿ — ಮಂತ್ರಿಯಾಗಿದ್ದರು. — ವೀರಶೈವ — — ಜಾತಿಭೇದಗಳನ್ನು — — ಪ್ರೀತಿಸುವವರೆಲ್ಲರೂ — .

8. ಮುಂದಿನ ವಾಕ್ಯಗಳಲ್ಲಿ ತಪ್ಪಾಗಿರುವ ವಿಭಕ್ತಿ ಪ್ರತ್ಯಯಗಳನ್ನು ಸರಿಗೊಳಿಸಿ ಬರೆಯಿರಿ:—ವಿಜಯನಗರ ಸಾಮ್ರಾಜ್ಯಕ್ಕೆ ಕನ್ನಡಿಗರಿಂದ ಕೀರ್ತಿಯಲ್ಲಿ ಲೋಕದಲ್ಲೆಲ್ಲಾ ಹರಡಿತು. ಕಡೆಗೆ ಹದಿನಾರನೆಯ ಶತಮಾನವು ಮಧ್ಯಭಾಗಕ್ಕೆ ರಾಮರಾಜನ ಕಾಲವನ್ನು ಬಿಜಾಪುರ ಗೋಲ್ಕೊಂಡಗಳಿಂದ ಸುಲ್ತಾನರೊಡನೆ ಕಾದಾಡಿ ವಿಜಯನಗರ ಸಾಮ್ರಾಜ್ಯ ನಾಶ ಹೊಂದಿತು.


9. ಮುಂದಿನ ಪದಗಳಿಗೆ ಲಘುಟಿಪ್ಪಣಿ ಕೊಡಿರಿ:—ಶಿವಸಮುದ್ರ; ನೃಪತುಂಗ; ಪಂಪ; ಬಸವೇಶ್ವರ; ವಿಷ್ಣುವರ್ಧನ.

10. ಕವಿ, ರಾಜ, ಅರಸು,—ಈ ಮಾತುಗಳ ಸ್ತ್ರೀಲಿಂಗ ರೂಪಗಳಾವುವು?

---

೧೦. ಸುಮೇರದ ಸೊಲೊಮನ್

ಇಂದಿನಂತೆ ನಾಲ್ಕೈದು ಸಾವಿರ ವರ್ಷಗಳ ಮೊದಲು ಲೋಕದ ಎಲ್ಲಾ ಪ್ರದೇಶಗಳ ಜನರೂ ನಾಗರಿಕರಾಗಿರಲಿಲ್ಲ. ಆಗ ಲೋಕದ ಜನತೆಯಲ್ಲಿ ಅಧಿಕಾಂಶ ಅನಾಗರಿಕವಾಗಿತ್ತು. ಅಲ್ಲೊಂದು ಇಲ್ಲೊಂದು



ಸುಮೇರರ ಪ್ರಾರ್ಥನೆಯ ಕಟ್ಟೆ

ಎಂಬಂತೆ ಬೆರಳೆಣಿಕೆಯ ಕೆಲವು ಪ್ರದೇಶಗಳಲ್ಲಿ ಅಂದಿನ ಜನ ನಾಗರಿಕರಾಗಿ ರಾಜ್ಯ ಕಟ್ಟಿ ನಗರ ರಚಿಸಿ ಸಂಸ್ಕೃತಿ ಕಲಾಕೌಶಲಗಳನ್ನು ಬೆಳೆಯಿಸಿದರು. ಉತ್ತರ ಆಫ್ರಿಕದ ಈಜಿಪ್ಟ್, ಟೈಗ್ರಿಸ್ ಯುಫ್ರೆಟಿಸ್ ನದಿಗಳ ಮಧ್ಯಪ್ರದೇಶ ಸುಮೇರು ಅಥವಾ ಮೆಸಪೊಟೇಮಿಯಾ, ಚೀನದ ಹಳದಿ ನದಿಯ ದಡ, ಭಾರತದ ಸಿಂಧು ನದಿಯ ತೀರದ ಮೊಹೆಂಜೊದಾರೊ—ಇವು ಆ ಹಿಂದಿನ ಹಳೆಯ ಕಾಲದಲ್ಲಿ ನಾಗರಿಕ ಜನತೆ ನೆಲಸಿ, ರಾಜ್ಯ ಕಟ್ಟಿ, ನಗರ ರಚಿಸಿ [illegible]ವೆ ಸಾಗಿಸಿದ ಕೆಲವೇ ಪ್ರದೇಶಗಳಾಗಿವೆ. ಸುಮೇರು ಅಥವಾ ಮೆಸ[illegible]ಯಾ ಮತ್ತು ಮೊಹೆಂಜೊದಾರೊ—ಇವುಗಳ ಸಂಸ್ಕೃತಿಯಲ್ಲಿ

ಪರಸ್ಪರ ಸಮಾನತೆ ತುಂಬಾ ಕಂಡುಬರುತ್ತಿದೆ. ಈ ಎರಡು ಊರುಗಳೊಳಗೆ ಹಡಗುಗಳ ಮೂಲಕ ವ್ಯಾಪಾರವ್ಯವಹಾರ ಸಾಗುತ್ತಿತ್ತು. ಇಲ್ಲಿನ ಜನ ಅಲ್ಲಿಗೂ ಅಲ್ಲಿನ ಜನ ಇಲ್ಲಿಗೂ ಸದಾ ಬಂದು ಹೋಗುತ್ತಿದ್ದು ಪರಸ್ಪರ ಪರಿಚಯು ಗೆಳೆತನ ಬೆಳೆದಿತ್ತು.

ಸೊಲೊಮನ್ ಸುಮೇರದ ಒಬ್ಬ ಹುಡುಗ; ನಾಲ್ಕು ಸಾವಿರ ವರ್ಷಗಳ ಹಿಂದಿನ ಬಾಲಕ. ಆತನ ತಂದೆ ಅಲ್ಲಿ ವರ್ತಕ. ಅನೇಕ ಹಡಗುಗಳು ಅವನಿಗಿದ್ದುವು. ಆ ವರ್ತಕ ಆಗಾಗ ಮೊಹೆಂಜೊದಾರೊ ನಗರಕ್ಕೆ ವ್ಯಾಪಾರಕ್ಕಾಗಿ ಬರುತ್ತಿದ್ದ. ತಂದೆಯೊಂದಿಗೆ ಸೊಲೊಮನ್ನನೂ ಆಗಾಗ ಬರುತ್ತಿದ್ದ. ಹೀಗೆ ಆ ವರ್ತಕ ಮೊಹೆಂಜೊದಾರೊ ನಗರಕ್ಕೆ ಬಂದಾಗಲೆಲ್ಲ ಅಲ್ಲಿನ ಮಡಕೆ ಕುಡಿಕೆಗಳ ವ್ಯಾಪಾರಿಯೊಬ್ಬನ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದ. ಇದರಿಂದಾಗಿ ತಂದೆಯೊಂದಿಗೆ ಬರುತ್ತಿದ್ದ ಸೊಲೊಮನ್ನನಿಗೂ ಮೊಹೆಂಜೊದಾರೊದ ಮಡಕೆ ವ್ಯಾಪಾರಿಯ ಮಕ್ಕಳಿಗೂ ಗೆಳೆತನ ಬೆಳೆದು ಹೋಗಿತ್ತು. ಸೊಲೊಮನ್ ಸುಮೇರುವಿನವನಾದರೂ ಆಗಾಗ ಮೊಹೆಂಜೊದಾರೊವಿಗೆ ಬಂದು ಹೋಗುತ್ತಿದ್ದುದರಿಂದ ಇಲ್ಲಿನ ಭಾಷೆ ಕೂಡಾ ಅವನಿಗೆ ಬರುತ್ತಿತ್ತು. ಮಡಕೆ ಕುಡಿಕೆಯು ವ್ಯಾಪಾರಿಯು ಮಕ್ಕಳು ಮಾಯೆ ತಿಂಗೋಳರಿಗೆ ಸೊಲೊಮನ್ ಬಂದ ದಿನ ಅದೊಂದು ಹಬ್ಬವೇ. ಸೊಲೊಮನ್ ಅವರಿಗೆ ಸುಮೇರದ ತಿಂಡಿ ತರುತ್ತಾನೆ; ಆಟದ ಸಾಮಾನು ತರುತ್ತಾನೆ; ತನ್ನ ಊರಿನ ಕತೆ ಹೇಳುತ್ತಾನೆ. ಅದರಿಂದ ಮಕ್ಕಳಿಗೆ ಸೊಲೊಮನ್ ಎಂದರಾಯಿತು. ಅಷ್ಟು ಪ್ರೀತಿ, ಸ್ನೇಹ.

ಸೊಲೊಮನ್ ಮೊಹೆಂಜೊದಾರೊ ನಗರಕ್ಕೆ ಮಾತ್ರ ಹೋಗುತ್ತಿದ್ದುದಲ್ಲ. ತನ್ನ ತಂದೆಯು ಹಡಗ ಹೋಗುವ ಈಜಿಪ್ಟಿಗೂ ಆತ ಹೋಗುತ್ತಿದ್ದ. ಅಲ್ಲಿನ ಕತೆಗಳೂ ಸಂಗತಿಗಳೂ ಅವನಿಗೆ ತಿಳಿದಿದ್ದುವು. ಸೊಲೊಮನ್ ಯಾವಾಗಲೂ ದೇಶ ಸಂಚಾರ ಮಾಡುತ್ತಿದ್ದುದರಿಂದ ಅವನಿಗೆ ತಿಳಿಯದ ಸಂಗತಿ ಇರಲಿಲ್ಲ, ತಂದೆಯೂ ಅವನನ್ನು ವಿವಿಧ ನಗರಗಳಿಗೆ ಕರೆದೊಯ್ಯುತ್ತಿದ್ದ. ಅದೊಮ್ಮೆ ಮೊಹೆಂಜೊದಾರೊ ನಗರಕ್ಕೆ ಬಂ[illegible] ಸೊಲೊಮನ್ ಹದಿನೈದು ದಿನಗಳ ವರೆಗೂ ಆ ಮಡಕೆ ವ್ಯಾಪಾ[illegible] ಮನೆಯಲ್ಲಿಯೆ ಇಳಿದಿದ್ದ. ಆಗ ಅವನಿಗೆ ಮಾಯೆಗೂ ತಿ[illegible]

ಕತೆ ಹೇಳುವುದೇ ಕೆಲಸ. ಒಮ್ಮೊಮ್ಮೆ ಆ ಮಕ್ಕಳೊಳಗೆ ತುಂಬಾ ಚರ್ಚೆಯೂ ಆಗುತ್ತಿತ್ತು. ತನ್ನ 'ಊರು' ಲೋಕದಲ್ಲೇ ಚಂದವೆಂದು ಸೊಲೊಮನ್ನನ ಮಾತು. ಊರು ಎಂದರೆ ಸುಮೇರು ನಾಡಿನ ರಾಜಧಾನಿ; ಸೊಲೊಮನ್ ನೆಲಸಿದ್ದ ನಗರ. ಮಾಯೆ ತಿಂಗೋಳರು ಅದನ್ನೊಪ್ಪಲಾರರು; ಮೊಹೆಂಜೊದಾರೊದಷ್ಟು ಚಂದ ಯಾವ ನಗರವೂ ಇರಲಾರದೆಂದು ಅವರ ಅಭಿಪ್ರಾಯ. ಅದೊಂದು ದಿನ ಸೊಲೊಮನ್ ತನ್ನ 'ಊರು' ನಗರದ, ತನ್ನ ಹಿಂದಿನ ಹಿರಿಯರ ಸಂಗತಿ ಹೇಳುತ್ತಾ ಮಾಯೆ ತಿಂಗೋಳರನ್ನು ಬಾಯಿ ಮುಚ್ಚಿಸಿ ಬಿಟ್ಟ. ಮಾತಿನಲ್ಲಿ ಯಾರಾದರೂ ಸೊಲೊಮನ್ನನಿಗೆ ಸೋತುಹೋಗಬೇಕು. ಮಾತಿಗೆ ಸರಿಯಾಗಿ ತಿಳುವಳಿಕೆಯೂ ಅವನಿಗೆ ಇಲ್ಲದೆ ಇಲ್ಲ.

"ನಮ್ಮ 'ಊರು' ನಗರದ ಸಂಗತಿ ನಿಮಗೇನು ಗೊತ್ತಿದೆ? ಅದೇನೂ ಇಂದು ನಿನ್ನೆಯ ನಗರವಲ್ಲ; ಬಹು ಪ್ರಾಚೀನ ಕಾಲದ ನಗರ; ನಮ್ಮ ನಗರದ ವರ್ತಕರು ವಿಶಾಲವಾದ ಸಮುದ್ರವನ್ನೇ ಹಡಗಗಳ ಮೂಲಕ ದಾಟಿ ಬರುವರು; ಎಷ್ಟೆಷ್ಟೋ ದೂರದ ದೇಶಗಳೊಂದಿಗೆ ವ್ಯಾಪಾರ ನಡೆಸುವರು. ನಮ್ಮ ಸುಮೇರು ನಾಡೇನು ಸಾಮಾನ್ಯವೆ? ಎಷ್ಟೊಂದು ಒಳ್ಳೆಯ ರೀತಿಯಲ್ಲಿ ಅಲ್ಲಿ ಕೃಷಿ ನಡೆಯುತ್ತಿದೆಯೆಂದು ನಿಮಗೆ ತಿಳಿದಿದೆಯೆ? ನಮ್ಮ ನಾಡಿನ ಜನರು ಕೃಷಿ ವ್ಯಾಪಾರಗಳೆರಡರಲ್ಲಿಯೂ ಗಟ್ಟಿಗರು." ಎಂದು ಸೊಲೊಮನ್ ಮಾತು ಮುಗಿಸಬೇಕಾದರೇನೇ ಮಾಯೆ, "ಹೌದೊ, ಸೊಲೊಮನ್! ನೀನು ಇಷ್ಟೆಲ್ಲ ನಿನ್ನ ಊರು ನಗರವನ್ನೂ ನಿನ್ನ ಸುಮೇರು ನಾಡಿನ ಜನರನ್ನೂ ಹೊಗಳುವೆಯಲ್ಲ? ನಿನ್ನ ಜನರಿಗೆ—ಆ ಸುಮೇರರಿಗೆ—ನಮ್ಮ ಮೊಹೆಂಜೊದಾರೊದವರಂತೆ ಸೊಗಸಾಗಿ ಸೂರ್ಯನನ್ನು ಪ್ರಾರ್ಥಿಸಲಿಕ್ಕಾದರೂ ಗೊತ್ತಿದೆಯೆ? ನಮ್ಮ ಹಾಗೆ ಎಲ್ಲರೂ ಒಟ್ಟುಗೂಡಿ ಸೂರ್ಯನನ್ನು ಪ್ರಾರ್ಥಿಸಲಿಕ್ಕಾದರೂ ಗೊತ್ತಿದೆಯೆ? ನಮ್ಮಂತೆ ಎಲ್ಲರೂ ಒಟ್ಟುಗೂಡಿ ಸೂರ್ಯನನ್ನು ಕುರಿತು ಹಾಡಲಿಕ್ಕಾದರೂ ಬರುವುದೆ? ಕೃಷಿ ವ್ಯಾಪಾರಗಳಲ್ಲಿ ಮಾತ್ರ ಗಟ್ಟಿಗರಾದರೆ ಸಾಲದು; ದೇವರನ್ನೂ ಪ್ರಾರ್ಥಿಸಲು ತಿಳಿಯಬೇಕು" ಎಂದಳು.

[illegible]ಯ ಮಾತು ಕೇಳಿದ ಸೊಲೊಮನ್ "ಓಹೋ! ಪ್ರಾರ್ಥಿಸಲಿಕ್ಕೆ

ನಿಮಗೆ ಮಾತ್ರ ತಿಳಿದಿರುವುದೆಂದು ಕಾಣುತ್ತದೆ! ನಮ್ಮ ದೇವಾರಾಧನೆಯ ಪದ್ಧತಿಯೇ ಬೇರೆ. ಅದರ ಸೊಗಸು ನಿಮಗೇನು ಗೊತ್ತು? ನಮ್ಮ ನಗರದಲ್ಲಿ ಎತ್ತರವಾದ ಪ್ರಾರ್ಥನೆಯ ಕಟ್ಟೆಗಳಿವೆ. ಅಲ್ಲಿ ಎಲ್ಲಾ ಜನರೂ ಬಡವ ಬಲ್ಲಿದ ಮೇಲು ಕೀಳು ಎಂಬ ಭೇದವಿಲ್ಲದೆ ಒಟ್ಟುಗೂಡಿ ಸೂರ್ಯನನ್ನು ಮಾತ್ರವಲ್ಲ, ಚಂದ್ರನನ್ನೂ ಪ್ರಾರ್ಥಿಸುತ್ತೇವೆ. ನಮ್ಮ ಪ್ರಾರ್ಥನೆಯ ಕಟ್ಟೆಗಳಿಗೆ ನಿಮ್ಮ ಮನೆಗಳಿಗಿರುವಂತೆ ಮೇಲೆ ಹತ್ತಲು ಮೆಟ್ಟಲುಗಳಲ್ಲ ಇರುವುದು; ಇಳಿಜಾರಾದ ದಾರಿ ಇದೆ. ಆ ದಾರಿಯಲ್ಲಿ ಹತ್ತಿ ಇಳಿಯಲು ಎಷ್ಟೊಂದು ಸಂತೋಷ! ಇಟ್ಟಿಗೆಗಳಿಂದಲೇ ಆ ಕಟ್ಟೆಗಳನ್ನು ಕಟ್ಟುತ್ತಾರೆ." ಎಂದು ಹೇಳಿ ಮಾಯೆಯ ಬಾಯಿ ಮುಚ್ಚಿಸಿದ.

ಆಗ ತಿಂಗೋಳ ಸುಮ್ಮನೆ ಬಿಡುವನೆ? ಸೊಲೊಮನ್ನನನ್ನು ಸೋಲಿಸಲಿಕ್ಕಾಗಿ ಒಂದು ಪ್ರಶ್ನೆ ಕೇಳಿಯೇ ಕೇಳಿದ. ಈ ಪ್ರಶ್ನೆಯಿಂದ ಸೊಲೊಮನ್ ಬಾಯಿ ಮುಚ್ಚುವನೆಂದೇ ತಿಂಗೋಳನ ಗ್ರಹಿಕೆ. "ಹೌದೊ, ಸೊಲೊಮನ್! ನೀನೀಗ ನಿಮ್ಮವರ ವಿಷಯವಾಗಿ ಇಷ್ಟೆಲ್ಲಾ ಹೆಮ್ಮೆ ಕೊಚ್ಚಿಕೊಳ್ಳುವೆಯಲ್ಲ? ನಿಮ್ಮ ಸುಮೇರದ ಮಕ್ಕಳಿಗೆ ವಿದ್ಯೆ ಕಲಿಯಲಿಕ್ಕೆ ಶಾಲೆಗಳಾದರೂ ಇವೆಯೆ? ಅಲ್ಲ, ನಿನ್ನ ಹಾಗೆ ಮಕ್ಕಳೆಲ್ಲ ವಿದ್ಯೆ ಕಲಿಯದೆ, ವ್ಯಾಪಾರ ಮಾಡುವ ತಂದೆಯರೊಂದಿಗೆ ನಾಡಿನಿಂದ ನಾಡಿಗೆ ಅಲೆದಾಡುತ್ತಿರುವುದೆ? ನಮಗಿರುವಂತಹ ಶಾಲೆ ನಿಮ್ಮಲ್ಲಿ ಕಂಡಿತ ಇರಲಿಕ್ಕಿಲ್ಲ; ನಾಡಾಡಿಗಳಂತೆ ಅಲೆದಾಡುವುದೇ ನಿಮ್ಮ ನಾಡಿನ ಮಕ್ಕಳ ಕೆಲಸವಾಗಿರಬೇಕು." ಹೀಗೆಂದು ತಿಂಗೋಳ ಮಾತು ಮುಗಿಸುವ ಮೊದಲೇ ಸೊಲೊಮನ್ನನನ ಉತ್ತರ ಸಿದ್ಧ!

"ಓಹೋ! ನಿಮಗೆ ಮಾತ್ರ ಇರುವುದು ಶಾಲೆ! ನಮ್ಮ ಸುಮೇರದ ಮಕ್ಕಳೆಲ್ಲ ನಾಡಾಡಿಗಳಂತೆ ನಾಡಿಂದ ನಾಡಿಗೆ ಅಲೆದಾಡುವುದಂತೆ! ಆಹಾ! ನಿನ್ನ ಬುದ್ಧಿವಂತಿಗೆಯೆ! ನಮ್ಮ ಶಾಲೆಗಳ ಸಂಗತಿ, ನಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯ ಇವೆಲ್ಲ ಊರು ಬಿಟ್ಟು ಹೊರಡದ, ಮನೆಬಿಟ್ಟು ನಡೆಯದ ನಿಮಗೇನು ಗೊತ್ತು? ನಿಮಗಿಂತಲೂ ಚೆನ್ನಾಗಿ ನಮ್ಮ ನಾಡಿನ ಮಕ್ಕ[illegible] ವಿದ್ಯೆ ಕಲಿಯುತ್ತಾರೆ. ನಮ್ಮ 'ಊರು' ನಗರದಲ್ಲಿ ಕೇರಿಗೊ[illegible] ಶಾಲೆಗಳಿವೆ. ವರ್ತಕರ ಪೇಟೆಯಲ್ಲೊಂದು ಶಾಲೆ;

ಬೀದಿಯಲ್ಲಿ ಮತ್ತೊಂದು ಶಾಲೆ; ಇನ್ನು ಒಕ್ಕಲಿಗರ ಬೀದಿಯಲ್ಲಿ ಬೇರೊಂದು ಶಾಲೆ; ಹೀಗೆ ಹಲವಾರು ಶಾಲೆಗಳು ನಮ್ಮ ನಗರದಲ್ಲಿವೆ. ನಾನೇನೂ ವಿದ್ಯೆ ಕಲಿಯಲಿಲ್ಲವೆಂದು ನಿಮ್ಮ ಅಭಿಪ್ರಾಯವೋ ಏನು? ನನ್ನ ವಿದ್ಯಾಭ್ಯಾಸವೆಲ್ಲಾ ಮುಗಿದಿದೆ; ಓದು ಬರೆಹಕ್ಕಿಂತಲೂ ನಾಡಿನಿಂದ ನಾಡಿಗೆ ಸಂಚಾರ ಮಾಡಿ ಬರುವ ಅನುಭವವೆಂಬ ವಿದ್ಯೆಯೇ ಮೇಲು. ಹೀಗೆ ಸಂಚರಿಸುತ್ತಿದ್ದರೆ ಎಲ್ಲಾ ದೇಶಗಳ, ಎಲ್ಲಾ ಜನರ ನಡೆ ನುಡಿ ಕಟ್ಟುಕಟ್ಟಳೆ ಎಲ್ಲಾ ತಿಳಿಯುತ್ತದೆ. ಈಗ ನೀವೇ ನೋಡಿರಿ. ನನಗೆ ನಿಮ್ಮ ಭಾಷೆ ಪದ್ಧತಿ ರೀತಿ ನೀತಿ ಎಲ್ಲಾ ಗೊತ್ತಿದೆ; ನಿಮಗೆ ನನ್ನದಾಗಲೀ ನನ್ನ ಸುಮೇರದ್ದಾಗಲೀ ಯಾವ ಸಂಗತಿ ಗೊತ್ತಿದೆ? ಇನ್ನು ನಮ್ಮ ಶಾಲೆಗಳ ವಿಷಯ ವಿವರ ಹೇಳಬೇಕೆ ನಿಮಗೆ? ಕೇಳಿರಿ, ಹೇಳುತ್ತೇನೆ.” ಮಾಯೆ ತಿಂಗೋಳರು ಬಾಯಿ ಮುಚ್ಚಿ ಕೇಳತೊಡಗಿದರು. ಸೊಲೊಮನ್ ಮತ್ತೂ ಉತ್ಸಾಹದಿಂದ ಹೇಳತೊಡಗಿದ—

“ನನ್ನ ಶಾಲೆಯ-ನಾನು ಕಲಿತ ಶಾಲೆಯ-ಸಂಗತಿಯೇ ಹೇಳುತ್ತೇನೆ. ನನ್ನ ಶಾಲೆ ನಮ್ಮ ಮನೆಯ ಹತ್ತಿರವೇ ಇದೆ. ನಮ್ಮ ಬೀದಿಯ ಎಲ್ಲಾ ಮಕ್ಕಳೂ ಅಲ್ಲಿ ಬರುತ್ತಾರೆ. ನಮ್ಮ ಪುರೋಹಿತರೇ ಆ ಶಾಲೆ ನಡೆಯಿಸುತ್ತಾರೆ. ಅವರೇ ನಮ್ಮ ಗುರುಗಳು; ಅವರೆಷ್ಟು ಒಳ್ಳೆಯವರು, ಬುದ್ಧಿವಂತರು ಎಂದು ನಿಮಗೆ ಗೊತ್ತೆ? ಅಂತಹ ಅಧ್ಯಾಪಕರು ನಿಮ್ಮ ಮೊಹೆಂಜೊದಾರೊದಲ್ಲಿ ಒಬ್ಬರೂ ಇರಲಾರರು; ಅಷ್ಟೊಂದು ತಿಳುವಳಿಕೆಯುಳ್ಳವರು ನಮ್ಮ ಸುಮೇರು ನಾಡಿನಲ್ಲಿಯೇ ಬೇರಾರೂ ಇಲ್ಲ. ಹಾಗಿರುವಾಗ ನಿಮ್ಮಲ್ಲಿರುವುದಿದೆಯೇ? ನಮ್ಮ ಶಾಲೆಗಳಲ್ಲಿ ಓದು ಬರೆಯುವ ರೀತಿಯಾದರೂ ಎಷ್ಟೊಂದು ಸೊಗಸು! ನಮ್ಮ ಶಾಲೆಯಲ್ಲಿ ಹದ ಮಾಡಿದ ಆವೆ ಮಣ್ಣಿನ ರಾಶಿಯೇ ಇದೆ. ನಮ್ಮ ಗುರುಗಳು ಅದರಿಂದ ಒಂದು ಮುದ್ದೆ ಮಣ್ಣು ತಂದು ಒಂದು ಮಣೆಯ ಮೇಲಿಟ್ಟು ರೊಟ್ಟಿಯಂತೆ ಚಪ್ಪಟೆಯಾಗಿ ಲಟ್ಟಣಿಗೆಯಿಂದ ತಟ್ಟುತ್ತಾರೆ; ಮಕ್ಕಳೂ ಒಂದೊಂದು ಮುದ್ದೆ ಮಣ್ಣು [illegible]ದುಕೊಂಡು ಹಾಗೆ ತಟ್ಟಿ ಚಪ್ಪಟೆ ಮಾಡುತ್ತಾರೆ. ಮತ್ತೆ ನಮ್ಮ [illegible]ಗಳು ತಾವು ತಟ್ಟಿದ ಮಣ್ಣಿ ಮೇಲೆ ಅ. ಬ. ಎಂದು ಅಕ್ಷರ ಬರೆಯು[illegible]ಗಳು ಅದನ್ನೇ ನೋಡಿ ತಮ್ಮ ತಮ್ಮ ಮಣ್ಣು ರೊಟ್ಟಿಗಳ

ಮೇಲೆ ಬರೆಯುತ್ತಾರೆ. ಇನ್ನು ಗುರುಗಳು ಬರೆದುದನ್ನು ಓದಲು ಕಲಿಸುತ್ತಾರೆ. ಮಕ್ಕಳು ಗುರುಗಳು ಬರೆದುದನ್ನು ನೋಡದೆಯೂ ಬರೆಯಲು ಕಲಿಯಬೇಕು. ಗುರುಗಳು ಒಮ್ಮೆಯೇ ನೂರಾರು ಅಕ್ಷರಗಳನ್ನೂ ಶಬ್ದಗಳನ್ನೂ ಬಾಯಲ್ಲಿ ಹೇಳಿಬಿಡುತ್ತಾರೆ. ನಾವು ಆ ಅಕ್ಷರ ಶಬ್ದಗಳನ್ನೆಲ್ಲ ನೆನಪಿಟ್ಟುಕೊಂಡು ಬರೆಯಬೇಕು. ಮತ್ತೆ ಲೆಕ್ಕ ಪಾಠವೂ ಇದೆ. ಕೂಡಿಸುವುದು, ಕಳೆಯುವುದು, ಉದ್ದ ಅಗಲ ಎತ್ತರಗಳನ್ನು ಅಳತೆ ಕೋಲಿನಿಂದ ಅಳೆಯುವುದು ಎಲ್ಲಾ ಕಲಿಯಲಿಕ್ಕಿದೆ. ನಮ್ಮ ಸುಮೇರು ಭಾಷೆಯ ವ್ಯಾಕರಣವೋ? ಅದೆಷ್ಟು ಕಷ್ಟ. ಅಷ್ಟು ಕಷ್ಟದ ವ್ಯಾಕರಣ ಯಾವ ಭಾಷೆಯಲ್ಲಿಯೂ ಇರಲಾರದು. ನನಗೆ ಆ ವ್ಯಾಕರಣದ ನಿಯಮಗಳೆಲ್ಲಾ ಬಾಯಿಪಾಠ ಗೊತ್ತಿದೆ. ನಮ್ಮ ಗುರುಗಳು ವ್ಯಾಕರಣ ಕಲಿಸುವುದರಲ್ಲಿ ಬಹಳ ಗಟ್ಟಿಗರು; ಅವರು ವಿವರಿಸುವಾಗ ಎಂತಹ ದಡ್ಡರಿಗಾದರೂ ತಿಳಿಯದೆ ಹೋಗುವುದಿಲ್ಲ."

ಸೊಲೊಮನ್ ಇಷ್ಟು ಹೇಳಿ ನಿಲ್ಲಿಸುವಾಗ ಮಾಯೆ "ನಿಮ್ಮಲ್ಲಿ ಹುಡುಗಿಯರೂ ಶಾಲೆಗೆ ಹೋಗಿ ಕಲಿಯುತ್ತಾರೆಯೆ?" ಎಂದು ಕೇಳಿದಳು. ಅದಕ್ಕೆ ಸೊಲೊಮನ್ ಅದೇನು ಹಾಗೆ ಕೇಳುವೆ? ಹುಡುಗಿಯರೇನು ಕಲಿಯಬಾರದೆ? ಇಲ್ಲಿ ಹುಡುಗಿಯರು ಶಾಲೆಗೆ ಹೋಗುವುದಿಲ್ಲವೇ? ಹಾಗೆಯೇ ನಮ್ಮಲ್ಲಿಯೂ ಹುಡುಗಿಯರೂ ಶಾಲೆಗೆ ಹೋಗುತ್ತಾರೆ. ಹುಡುಗರೂ ಹುಡುಗಿಯರೂ ಕಲಿಯುವುದು ಒಟ್ಟಿಗೆ ಒಂದೇ ಶಾಲೆಯಲ್ಲಿ" ಎಂದು ಹೇಳಿದ.

ಆಗ ತಿಂಗೋಳ "ಅದೆಲ್ಲಾ ಸರಿ ಸೊಲೊಮನ್! ನಿಮ್ಮ ಊರು ನಗರದಲ್ಲಿ ಜನರಲ್ಲಿ ಏನಾದರೂ ವಿವಾದ ಉಂಟಾದರೆ, ಇಲ್ಲವೆ ಕಲಹವಾದರೆ ಅದನ್ನು ತೀರಿಸಲು ನಮ್ಮ ಊರಲ್ಲಿರುವಂತೆ ಪಂಚಾಯತುಗಳಿವೆಯೆ? ಪಂಚರಿದ್ದಾರೆಯೆ? ಅಲ್ಲ, ಕಲಹ ಜಗಳವಾಗಿ ಹೊಡೆದಾಡಿ ಒಬ್ಬರಿಗೊಬ್ಬರು ಸಾಯುವುದೇ ಗತಿಯೋ?" ಎಂದು ಒಂದು ಮಾತಿನ ಬಾಣ ಹೂಡಿದ. ಇದಕ್ಕೂ ಸೊಲೊಮನ್ ಸೋಲುವನೆ? ಅವನ ಪ್ರತ್ಯುತ್ತರ ಇದ್ದೇ ಇದೆ. "ನಮ್ಮ ಸುಮೇರು ನಾಡಿನ ನ್ಯಾಯ ವಿಚಾರಣೆ ನಿಮ್ಮ ಮೊಹೆಂ[illegible] ದಾರೊದ ಪಂಚಾಯತುಗಳ ರೀತಿಯದಲ್ಲ. ನಮ್ಮ ಪುರೋ[illegible] ನಮ್ಮ ನ್ಯಾಯಾಧಿಪತಿಗಳು. ಊರಿಗೆ ಉಪಾಧ್ಯಾ[illegible]

ನ್ಯಾಯ ತೀರ್ಮಾನ ಮಾಡುವ ನ್ಯಾಯಾಧಿಪತಿಗಳೂ ಅವರೇ. ಇನ್ನೂ ಏನೆಲ್ಲಾ ಕೆಲಸಗಳು ಅವರಿಗೆ? ನಾಡಿನ ಆಡಳಿತೆ ನಡೆಯಿಸಬೇಕು; ದವಸ ಧಾನ್ಯ ಸಂಗ್ರಹ ಮಾಡಿ ನಾಡಿನ ಜನರಿಗೆ ಸರಿಯಾಗಿ ಆಹಾರ ಸಿಗುವಂತೆ ವ್ಯವಸ್ಥೆ ಮಾಡಬೇಕು. ಇಷ್ಟೆಲ್ಲ ಕೆಲಸಗಳನ್ನು ಮಾಡುವ ನಮ್ಮ ಪುರೋಹಿತರು ಅದೆಷ್ಟು ಬುದ್ಧಿವಂತರು! ಅವರ ಕೈಕೆಳಗೆ ಒಂದೊಂದು ಕೆಲಸ ಮಾಡಲು ಒಂದೊಂದು ವಿಭಾಗಗಳಿವೆ; ಆ ವಿಭಾಗಗಳಿಗೆ ಬೇರೆ ಬೇರೆ ಅಧಿಕಾರಿಗಳಿದ್ದಾರೆ. ಸೈನ್ಯ ಸಂಗ್ರಹ, ದೇಶ ರಕ್ಷಣೆ ಮುಂತಾದ ಎಲ್ಲಾ ಕೆಲಸಗಳನ್ನು ಮಾಡಲೂ ಅಧಿಕಾರಿಗಳಿದ್ದಾರೆ. ಆದರೆ ಅವರೆಲ್ಲಾ ಇರುವುದು ನಮ್ಮ ಪುರೋಹಿತರ ಕೈಕೆಳಗೆ. ನಮ್ಮ ಸುಮೇರು ನಾಡಿನಲ್ಲಿ ಸರ್ವ ಅಧಿಕಾರವೂ ನಮ್ಮ ಪುರೋಹಿತರಿಗೆ. ಹಿಂದಿನ ಕಾಲದಲ್ಲಿ ನಮ್ಮ 'ಊರು' ನಗರದಲ್ಲಿ ಒಬ್ಬ ಪ್ರಸಿದ್ಧ ಪುರೋಹಿತರಿದ್ದರಂತೆ. ಅಬ್ರಹಾಮ್ ಎಂದು ಅವರ ಹೆಸರು. ಅವರಂತಹ ಪುರೋಹಿತರು, ಬುದ್ಧಿವಂತರು ಮತ್ತೆ ನಮ್ಮ ನಾಡಿನಲ್ಲಿ ಎಂದೇಕೆ, ಯಾವ ನಾಡಿನಲ್ಲಿಯೂ ಇರಲಿಲ್ಲವಂತೆ" ಹೀಗೆಂದು ಸೊಲೊಮನ್ ಮಾತು ಮುಗಿಸಿದ. ಆತನ ವಿವರಣೆಯಿಂದ ಮಾಯೆ ತಿಂಗೋಳರ ವಾದದ ಬಾಯಿ ಮುಚ್ಚಿತು. ಸುಮೇರವೂ ಮೊಹೆಂಜೊದಾರೊದಷ್ಟೇ ನಾಗರಿಕ ದೇಶವೆಂದೂ ಅಲ್ಲಿನ ಜನರೂ ಇಲ್ಲಿನವರಷ್ಟೇ ಸುಸಂಸ್ಕೃತರೆಂದೂ ಅವರಿಬ್ಬರಿಗೂ ತಿಳಿಯಿತು. ಮತ್ತವರು ಸೊಲೊಮನ್ನನೊಡನೆ ಚರ್ಚೆಗೆ ನಿಲ್ಲಲಿಲ್ಲ. ಕಡೆಗೆ ಸೊಲೊಮನ್ "ಈಗ ನೀವಿಬ್ಬರೂ ಸುಮ್ಮನೆ ಚರ್ಚೆ ಮಾಡುವುದೇಕೆ? ಒಮ್ಮೆ ನನ್ನೊಂದಿಗೆ ನಮ್ಮ ಸುಮೇರಕ್ಕೆ ಬನ್ನಿರಿ. ಆಗ ನಮ್ಮ ನಾಡಿನ ನಾಗರಿಕತೆ, ನಮ್ಮ ಜನರ ನಡೆನುಡಿ ಕಟ್ಟುಕಟ್ಟಳೆ ಎಲ್ಲಾ ಕಣ್ಣಿಂದ ನೋಡಿಯೇ ತಿಳಿಯುವುದು. ನಮ್ಮ ಸುಮೇರದ ಜನ ಎಷ್ಟೊಂದು ನಾಗರಿಕ ಸುಸಂಸ್ಕೃತರೆಂದು ಅರಿಯಬಹುದು. ನೀವು ಬರುವುದಿದ್ದರೆ ನಮ್ಮ ಹಡಗದಲ್ಲಿ ನಾನೇ ಕರೆಕೊಂಡು ಹೋಗಿ, ಹಿಂದೆ ತಂದು ಬಿಡುತ್ತೇನೆ. ಹೇಗೆ ಬರುವಿರಾ ನಮ್ಮ [illegible]ರಿಗೆ?" ಎಂದು ಕೇಳಿದ. ಮಾಯೆ ತಿಂಗೋಳರಿಗೆ ಸುಮೇರದ 'ಊರು' [illegible]ಕ್ಕೆ ಸೊಲೊಮನ್ನನೊಂದಿಗೆ ಹಡಗು ಪಯಣ ಬೆಳೆಸಿದರಾಗಬಹು [illegible] ಉಂಟಾಯಿತು. ಆದರೆ ತಂದೆ ಬಿಡಬೇಕಲ್ಲ? ತಾಯಿ ಒಪ್ಪ

ಬೇಕಲ್ಲ? ಹೇಗಾದರೂ ಮಾಡಿ ತಂದೆ ತಾಯಂದಿರ ಒಪ್ಪಿಗೆ ಪಡೆದು ಒಮ್ಮೆ ಸುಮೇರದ 'ಊರು' ನಗರಕ್ಕೆ ಗೆಳೆಯ ಸೊಲೊಮನ್ನನೊಂದಿಗೆ ಹೋಗಿಯೇ ಬಿಡುವುದೆಂದು ಅವರು ನಿಶ್ಚಯ ಮಾಡಿದರು. ಅದರಿಂದ ಸೊಲೊಮನ್ನನಿಗೂ ತನ್ನ ಗೆಳೆಯರು ತನ್ನೂರಿಗೆ ಬರುವರಲ್ಲ, ತನ್ನ ಊರನ್ನು ತನ್ನ ಜನರನ್ನು ಅವರಿಗೆ ತೋರಿಸಿ ಹೆಮ್ಮೆ ಪಡಬಹುದಲ್ಲ ಎಂದು ತುಂಬಾ ಹಿಗ್ಗುಂಟಾಯಿತು. ಆ ಸರ್ತಿ ಸೊಲೊಮನ್ ಮಾಯೆ ತಿಂಗೋಳರನ್ನು ಅವರ ತಂದೆ ತಾಯಂದಿರ ಒಪ್ಪಿಗೆ ಪಡೆದು ಕರಕೊಂಡು ಹೋಗುವುದೆಂದೇ ಖಂಡಿತ ಮಾಡಿದ. ಆದರೆ ಮುಂದೆ ಮಾಯೆ ತಿಂಗೋಳರು ಸುಮೇರದ 'ಊರು' ನಗರಕ್ಕೆ ಹೋದರೋ ಇಲ್ಲವೋ ಎಂಬ ಸಂಗತಿ ಮಾತ್ರ ಸರಿಯಾಗಿ ತಿಳಿದು ಬರುವುದಿಲ್ಲ. ಬಹುಶಃ ಆ ಮಕ್ಕಳು ಊರಿಗೆ ಹೋಗಿರಬೇಕು.

ಅಭ್ಯಾಸ

1. ಸೊಲೊಮನ್ ಯಾರು? ಆತನಿಗೂ ಮೊಹೆಂಜೊದಾರೊ ನಗರಕ್ಕೂ ಸಂಬಂಧವೇನು?

2. ಸೊಲೊಮನ್ ತನ್ನ 'ಊರಿ'ನ ಕುರಿತು ಏನೆಲ್ಲ ಹೇಳಿದನು?

3. ಸುಮೇರರ ಪುರೋಹಿತರಿಗೆ ಅಷ್ಟೊಂದು ಮಹತ್ವವೇಕೆ?

4. ಮುಂದಿನ ವಾಕ್ಯಗಳಲ್ಲಿ ಬರುವ ಸರ್ವನಾಮಗಳನ್ನು ಹೆಕ್ಕಿ ತೆಗೆದು ಅವು ಯಾವ ನಾಮಪದಗಳ ಸ್ಥಳದಲ್ಲಿ ಉಪಯೋಗವಾಗಿವೆ ಎಂದು ಹೇಳಿರಿ:—ಸೊಲೊಮನ್ ಮತ್ತೂ ಉತ್ಸಾಹದಿಂದ ಹೇಳತೊಡಗಿದನು: "ನನ್ನ ಶಾಲೆಯ--ನಾನು ಕಲಿತ ಶಾಲೆಯ—ಸಂಗತಿಯೇ ಹೇಳುತ್ತೇನೆ. ನಮ್ಮ ಬೀದಿಯ ಎಲ್ಲಾ ಮಕ್ಕಳೂ ಅಲ್ಲಿ ಬರುತ್ತಾರೆ. ನಮ್ಮ ಪುರೋಹಿತರೇ ಆ ಶಾಲೆ ನಡೆಸುತ್ತಾರೆ. ಅವರೇ ನಮ್ಮ ಗುರುಗಳು.

5. ಬಾಯಿ ಮುಚ್ಚು, ಓದು ಬರೆಹ, ಬಡವ ಬಲ್ಲಿದ, ಮೇಲು ಕೀಳು—ಈ ಮಾತುಗಳಿಂದ ಒಂದೊಂದು ವಾಕ್ಯ ಮಾಡಿರಿ.

6. ಬಹುಶ, ಕಂಡಿತ, ಸಿದ್ದ, ವಿಧ್ಯಾಬ್ಯಾಸ, ಕ್ರುಷಿ, ಪ್ರಾಧ ದಾನ್ಯ, ನಾಗರಿಕತೆ—ಈ ಪದಗಳು ತಪ್ಪಾದುದರಿಂದ ಅವನ್ನು ಸರಿಗೆ

೧೧. ದನಕಾಯುವ ಹುಡುಗ

ಆಫ್ರಿಕದ ಒಂದು ಗುಡ್ಡದ ಬದಿಯಲ್ಲಿ ಒಂದು ಹಳ್ಳಿ. ಹಳ್ಳಿಗೊಬ್ಬ ಯಜಮಾನ. ಆ ಹಳ್ಳಿಯ ಜನಕ್ಕೆ ಅವನೇ ದೊರೆ. ಆ ಹಳ್ಳಿಯಲ್ಲಿ ತುಂಬಾ ದನಕರುಗಳು; ಆಡುಕುರಿಗಳು. ಅಲ್ಲೊಂದು ಸೊಗಸಾದ ಬಿಳಿ ಹೋರಿ ಇತ್ತು; ಎತ್ತರವಾದ ಎತ್ತು. ಆದರೆ ಅದು ನಿಜವಾದ ಎತ್ತಲ್ಲ.



ಬ್ಬರು [illegible]ವುದೋ ಒಂದು ದೇವತೆ ಎತ್ತಿನ ರೂಪ ತಾಳಿ ದನಕರುಗಳ ಗುಂಪಿನ[illegible] ಸೇರಿಕೊಂಡುದು. ಆ ಗುಂಪಿಗೆ ಅದೇ ಯಜಮಾನ. ಹಳ್ಳಿಯ [illegible]ದೊರೆ ತನ್ನ ದನಕರುಗಳಿಗಾಗಿ ಅರಮನೆಯ ಬಳಿಯಲ್ಲಿಯೇ ಒಂದು [illegible]ಟ್ಟಿ ಕಟ್ಟಿಸಿದ. ದೊರೆಗೆ ದನಕರುಗಳೆಂದರೆ ಪ್ರಾಣ. ಅವುಗಳನ್ನು [illegible]ಮೇಯಿಸು[illegible]ವುದಕ್ಕೂ ತನ್ನ ಮಗನನ್ನೇ ನೇಮಿಸಿದ್ದ.

ಪ್ರತಿದಿನವೂ ಬೆಳಗ್ಗೆ ದೊರೆಯ ಮಗ ದನಕರುಗಳನ್ನು ಮೇಯಿಸ[illegible] ಹುಲ್ಲುಗಾವಲಿಗೆ ಅಟ್ಟಿಕೊಂಡು ಹೋಗುತ್ತಿದ್ದ. ಮತ್ತೆ ಹಿಂದೆ [illegible]ಕೊಂಡು ಬರುವುದು ಸಂಜೆಗೆ. ಹುಲ್ಲುಗಾವಲಿನಲ್ಲಿ ಆಳೆತ್ತರಕ್ಕೆ

ಹುಲ್ಲು ಬೆಳೆದಿತ್ತು. ದನಕರುಗಳನ್ನು ಹುಲ್ಲಿನೆಡೆ ಮೇಯಬಿಟ್ಟರೆ ಅವು ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಅದಕ್ಕಾಗಿ ದಿನನಿತ್ಯವೂ ಯಾವುದಾದರೊಂದು ಬಂಡೆಯ ಮೇಲೆ ಕುಳಿತು ದನ ಮೇಯಿಸುವುದು ಆ ಹುಡುಗನ ನಿತ್ಯದ ಕ್ರಮ. ಬಂಡೆಯ ಮೇಲೆ ಕುಳಿತರೆ ನಾಲ್ಕು ದಿಕ್ಕುಗಳೂ ಸರಿಯಾಗಿ ಕಾಣುತ್ತಿದ್ದವು. ದನಕರುಗಳು ಅತ್ತಿತ್ತ ತಪ್ಪಿಸಿಕೊಂಡರೆ, ಇಲ್ಲವೇ ಯಾರಾದರೂ ಕಳ್ಳರು ಕದಿಯ ಬಂದರೆ ಆತನಿಗೆ ಕಾಣಿಸುತ್ತಿತ್ತು.

ದೊರೆಯ ಮಗನಿಗೆ ದಿನವೂ ಒಂದೇ ಕೆಲಸ ಮಾಡಿ ಮಾಡಿ ಬೇಸರ ಬಂದು ಹೋಯಿತು. ದನಕರು ಕಾಯುತ್ತಾ ಸುಮ್ಮನೆ ಬಿಸಿಲಲ್ಲಿ ಕುಳಿತು ಕೊಳ್ಳುವಾಗ ಅವನಿಗೆ ನಿದ್ರೆ ತೂಕಡಿಸುತ್ತಿತ್ತು. ಆದರೆ ನಿದ್ರಿಸುವುದಾದರೂ ಹೇಗೆ? "ಎಲ್ಲಾದರೂ ಒಂದೇ ಒಂದು ದನ ತಪ್ಪಿಸಿಕೊಂಡರೆ, ಕದ್ದು ಹೋದರೆ ನಿನ್ನನ್ನು ಮನೆ ಹೊಗಲು ಬಿಡಲಿಕ್ಕಿಲ್ಲ" ಎಂದು ಆಗಾಗ ತಂದೆ ಬೆದರಿಸುತ್ತಿದ್ದ. ಆದುದರಿಂದ ಮನಸ್ಸಿಲ್ಲದಿದ್ದರೂ ತಂದೆಯ ಭಯದಿಂದ ಜಾಗ್ರತೆಯಾಗಿ ದನ ಮೇಯಿಸುತ್ತಿದ್ದ ಆ ಹುಡುಗ.

ಹೀಗೆ ಎಂದಿನಂತೆ ದನಕಾಯುತ್ತಿದ್ದಾಗ ಒಮ್ಮೆ ಒಬ್ಬಾಕೆ ಮುದುಕಿ ಅಲ್ಲಿಗೆ ಬಂದಳು. ಆ ಮುದುಕಿ ಮನುಷ್ಯೆಯಲ್ಲ; ಒಬ್ಬಳು ದೇವತೆ. ಆ ಸಂಗತಿ ಹುಡುಗನಿಗೆ ತಿಳಿಯದು. ಮುದುಕಿ ಬಂದವಳೇ ಹುಡುಗನನ್ನು ಪ್ರೀತಿಯಿಂದ ಮಾತನಾಡಿಸಿದಳು. ಹುಡುಗ ತನ್ನ ಕಷ್ಟವನ್ನೆಲ್ಲಾ ಆಕೆಯೊಡನೆ ಹೇಳಿಕೊಂಡ. ಆಗ ಮುದುಕಿ "ಮಗೂ, ನಿನಗೆ ಬೇಸರವಾ[illegible] ದಂತೆ ನಾನು ಮಾಡುತ್ತೇನೆ. ಈ ಹುಲ್ಲುಗಾವಲಿನಲ್ಲಿ ನಿನಗ[illegible] ದೊಡ್ಡ ಬಿಳಿಕಲ್ಲು ತೋರಿಸಿಕೊಡುತ್ತೇನೆ. ಅದರ ಮೇಲೆ [illegible] ಬೇರಾರಿಗೂ ಏರಲು ಸಾಧ್ಯವಿಲ್ಲ. ಆ ಕಲ್ಲಿನ ಮೇಲೆ ಕುಳಿತ[illegible] ಸಂತೋಷದಿಂದ ದನ ಕಾಯಬಹುದು." ಎಂದು ಹೇಳಿದಳ[illegible] ಹುಡುಗನನ್ನು ಆ ಕಲ್ಲಿನ ಬಳಿಗೆ ಕರೆದೊಯ್ದಳು. ಆ ಬಂಡೆ[illegible] ಸೊಗಸಾಗಿ ನಯವಾಗಿ ತೋರುತ್ತಿತ್ತು. ಬಂಡೆಯ ಒಂದು[illegible] ದೊಡ್ಡದೊಂದು ಮರ ಬೆಳೆದಿದ್ದುದರಿಂದ ತುಂಬಾ ನೆಳಲಾಗಿತ್ತು[illegible] ದೊರೆಯ ಮಗನನ್ನು ಆ ಕಲ್ಲಮೇಲೆ ಕುಳಿತುಕೊಳ್ಳಲು [illegible] "ಇಲ್ಲಿ ಬನ್ನಿ ದನಗಳೇ, ಇಲ್ಲಿ ಬನ್ನಿ ಕರುಗಳೇ, ಎಲ್ಲ ಇ[illegible]

ನಡೆದು ಬನ್ನಿರಿ" ಎಂದು ಒಂದು ಮಂತ್ರವನ್ನೂ ಕಲಿಸಿದಳು. "ಈ ಮಂತ್ರವನ್ನು ಗಟ್ಟಿಯಾಗಿ ಹೇಳಿದೊಡನೆಯೇ ದನಕರುಗಳೆಲ್ಲಾ ಎಲ್ಲಿದ್ದರೂ ನಿನ್ನ ಬಳಿಗೆ ಓಡಿಯೋಡಿ ಬರುವುವು. ನೀನೇ ಅಟ್ಟಿಕೊಂಡು ಬರಬೇಕಾಗಿಲ್ಲ. ಆದರೆ ಈ ಕಲ್ಲಮೇಲೆ ನಿದ್ರೆ ಮಾತ್ರ ಮಾಡಬೇಡ. ನಿದ್ರೆ ಮಾಡಿದರೆ ಹಗೆಗಳು ಬಂದು ದನಕರುಗಳನ್ನು ಓಡಿಸಿಕೊಂಡು ಹೋಗಬಹುದು. ಜಾಗ್ರತೆಯಿಂದಿರು" ಎಂದಿಷ್ಟೆ ಹೇಳಿ, ಮುದುಕಿ ಮಾಯವಾದಳು.

ಆ ದಿನದಿಂದ ಹುಡುಗನಿಗೆ ದನ ಮೇಯಿಸುವುದೆಂದರೆ ತುಂಬಾ ಇಷ್ಟ. ತುಸುವಾದರೂ ಬೇಸರವಾಗುತ್ತಿದ್ದಿಲ್ಲ. ದನಕರುಗಳೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಮುದುಕಿ ಹೇಳಿಕೊಟ್ಟ ಮಂತ್ರ ಹೇಳಿ ಕರೆದ ಕೂಡಲೇ ದನ ಕರುಗಳೆಲ್ಲಾ ಓಡಿಯೋಡಿ ಬರುತ್ತಿದ್ದುವು. ದನ ಕದಿಯಲು ಕಳ್ಳರಿಗೂ ಬರಲಾಗುತ್ತಿರಲಿಲ್ಲ. ಹುಡುಗ ಎತ್ತರವಾದ ಬಂಡೆಯ ಮೇಲೆ ಕುಳಿತುಕೊಳ್ಳುತ್ತಿದ್ದುದರಿಂದ ನಾಲ್ಕು ದಿಕ್ಕುಗಳೂ ಸರಿಯಾಗಿ ಕಾಣಿಸುತ್ತಿದ್ದುವು. ಹೀಗೆ ಹಲವು ದಿನ ಕಳೆಯಿತು.

ಬೇಸಿಗೆಯ ಕಾಲ. ಬಿಸಿಲು ಜಳ ಜಳ ಕಾಯುತ್ತಿತ್ತು. ದನ ಕಾಯುವ ಹುಡುಗನಿಗೆ ಏನೋ ಕೇಡು ಬರುವ ಕಾಲ. ಬಂಡೆಯ ಮೇಲೆ ಬಿಸಿಲ ವೇಳೆಗೆ ತಂಪಾದ ನೆಳಲಲ್ಲಿ ಕುಳಿತ ಹುಡುಗನಿಗೆ ಅಲ್ಲೇ [illegible]ದ್ರೆ ಬಂದು ಬಿಟ್ಟಿತು. ಬಹಳ ಹೊತ್ತು ನಿದ್ರೆ ಮಾಡಿಬಿಟ್ಟ. ಆಗಲೇ ಬ್ಬರು[illegible] ಕುಳಿತಿದ್ದ ದನಗಳ್ಳರು ದನಕರುಗಳನ್ನೆಲ್ಲಾ ಹೊಡೆದುಕೊಂಡು ತಮ್ಮ ನ[illegible] ನಡೆದು ಬಿಟ್ಟರು. ಹುಡುಗ ಎಚ್ಚರಾಗಿ ನೋಡುತ್ತಾನೆ! ಒಂದೇ [illegible]ಲೀ ಕರುವಾಗಲೀ ಕಾಣಿಸದು. ಮಂತ್ರ ಹೇಳಿ ಎಷ್ಟು ಗಟ್ಟಿ [illegible]ರೆದರೂ ದನಕರುಗಳ ಸುಳಿವಿಲ್ಲ. ಹುಡುಗ ಬಂಡೆಯಿಂದಿಳಿದು [illegible] ಹುಡುಕಾಡಿದ; ಕಾಡುಗುಡ್ಡ, ಹಳ್ಳಕೊಳ್ಳ ಎಲ್ಲಾ ಅಲೆ[illegible] ಎಲ್ಲಿ ಹುಡುಕಿದರೂ ಸಿಗಲಿಲ್ಲ. ಏನು ಮಾಡುವುದೆಂದೂ [illegible] ಪ್ರ[illegible]ಯಲಿಲ್ಲ. ಕಡೆಗೆ ಅಳುತ್ತಾ–ಬಿಕ್ಕಿ ಬಿಕ್ಕಿ ಅಳುತ್ತಾ ಮನೆಗೆ [illegible]ಂದೆಯೊಡನೆ ನಡೆದ ಸಂಗತಿ ಹೇಳಿದ. ಮಗನ ಮಾತು [illegible]ಕೋಪದಿಂದ ಉರಿದು ಕಿಡಿಕಿಡಿಯಾದ. "ಥೂ! ದಡ್ಡ!

ದನ ಮೇಯಿಸುವ ಕೆಲಸವೂ ನಿನ್ನಿಂದಾಗದು. ನನ್ನ ಮುಂದೆ ನಿಲ್ಲಬೇಡ. ಈ ಮನೆಯಲ್ಲಿ ನಿನಗಿನ್ನು ನೀರ ಹನಿಯೂ ಸಿಗಲಾರದು. ಈಗಲೇ ಹೊರಡಬೇಕಿಲ್ಲಿಂದ. ನಿನ್ನಂತಹ ಕೂಳು ಮಾರಿ ಮನೆಯಲ್ಲಿರಲೇ ಬಾರದು." ಎಂದು ಗದರಿಸಿ, ಆ ಹಳ್ಳಿಯ ದೊರೆ ಹುಡುಗನನ್ನು ಮನೆಯಿಂದ ಹೊರಡಿಸಿಬಿಟ್ಟ.

ಹುಡುಗ ಮನೆಯಿಂದ ಹೊರಟು ದಿಕ್ಕಿಲ್ಲದ ಪರದೇಶಿಯಾಗಿ ಗುಡ್ಡ ಕಾಡುಗಳಲ್ಲಿ ಅಲೆದಾಡತೊಡಗಿದ. ಒಮ್ಮೆ ಬೆಳದಿಂಗಳು ಹಾಲು ಚೆಲ್ಲಿದಂತೆ ಹರಡಿದ್ದಿತು. ಅಲೆದಲೆದು ಹುಡುಗನಿಗೆ ಆಯಾಸವೆನಿಸಿತ್ತು. ಮುಂದೆ ನಡೆಯಲು ಕಾಲೇ ಬರಲಿಲ್ಲ; ಹಾಗೆ ಬಳಲಿದ ಹುಡುಗ ಒಂದು ಹಾಸರೆಯ ಮೇಲೆ ಅಳುತ್ತಾ ಕುಳಿತುಕೊಂಡ. ಆತ ಹಾಗೆ ಕುಳಿತಿದ್ದಾಗ ಹಿಂದಿನಿಂದ ಯಾರೋ ನಡೆದು ಬರುವ ಹಜ್ಜೆಯ ಸದ್ದು ಕೇಳಿಸಿತು. ಹಿಂತಿರುಗಿ ನೋಡಿದ. ಹಿಂದೆ ಮಂತ್ರ ಕಲಿಸಿಕೊಟ್ಟಿದ್ದ ಮುದುಕಿ ನಗುನಗುತ್ತಾ ಬರುತ್ತಿದ್ದಳು. ಮುದುಕಿ ಬಂದವಳೇ ಹುಡುಗನ ಬಳಿ ಕುಳಿತುಕೊಂಡು ಅವನ ಕರುಣಕತೆ ಕೇಳಿದಳು. "ನಾನು ನಿನಗೆ ಹೇಳಿದ್ದಲ್ಲವೆ ನಿದ್ರೆ ಮಾಡಬೇಡವೆಂದು? ಈಗ ಮಿಂಚಿದ ಕಾರ್ಯಕ್ಕೆ ಚಿಂತಿಸಿ ಫಲವೇನು? ಆದರೂ ನಿನಗೊಂದು ಉಪಾಯ ಸೂಚಿಸುವೆ. ಈ ಗುಡ್ಡದಾಚೆಯ ಹಳ್ಳಿಯ ಯಜಮಾನನ-ಹಳ್ಳಿ ದೊರೆಯ-ಮನೆಯ ಹಟ್ಟಿಯಲ್ಲಿವೆ ನಿನ್ನ ದನಕರು. ನೀನು ಅವನಲ್ಲಿಗೆ ಹೋಗಿ ದನ ಕಾಯುವ ಕೆಲಸಕ್ಕೆ ನಿಲ್ಲು. ಸಮಯ ಸಿಕ್ಕಿದಾಗ ದನಕರುಗಳನ್ನೆಲ್ಲಾ ಹೊಡೆದುಕೊಂಡು ಬಂದುಬಿಡು." ಹೀಗೆ ಆ ಮುದುಕಿ ಹುಡುಗನಿಗೊಂದು ಉಪಾಯ ಸೂಚಿಸಿದಳು.

ಆಗಲೇ ಹುಡುಗ ತಿಂಗಳು ಬೆಳಕಿಗೆ ಗುಡ್ಡ ಹತ್ತಿ ಕೊಳ್ಳ [illegible] ಹಳ್ಳ ದಾಟಿ ತನ್ನ ದನಗಳಿದ್ದ ಹಳ್ಳಿಗೆ ತಲಪಿದ; ಸೂರ್ಯ [illegible] ಹೊತ್ತಿಗೆ ದನಕಳ್ಳ ಹಳ್ಳಿ ದೊರೆಯ ಮನೆಗೂ ಮುಟ್ಟಿದ. [illegible] ದನಗಳೆಲ್ಲಾ ಇದ್ದುವು. ಹುಡುಗನನ್ನು ಕಂಡ ಕೂಡಲೇ ದನ[illegible] ಅಂಬಾ ಎಂದು ಕರೆದುವು. ಹುಡುಗನ ಸಂತೋಷಕ್ಕೆ ಮಿತಿ[illegible]

ಹುಡುಗ ನೆಟ್ಟಗೆ ದನಕಳ್ಳ ಹಳ್ಳಿ ದೊರೆಯ ಬಳಿ[illegible] ತಾನೊಬ್ಬ ದಿಕ್ಕಿಲ್ಲದ ಪರದೇಶಿ ಹುಡುಗನೆಂದೂ, ದನಕಾ[illegible]

ಚೆನ್ನಾಗಿ ಗೊತ್ತಿದೆ ಎಂದೂ ಹೇಳಿದ. ಹಳ್ಳಿಯ ಯಜಮಾನ ಹುಡುಗನನ್ನು ದನಕಾಯುವ ಕೆಲಸಕ್ಕೆ ನೇಮಿಸಿದ. ಅಂದಿನಿಂದ ದಿನವೂ ದನ ಕಾಯುವುದೇ ಅವನ ಕೆಲಸವಾಯಿತು. ಯಜಮಾನನಿಗೆ ಹುಡುಗನನ್ನು ನೋಡಿ ತುಂಬಾ ಸಂತೋಷವಾಗಿತ್ತು; ಪ್ರೀತಿಯೂ ಉಂಟಾಯಿತು. ಹೀಗೆ ಹಲವು ದಿನಗಳು ಸಂದುವು.

ಹೀಗಿರಲೊಮ್ಮೆ ಹೊಸತು ಊಟ ಉಣ್ಣುವ ಹಬ್ಬ ಬಂತು. ಹಬ್ಬದ ದಿನ ದನಕಳ್ಳ ಹಳ್ಳಿ ದೊರೆಯ ಮನೆಯಲ್ಲಿ ತುಂಬಾ ತಿಂಡಿತಿನಿಸು ಮಾಡಿದ್ದರು; ಪಾನಕ ಪಾನೀಯ ತಯಾರಿಸಿದ್ದರು. ಕಜ್ಜಾಯ ಪಾನಕಗಳನ್ನು ಮಾಡಿಟ್ಟು ಮನೆಯುವರೆಲ್ಲ ಊರ ಹೊರಗಿನ ದೇವಾಲಯಕ್ಕೆ ಹೋದವರೆಲ್ಲ ಸಂಜೆ ಮನೆಗೆ ಹಿಂದಿರುಗಿದರು. ಎಲ್ಲರೂ ಒಟ್ಟು ಸೇರಿ ತಿಂಡಿ ತಿನಿಸು ತಿಂದರು; ಪಾನಕ ಪಾನೀಯ ಕುಡಿದರು. ಬಂಗಿಯ ಅಮಲೇರಿ ಎಲ್ಲರೂ ಕುಳಿತಲ್ಲೇ ಮಲಗಿ ನಿದ್ರಿಸಿಬಿಟ್ಟರು.

ಹೀಗೆ ಮನೆಯುವರೆಲ್ಲ ನಿದ್ರಿಸುತ್ತಿದ್ದಾಗ ದನಕಾಯುವ ಹುಡುಗ ಮೆಲ್ಲನೆ ಹಟ್ಟಿಯ ಬಾಗಿಲು ತೆರೆದ. ಮುದುಕಿ ಹೇಳಿಕೊಟ್ಟಿದ್ದ ಮಂತ್ರ ಹೇಳುತ್ತಾ ತನ್ನ ಹಳ್ಳಿಯ ದಾರಿ ಹಿಡಿದ. ದನಕರುಗಳೂ ಅವನನ್ನು ಹಿಂಬಾಲಿಸಿದುವು. ಮನೆಯುವರಿಗೆ ಇದೊಂದೂ ತಿಳಿಯದು. ಬೆಳಗಾಗುವುದರೊಳಗೆ ಹುಡುಗ ದನಕರುಗಳನ್ನು ಕರೆದುಕೊಂಡು ಒಂದು ಗುಡ್ಡದ [illegible]ಗೆ ಮುಟ್ಟಿದ. ಇತ್ತ ಹಳ್ಳಿಯ ಯಜಮಾನ–ದನ ಕಳ್ಳ–ಎಚ್ಚರಾಗಿ [illegible]ಬ್ಬರ[illegible]ಕುತ್ತಾನೆ! ಏನಿದೆ ಹಟ್ಟಿಯಲ್ಲಿ? ಒಂದೇ ಒಂದು ದನವಾಗಲೀ, ಕರು[illegible] ಹೋರಿಯಾಗಲೀ ಉಳಿದಿಲ್ಲ. ದನಕಾಯುವ ಹುಡುಗನೂ [illegible]ಡಲೇ ತನ್ನ ಸೈನಿಕರನ್ನು ಕರೆದುಕೊಂಡು ದನಕರುಗಳನ್ನು [illegible]ರಿಸ್ಕಾಗಿ ಅವು ಹೋದ ದಾರಿಯಲ್ಲಿಯೇ ಹೊರಟ.

[illegible] ನ ಮೇಲೆ ದನಕರುಗಳನ್ನು ಮೇಯಿಸುತ್ತ ಮುಂದೆ ಹೋಗು[illegible]ಗನಿಗೆ ಸೈನಿಕರ ಕೋಲಾಹಲ ಕೇಳಿಸಿತು. ಈಗ ಮಾಡುವು[illegible]. [illegible]ಡಲೇ ದನಕರುಗಳನ್ನು ಬೇಗ ಬೇಗನೆ ಹೊಡೆದುಕೊಂಡು [illegible]ಗೆ ಹರಿಯುತ್ತಿದ್ದ ಹಳ್ಳದ ಬದಿಯ ಕುರುಚಲು ಕಾಡಿಗೆ ನಡೆದ. [illegible]ರೂ ಬಂದರೆ ಏನು ಮಾಡುವುದೆಂದು ಅವನಿಗೆ ತಿಳಿಯಲಿಲ್ಲ.

ಸುಮ್ಮನೆ ಒಂದೆಡೆ ಕುಳಿತು ಚಿಂತಿಸತೊಡಗಿದ. ಅಷ್ಟರಲ್ಲಿ ಹಿಂದಿನ ಮುದುಕಿ ಬಂದೇ ಬಂದಳು. ಮುದುಕಿ ಬಂದವಳೇ "ಮಗೂ, ನೀನೇನೂ ಚಿಂತಿಸಬೇಡ. ನಾನಿದ್ದೇನೆ ನಿನ್ನ ಸಹಾಯಕ್ಕೆ. ನಿನ್ನ ದನಗಳ ಹಿಂಡಿನಲ್ಲಿ ಆ ಬಿಳಿ ಎತ್ತಿದೆಯಲ್ಲ? ಅದನ್ನೀಗಲೇ ಕೊಂದು ಚರ್ಮ ಸುಲಿದು ಗುರಾಣಿಗಳನ್ನು ಮಾಡು. ಅದರಿಂದ ಅನೇಕ ಗುರಾಣಿಗಳಾಗಬಹುದು." ಎಂದಳು. ಮತ್ತೆ ಮುದುಕಿ ಟ್ರೋಂ ಟ್ರೋಂ ಎಂದು ಹಾಡಿದಳು. ಹಳ್ಳದ ಬದಿಯಲ್ಲಿದ್ದ ಕಪ್ಪೆಗಳೆಲ್ಲ ಟ್ರೋಂ ಟ್ರೋಂ ಎನ್ನುತ್ತ ಮೇಲೆ ಬಂದುವು. ಅಷ್ಟರಲ್ಲಿ ದನಕಾಯುವ ಹುಡುಗ ಎತ್ತನ್ನು ಕೊಂದು ಚರ್ಮ ಸುಲಿದ. ತುಸು ಹೊತ್ತಿನಲ್ಲಿ ಗುರಾಣಿಗಳೂ ಸಿದ್ಧವಾದುವು. ಮುದುಕಿ ಒಂದೊಂದು ಕಪ್ಪೆಗೂ ಒಂದೊಂದು ಗುರಾಣಿ ಕೊಟ್ಟು ಮುಂದೆ ಸಾಗಲು ಅಪ್ಪಣೆ ಮಾಡಿದಳು. ಹಾಗೆಯೇ ಕಪ್ಪೆಗಳೆಲ್ಲಾ ಗುಡ್ಡದ ಬದಿಗೆ ಬಂದು ಗುರಾಣಿ ಹಿಡಿದು ಸಾಲಾಗಿ ನಿಂತುಕೊಂಡುವು. ಅಷ್ಟರಲ್ಲಿ ದನಕಳ್ಳನ ಸೈನಿಕರೂ ದೂರದಿಂದ ಬರುವುದು ಕಂಡಿತು. ನೂರಾರು ಗುರಾಣಿಗಳು ಸಾಲಾಗಿರುವುದನ್ನು ಸೈನಿಕರು ನೋಡಿದರು. ಬೇಗ ಬೇಗನೆ ಹಿಂದೆ ಸರಿದು ಈ ಸಂಗತಿಯನ್ನು ತಮ್ಮ ಯಜಮಾನನಿಗೆ ತಿಳಿಸಿದರು. ಗುರಾಣಿ ಹಿಡಿದವರು ಸೈನಿಕರೆಂದೇ ಅವರ ಭಾವನೆ. ಕಪ್ಪೆಗಳನ್ನು ಕಂಡಿರಲಿಲ್ಲ ಅವರು. ದನಕಳ್ಳ ದೊರೆಯೂ ಈ ಸುದ್ದಿ ಕೇಳಿ ಹೆದರಿ ಹೋ[illegible] ಸೈನಿಕರಿಗೆ ಹಿಂದೆ ಹೋಗಲು ಅಪ್ಪಣೆ ಮಾಡಿದ. ಹೀಗೆ ದನ ಹಿ[illegible] ಬಂದವರು ಹೆದರಿಬಿಟ್ಟು ಬಂದ ದಾರಿಯಿಂದ ಹಿಂದೆ ನಡೆದರು. [illegible]

ಮುದುಕಿಯ ಉಪಾಯದಿಂದ-ಮಂತ್ರಶಕ್ತಿಯಿಂದ-ದನ [illegible] ಹುಡುಗ ಬದುಕಿಕೊಂಡ; ದನಕರುಗಳನ್ನೂ ಹಿಂದೆ ಪಡೆದ[illegible] ಕೊಂಡ. ಮತ್ತೆ ಆತ ಮುದುಕಿಗೆ ವಂದಿಸಿ ಬೇಗ ಬೇಗನೆ ತ[illegible] ಗಳನ್ನು ಹೊಡೆದುಕೊಂಡು ಹಳ್ಳಿಗೆ ನಡೆದ. ಸಂಜೆಯಾಗು[illegible] ಮನೆಗೆ ತಲಪಿದ. ಹಳ್ಳಿಯ ದೊರೆಗೆ ಕಳೆದುಹೋದ ದನಗಳ[illegible] ಮಗ ಹಿಂದಿರುಗಿದುದನ್ನು ಕಂಡು ಹಿಡಿಸಲಾರದ ಹಿಗ್ಗು[illegible] ಹಳ್ಳಿಯ ಜನರೆಲ್ಲ ಒಟ್ಟು ಸೇರಿ ತಮ್ಮ ದೊರೆಯ ಮಗ[illegible] ಆನಂದಕ್ಕಾಗಿ ಹಬ್ಬ ಮಾಡಿದರು. ತಿಂದು ಕುಡಿದು ಹಾ[illegible]

ಅಭ್ಯಾಸ

1. ದನ ಕಾಯುವ ಹುಡುಗನೊಡನೆ ಮುದುಕಿ ಏನೆಂದಳು?

2. ತಪ್ಪಿಸಿಕೊಂಡ ದನಕರುಗಳು ಎಲ್ಲಿದ್ದುವು? ಅದು ಹುಡುಗನಿಗೆ ಹೇಗೆ ತಿಳಿಯಿತು?

3. ದನ ಕಾಯುವ ಹುಡುಗನನ್ನು ಹಿಡಿಯಲು ಬಂದ ಹಳ್ಳಿ ದೊರೆಯ ಸೈನಿಕರು ಬಂದ ದಾರಿ ಹಿಡಿಯಲು ಕಾರಣವೇನು?

4. ದನಕಾಯುವ ಹುಡುಗನ ಕತೆಯನ್ನು ಸಂಕ್ಷೇಪಿಸಿ ಬರೆಯಿರಿ.

5. ಮುಂದಿನ ವಾಕ್ಯಗಳಲ್ಲಿ ಬರುವ ಕ್ರಿಯಾಪದಗಳ ಧಾತುಗಳಾವುವು? ಅವು ಅಕರ್ಮಕವೋ ಸಕರ್ಮಕವೋ ತಿಳಿಸಿರಿ:—ಹುಡುಗ ನೆಟ್ಟಗೆ ದನಕಳ್ಳ ದೊರೆಯ ಬಳಿಗೆ ಹೋಗಿ ತಾನೊಬ್ಬ ದಿಕ್ಕಿಲ್ಲದ ಪರದೇಶಿ ಹುಡುಗನೆಂದೂ, ದನಕಾಯುವ ಕೆಲಸ ಚೆನ್ನಾಗಿ ಗೊತ್ತಿದೆ ಎಂದೂ ಹೇಳಿದ. ಹಳ್ಳಿಯ ಯಜಮಾನ ಹುಡುಗನನ್ನು ದನಕಾಯುವ ಕೆಲಸಕ್ಕೆ ನೇಮಿಸಿದ. ಅಂದಿನಿಂದ ದಿನವೂ ದನಕಾಯುವುದೇ ಆತನ ಕೆಲಸವಾಯಿತು.

6. ಮುಂದಿನ ವಾಕ್ಯಗಳಿಂದ ವಿಶೇಷಣ ವಿಶೇಷ್ಯಗಳನ್ನು ಹೆಕ್ಕಿ ತೆಗೆದು ತೋರಿ:—(ಅ) ಬಂಡೆಯ ಮೇಲೆ ಬಿಸಿಲ ವೇಳೆಗೆ ತಂಪಾದ ನೆಳಲಲ್ಲಿ [illegible]ಗೆ ಹುಡುಗನಿಗೆ ಅಲ್ಲೇ ನಿದ್ದೆ ಬಂದು ಬಿಟ್ಟಿತು. (ಆ) ಹೀಗಿರಲೊಮ್ಮೆ ಬ್ಬ[illegible] ಊಟದ ಹಬ್ಬ ಬಂತು. (ಇ) ನಿನ್ನ ದನಗಳ ಹಿಂಡಿನಲ್ಲಿ ಆ ನನ[illegible]ತ್ತಿದೆಯಲ್ಲ? (ಈ) ಹುಲ್ಲುಗಾವಲಿನಲ್ಲಿ ನಿನಗೊಂದು ದೊಡ್ಡ ಜ[illegible]ಲ್ಲು ತೋರಿಸುತ್ತೇನೆ.

---

೧೨. ಚಂದ್ರಹಾಸನೂ ಕಟುಕರೂ

(ಒಂದು ಗೊಂಡಾರಣ್ಯದಲ್ಲಿ ಚಂದ್ರಹಾಸನೊಡನೆ ವಿಮರ್ದನ ವಿರೋಚನರೆಂಬ ಕಟುಕರು ನಡೆದು ಬರುತ್ತಿರುವರು)



ವಿಮರ್ದನ—ಇದೇ ಸರಿಯಾದ ಸ್ಥಳವಾಗಿದೆ ವಿರೋಚನ [illegible]
ಗಳ ಪರಪರ ಸದ್ದಾಗುವುದು) [illegible]

ವಿರೋಚನ—ಅಯ್ಯೋ! ಅದೆಂತಹ ಸದ್ದು? [illegible]

ವಿಮರ್ದನ—(ಅತ್ತಿತ್ತ ನೋಡಿ) ಏನು ಸದ್ದೋ? [illegible] ಇರುವಂತೆ ಕಾಣುವುದಿಲ್ಲ. ಆದರೂ ತುಸು ಮುಂದೆ [illegible] (ಮುಂದುವರಿಯುವರು)

ವಿರೋಚನ—ನನ್ನ ಮನಸ್ಸು ತುಂಬಾ ಹೆದರುತ್ತಿ[illegible] ಯಾರೋ ನಮ್ಮನ್ನು ಅನುಸರಿಸಿ ಬರುತ್ತಿದ್ದಾರೆಂದೇ ತೋರ[illegible]

ವಿಮರ್ದನ—ನನಗೂ ಹಾಗೆಯೇ. ಮನುಷ್ಯರ ಹ[illegible] ಕೇಳಿಬರುವಂತಾಗುತ್ತಿದೆ. ತುಸು ತಡೆ. (ನಿಂತು ಕಿವಿಕೊ[illegible]

ವಿರೋಚನ—ಯಾರದೂ ಸುಳಿವಿಲ್ಲ.

ವಿಮರ್ದನ—ಈ ನಿರ್ಜನವಾದ ಅರಣ್ಯಕ್ಕೆ ಯಾರು ತಾನೇ ಬಂದಾರು? ನಮ್ಮ ಮನಸ್ಸಿನ ಸಂಶಯದಿಂದಲೇ ಹೀಗಾಗುತ್ತಿರಬೇಕು.

ವಿರೋಚನ—ಅಷ್ಟೇ ಸರಿ. ಇಲ್ಲವಾದರೆ ನಾವಿಲ್ಲಿಗೆ ಬರುವ ಸಂಗತಿ ಪರಮಾತ್ಮನ ಹೊರತು ಮತ್ತಾರಿಗೂ ತಿಳಿದಿರಲಾರದು. (ಮುಂದು ವರಿಯುವರು)

ವಿಮರ್ದನ—ಈ ಮೊದಲು ನಮ್ಮೊಡೆಯನ ಎಷ್ಟೋ ಆಜ್ಞೆಗಳನ್ನು ನಡೆಯಿಸಿರುವೆನಾದರೂ, ಇಂದೇಕೆ ನನ್ನ ಹೃದಯವು ಹೀಗೆ ಬಡಿದು ಕೊಳ್ಳುತ್ತಿರುವುದೋ!

ವಿರೋಚನ—ಇದರಷ್ಟು ಭಯಂಕರ ಕೃತ್ಯವನ್ನು ಹಿಂದೆಂದೂ ಯಾರೂ ಮಾಡಿರಲಾರರು, ಏಕೆಂದರೆ ಎಂತಹ ಕ್ರೂರನಾದ ಕಟುಕನಿಂದ ಲಾದರೂ ನಡೆಯಿಸಲು ಅಸಾಧ್ಯವಾದ ಕಾರ್ಯ ಇದು.

ವಿಮರ್ದನ—ಇದನ್ನು ತಿಳಿದೇ ಮಂತ್ರಿವರ್ಯರು ನಮ್ಮಂತಹ ಕಲ್ಲೆದೆಯ ಕ್ರೂರಿಗಳಿಗೆ ಈ ಕೆಲಸವನ್ನು ಒಪ್ಪಿಸಿರಬೇಕು. ಈ ಮುದ್ದು ಮಗುವನ್ನು ಕೊಂದರೆ ಅವರಿಗಾಗುವ ಲಾಭವಾದರೂ ಏನು?

ವಿರೋಚನ—ಅಯ್ಯೋ! ಈ ದಿಕ್ಕಿಲ್ಲದ ಮಗುವನ್ನು ಕೊಂದಿಕ್ಕು ವುದೆ[illegible] ಹಾಯ್! ನಮ್ಮ ಜನ್ಮಕ್ಕೇ ಧಿಕ್ಕಾರ!

[illegible]ಮರ್ದನ—ಒಡೆಯನ ಈ ಕ್ರೂರವಾದ ಆಜ್ಞೆಯ ರಹಸ್ಯವೇ [illegible]ಕುತ್ತಾವುದಿಲ್ಲವಲ್ಲ? ಛೆ! ಎಂತಹ ನಿರ್ದಯ ಹೃದಯ!

[illegible]ರೋಚನ:—ಹೇಗೂ ಇರಲಿ, ಈ ಕಾರ್ಯ ಮಾತ್ರ ನನ್ನಿಂದ [illegible]ರದು.

[illegible]ರ್ದನ:—ನನ್ನಿಂದ ಅದಕ್ಕೆ ಮೊದಲೇ ಅಸಾಧ್ಯ. ಆದರೆ,

[illegible]ಚನ:—ಆದರೆ ಏನು" ಈ ಪುಟ್ಟ ಹಸುಳೆ ಯಾವ ಅಪರಾಧ [illegible] ಮಾಡಬಲ್ಲದು? ಅದಲ್ಲದೆ, ಯಾರು ತಾನೇ ಈ ಕೋಮಲ [illegible] ಪ್ರ[illegible]ೆ ಖಡ್ಗ ಪ್ರಹಾರ ಮಾಡಬಲ್ಲರು?

[illegible]ರ್ದನ:—ಅದರಲ್ಲೇನು ಸಂಶಯ? ಈ ರೀತಿಯ ಸುಂದರ [illegible] ದೊರಕೀತು? ಚಂಚಲ ನಯನಗಳಿಂದಲೂ, ಉಬ್ಬಿದ

ಕಪೋಲಗಳಿಂದಲೂ, ಮನೋಹರ ವದನದಿಂದಲೂ, ಶೋಭಿಸುವ ಈ ಬಾಲಕನು ಜೀವವಿರುವ ಆಟದ ಗೊಂಬೆಯೇ ಸರಿ.

ವಿರೋಚನ:—ವಿಮರ್ದನ! ಇವನನ್ನು ಯಾವುದಾದರೂ ಉಪಾಯದಿಂದ ಉಳಿಸಲು ಸಾಧ್ಯವಿಲ್ಲವೆ?

ವಿಮರ್ದನ:—ಮಾಡುವುದೇನು? ನಾವಿಬ್ಬರೂ ಮಂತ್ರಿವರ್ಯರ ದಾಸರು. ಅವರಾಜ್ಞೆಯಂತೆ ನಡೆಯುವುದೇ ಪರಾಧೀನರಾದ ನಮ್ಮ ಧರ್ಮ.

ವಿರೋಚನ:—ಈ ಪರಾಧೀನತೆಗೂ, ನಿನ್ನ ತುಚ್ಛ ಧರ್ಮಕ್ಕೂ ಬೆಂಕಿ ಬೀಳಲಿ!

ವಿಮರ್ದನ:—ವಿರೋಚನಾ, ಹಾಗೆ ಹೇಳಬೇಡ. ಧರ್ಮವನ್ನೇಕೆ ದೂರುವೆ? ಲೋಕದಲ್ಲಿ ಧರ್ಮಕ್ಕೆ ವಿರೋಧವಾಗಿ ವರ್ತಿಸುವುದೂ ಮಹಾ ಪಾಪವಲ್ಲವೇ?

ವಿರೋಚನ:—ನಿನ್ನ ಮಾತೇ ನನಗೆ ತಿಳಿಯುವುದಿಲ್ಲ ವಿಮರ್ದನ. ಹಾಗಾದರೆ ನಿರಪರಾಧಿಯಾದ ಇವನನ್ನು ಕೊಲ್ಲುವುದೂ ಒಂದು ಧರ್ಮವೇನು?

ವಿಮರ್ದನ:—ಗೆಳೆಯಾ, ಸಂಶಯವೇನು? ನಾವೀಗ ಮಾಡಲಿರುವ ಗುಣ ದೋಷಗಳೆಲ್ಲವೂ ನಮ್ಮೊಡೆಯನ ತಲೆಯ ಮೇಲೆಯೇ ಬೀಳುವುದು.

ವಿರೋಚನ:—ಸೇವಕನ ಜನ್ಮ ಅದೆಷ್ಟು ಘೋರವಾಗಿದೆ! [illegible] ವಿರಲಿ, ಅನ್ಯಾಯವಿರಲಿ, ಒಡೆಯನ ಆಜ್ಞೆಯು ಶಿರೋಧಾ[illegible] ಅದೆಂತೂ ಇದ್ದುಕೊಳ್ಳಲಿ! ನಾನು ಮಾತ್ರ ಈ ಕೆಲಸಕ್ಕೆ ಕೈಯಿ[illegible]

ವಿಮರ್ದನ:—ದೊಡ್ಡ ಬಿಕ್ಕಟ್ಟಿನಲ್ಲಿ ಬಿತ್ತಲ್ಲ ಈಗ! ನಾ[illegible] ಯೆತ್ತಲಾರೆ. ಎತ್ತದೆ ಉಪಾಯವಿಲ್ಲ. ಸ್ವಾಮಿಯ ಆಜ್ಞೆ[illegible] ಯೆತ್ತ ಹೋದರೆ ಈ ಮುದ್ದು ಮಗುವಿನ ದೀನದೃಶ್ಯವು ಹ[illegible] ಕುಗ್ಗಿಸುವುದು. ಆಹಾ! ಇಷ್ಟೊಂದು ಸುಂದರನಾಗಿದ್ದ[illegible] ಅದೃಷ್ಟಹೀನನಾಗಿ ಜನಿಸಬಾರದಿತ್ತು. (ಚಂದ್ರಹಾಸನೊಡ[illegible] ನಾವು ನಿನ್ನನ್ನು ಇಲ್ಲೇ ಕೊಂದುಬಿಟ್ಟರೆ ಏನು ಮಾಡುವೆ?

ಚಂದ್ರಹಾಸ:—ಅಯ್ಯಾ, ನೀವು ನನ್ನನ್ನು ಕೋ[illegible]

ತಂದಿರೇ? ಹರಿಮಂದಿರಕ್ಕೆಂದು ಕರೆತಂದಿರಲ್ಲವೆ? ಹರಿಮಂದಿರಕ್ಕೆ ಇನ್ನೆಷ್ಟು ದೂರವಿದೆ?

ವಿರೋಚನ:—(ವಿಮರ್ದನನೊಡನೆ) ಗೆಳೆಯಾ, ಈ ಮಗುವಿನ ಇಂಪಾದ ಮಾತುಗಳನ್ನು ಕೇಳಿದೆಯಾ?

ವಿಮರ್ದನ:—ಈಗ ತಾನೇ ಅರಳಿದ ಗುಲಾಬಿ ಹೂವಿನಂತಿರುವ ಇವನ ಮುಖದಿಂದ ಹೊರಡುವ ಮಾತುಗಳು ವೀಣೆಯ ಸ್ವರದಂತಿದೆ. ಇವನ ಮಾತಿನ ಮುಂದೆ ಮಧುವಿನ ಮಾಧುರ್ಯವೂ, ಕೋಗಿಲೆಯ ಕಲಕಂಠವೂ ಸುಳ್ಳಾಗಿ ತೋರುವುವು. ಆದರೆ,

ವಿರೋಚನ:—ನಿನ್ನ ಆದರೆಗೆ ಅಂತ್ಯವಿಲ್ಲ; ಏನದು ಹೇಳು.

ವಿಮರ್ದನ:—ಹೇಳಲು ನಾಲಗೆಯೇ ಬಾರದು. ಇತ್ತ ನೋಡು, ನಮ್ಮ ಕೆಲಸವು ನಡೆದುದಾದರೆ, ರಮಣೀಯವಾದ ಇವನ ಕಂಠವು ತುಂಡಾಗಿ ಕೆಳಗುರುಳುವುದು; ಇವನ ವದನದಲ್ಲಿ ಹರಡಿದ ಮಂದಸ್ಮಿತವು ಮಾಯವಾಗುವುದು; ಇಷ್ಟು ಮಾತ್ರವಲ್ಲ, ಇವನ ಸರಳವಾದ ನಡೆನುಡಿಗಳೆಲ್ಲಾ ಕೊನೆಗೊಂಡು ರಕ್ತಮಾಂಸಗಳಿಂದ ಭೂಮಿಯು ಕೆಂಪಾಗುವುದು.

ವಿರೋಚನ:—ಈ ಸಂಗತಿಗಳನ್ನೆಲ್ಲ ಸ್ಮರಿಸುತ್ತಲೇ ನನ್ನ ಮನಸ್ಸು ವ್ಯಾಕುಲದಿಂದ ಮುಂಗಾಣದಾಗುವುದು. (ಮೇಲೆ ನೋಡಿ) ದೇವಾ! ವುದರಾ ಹೂವಾಗಿ ಪರಿಮಳವನ್ನು ಬೀರಲಿರುವ ಈ ಮುಕುಲವು ಮೊದಲೇ [illegible]ನ್ಯಾಗೆ ಹುಳುವಂತಾಯಿತೆ? ಈ ಮುದ್ದು ಮಗುವನ್ನು ನಮ್ಮಿಂದ ಕೊಲ್ಲಿಸ ಬ್ಬರ[illegible]ಕುತ್ತ[illegible]ಷ್ಟಿಸಿದೆಯಾ? ವಿರೋಚನಾ, ನಿನ್ನ ಕಟ್ಟಕಡೆಯ ನಿರ್ಧಾರವೇನು? ನನ[illegible]ವನ್ನು ಕೊಂದೇ ಬಿಡುವೆಯೇನು?

[illegible]ರ್ದನ:—ಒಳ್ಳೆಯ ಮುತ್ತೊಂದನ್ನು ಒಡೆದು ಪುಡಿಮಾಡಲು [illegible]ರು ತಾನೇ ಮುಂದಾದೀತು? ಆದರೂ ಒಡೆಯನ ಅಪ್ಪಣೆ [illegible]ವುದು ಹೇಗೆ?

[illegible]ೀಚನ:—ಹಾಗಾದರೆ, ಮಗುವನ್ನು ಇಲ್ಲಿಯೇ ಬಿಟ್ಟು ನಾವು [illegible]ಂಡಿಯೋಣ. ಇವನ ಶರೀರವು ಕ್ರೂರ ಮೃಗಗಳ ಬಾಯಿಗೆ [illegible]ು ಕಂಡಿತವಾದರೂ, ನಮ್ಮ ಕೈಗಳಿಂದಲೇ ಕೊಲ್ಲತಕ್ಕ ಕೆಲಸವು [illegible]ಗರಿಂದ ಒಡೆಯನ ಅಪ್ಪಣೆಯೂ ನೆರವೇರಿದಂತಾಗುವುದು.

ವಿಮರ್ದನ:—(ಯೋಚಿಸಿ) ಇದೇ ಸರಿಯಾದ ಉಪಾಯ. ಆದರೆ ಈ ಬಾಲಕನನ್ನು ನೋಡುತ್ತಲೇ ನನ್ನ ಹೃದಯವು ಕರಗಿ ನೀರಾಗುವುದು. ಇವನನ್ನು ಇಲ್ಲೇ ಸಾಯಲು ಬಿಟ್ಟು ಹಿಂದಿರುಗುವುದೂ ನನಗೆ ಬೇಸರವನ್ನು ಉಂಟುಮಾಡುತ್ತದೆ.

ವಿರೋಚನ:—ನಮ್ಮ ಸ್ವಾಮಿಯು ನಮಗೆ ಕಠಿಣವಾದ ಆಜ್ಞೆಯನ್ನೇನೋ ಕೊಟ್ಟಿರುವನಾದರೂ, ದೇವರಾದರೂ ನಮಗೂ ಆಲೋಚನಾ ಶಕ್ತಿ ಕೊಟ್ಟಿರುವನಷ್ಟೆ? ನಾವಾದರೂ ಪೂರ್ವಾಪರ ವಿಚಾರ ಮಾಡದೆ, ಕುರುಡರಂತೆ ಕೆಲಸಕ್ಕೆ ಕೈಹಾಕಬಹುದೆ?

ವಿಮರ್ದನ:—ಗೆಳೆಯಾ, ನಿನ್ನ ಮಾತುಗಳೆಲ್ಲಾ ನಿಜವಾದುದೇ. ಆದರೆ ಇದರಲ್ಲಿ ಒಂದು ಸಂಶಯವು ನನ್ನನ್ನು ಕಾಡುತ್ತಿದೆ. ಕಾರಣಾಂತರಗಳಿಂದ ಈ ಬಾಲಕನು ಬದುಕಿ ಉಳಿದನಾದರೆ?

ವಿರೋಚನ:—ಆ ವಿಚಾರಗಳನ್ನೆಲ್ಲಾ ಬಿಟ್ಟು ಬಿಡು. ಇವನಿಗೆ ಬದುಕುವ ಭಾಗ್ಯವಿರುತ್ತಿದ್ದರೆ ಮಂತ್ರಿವರ್ಯರ ಕ್ರೋಧ ದೃಷ್ಟಿ ಇವನ ಮೇಲೆ ಬೀಳುತ್ತಿತ್ತೇ? ಮಾತ್ರವಲ್ಲ, ಕಾಡಿನಲ್ಲಿ ಹುಲಿ ಕರಡಿಗಳು ಇವನನ್ನು ತಿನ್ನದೆ ಬಿಡಲುಂಟೆ? ನಮಗೆ ಪಾರಾಗಲು ಇನ್ನೂ ಒಂದು ಸುಗಮವಾದ ಉಪಾಯವಿದೆ.

ವಿಮರ್ದನ:—ಏನದು ಉಪಾಯ? [illegible]

ವಿರೋಚನ:—ಇವನ ಮರಣವು ಮಂತ್ರಿಯವರಿಗೆ [illegible] ವಂತೆ ಇವನ ಶರೀರದಿಂದ ಯಾವುದಾದರೊಂದು ಅವಯವವನ[illegible] ಹೋಗಿ ಅವರಿಗೆ ತೋರಿಸಿದರಾಯಿತು.

ವಿಮರ್ದನ:—ಇದರಿಂದ ಮಗುವಿಗೆ ಅಪಾಯ [illegible] ದಲ್ಲವೆ? ಒಟ್ಟಾರೆ ಹಾವು ಸಾಯದಂತೆಯೂ ಕೋಲು ಮುರಿ[illegible] ನೀನೇ ಒಂದು ಉಪಾಯ ಯೋಚಿಸಿ ನೋಡು.

ವಿರೋಚನ:—(ಚಂದ್ರಹಾಸನನ್ನು ಅಂಗುಷ್ಠದಿಂದ ನ[illegible] ದಿಟ್ಟಿಸಿ ನೋಡಿ) ಇದೋ, ಇವನ ಬಲಗಾಲಲ್ಲಿ ಆರು [illegible] ಆರನೆಯ ಬೆರಳನ್ನು ಕತ್ತರಿಸಿ ಬಿಡೋಣ.)

ವಿಮರ್ದನ:—ಹಾ! ಈಗಲೀಗ ಬದುಕಿದೆವು.

ಉಪಾಯವನ್ನು ಹೊಳೆಯಿಸಿರಬೇಕು. ನಾವೀಗ ಆ ಆರನೆಯ ಬೆರಳನ್ನು ಕತ್ತರಿಸಿ ತೆಗೆಯೋಣ. ಆ ಬೆರಳನ್ನು ನಮ್ಮ ಉಪಕಾರಕ್ಕೆಂದೇ ದೇವರು ಸೃಷ್ಟಿಸಿರಬೇಕು.

ವಿರೋಚನ:—ಹಾಗಾದರೆ ನಾವೀಗ ತಡಮಾಡುವುದೇಕೆ?

ವಿಮರ್ದನ:—ಸರಿ, ಅದೋ ಅಲ್ಲಿ ನೋಡು. ಲತಾವೃಕ್ಷಗಳಿಂದ ತಾನಾಗಿಯೇ ನಿರ್ಮಿತವಾದ ಆ ಕುಂಜದ ಕಡೆ ನಡೆಯುವ. ಅದೇ ನಮ್ಮ ಕಾರ್ಯಕ್ಕೆ ಯೋಗ್ಯವಾದ ಸ್ಥಳ.

ವಿರೋಚನ:—ಆಹಾ! ಆ ಕಡೆಯಿಂದ ಬೀಸುವ ಗಾಳಿ ಎಷ್ಟೊಂದು ಸುಗಂಧಿತವಾಗಿದೆ! ಅಲ್ಲಿಗೇ ಹೋಗೋಣ.

ವಿಮರ್ದನ:—(ಮುಗುಳು ನಗುತ್ತ) ಅದು ಸುಗಂಧವಲ್ಲ; ದೈವವು ಸಂತಸಗೊಂಡು ನಮಗಿತ್ತ ಪುರಸ್ಕಾರ.

ವಿರೋಚನ:—ಹಾಗೆಯೇ ಆಗಲಿ. (ಚಂದ್ರಹಾಸನೊಡನೆ) ಮಗೂ, ನಡೆ. ನಿನ್ನ ಹರಿಮಂದಿರವು ಅಲ್ಲಿದೆ. ಅಲ್ಲಿ ನೀನು ದೇವರನ್ನು ಕಾಣುವೆ.

ಚಂದ್ರಹಾಸ:—ಓಹೋ! ಅಲ್ಲಿದೆಯೇ ಹರಿಮಂದಿರ? ಹರೇರಾಮ ಹರೇ ರಾಮ, ರಾಮ ರಾಮ ಹರೇ ಹರೇ. ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ.

(ಮೂವರೂ ಲತಾಕುಂಜದೆಡೆಗೆ ನಡೆಯುವರು.)

ಅಭ್ಯಾಸ

[illegible]ಟುಕರು ಕೊಲ್ಲಲು ತರುವ ಮೊದಲು ಚಂದ್ರಹಾಸನ [illegible]

[illegible]ವು ಸಾಯದಂತೆಯೂ ಕೋಲು ಮುರಿಯದಂತೆಯೂ [illegible]ಡಿದ ಉಪಾಯವೇನು?

[illegible]ಟುಕರು ಅಡವಿಯಲ್ಲಿ ಬಿಟ್ಟು ಹೋದ ಚಂದ್ರಹಾಸನ ಗತಿ [illegible]

4. ಚಂದ್ರಹಾಸನ ಸಂಪೂರ್ಣ ಕತೆಯನ್ನು ತಿಳಿದುಕೊಳ್ಳಿರಿ.

5. ಮುಂದಿನ ವಾಕ್ಯಗಳಲ್ಲಿ ಅಧ್ಯಾಹಾರವಾದ ಕ್ರಿಯಾಪದಗಳನ್ನು ಕಂಡುಹಿಡಿಯಿರಿ:—(ಅ) ಎಂತಹ ಕ್ರೂರನಾದ ಕಟುಕನಿಂದಲೂ ನಡೆಯಿಸಲು ಅಸಾಧ್ಯವಾದ ಕಾರ್ಯ ಇದು. (ಆ) ನಾವಿಬ್ಬರೂ ಮಂತ್ರಿವರ್ಯರ ದಾಸರು. (ಇ) ಎಂತಹ ನಿರ್ದಯ ಹೃದಯ! (ಈ) ಹಾಯ್ ನಮ್ಮ ಜನ್ಮಕ್ಕೇ ಧಿಕ್ಕಾರ!

6. ಆಜ್ಞೆ, ಸದ್ದು, ಜನ್ಮ, ಮೃಗ, ಮೊಗ—ಈ ಮಾತುಗಳಲ್ಲಿ ತದ್ಭವಗಳಿಗೆ ಸಂಸ್ಕೃತಗಳನ್ನೂ, ಸಂಸ್ಕೃತಗಳಿಗೆ ತದ್ಭವ ರೂಪಗಳನ್ನೂ ಕೊಡಿರಿ.


7. ಪೂರ್ವಾಪರ, ಮನೋಹರ, ದೀನದೃಷ್ಯ, ಶಿರೋಧಾರ್ಯ, ಲತಾವೃಕ್ಷ—ಈ ಶಬ್ದಗಳ ಅರ್ಥವೇನು?

8. ಮುಂದಿನ ವಾಕ್ಯಗಳಲ್ಲಿ ಬಿಟ್ಟುಹೋದ ವಿರಾಮ ಚಿಹ್ನಗಳನ್ನು ಸೇರಿಸಿರಿ:—ಅಯ್ಯೋ ಈ ದಿಕ್ಕಿಲ್ಲದ ಮಗುವನ್ನು ಕಡಿದಿಕ್ಕುವುದೆ ಹಾಯ್ ನಮ್ಮ ಜನ್ಮಕ್ಕೇ ಧಿಕ್ಕಾರ ಒಡೆಯನ ಈ ಕ್ರೂರವಾದ ಆಜ್ಞೆಯ ರಹಸ್ಯವೇ ಗೊತ್ತಾಗುವುದಿಲ್ಲವಲ್ಲ ಛೆ ಎಂತಹ ನಿರ್ದಯ ಹೃದಯ ಹೇಗೂ ಇರಲಿ ಈ ಕಾರ್ಯವು ನನ್ನಿಂದ ಮಾತ್ರ ನಡೆಯಲಾರದು.

---

೧೩. ಔದ್ಯೋಗಿಕ ಚಕ್ರವರ್ತಿ

ಯಾವುದೊಂದು ರಾಷ್ಟ್ರವಾದರೂ ಪ್ರಗತಿಹೊಂದಬೇಕಾದರೆ ಆ ರಾಷ್ಟ್ರದ ವ್ಯವಸಾಯ ಉದ್ಯೋಗಗಳೆರಡೂ ಪ್ರಗತಿಹೊಂದಬೇಕು. ದೊಡ್ಡ ದೊಡ್ಡ ರಾಷ್ಟ್ರಗಳ ಉನ್ನತಿ ಅವನತಿಗಳೆರಡೂ ಅಲ್ಲಿನ ಉದ್ಯೋಗ ವ್ಯವಸಾಯಗಳನ್ನು ಹೊಂದಿಕೊಂಡಿವೆ. ಇಂದು ನಮ್ಮ ಭಾರತದ ಬಡತನಕ್ಕೆ ಮುಖ್ಯವಾಗಿ ಈ ಎರಡು ವಿಷಯಗಳ ಹೀನಸ್ಥಿತಿಯೇ ಕಾರಣವಾಗಿದೆ ಎನ್ನಬಹುದು. ಈ ಎರಡರಲ್ಲಿ ಯಾವುದಾದರೊಂದು ಮಾತ್ರ ಉನ್ನತಿಹೊಂದಿದರೂ ಸಾಲದು; ನಮ್ಮದು ವ್ಯವಸಾಯ ಪ್ರಧಾನವಾದ ದೇಶ; ಹಾಗೆಂದು ನಾವು ವ್ಯವಸಾಯವನ್ನು ಮಾತ್ರ ಪ್ರಗತಿಪರವಾಗಿ ಮಾಡಿದರೆ ಸಾಲದು.



ಸರ್ ಜೆ. ಎನ್. ತಾತಾ

ವುದರ[illegible]
[illegible]ಗೆ ಈ ಔದ್ಯೋಗಿಕ ಯುಗ. ಉದ್ಯೋಗ ಉನ್ನತಿ ಹೊಂದದೆ ನಮ್ಮ ಬ್ರ[illegible]ಂಚದ ಉಳಿದ ರಾಷ್ಟ್ರಗಳನ್ನು ಸರಿಗಟ್ಟಲಾರದು. ಇಂದು ನ[illegible] ರಾಷ್ಟ್ರಗಳು ಉನ್ನತಿಯ ಶಿಖರಕ್ಕೇರಿ ಸಂಪತ್ಸಮೃದ್ಧವಾಗಿ [illegible]ದಾದರೂ ತಮ್ಮ ಔದ್ಯೋಗಿಕ ಶಕ್ತಿಯಿಂದಲೇ ಅಲ್ಲದೆ ಬೇರಲ್ಲ. [illegible] ನಮ್ಮ ಸ್ವತಂತ್ರ ಭಾರತದಲ್ಲಿ ಔದ್ಯೋಗಿಕ ಉನ್ನತಿಯ [illegible] ಲಕ್ಷ್ಯ ಹರಿಯತೊಡಗಿದೆ. ಇಂದು ನಮ್ಮಲಿ ಹಲವಾರು [illegible]ದ್ಯೋಗಪತಿಗಳು ಔದ್ಯೋಗಿಕ ಪ್ರಗತಿಗಾಗಿ ಹೆಣಗಾಡುತ್ತಿ[illegible]ಷ್ಟು ಕಾರ್ಯವೂ ಭರದಿಂದ ಸಾಗುತ್ತಿದೆ. ಆದರೆ ಇಂದಿಗೆ [illegible]ನದ ಮೊದಲು ನಮ್ಮ ದೇಶದಲ್ಲಿ ಔದ್ಯೋಗಿಕ ಕಾರ್ಯ [illegible]ತ್ತಿರಲಿಲ್ಲ; ಮೇಧಾವಿಗಳಾದ ಉದ್ಯೋಗಪತಿಗಳೂ

ಇರಲಿಲ್ಲ. ಔದ್ಯೋಗಿಕ ಉನ್ನತಿ ಸಾಗಬೇಕಾದರೆ ದೇಶ ಸ್ವತಂತ್ರವಾಗಿರಬೇಕು. ಅಂದು ಸ್ವಾತಂತ್ರ್ಯವೂ ಇರಲಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಿದ್ಧವಾದ ವಸ್ತುವೊಡವೆಗಳು ಭಾರತದ ಹಳ್ಳಿಹಳ್ಳಿಗಳಲ್ಲಿಯೂ ಬಂದು ತುಂಬುತ್ತಿದ್ದುವು. ಬಟ್ಟೆಯೊಂದಕ್ಕಾಗಿಯೇ ಎಷ್ಟೋ ಕೋಟಿ ರೂಪಾಯಿ ಭಾರತದಿಂದ ಹರಿದುಹೋಗುತ್ತಿತ್ತು. ಇನ್ನಿತರ ವಸ್ತುಗಳ ಅವಸ್ಥೆಯೂ ಇದೆ. ಯಾವ ವಸ್ತುವೊಡವೆ ಬೇಕಾದರೂ ಭಾರತೀಯರು ವಿದೇಶೀಯರ ಮುಖನೋಡುವ ಸ್ಥಿತಿ ಬಂದು ಒದಗಿತ್ತು. ಅಂತಹ ಕಂಗಾಲ ಸ್ಥಿತಿಯಲ್ಲಿ ಭಾರತದ ಔದ್ಯೋಗಿಕ ಪ್ರಗತಿಯನ್ನು ಸಾಧಿಸಲಿಕ್ಕಾಗಿಯೇ ಎಂಬಂತೆ ಮಹಾಪುರುಷರೊಬ್ಬರು ಜನ್ಮತಾಳಿದರು; ದೇಶದ ಔದ್ಯೋಗಿಕ ಉನ್ನತಿಗಾಗಿ ಜೀವಮಾನವೆಲ್ಲ ಎಡೆಬಿಡದೆ ದುಡಿದರು; ಭಾರತದ ಔದ್ಯೋಗಿಕ ಚಕ್ರವರ್ತಿಯೆಂದು ಕೀರ್ತಿಗಳಿಸಿ ಅಮರರಾದರು. ಅವರೇ ಸರ್ ಜಮ್‌ಶೇದಜೀ ನಸರವಾನಜೀ ತಾತಾ.

ಜಮ್‌ಶೇದಜೀ ತಾತಾ ಕ್ರಿ. ಶ. 1839ರಲ್ಲಿ ಮುಂಬಾಯಿಯ ಕುಲೀನ ಫಾರಸೀ ಕುಟುಂಬದಲ್ಲಿ ಜನಿಸಿದರು. ಬಾಲ್ಯದಲ್ಲಿ ಅಲ್ಪಸ್ವಲ್ಪ ಶಿಕ್ಷಣಹೊಂದಿ ಎಳೆಹರೆಯದಲ್ಲಿಯೇ ಅವರು ಔದ್ಯೋಗಿಕ ಕ್ಷೇತ್ರಕ್ಕೆ ಕಾಲಿರಿಸಿದರು; ಮುಂಬಾಯಿಯಲ್ಲಿ ಅದೊಂದು ಔದ್ಯೋಗಿಕ ಸಂಸ್ಥೆಯಲ್ಲಿ ಕೆಲಸಮಾಡತೊಡಗಿದರು. ಜಮ್‌ಶೇದಜೀಯವರಿಗೆ ಉದ್ಯೋಗ[illegible] ಹಿಡಿತವನ್ನೂ ಚಾಣಾಕ್ಷತೆಯನ್ನೂ ಕಂಡ ಆ ಔದ್ಯೋಗಿಕ ಸಂ[illegible] ಚೀನದಲ್ಲಿ ತಮ್ಮ ಸಂಸ್ಥೆಯ ಶಾಖೆಯೊಂದನ್ನು ತೆರೆದು ಅಲ್ಲಿ ಕೆ[illegible]ವುದಕ್ಕಾಗಿ ಅವರನ್ನೇ ಕಳುಹಿಸಿಕೊಟ್ಟರು. ಚೀನದ ಶಾಂಘ[illegible]ದಲ್ಲಿ ಸಂಸ್ಥೆಯ ಶಾಖೆಯನ್ನು ತೆರೆದು ಜಮ್‌ಶೇದಜೀಯವರು [illegible]ಪೂರ್ವಕವಾಗಿ ಕಾರ್ಯ ಸಾಧಿಸಿ ಸಫಲರಾದರು. ಅದರಿಂ[illegible]ಯಿಯ ಆ ವರ್ತಕ ಸಂಘಕ್ಕೆ ಸಾಕಷ್ಟು ಲಾಭವೂ ದೊರಕಿ[illegible] ಆ ಸಂಸ್ಥೆಯವರು ಜಮ್‌ಶೇದಜೀಯವರನ್ನು ಇಂಗ್ಲೆಂಡಿಗೆ ಕ[illegible] ಅಲ್ಲಿಯೂ ಜಮ್‌ಶೇದಜೀಯವರು ಸುವ್ಯವಸ್ಥಿತವಾದ ರೀತಿಯ[illegible] ಸಾಗಿಸಿ ಕೃತಕೃತ್ಯರಾದರು. ಹೀಗೆ ಔದ್ಯೋಗಿಕ ಕ್ಷೇತ್ರದ[illegible]ತ್ತಿದ್ದ ಜಮ್‌ಶೇದಜೀಯವರಿಗೆ ಔದ್ಯೋಗಿಕ ಕಾರ್ಯ[illegible]

ಅನುಭವವೂ ಉಂಟಾಯಿತು. ಆಗ ಅವರು ಔದ್ಯೋಗಿಕ ಕಾರ್ಯ ವೆಂದು ಕೇವಲ ಆಯಾತನಿರ್ಯಾತಗಳ ಕೆಲಸವನ್ನಷ್ಟೇ ಸಾಗಿಸಿದರೆ ಸಾಲ ದೆಂದೂ, ಸ್ವತಃ ಭಾರತದಲ್ಲಿಯೇ ಔದ್ಯೋಗಿಕ ಕಾರ್ಖಾನೆಗಳನ್ನು ತೆರೆದು ಉತ್ಪಾದನೆಯ ಕೆಲಸ ಕೈಕೊಳ್ಳಬೇಕೆಂದೂ ತಿಳಿದುಕೊಂಡರು. ವಿದೇಶ ಗಳ ವಸ್ತುವೊಡವೆಗಳನ್ನು ಕೊಂಡುಕೊಂಡು ವ್ಯಾಪಾರ ವ್ಯವಹಾರ ಸಾಗಿಸಿ ದರೂ ಆದರಿಂದ ಹೆಚ್ಚಿನ ಲಾಭವೂ ದೊರಕಲಾರದು; ದೇಶದ ಔದ್ಯೋಗಿಕ ಉನ್ನತಿಯೂ ಸಾಧಿಸಲಾರದು. ಹೀಗೆಂದೆಣಿಸಿದ ಜಮ್‌ಶೇದಜೀಯವರು ಸ್ವದೇಶದಲ್ಲಿಯೇ ಯೋಗ್ಯಕಾರ್ಖಾನೆಗಳನ್ನು ತೆರೆದು ಉತ್ಪಾದನೆಯ ಕೆಲಸ ಕೈಕೊಳ್ಳಲು ನಿಶ್ಚಯಿಸಿದರು.

ಆಗ ಭಾರತದಲ್ಲಿ ಕಾರ್ಖಾನೆಗಳೆಂದರೆ ಹೆಸರಿಗೆ ಮಾತ್ರ ಕೆಲಸ ನಡೆಯುತ್ತಿದ್ದ ಕೆಲವು ನೂಲಿನ ಗಿರಣಿಗಳು; ಬಟ್ಟೆಯ ಗಿರಣಿಗಳು. ಅವುಗಳಲ್ಲಿ ಸಿದ್ಧವಾದ ನೂಲಾಗಲೀ ಬಟ್ಟೆಯಾಗಲೀ ದಪ್ಪದಪ್ಪವಾಗಿ ದೊರಗು ದೊರಗಾಗಿದ್ದು ವಿದೇಶೀ ಗಿರಣಿಗಳಲ್ಲಿ ತಯಾರಾದ ನೂಲು ಬಟ್ಟೆಗಳನ್ನು ಯಾವ ರೀತಿಯಲ್ಲಿಯೂ ಸರಿಗಟ್ಟುತ್ತಿರಲಿಲ್ಲ. ಜಮ್‌ಶೇದಜೀ ಯವರು ವಿದೇಶೀನೂಲು ಬಟ್ಟೆಗಳನ್ನು ಸರಿಗಟ್ಟುವಂತಹ ಉತ್ತಮ ತರಗತಿಯ ನೂಲನ್ನೂ ಬಟ್ಟೆಯನ್ನೂ ತಯಾರಿಸಬೇಕೆಂದು ಸಂಕಲ್ಪ ವೃದರು...ರು. ಆದಕ್ಕಾಗಿ ಅವರು ಮೊದಲಾಗಿ ಹತ್ತಿಯ ಉತ್ಪಾದನೆಯ ...ನ್ನಾಗೆ ...ಎದ ನಾಗಪುರದಲ್ಲಿ 'ಎಂಪ್ರೆಸ್ ಮಿಲ್' ಎಂಬ ಹೆಸರಿನಿಂದ ಒಂದು ಬೃ...ತ್ತ...ನ್ನು ತೆರೆದರು. ಈ ಗಿರಣಿಯಲ್ಲಿ ಜಮ್‌ಶೇದಜೀಯವರ ಸಂಕಲ್ಪ ನನ...ತ್ತಮತರಗತಿಯ ನೂಲೂ ಬಟ್ಟೆಯೂ ಸಿದ್ಧವಾಗತೊಡಗಿತು; ಜನ...ಗ್ರಾಹಕರೂ ದೊರೆತರು. ಈ ಗಿರಣಿ ಕೆಲವೇ ವರ್ಷಗಳೊಳಗೆ ...ರೆ...ಉದ್ಯೋಗದಲ್ಲಿ ಅಪೂರ್ವವಾದ ಉನ್ನತಿ ಸಾಧಿಸಿತು; ಲಾಭ ...ಟ್ಟಿ ಕಟ್ಟಿ...ಸಿಕೊಟ್ಟಿತು. ಇದು ಜಮ್‌ಶೇದಜೀ ತಾತಾರವರ ಮೊದಲ ...ದ್ಯೋಗಿಕ ವಿಜಯವೆನ್ನಬಹುದು.

...ಪ್ರ...ಶೇದಜೀಯವರ ಬುದ್ಧಿ ಬಲು ತೀಕ್ಷ್ಣವಾದುದು. ಸಮಯಕ್ಕೆ ...ಕೆಲಸಮಾಡುವ ಸೂಕ್ಷ್ಮದೃಷ್ಟಿ ಅವರದು. ದೇಶದ ಔದ್ಯೋಗಿಕ ...ೕಗಲಾಡಿಸಿ ಉದ್ಯೋಗದಲ್ಲಿ ವಿಕಾಸವನ್ನುಂಟುಮಾಡು

ವುದೇ ದೇಶದ ಉನ್ನತಿಯೆಂದು ತಿಳಿದ ಅವರು ಅದಕ್ಕೆ ಸರಿಯಾಗಿ ಕಾರ್ಯ ಮಗ್ನರಾದರು. ಔದ್ಯೋಗಿಕ ಉನ್ನತಿ ಸಾಧಿಸಬೇಕಾದರೆ ಸಾಕಷ್ಟು ಆರ್ಥಿಕ ಬಲಬೇಕು. ಆದರೆ ಅಂದಿನ ವಿದೇಶೀ ಸರಕಾರದ ಲಕ್ಷ್ಯ ದೇಶದ ಔದ್ಯೋಗಿಕ ಕಾರ್ಯಗಳ ಕಡೆಗಿರಲಿಲ್ಲ. ದೇಶದ ಔದ್ಯೋಗಿಕ ಕಾರ್ಯಕ್ಕೆ ಸರಕಾರದಿಂದ ಯಾವ ಸಹಾಯವೂ ಸಿಗುತ್ತಿರಲಿಲ್ಲ. ಆದುದರಿಂದ ಅಂದಿನ ಪರತಂತ್ರ ಭಾರತದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ ಕಾರ್ಯ ಕೈಕೊಂಡು ಉನ್ನತಿ ಸಾಧಿಸುವುದು ಸಾಮಾನ್ಯ ಕಾರ್ಯವಾಗಿರಲಿಲ್ಲ. ಸರಕಾರದ ಯಾವ ರೀತಿಯ ಸಹಕಾರವಾಗಲೀ ಸಹಾಯವಾಗಲೀ ಇಲ್ಲದೆ ಜಮ್‌ಶೇದಜೀಯವರು ಕಾರ್ಯಸಾಧಿಸಲು ಸಂಕಲ್ಪಮಾಡಿದರು. ಅದಕ್ಕಾಗಿ ಅವರು ಕೆಲಮಂದಿ ಉದ್ಯೋಗತಜ್ಞರನ್ನು ತಮ್ಮ ಸ್ವಂತವೆಚ್ಚದಿಂದ ವಿದೇಶಗಳಿಗೆ ಕಳುಹಿಸಿಕೊಟ್ಟು ಔದ್ಯೋಗಿಕ ಜ್ಞಾನ ಸಂಪಾದಿಸಿ ಬರುವ ವ್ಯವಸ್ಥೆಮಾಡಿದರು. ಹಾಗೆ ವಿದೇಶಗಳಿಗೆ ಹೋಗಿ ಉದ್ಯೋಗದಲ್ಲಿ ತಿಳುವಳಿಕೆ ಸಂಪಾದಿಸಿ ಬಂದ ತಜ್ಞರು ಜಮ್‌ಶೇದಜೀಯವರ ಕೈಕೆಳಗೆ ಔದ್ಯೋಗಿಕ ವಿಕಾಸಕ್ಕಾಗಿ ಕೆಲಸಮಾಡತೊಡಗಿದರು.

ಇಂದು 'ತಾತಾ ಅಯರ್ನ್ ಸ್ಟೀಲ್ ವರ್ಕ್ಸ್' ಎಂಬ ಬಹು ದೊಡ್ಡ ಉಕ್ಕಿನ ಕಾರ್ಖಾನೆ ಪ್ರಪಂಚದ ದೊಡ್ಡ ಕಾರ್ಖಾನೆಗಳಲ್ಲಿ ಒಂದಾಗಿ ಮೆರೆಯುತ್ತಿದೆ. ಇದೇ ಜಮ್‌ಶೇದಜೀ ತಾತಾರವರು ಸಾಧಿಸಿದ ಔದ್ಯೋಗಿಕ [illegible] ವಿಜಯದ ಪ್ರತೀಕವೆನ್ನಬಹುದು. ಬಿಹಾರದ ಜಮ್‌ಶೇದ್‌ಪು[illegible] ನಗರದ ಹೆಸರು ಕೇಳದವರಾರು? ಭಾರತೀಯ ಉದ್ಯೋಗವನ್ನು [illegible]ಕ್ಕೇರಿಸಿದ ಕೀರ್ತಿ ತಾತಾ ನಗರಕ್ಕೆ ಸಲ್ಲಬೇಕು. ಕ್ರಿ. ಶ. 1[illegible] ಇಸವಿಯಲ್ಲಿ ದೇಶದಲ್ಲೊಂದು ಉಕ್ಕಿನ ಕಾರ್ಖಾನೆ ತೆರೆಯ[illegible] ಜಮ್‌ಶೇದಜೀಯವರು ನಿಶ್ಚಯಿಸಿದರು; ನಿಶ್ಚಯಿಸಿದೊಡನೆ [illegible]ವನ್ನೂ ಕೈಕೊಂಡರು. ಉಕ್ಕಿನ ಉದ್ಯೋಗ ಕೈಕೊ[illegible] ಸಾಕಷ್ಟು ಕಲ್ಲಿದ್ದಲು ಸಿಗಬೇಕು. ಅದಕ್ಕಾಗಿ ಜಮ್‌ಶೇ[illegible] ಛೋಟಾನಾಗಪುರದಲ್ಲಿ ಕಲ್ಲಿದ್ದಲು ಸಾಕಷ್ಟು ಸಿಗುವ ಪ[illegible] ಕಾರ್ಖಾನೆ ತೆರೆಯುವ ವ್ಯವಸ್ಥೆ ಮಾಡಿದರು. 'ತಾತಾ ಕ[illegible] ಲೋಕದಲ್ಲೆಲ್ಲಾ ಪ್ರಸಿದ್ಧವಾದ ಆ ಮಹಾ ಔದ್[illegible]

ಸ್ಥಾಪಿತವಾಯಿತು. ಈ ಔದ್ಯೋಗಿಕ ಸಂಸ್ಥೆ ಸ್ಥಾಪಿತವಾದೊಡನೆಯೇ ಅದರ ಪಾಲುಗಳ ಮಾರಾಟದ ಪ್ರಶ್ನೆಯುಂಟಾಯಿತು. ಆ ಕಾಲದಲ್ಲಿ ಭಾರತದಲ್ಲಿ ಸಂಸ್ಥೆಯ ಪಾಲುಗಳು ಮಾರಾಟವಾಗುವ ಸಂಭವ ತೋರಲಿಲ್ಲ. ಅದಕ್ಕಾಗಿ ಯುರೋಪು ಅಮೇರಿಕಾಗಳಲ್ಲಿ ಪಾಲು ಮಾರಾಟಮಾಡುವ ಕೆಲಸ ಕೈಕೊಂಡರು. ಆದರೆ ಅಲ್ಲಿ ಯಾರೂ ಭಾರತದ ಸಂಸ್ಥೆಯೊಂದರ ಪಾಲುಗಾರರಾಗಲು ಒಡಂಬಡಲಿಲ್ಲ. ಮತ್ತೆ ಮುಂಬಯಿ ಕಲ್ಕತ್ತಾ ನಗರಗಳ ಪೇಟೆಯಲ್ಲಿ ಪಾಲುಗಳ ಮಾರಾಟ ತೊಡಗಬೇಕಾಯಿತು. ಅದೇ ವೇಳೆಗೆ ದೇಶದಲ್ಲೆಲ್ಲಾ ಸ್ವದೇಶಿ ಆಂದೋಲನ ತೊಡಗಿತ್ತು. ಸಂಸ್ಥೆಯ ಮೂಲಧನದ ಪಾಲುಗಳೆಲ್ಲ ಕೆಲವೇ ದಿನಗಳೊಳಗೆ ಮಾರಾಟವಾಗಿ 10,47,00,000 ರೂಪಾಯಿಗಳ ಮೂಲಧನ ಸಂಗ್ರಹವಾಯಿತು. ಹೀಗೆ 'ತಾತಾ ಅಯರ್ನ್ ಸ್ಟೀಲ್ ವರ್ಕ್ಸ್' ಎಂಬ ಮಹಾಸಂಸ್ಥೆ ದೇಶೀಯ ಮೂಲಧನದಿಂದಲೇ ಸ್ಥಾಪನೆಗೊಂಡಿತು. ಇಂದು ಜಮ್‌ಶೇದಪುರದ ಆ ಸಂಸ್ಥೆಯಲ್ಲಿ ಐವತ್ತು ಸಾವಿರಕ್ಕೂ ಮಿಕ್ಕಿ ಕೆಲಸಗಾರರು ಕೆಲಸಮಾಡುತ್ತಿದ್ದಾರೆ; ಕೋಟಿಗಟ್ಟಲೆ ರೂಪಾಯಿಗಳ ವಸ್ತುವೊಡವೆ ಸಿದ್ಧಗೊಳಿಸುತ್ತಿದ್ದಾರೆ. ಆದರೆ ಈ ವಿಶಾಲ ಕಾರ್ಯ ಜಮ್‌ಶೇದಜೀಯವರ ಜೀವನಕಾಲದಲ್ಲಿಯೇ ಪೂರ್ತಿಗೊಳ್ಳಲಿಲ್ಲ; ಅವರ ಸುಯೋಗ್ಯ ಪುತ್ರ ದೊರಾಬ್ಜಿ ತಾತಾರವರು ಈ ಕಾರ್ಯವನ್ನು ಪೂರ್ಣಗೊಳಿಸಿದರು.

[illegible]ಗೆ ಜಮ್‌ಶೇದಪುರದಲ್ಲಿ 'ತಾತಾ ಕಂಪೆನಿ'ಯೊಂದರ ಸ್ಥಾಪನೆಯಿಂದಲೇ ಬೃ[illegible]ಜೀಯವರ ಔದ್ಯೋಗಿಕ ಸಾಧನೆ ಸಂಪೂರ್ಣವಾಗಲಿಲ್ಲ. ಇವರ ನ[illegible] ಮಹಾಕಾರ್ಯವೆಂದರೆ 'ತಾತಾ ಹ್ಯಾಡ್ರೋ ಇಲೆಕ್ಟ್ರಿಕ್ ಜ[illegible] ಮುಂಬಾಯಿ ಪ್ರಾಂತದ ಲೋನಾವಳದಲ್ಲಿ ಅದೊಂದು ನದಿಯ [illegible]ದ 2,44,000 ಅಶ್ವಶಕ್ತಿಯ ವಿದ್ಯುತ್ತನ್ನು ಉಂಟುಮಾಡು[illegible] ಹ್ಯಾಡ್ರೋ ಇಲೆಕ್ಟ್ರಿಕ್ ವರ್ಕ್ಸ್'ನ ಕೆಲಸ. ಈ ವಿದ್ಯುತ್ತು [illegible] ತರಲ್ಪಟ್ಟು ಅಲ್ಲಿನ ಹೆಚ್ಚಿನ ಕಾರ್ಖಾನೆಗಳೆಲ್ಲಾ ಇದರಿಂದ [illegible] ಈ ವಿದ್ಯುತ್ತಿನಿಂದಲೇ ಪೂನದ ವರೆಗಿನ ಪ್ರದೇಶಗಳೆಲ್ಲಾ [illegible]ಂದ ಬೆಳಗುತ್ತವೆ.

[illegible]ವು ಔದ್ಯೋಗಿಗ ಸಂಸ್ಥೆಗಳ ಸ್ಥಾಪನೆ ಮಾಡಿದುದು

ಮಾತ್ರ ಜಮ್‌ಶೇದಜೀಯವರ ಕಾರ್ಯವಲ್ಲ; ಅಂದಿನ ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ ನವೀನ ಭಾವನೆ ನೂತನ ಉತ್ಸಾಹಗಳನ್ನು ಹರಿಯಿಸಿದ ಉದ್ಯೋಗಪತಿ ಅವರು. ಭಾರತೀಯ ಔದ್ಯೋಗಿಕ ಕ್ಷೇತ್ರ ದಲ್ಲಿ ಈ ಉದ್ಯೋಗಪತಿ ಅಂದು ತೊಡಗಿದ ನೂತನ ಆವಿಷ್ಕಾರ ನೂತನ ಉದ್ಯೋಗಗಳ ಪ್ರವೃತ್ತಿಗಳೇ ಇಂದಿನ ಭಾರತಕ್ಕೆ ಔದ್ಯೋಗಿಕ ಕಾರ್ಯ ದಲ್ಲಿ ಮೇಲ್ಪಂಕ್ತಿಯಾಗಿದೆ. ಅವರು ಆ ಕ್ಷೇತ್ರದಲ್ಲಿ ಬೆಳಗಿದ ಬೆಳಕಿನ ಲ್ಲಿಯೇ ಇಂದಿನ ಔದ್ಯೋಗಿಕ ಕಾರ್ಯ ಮುಂದೆ ಸಾಗುತ್ತ ವಿಕಾಸ ಗೊಳ್ಳುತ್ತಿದೆ. ಈಗ ನಮ್ಮ ದೇಶದಲ್ಲಿ ತಾತಾ ಮನೆತನದ ಅನೇಕ ಔದ್ಯೋಗಿಕ ಸಂಸ್ಥೆಗಳು ಹುಟ್ಟಿಕೊಂಡು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆದುಬರುತ್ತಿವೆ. ಸುಗಂಧಿತ ತೈಲ, ಸಾಬೂನು, ಪರಿಮಳ ದ್ರವ್ಯಗಳು ಮೊದಲಾದ ವಸ್ತುಗಳ ತನಕವೂ ಈ ಮನೆತನದ ಉದ್ಯೋಗ ತಲಪಿದೆ. ತಾತಾ ಸಂಸ್ಥೆಗಳಲ್ಲಿ ಸಿದ್ಧವಾದ ವಸ್ತುವೊಡವೆಗಳೆಂದರೆ ಮತ್ತೆ ಅವುಗಳಲ್ಲಿ ಯಾವ ಕುಂದುಕೊರತೆಗಳೂ ಇರಲಾರವು; ಅವು ಯಾವಾಗಲೂ ಅತ್ಯುತ್ತಮ ವಸ್ತುಗಳೇ. ಮೊತ್ತಮೊದಲು ಜಮ್‌ಶೇದಜೀಯವರು ಸಿದ್ಧಗೊಳಿಸಿದ ನೂಲು ಬಟ್ಟೆಗಳು ಉತ್ತಮ ತರಗತಿಯ ವಸ್ತುಗಳಾದಂತೆ ಅವರ ಸಂಸ್ಥೆಗಳಲ್ಲಿ ಸಿದ್ಧವಾದ ಕಬ್ಬಿಣವೇ ಆಗಲಿ, ಉಕ್ಕೇ ಆಗಲಿ, ಸುಗಂಧ ದ್ರವ್ಯಗಳೇ ಆಗಲಿ, ಯಾವುದಾದರೂ ಸರಿಯೆ, ಅತ್ಯುತ್ಕೃಷ್ಟ ಗಿದ್ದು ವಿದೇಶೀ ವಸ್ತುಗಳು ನಮ್ಮ ದೇಶದೊಳಗೆ ಬಂದು ತುಂಬ[illegible] ತಡೆಗಟ್ಟಿದುವು. ವಿವಿಧ ವಸ್ತುಗಳಿಗಾಗಿ ಭಾರತದಿಂದ [illegible] ಹರಿಯುತ್ತಿದ್ದ ಹೊನ್ನಿನ ಹೊಳೆಯನ್ನು ನಿಲ್ಲಿಸಿದುವು.

ಬರೇ ಯಂತ್ರಗಳನ್ನಷ್ಟೆ ನಡೆಯಿಸಿ ಬಿಡುವುದರಿಂದ [illegible] ಕ್ಷೇತ್ರದಲ್ಲಿ ಉನ್ನತಿ ಸಾಧಿಸಿದಂತಾಗುವುದಿಲ್ಲ; ಔದ್ಯೋಗಿಕ [illegible] ನೂತನ ಅನುಸಂಧಾನಗಳನ್ನು ಸಾಧಿಸುವುದು, ಹೊಸಹೊ[illegible] ಗಳನ್ನು ತೊಡಗಿ ಸಫಲತಾಪೂರ್ವಕವಾಗಿ ಸುವ್ಯಸ್ಥಿತವಾಗಿ [illegible] ವುದು, ಔದ್ಯೋಗಿಕ ಸಂಸ್ಥೆಗಳಲ್ಲಿ ಕೆಲಸಮಾಡುವ ಕೆ[illegible] ಸುವ್ಯವಸ್ಥಿತ ಜೀವನದ ಅನುಕೂಲತೆಯೊದಗಿಸಿಕೊಡುವು[illegible] ವಸ್ತುವೊಡವೆಗಳಿಗೆ ತಕ್ಕ ಗ್ರಾಹಕರನ್ನು ಸಂಪಾದಿ[illegible]

ಮೊದಲಾದ ಹಲವಾರು ಕಾರ್ಯಗಳೇ ಔದ್ಯೋಗಿಕ ಪ್ರಗತಿಗೆ ಸಾಧಕಗಳಾಗಿವೆ. ಈ ಕಾರ್ಯಗಳನ್ನೆಲ್ಲಾ ಸಾಧಿಸುತ್ತ ಹೋಗುವ ಉದ್ಯೋಗಪತಿ ತನ್ನ ಕಾರ್ಯಕ್ಷೇತ್ರದಲ್ಲಿ ಅನೇಕ ಎಡರುತೊಡರುಗಳನ್ನು ಎದುರಿಸಬೇಕಾಗುವುದು; ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುವುದು. ಉದ್ಯೋಗಪತಿಯಾದವನು ಮೇಧಾವಿಯೂ ಧೈರ್ಯಶಾಲಿಯೂ ಆಗಿದ್ದರೆ ಎಡರುತೊಡರು ಕಷ್ಟನಷ್ಟಗಳನ್ನೆಲ್ಲ ಎದುರಿಸಿ ಸಹಿಸಿ ತನ್ನ ಕಾರ್ಯದಲ್ಲಿ ಜಯಶೀಲನಾಗುವನು. ಜಮ್‌ಶೇದಜೀಯವರೂ ತಮ್ಮ ಕಾರ್ಯಕ್ಷೇತ್ರದಲ್ಲಿ ಹಲವಾರು ಅಡಚಣೆಗಳನ್ನು ಎದುರಿಸಿದರು. ತರತರದ ಕಷ್ಟನಷ್ಟಗಳನ್ನು ಅನುಭವಿಸಿದರು; ಎಲ್ಲವನ್ನೂ ಧೈರ್ಯದಿಂದ ಪಾರಾಗಿ ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ ಚಕ್ರವರ್ತಿ ಎನಿಸಿ ಮೆರೆದರು. ಜಮ್‌ಶೇದಜೀ ತಾತಾರವರು ತಮ್ಮ ಜೀವನಕಾಲದಲ್ಲಿ ಸಂಪೂರ್ಣವಾಗಿ ಸಾಧಿಸದೆ ಅಪೂರ್ಣವಾಗಿಯೇ ಬಿಟ್ಟುಹೋಗಿದ್ದ ಅನೇಕ ಔದ್ಯೋಗಿಕ ಕಾರ್ಯಗಳನ್ನು ಅವರ ಪುತ್ರರಾದ ದೊರಾಬ್ಜಿ ತಾತಾರವರು ಸಫಲತಾಪೂರ್ವಕವಾಗಿ ಕೊನೆಗಾಣಿಸಿ ಭಾರತದ ಔದ್ಯೋಗಿಕ ಉನ್ನತಿಯ ಸಾಧನೆಯಲ್ಲಿ 'ತಂದೆಯಂತೆ ಮಗ' ಎನ್ನುವ ರೀತಿಯಲ್ಲಿ ಕೆಲಸಮಾಡಿದರು. ಜಮ್‌ಶೇದಜೀಯವರು ತಮ್ಮ ಜೀವನ ಕಾಲದಲ್ಲಿ ಅಪೂರ್ಣವಾಗಿ ಬಿಟ್ಟುಹೋಗಿದ್ದ ವುದರ[illegible]ಗಳಲ್ಲಿ ವೈಜ್ಞಾನಿಕ ಅನುಸಂಧಾನಕ್ಕಾಗಿ ಅವರು ಬೆಂಗಳೂರಲ್ಲಿ [illegible]ಗೆ ಈ 'ತಾತಾ ಸಾಯನ್ಸ್ ಇನ್‌ಸ್ಟಿಟ್ಯೂಟ್' ಎಂಬ ಸಂಸ್ಥೆಯೂ ಬ್ಬ[illegible]ಸುತ್ತ[illegible] ಈ ಸಂಸ್ಥೆಯನ್ನು ಕಟ್ಟುವ ಕಾರ್ಯ ದೊರಾಬ್ಜಿ ತಾತಾರವನ್ನ [illegible]ನೆಗಾಣಿಸಲ್ಪಟ್ಟಿತು. ಇದರಿಂದಾಗಿ ಭಾರತೀಯ ವೈಜ್ಞಾನಿಕ ಜ[illegible] ಅದೊಂದು ಮಹತ್ವಪೂರ್ಣವಾದ ಕಾರ್ಯಸಾಧಿಸಿದಂತಾಗಿದೆ. [illegible]ಶೇದಜೀಯವರು ತಮ್ಮ ಔದ್ಯೋಗಿಕ ಕಾರ್ಯಗಳ ಮೂಲಕ [illegible]ಸಂಪತ್ತು ಸಂಗ್ರಹಿಸಿದುದಲ್ಲದೆ, ಅದರ ಸದುಪಯೋಗಮಾಡಿ [illegible]ಗೆಯೇ ಅವರು ಕೇವಲ ಔದ್ಯೋಗಿಕ ಕ್ಷೇತ್ರದಲ್ಲಿ ದುಡಿದ [illegible] ಮಾತ್ರವಲ್ಲ; ದೊಡ್ಡ ಸಮಾಜಸುಧಾರಕರೂ ಆಗಿದ್ದರು. [illegible]ಯಿ ನಗರ ಸರ್ವಸುಂದರವಾಗಿ ಪ್ರಪಂಚದ ಮಹಾನಗರ[illegible]ರೆಯುತ್ತಿದೆ; ಇದರ ಶ್ರೇಯಸ್ಸಿನಲ್ಲಿ ಜಮ್‌ಶೇದಜೀ

ಯವರು ಪಾಲುಗಾರರಾಗಿದ್ದಾರೆ. ಮುಂಬಯಿನಗರದ ಉನ್ನತಿಗಾಗಿ, ಸೌಂದರ್ಯ ಪರಿಪೂರ್ಣತೆಗಾಗಿ ತಾತಾ ಮನೆತನ ಅಪಾರ ಧನ ವ್ಯಯಿಸಿದೆ. ಏಶಿಯಾ ಖಂಡದ ಅತ್ಯಂತ ದೊಡ್ಡ ಉಪಾಹಾರಮಂದಿರವೆಂದು ಪ್ರಸಿದ್ಧ ವಾದ ಮುಂಬಯಿಯ ತಾಜ್‌ಮಹಲ್ ಜಮ್‌ಶೇದಜೀಯವರ ಸಂಪತ್ತಿನ ಪ್ರಯತ್ನದ ಫಲ. ಇನ್ನು ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣದ ಪ್ರಗತಿಗಾಗಿ ಅವರು ತುಂಬಾ ಧನ ವ್ಯಯಿಸಿದ್ದಾರೆ; ಈಗಲೂ ಅವರ ಮನೆತನ ವ್ಯಯಿಸುತ್ತಿದೆ. 'ತಾತಾ ಛಾತ್ರವೃತ್ತಿ' ಪಡೆದು ಅನೇಕ ಮಂದಿ ಭಾರತೀಯ ವಿದ್ಯಾರ್ಥಿಗಳು ವಿದೇಶಗಳಿಗೆ ತೆರಳಿ ವಿಶೇಷ ಶಿಕ್ಷಣ ಪಡೆಯು ತ್ತಾರೆ. ಸಮಾಜಸೇವೆಯಲ್ಲಿ ಶಿಕ್ಷಣಕೊಡುವುದಕ್ಕಾಗಿ ತಾತಾ ಮನೆತನದ್ದೇ ಆದ ಒಂದು ಶಿಕ್ಷಣ ಸಂಸ್ಥೆ ಇದೆ.

ಭಾರತದ ಈ ಮಹಾವ್ಯಕ್ತಿಯೂ, ಇವರ ಪರಿವಾರದವರೂ ದೇಶದ ಪ್ರಗತಿ ಕಾರ್ಯದಲ್ಲಿ ವಿಶೇಷವಾಗಿ ಭಾಗವಹಿಸಿ ದುಡಿದಿದ್ದಾರೆ; ದುಡಿಯು ತ್ತಿದ್ದಾರೆ. ಆಧುನಿಕ ಭಾರತೀಯ ಇತಿಹಾಸದಲ್ಲಿ ತಾತಾ ಮನೆತನಕ್ಕೆ ಅದೊಂದು ವಿಶಿಷ್ಟ ಸ್ಥಾನ ಸಲ್ಲಬೇಕು. ಭಾರತೀಯ ಔದ್ಯೋಗಿಕ ಕ್ಷೇತ್ರ ದಲ್ಲಂತೂ ಇವರು ಸಾಧಿಸಿದ ಮಹಾಕಾರ್ಯಗಳು ಸುವರ್ಣಾಕ್ಷರಗಳಿಂದ ಬರೆಯಲು ತಕ್ಕುದಾಗಿವೆ. ಜಮ್‌ಶೇದಜೀಯವರು ಸಾಧಿಸಿದ ಮಹಾ ಕಾರ್ಯಗಳೇ ಅವರಿಗೆ ಭಾರತದ ಔದ್ಯೋಗಿಕ ಚಕ್ರವರ್ತಿ ಎಂಬ [illegible] ತಂದುವು. ಈ ಹೆಸರೆ ಈ ಮಹಾವ್ಯಕ್ತಿಗೆ ಸುಯೋಗ್ಯವಾಗಿದೆ. [illegible] ಔದ್ಯೋಗಿಕ ಕ್ಷೇತ್ರದಲ್ಲಿ ಇಷ್ಟೆಲ್ಲಾ ಮಹತ್ಕಾರ್ಯಗಳನ್ನು [illegible] ಜಮ್‌ಶೇದಜೀ ನವಸರವಾನಜೀ ತಾತಾರವರು 1904ನೆಯ [illegible] ದಿವಂಗತರಾದರು. ಜಮ್‌ಶೇದಜೀಯವರು ಭಾರತದ [illegible] ಕ್ಷೇತ್ರದಲ್ಲಿ ಆ ವರೆಗೆ ಯಾರೂ ಸಾಧಿಸದಂತಹ ಕಾರ್ಯಗ[illegible] ಮುಂದಿನ ಸ್ವತಂತ್ರ ಭಾರತಕ್ಕೆ ಔದ್ಯೋಗಿಕ ಕಾರ್ಯದಲ್ಲಿ ವ[illegible] ರಾದರು. ಈ ಔದ್ಯೋಗಿಕ ಚಕ್ರವರ್ತಿ ಹಾಕಿಕೊಟ್ಟ [illegible] ನಾವಿಂದು ಮುಂದುವರಿದರೆ ಔದ್ಯೋಗಿಕ ಪ್ರಗತಿಯ ಶಿಖರ [illegible] ಸಂಶಯವಿಲ್ಲ.

ಅಭ್ಯಾಸ

1. ಯಾವುದಾದರೊಂದು ರಾಷ್ಟ್ರವಾದರೂ ಪ್ರಗತಿಹೊಂದಬೇಕಾ ದರೆ ಆ ರಾಷ್ಟ್ರದ ವ್ಯವಸಾಯ ಉದ್ಯೋಗಗಳೆರಡೂ ಪ್ರಗತಿಹೊಂದಬೇ ಕೆಂಬುದೇಕೆ? ವಿವರಿಸಿರಿ.

2. ಜಮ್‍ಶೇದಜೀ ತಾತಾರವರ ಜನ್ಮಕಾಲಕ್ಕೆ ಭಾರತದ ಔದ್ಯೋ ಗಿಕ ಸ್ಥಿತಿ ಹೇಗಿತ್ತು?

3. ಜಮ್‍ಶೇದಜೀಯುವರಿಗೆ ಔದ್ಯೋಗಿಕ ಕಾರ್ಯದಲ್ಲಿ ಅನುಭವ ಉಂಟಾದುದು ಹೇಗೆ?

4. ಜಮ್‍ಶೇದಜೀಯುವರ ಮೊದಲನೆಯ ಔದ್ಯೋಗಿಕ ಕಾರ್ಯ ಯಾವುದು?

5. 'ತಾತಾ ಆಯರ್ನ್ ಎಂಡ್ ಸ್ಟೀಲ್ ವರ್ಕ್ಸ್' ಎಂಬ ಮಹಾ ಸಂಸ್ಥೆಯ ಕುರಿತು ನಿಮಗೇನು ತಿಳಿದಿದೆ?

6. ಜಮ್‍ಶೇದಜೀಯುವರು ತಮ್ಮ ಸಂಪತ್ತನ್ನು ಹೇಗೆ ಸದುಪ ಯೋಗಮಾಡಿದ್ದಾರೆ?

7. ಜಮ್‍ಶೇದಜೀ ತಾತಾರವರ ಜೀವನ ಪರಿಚಯ ಬರೆಯಿರಿ.

[illegible] ವ್ಯವಸಾಯ, ಉದ್ಯೋಗ, ಸಂಸ್ಥೆ, ವರ್ಷ, ಕಾರ್ಯ—ಈ [illegible]ದ್ಭವ ರೂಪಗಳಾವುವು?

[illegible] ಮುಂದಿನ ಸರಲ ವಾಕ್ಯಗಳನ್ನು ಮಿಶ್ರವಾಕ್ಯಗಳಾಗಿ ಮಾಡಿರಿ:— [illegible]ಶೇದಜೀಯುವರ ಬುದ್ಧಿ ಬಲು ತೀಕ್ಷ್ಣವಾದುದು; ಸಮಯಕ್ಕೆ [illegible] ಕೆಲಸಮಾಡುವ ದೃಷ್ಟಿ ಅವರದು. (ಆ) ದೇಶದ ಔದ್ಯೋಗಿಕ [illegible]ರಕಾರದಿಂದ ಯಾವ ಸಹಾಯವೂ ಸಿಗುತ್ತಿರಲಿಲ್ಲ; ಆದುದ [illegible]ವ ಪರತಂತ್ರಭಾರತದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ ಕಾರ್ಯ ಪ್ರ[illegible] ಉನ್ನತಿ ಸಾಧಿಸುವುದು ಸಾಮಾನ್ಯ ಕಾರ್ಯವಾಗಿರಲಿಲ್ಲ. [illegible]ನ ಭಾರತದಲ್ಲಿ ಸಂಸ್ಥೆಯ ಪಾಲುಗಳು ಮಾರಾಟವಾಗುವ [illegible]ಲ್ಲ; ಅದಕ್ಕಾಗಿ ಅವರು ಯುರೋಪು ಅಮೇರಿಕಾಗಳಲ್ಲಿ [illegible]ಡುವ ಕೆಲಸ ಕೈಕೊಂಡರು.

೧೪. ಮೂರು ಸಂಶೋಧನೆಗಳು

ವಿಜ್ಞಾನವು ವಿನಾಶ ಕೃತ್ಯಗಳಿಗೆ ಸಾಧನವಾಗುವಂತೆ ಜನತೆಯು ಸುಖ ಸೌಕರ್ಯಗಳಿಗೂ ಕಾರಣವಾಗಿದೆ. ವಿಜ್ಞಾನದಿಂದ ಜಗತ್ತನ್ನು ಸಂಪೂರ್ಣವಾಗಿ ನಾಶಪಡಿಸಲೂ ಬಹುದು; ಸುಖಸಮೃದ್ಧವಾಗಿ ಮಾಡಲೂ ಬಹುದು.

ಆಧುನಿಕ ಯುಗದ ರೋಗಚಿಕಿತ್ಸಾ ವಿಧಾನದಲ್ಲಿ ನವೀನ ವೈಜ್ಞಾನಿಕ ಶೋಧನೆಗಳನೇಕ ನಡೆದಿವೆ. ನೋವನ್ನುಂಟುಮಾಡದೆ ರೋಗಿಗೆ ಯಾವ ತರದ ಕಷ್ಟವೂ ಉಂಟಾಗದಂತೆ ಚಿಕಿತ್ಸೆಮಾಡಲು ಬೇಕಾದಂತಹ ಅನೇಕ ವೈಜ್ಞಾನಿಕ ಸಾಧನಗಳು ಕಳೆದ ಶತಮಾನದಲ್ಲಿ ಸಂಶೋಧಿತವಾದುವು. ಅವುಗಳಿಗಾಗಿ ಎಷ್ಟೋ ಮಂದಿ ವಿಜ್ಞಾನಿಗಳು ತಮ್ಮ ಜೀವಮಾನವನ್ನೇ ಧಾರೆಯೆರೆದರು; ಜಗತ್ತಿಗೆ ಸುಖ ಸೌಕರ್ಯಗಳನ್ನು ಒದಗಿಸಿ ಕೊಟ್ಟರು.

ರೋಗ ಚಿಕಿತ್ಸಾ ವಿಧಾನದ ನವೀನ ಸಂಶೋಧನೆಗಳನ್ನು ಮಾಡಿದವರಲ್ಲಿ. ಜೋಸೆಫ್ ಲಿಸ್ಟರ್, ಲೂಯಿ ಪೆಸ್ಟರ್, ಜೇಮ್ಸ್ ಸಿಮ್ಸನ್ ಎಂಬೀ ಮೂವರು ಪ್ರಮುಖರಾಗಿದ್ದಾರೆ. ಶಸ್ತ್ರ ಚಿಕಿತ್ಸೆಗೊಳಗಾದಾಗ ಜನರಿಗುಂಟಾಗುವ ನೋವನ್ನೂ ಸಂಕಟವನ್ನೂ ತಗ್ಗಿಸುವುದರಲ್ಲಿ [illegible] ಶೋಧನೆಗಳು ತುಂಬಾ ಸಹಾಯಮಾಡಿದುವು. ಆತನ [illegible] ಗಳಿಂದಾಗಿ ರೋಗಿಗೆ ಯಾವ ತರದ ಕಷ್ಟವೂ ಉಂಟಾಗ[illegible] [illegible] ಚಿಕಿತ್ಸೆ ಮಾಡುವಂತಾಯಿತು.

ಜೋಸೆಫ್ ಲಿಸ್ಟರ್ ಗ್ಲಾಸ್ಗೋ ನಗರದ ವೈದ್ಯ ಶಾಲೆ[illegible] ಚಿಕಿತ್ಸಕನಾಗಿ ಕೆಲಸ ಮಾಡುತ್ತಿದ್ದನು. ಶಸ್ತ್ರ ಚಿಕಿತ್ಸೆ [illegible] ನಡೆದ ಮೇಲೂ ಅನೇಕ ರೋಗಿಗಳು ಮೃತರಾಗುವುದನ್[illegible] ವಿಜ್ಞಾನಿ ತುಂಬಾ ಯೋಚಿಸಿದನು. ರೋಗಿಯ ಅಂಗವನ್ನು [illegible] ಗದಿಂದ ಸರಿಗೊಳಿಸಿದ ಮೇಲೆ ಆ ಗಾಯದಲ್ಲಿ ವಿಷವುಂಟಾ[illegible] ಸತ್ತುಹೋಗಲು ಕಾರಣವೆಂದು ಲಿಸ್ಟರನಿಗೆ ತಿಳಿಯಿತು. [illegible] ಬರುವುದೆಂದು ಕಂಡುಕೊಳ್ಳುವುದಕ್ಕಾಗಿ ಲಿಸ್ಟರ್ [illegible]

ನಡೆಯಿಸಿದನು. ಆತನ ಅನೇಕಾನೇಕ ಪರೀಕ್ಷೆಗಳ ಫಲವಾಗಿ ಗೂಢವಾಗಿದ್ದ ಆ ವಿಷದ ವಿಷಯವು 1685ನೆಯ ಇಸವಿಯಲ್ಲಿ ತಿಳಿದು ಬಂತು. ಹವೆಯಲ್ಲಿ ಸ್ವಾಭಾವಿಕವಾಗಿ ಅತ್ಯಂತ ಸೂಕ್ಷ್ಮವಾದ ಕೃಮಿಗಳಿರುತ್ತವೆ. ಈ ಕೃಮಿಗಳಿಂದಲೇ ಶಸ್ತ್ರ ಚಿಕಿತ್ಸೆ ಮಾಡಿದ ಗಾಯದಲ್ಲಿ ವಿಷವುಂಟಾಗುವುದು. ಕೃಮಿಗಳು ಗಾಯವನ್ನು ಹೊಕ್ಕೊಡನೆಯೇ ಅಲ್ಲಿಯ ಮಾಂಸ ಕೊಳೆತು ವಿಷವೇರಿ ರಕ್ತದಲ್ಲೆಲ್ಲ ಹರಡುವುದು. ಇದನ್ನು ತಡೆಯಲು ವಿಷನಿವಾರಣೆಯ ಯಾವುದಾದರೊಂದು ಔಷಧಿಯನ್ನು ಉಪಯೋಗಿಸಬೇಕು. ಅದಕ್ಕಾಗಿ ಲಿಸ್ಟರ್ 'ಕಾರ್ಬೋಲಿಕ್ ಆಸಿಡ್' ಎಂಬ ದ್ರಾವಕವನ್ನು ಉಪಯೋಗಿಸಿದನು. ಅದರಿಂದ ವಿಷನಿವಾರಣೆಯ ಕಾರ್ಯ ಕೈಗೂಡಿತು. ಮನುಷ್ಯ ದೇಹದ ಹೊರಭಾಗಕ್ಕೆ ಮಾತ್ರ ಕಾರ್ಬೋಲಿಕ್ ಆಸಿಡ್ಡನು



ಸಿಮ್ಸನ್

ಹಚ್ಚಬಹುದು. ಆ ಮೇಲೆ ಲಿಸ್ಟರ್ ತನ್ನ ಚಿಕಿತ್ಸಾಲಯದಲ್ಲಿ ಶಸ್ತ್ರ ಚಿಕಿತ್ಸೆ ವೈದರ[illegible]ಸಿದ ಎಲ್ಲಾ ರೋಗಿಗಳ ಗಾಯಗಳಿಗೂ ಕಾರ್ಬೋಲಿಕ್ ಆಸಿಡ್ಡನ್ನು [illegible]ಗೆ [illegible] ತೊಡಗಿದನು. ಈ ಉಪಾಯದಿಂದ ವಿಷವೇರಿ ಸಾಯುತ್ತಿದ್ದ ಬ್ಬ[illegible]ರೋಗಿಗಳ ಪ್ರಾಣಉಳಿಯಿತು.

[illegible] ಮಾತ್ರವಲ್ಲದೆ ಲಿಸ್ಟರ್ ಇನ್ನೂ ಅನೇಕ ಚಿಕಿತ್ಸಾಸಾಧನ[illegible]ಡು ಹಿಡಿದನು. ಚಿಕಿತ್ಸಕನ ಕೈಗಳಿಂದಾಗಲೀ ಶಸ್ತ್ರಗಳಿಂದಾಗಲೀ [illegible] ಉಡುಪು ತೊಡುಪುಗಳಿಂದಾಗಲೀ ವಿಷದ ಕೃಮಿಗಳಿಗೆ [illegible]ರಿಕೊಳ್ಳಲು ಅನುಕೂಲವಾಗದಂತೆ ಮಾಡಲು ತಕ್ಕ ಸಾಧನೆ [illegible]ಡುಕೊಂಡನು. ಚಿಕಿತ್ಸಕನೂ ಕೆಲಸಗಾರರೂ ಕೈಗಳಿಗೆ [illegible]ಗೆಗಳನ್ನು ತೊಟ್ಟುಕೊಳ್ಳುವುದೂ, ಆಗಾಗ ಆ ಉಡುಪು [illegible]ಯಿಸುವುದೂ ಲಿಸ್ಟರನ ಸಂಶೋಧನೆಗಳಾಗಿವೆ. ಮೊದ[illegible]ಂದಿ ಈ ಸಾಧನೆಗಳನ್ನೆಲ್ಲ ಹಾಸ್ಯ ಮಾಡತೊಡಗಿದರು.

ಈ ಉಪಾಯಗಳಿಂದ ಶಸ್ತ್ರ ಚಿಕಿತ್ಸೆಯಿಂದಾಗುವ ಮರಣಗಳು ಕಡಿಮೆಯಾಗುವವೆಂದು ಯಾರೂ ನಂಬಲಿಲ್ಲ. ಆದರೆ ಕೆಲಸಮಯದೊಳಗಾಗಿಯೇ ಲಿಸ್ಟರನ ವೈದ್ಯ ಶಾಲೆಗೂ ಇತರ ವೈದ್ಯ ಶಾಲೆಗಳಿಗೂ ಇದ್ದ ಭೇದವು ತಾನಾಗಿಯೇ ತಿಳಿದುಬರತೊಡಗಿತು. ಇತರ ಚಿಕಿತ್ಸಾಲಯಗಳಲ್ಲಿ ಶಸ್ತ್ರ ಚಿಕಿತ್ಸೆ ನಡೆದ ಮೇಲೆ ನೂರಕ್ಕೆ ಎಂಬತ್ತು ಮಂದಿ ಮರಣಹೊಂದಿದರೆ, ಲಿಸ್ಟರನ ಚಿಕಿತ್ಸಾಲಯದಲ್ಲಿ ಗಾಸಿಗೊಂಡವನು ಒಬ್ಬನೂ ಇರಲಿಲ್ಲ. ಆಗಲೇ ಲಿಸ್ಟರನ ಹೆಸರು ವಿಖ್ಯಾತವಾದುದು. ಆಗ ಇತರ ಶಸ್ತ್ರ ವೈದ್ಯರೂ ಆತನ ಸಾಧನೆಗಳನ್ನು ಆತುರದಿಂದ ಉಪಯೋಗಿಸ ತೊಡಗಿದರು.



ಲೂಯಿ ಪೆಸ್ಟರ್

ಲಿಸ್ಟರ್ ಕಂಡು ಹಿಡಿದ ಸಾಧನೆಗಳಿಗೆ ಲೂಯಿ ಪೆಸ್ಟರ್ ಎಂಬ ಫ್ರೆಂಚ್ ವಿಜ್ಞಾನಿಯ ಸಂಶೋಧನೆಗಳು ಅನುಕೂಲ ಮಾಡಿಕೊಟ್ಟುವು. ಪೆಸ್ಟರ್ ಕೂಡ ಲಿಸ್ಟರನ ಕಾಲದಲ್ಲಿಯೇ ಇದ್ದ ಒಬ್ಬ ಸುಪ್ರಸಿದ್ಧ ವೆ[illegible]ತಜ್ಞ ನಾಗಿದ್ದಾನೆ. ಗಾಳಿಯಲ್ಲಿ ಸೂಕ್ಷ್ಮ ಕ್ರಿಮಿಗಳಿವೆ ಎಂಬುದನ[illegible] ಹಿಡಿದವನು ಇವನೆ. ಈತನ ಈ ಸಂಶೋಧನೆಯಿಂದಲೇ ವಿಷ[illegible] ನಿವಾರಣೋಪಾಯಗಳನ್ನು ಲಿಸ್ಟರ್ ಕಂಡುಕೊಂಡನು. ಅನೇ[illegible] ಗಳಿಗೆ ಕಾರಣಗಳಾದ ಸೂಕ್ಷ್ಮ ಕೃಮಿಗಳನ್ನು ರೋಗಿಯ ರಕ್ತ[illegible] ವಾಗಿ ಹರಡುವಂತೆ ಮಾಡಿದರೆ ರೋಗಗಳು ನಿವಾರಣೆಯಾಗ[illegible] ಪೆಸ್ಟರನ ಮತ್ತಿನ ಸಂಶೋಧನೆಗಳು. ಹುಚ್ಚು ನಾಯಿಯ[illegible] ಭಯಂಕರವಾದುದು. ಅಂದಿನ ವರೆಗೂ ಆ ವಿಷಕ್ಕೆ ಯ[illegible] ಸರಿಯಾದ ಚಿಕಿತ್ಸೆಯೂ ಇರಲಿಲ್ಲ. 'ಇನಾಕ್ಯುಲೇಶನ್' [illegible] ಆ ವಿಷವನ್ನು ಸ್ವಲ್ಪವಾಗಿ ಹುಚ್ಚು ನಾಯಿ ಕಚ್ಚಿದವನ ರ[illegible] ಹುಚ್ಚು ನಾಯಿ ಕಚ್ಚಿದ್ದಕ್ಕೆ ತಕ್ಕ ಚಿಕಿತ್ಸೆಯಾಗುವುದೆ[illegible]

ಕೊಟ್ಟನು. ಹುಚ್ಚು ನಾಯಿ ಕಡಿದವರೆಲ್ಲಾ ತಂಡ ತಂಡವಾಗಿ 'ಪೆಸ್ಟರ್ ಇನ್‌ಸ್ಟಿಟ್ಯೂಟ್' ಎಂಬ ಆತನ ಚಿಕಿತ್ಸಾಲಯಕ್ಕೆ ಬರತೊಡಗಿದರು. 'ಇನಾಕ್ಯುಲೇಶನ್' ವಿಧಾನದಿಂದ ಚಿಕಿತ್ಸೆ ಹೊಂದಿ ಗುಣಮುಖರಾಗ ತೊಡಗಿದರು.

ಮಾನವ ಜನಾಂಗಕ್ಕೆ ಮಹದುಪಕಾರ ಮಾಡಿದ ಇನ್ನೊಬ್ಬ ವಿಜ್ಞಾನಿಯೆಂದರೆ ಇಂಗ್ಲಿಷ್ ವೈಜ್ಞಾನಿಕ ಜೇಮ್ಸ್ ಸಿಮ್ಸನ್ ಎಂಬಾತ. ಇವನು 'ಕ್ಲೋರೋಫಾರಂ' ಎಂಬ ಸ್ಮೃತಿ ತಪ್ಪಿಸುವ ಮದ್ದನ್ನು ಕಂಡು ಹಿಡಿದನು. ಯಾರಾದರೊಬ್ಬನಿಗೆ ಶಸ್ತ್ರ ಚಿಕಿತ್ಸೆ ಮಾಡಬೇಕಾದಲ್ಲಿ ಆ ರೋಗಿಗೆ 'ಕ್ಲೋರೋ ಫಾರಂ' ಕೊಡುವರು. 'ಕ್ಲೋರೋ ಫಾರಂ' ಕೊಟ್ಟಕೂಡಲೇ ರೋಗಿಯ ಸ್ಮೃತಿ ತಪ್ಪುವುದು. ಸ್ಮೃತಿ ತಪ್ಪಿದ ರೋಗಿಯ ಯಾವ ಅಂಗವನ್ನು ಕೊಯಿದರೂ ಸರಿಯೆ, ಆತನಿಗೆ ನೋವೇ ತಿಳಿಯುವುದಿಲ್ಲ.

ಈ ರೀತಿ ಮೂವರು ಜಗತ್ಪ್ರಸಿದ್ಧ ವೈಜ್ಞಾನಿಕರ ಈ ಮೂರು ಸಂಶೋಧನೆಗಳಿಂದ ಮಾನವ ಜನಾಂಗಕ್ಕೆ ರೋಗ ಚಿಕಿತ್ಸಾ ವಿಧಾನದಲ್ಲಿ ಅಪಾರ ಲಾಭವುಂಟಾಗಿ ಜಗತ್ತಿನ ಸುಖಸೌಕರ್ಯ ಹೆಚ್ಚಿತು. ಶಸ್ತ್ರ ಚಿಕಿತ್ಸೆ, ಹುಚ್ಚು ನಾಯಿಯ ವಿಷದಿಂದುಂಟಾಗುವ ಅಕಾಲ ಮರಣಗಳು ಕಡಿಮೆ [illegible]ಾದುವು. ಪ್ಲೇಗ್, ಕೊಲೇರಾ ಮೊದಲಾದ ಸಾಂಕ್ರಾಮಿಕ ರೋಗ ವುದರ[illegible]ೆಬಿತ್ತು. ಚಿಕಿತ್ಸಾಪದ್ಧತಿಯಲ್ಲಿ ಅಪೂರ್ವವಾದ ಪ್ರಗತಿಸಾಧಿಸಿತು.

ಅಭ್ಯಾಸ

[illegible] ಲಿಸ್ಟರ್ ಕಂಡುಹಿಡಿದುದೇನು? ಅದರಿಂದ ಏನು ಉಪಯೋಗ.

[illegible]ಾಯಿ ಪೆಸ್ಟರನ ಸಂಶೋಧನೆಯೇನು?

[illegible]ಕ್ಲೋರೋಫಾರ್ಮ್'ನ ಪ್ರಯೋಜನವೇನು?

[illegible]ೋಸೆಫ್ ಲಿಸ್ಟರ್ ಮತ್ತು ಆತನ ಸಂಶೋಧನೆಗಳ ಕುರಿತು [illegible] ಬರೆಯಿರಿ.

[illegible]ಗಣೋಪಾಯ, ಚಿಕಿತ್ಸಾಲಯ, ಮಹದುಪಕಾರ, ಅನೇ[illegible]ನ್ನು ವಿಂಗಡಿಸಿ ಬರೆಯಿರಿ.

---

೧೫. ರೆಡ್ ಇಂಡಿಯನ್ ಈಗಲ್

ಯುರೋಪಿನ ಕೊಲಂಬಸ್ ಅಮೇರಿಕವನ್ನು ಕಂಡುಹಿಡಿದನಷ್ಟೆ! ಕೊಲಂಬಸ್ ಅಮೇರಿಕವನ್ನು ಕಂಡುಕೊಂಡು ಯುರೋಪಿನ ಜನ ಅಲ್ಲಿ ಹೋಗಿ ನೆಲಸುವ ಮೊದಲೇ ಅಮೇರಿಕದಲ್ಲಿ ಒಂದು ಜಾತಿಯ ಜನ ನೆಲಸಿದ್ದರು. ಉತ್ತರ ಅಮೇರಿಕದಲ್ಲಿ ನೆಲಸಿರುವ ಆ ಜನರನ್ನು ಕೊಲಂಬಸ್



ಉತ್ತರ ಅಮೇರಿಕದ ಮೂಲನಿವಾಸಿಕರು

'ರೆಡ್ ಇಂಡಿಯನ್ಸ್' ಎಂದು ಕರೆದನು. ಆತನು ಹಾಗೆ
ಒಂದು ಕಾರಣವಿದೆ. ಕೊಲಂಬಸ್ ತನ್ನ ಹಡಗದಲ್ಲಿ ಕು
ಕಕ್ಕೆ ತಲಪಿದಾಗ ಮೊದಲು ಅದೇ 'ಇಂಡಿಯಾ' ಎಂದ
ಆದುದರಿಂದ ನಸುಕೆಂಪು ತೊಗಲಿನ ಅಲ್ಲಿಯ ಮೂಲ ನಿವಾ
'ರೆಡ್ ಇಂಡಿಯನ್ಸ್' ಎಂದು ಕರೆದುದು. ಮತ್ತೆ ಆ
ವಾಯಿತು.

ರೆಡ್ ಇಂಡಿಯನರ ಮೈತೊಗಲು ನಸುಕೆಂಪು

ಕಣ್ಣುಗಳು; ದೊರಗಾದ ಕರಿಯ ಕೂದಲು; ಗಟ್ಟಿಮುಟ್ಟಾಗಿ ಎತ್ತರವಾದ ದೇಹ. ರೆಡ್ ಇಂಡಿಯನರಲ್ಲಿ ಹಲವು ಪಂಗಡಗಳ ಜನರಿದ್ದಾರೆ. ಎಲ್ಲಾ ಪಂಗಡಗಳೂ ಹೆಚ್ಚಾಗಿ ವಾಸ ಮಾಡುವುದು ಅಡವಿಗಳಲ್ಲಿ. ಉತ್ತರ ಅಮೇರಿಕದ ಅದೊಂದು ಅಡವಿಯಲ್ಲಿ ನೆಲಸಿದ್ದ 'ಕೊಯಿ' ಎಂಬ ರೆಡ್ ಇಂಡಿಯನ್ ಪಂಗಡದಲ್ಲಿ 'ಈಗಲ್' ಎಂಬ ಹುಡುಗನಿದ್ದ. ಈಗಲ್‌ನ ಪರಿಚಯ ಮಾಡಿಕೊಂಡರೆ ಉಳಿದ ಎಲ್ಲಾ ರೆಡ್ ಇಂಡಿಯನ್ ಜನರ ನಡೆನುಡಿ, ಕಟ್ಟು ಪಾಡು ಮುಂತಾದುವು ತಿಳಿದುಬರುತ್ತವೆ.

ಈಗಲ್ ತನ್ನ ಎಳೆತನದಲ್ಲಿ ಅಕ್ಕನೊಂದಿಗೆ ತಾಯ ಬಳಿಯೇ ಇರುತ್ತಿದ್ದ. ತಾಯನ್ನು ಬಿಟ್ಟು ಅತ್ತಿತ್ತ ಹೋಗುವುದೆಂದಿಲ್ಲ. ತಾಯಿ ಅವನಿಗೆ ಆಡುವುದಕ್ಕಾಗಿ ಮರದ ಒಂದು ಬಂಡಿಯನ್ನೂ, ಎಲುಬುಗಳಿಂದ ಮಾಡಿದ ನಾಲ್ಕಾರು ಗೊಂಬೆಗಳನ್ನೂ, ಆಟದ ಬಿಲ್ಲುಗಳನ್ನೂ ತಯಾರಿಸಿಕೊಟ್ಟಿದ್ದಳು. ಈಗಲ್ ವಾಸ ಮಾಡುತ್ತಿದ್ದ ಗುಡಿಸಲನ್ನು ಕಟ್ಟಿದ್ದು ಅವನ ತಾಯಿಯೇ. ಆ ಜನರ ಭಾಷೆಯಲ್ಲಿ ಗುಡಿಸಲನ್ನು 'ವಿಗ್‌ವಾಮ್' ಎಂದು ಕರೆಯುತ್ತಾರೆ. 'ವಿಗ್‌ವಾಮ್' ಕಟ್ಟುವುದು ಅಷ್ಟೇನೂ ಕಷ್ಟದ ಕೆಲಸವಲ್ಲ. ಹತ್ತೋ ಹನ್ನೆರಡೋ ಸಪುರವಾದ ಉದ್ದದ ಕೋಲುಗಳನ್ನು ಸಮತಟ್ಟಾದ ನೆಲದ ಮೇಲೆ ಉರಟಾಗಿ ನೆಡುವುದು; ಮತ್ತೆ ಎಲ್ಲಾ ಕೋಲುಗಳ ತುದಿಯನ್ನೂ ಮೊದರ[illegible]ಡಿಸಿ ಕಟ್ಟಿಬಿಡುವುದು. ಆ ಮೇಲೆ ಅದೊಂದು ಜಾತಿಯ [illegible]ರಗೆ [illegible]ಗಟೆಗಳನ್ನು ತಂದು ಉರುಟಾಗಿ ಕಟ್ಟಿದ ಕೋಲುಗಳ ಮೇಲೆ ಬ್ಬ[illegible]ಸುತ್ತ[illegible]ವುದು; ಹೀಗೆ ಈಗಲ್‌ನ ತಾಯಿಯೂ 'ವಿಗ್‌ವಾಮ್' ಕಟ್ಟಿ ನು[illegible]ಗಲ್‌ನ ಅಕ್ಕ ಈ ಕೆಲಸದಲ್ಲಿ ತಾಯಿಗೆ ನೆರವಾದಳು. ಅವರ [illegible]ನ' ಬಾಗಿಲಿಗೆ ನಮ್ಮ ಮನೆಗಳಂತೆ ಬಾಗಿಲು ಪಡಿಗಳಿಲ್ಲ. [illegible]ರೆ [illegible]ಗಲನ್ನು ಬಾಗಿಲಿಗೆ ತೂಗಾಡಿಸುತ್ತಾರೆ. ವಿಗ್‌ವಾಮಿನ [illegible] ಉರಿಸಲಿಕ್ಕಾಗಿ ನಡುವೆ ಒಂದು ಕಟ್ಟೆಕಟ್ಟಿದ್ದಾರೆ. ಚಳಿ [illegible], ಆಹಾರ ಬೇಯಿಸಲಿಕ್ಕೂ ಆ ಕಟ್ಟೆಯಲ್ಲಿ ತಾಯಿ ಬೆಂಕಿ [illegible] ಬೆಳಕಿಗೂ ಅದೇ ಬೆಂಕಿ; ಬೇರೆ ದೀಪಗೀಪ ಅವರಿಗಿಲ್ಲ. [illegible]ಪಾದ ಮೇಲು ತುದಿಯಲ್ಲಿ ಹೊಗೆ ಹೋಗಲು ಒಂದು [illegible]ಗಲ್‌ನ ತಾಯಿ ಮಾಂಸ ಬೇಯಿಸುವ ರೀತಿಯೇ

ಬೇರೆ; ನಮ್ಮಂತೆ ಮಡಕೆಯಲ್ಲಿ ಹಾಕಿ ಒಲೆಯ ಮೇಲಿರಿಸಿ ಬೇಯಿಸುವುದಲ್ಲ. ಬೆಂಕಿಯುರಿಯುವಲ್ಲಿ ಮಾಡಿನಿಂದ ಒಂದು ಸರಪಣಿ ನೇತಾಡಿಸಿರುತ್ತದೆ. ಮಾಂಸವನ್ನೋ ಮೀನನ್ನೋ ಪಾತ್ರೆಯಲ್ಲಿ ಹಾಕಿ ಆ ಸರಪಣಿಗೆ ಸಿಕ್ಕಿಸಿ ಅಡಿಯಿಂದ ಬೆಂಕಿ ಉರಿಸಿದರಾಯಿತು; ಬೇಯುತ್ತಿರುತ್ತದೆ.

ಈಗಲ್ ಚಿಕ್ಕ ಮಗುವಾಗಿದ್ದಾಗ ಅವನ ತಾಯಿ ಒಂದು ತೊಟ್ಟಿಲು ಮಾಡಿದ್ದಳು. ನಮ್ಮ ಮಕ್ಕಳ ತೊಟ್ಟಿಲಿನಂತಲ್ಲ ಆ ತೊಟ್ಟಿಲು. ಕಾಡು ಬೀಳಲುಗಳಿಂದ ಹೆಣೆದ ಸಪುರವಾದ ಗೂಡಿನಂತಿರುವುದು. ಅದರಲ್ಲಿ ಮಗುವನ್ನು ಮಲಗಿಸಿದರೆ ಕೈಕಾಲು ಹಂದಾಡಿಸಲು ಸಾಧ್ಯವಿಲ್ಲ. ಮಗುವಿನ ತಲೆ ಮಾತ್ರ ಹೊರಗೆ ಕಾಣುವುದು. ತಾಯಿ ಈಗಲನ್ನು ತೊಟ್ಟಿಲಲ್ಲಿ ಮಲಗಿಸಿ ಏನಾದರೂ ಕತೆ ಹೇಳುತ್ತಲೋ ಹಾಡುತ್ತಲೋ ತನ್ನ ಕೆಲಸ ಮಾಡುತ್ತಿದ್ದಳು. ಆಕೆ ಹೊರಗೆ ಕೆಲಸಕ್ಕೆ ಹೋಗುವಾಗ ಈಗಲ್ ಮಲಗಿದ್ದ ತೊಟ್ಟಿಲನ್ನು ಬೆನ್ನಿಗೆ ಕಟ್ಟಿಕೊಂಡು ಹೋಗುವಳು. ಕೆಲಸ ಮಾಡುವಾಗ ತೊಟ್ಟಿಲನ್ನು ಹತ್ತಿರದ ಮರಕ್ಕೆ ತೂಗಾಡಿಸುತ್ತಿದ್ದರು. ಗಾಳಿ ಬರುವಾಗ ತಾನಾಗಿಯೇ ತೊಟ್ಟಿಲು ತೊನೆದು ತೂಗಾಡುತ್ತಿತ್ತು. ಆಗ ಈಗಲ್ ತುಂಬಾ ಆನಂದ ಪಡುತ್ತಿದ್ದ. ವಿಗ್‌ವಾಮಿನಲ್ಲಿ ಮಾಡಿಗೇ ತೊಟ್ಟಿಲು ಕಟ್ಟಿ ಬಿಡುವುದು. ರೆಡ್ ಇಂಡಿಯನರು ನೂರಾರು ವರ್ಷಗಳ ಮೊದಲು ಬೇಟೆಯಾಡಿ ಮೀನು ಹಿಡಿದು ಮಾತ್ರ ಜೀವನ ಸಾಗಿ[illegible]ರೆಂದು ತಾಯಿ ಈಗಲಿಗೆ ಹಿಂದಿನ ಕತೆ ಹೇಳುತ್ತಾಳೆ. ಈಗ[illegible] ಹಾಗಿ[illegible] ಈಗಲಿನ ತಂದೆ ತಾಯಿ ಹಣ್ಣು ಹಂಪಲು, ಗೆಡ್ಡೆ ಗೆಣಸು, [illegible] ಮುಂತಾದುವನ್ನು ನೆಟ್ಟು ಬೆಳೆಯಿಸುತ್ತಾರೆ; ಅವರಿಗೊಂದು [illegible] ಹೊಲವೂ ಇದೆ. ಈಗಲಿನ ತಂದೆ ವಿಗ್‌ವಾಮಿನಲ್ಲಿರುವುದೇ [illegible] ಆತ ಯಾವಾಗಲೂ ಮೀನು ಹಿಡಿಯಲಿಕ್ಕೋ, ಬೇಟೆ[illegible] ಹೋಗಿರುತ್ತಾನೆ. ಇಲ್ಲವಾದರೆ ತನ್ನ ತೋಟದಲ್ಲಿಯೋ ಹೊ[illegible] ದುಡಿಯುತ್ತಿರುತ್ತಾನೆ. ಜಿಂಕೆಯ ಬೇಟೆಯಾಡುವುದರಲ್ಲಿ ಈ[illegible] ತುಂಬಾ ಗಟ್ಟಿಗ. ಜಿಂಕೆಯ ಬೇಟೆಯಾಡಿದ ದಿನ ಈಗ[illegible] ದೊಡ್ಡ ಹಬ್ಬ. ಈಗಲಿಗಂತೂ ಜಿಂಕೆಯ ಮಾಂಸ[illegible] ಒಮ್ಮೊಮ್ಮೆ ಬಿಳಿ ಕರಡಿಗಳನ್ನೂ ಈಗಲಿನ ತಂದೆ [illegible]

ತಂದೆ ಬೇಟೆಯಾಡಿದ ಜಿಂಕೆಯ ತೊಗಲನ್ನು ತಾಯಿ ಜಾಗ್ರತೆಯಾ ಒಣಗಿಸಿಡುತ್ತಾಳೆ. ಆ ತೊಗಲಿನಿಂದ ಈಗಲಿಗೂ ಅವನ ತಂದೆಗೂ ಸೊ ಸಾದ ಅಂಗಿ ಇಜಾರಗಳನ್ನು ಹೊಲಿಯುವುದೂ ತಾಯಿಯ ಕೆಲಸ. ಈ ಕೆಲಸವನ್ನೆಲ್ಲಾ ನೋಡುತ್ತ ಕುಳಿತುಕೊಳ್ಳುವುದೆಂದರೆ ಈಗಲಿಗೆ ತುಂಬ ಇಷ್ಟ. ತಾನೂ ಬೇಟೆಯಾಡಬೇಕು; ತೊಗಲು ಸಂಪಾದಿಸಬೇಕು ಎಂದ ಅವನಿಗೆ ಆಸೆ. ಈಗಲ್‌ನ ತಾಯಿ ತಾನು ತಯಾರಿಸಿದ ಅಂಗಿಗೆ ಹಕ್ಕಿಗಳ ಬಣ್ಣ ಬಣ್ಣದ ಗರಿಗಳನ್ನು ಹೊಲಿದು ಸಿಂಗರಿಸುತ್ತಾಳೆ; ಗರಿಗಳಿಂದಲೆ ತಂದೆ ಮಕ್ಕಳಿಗೆ ಟೊಪ್ಪಿಗೆ ಮಾಡುತ್ತಾಳೆ. ಆ ಅಂಗಿ ಟೊಪ್ಪಿ ಧರಿಸುವಾಗ ಈಗಲಿನ ಆನಂದ ಹೇಳಿ ತೀರದು. ಅಂಗಿ ಟೊಪ್ಪಿ ಹಾಕಿ ಈಗಲ್ ತನ್ನ ನೆರೆ ಹೊರೆಯ ಮಕ್ಕಳೊಡನೆ-ತನ್ನ ಗೆಳೆಯರೊಡನೆ-ಸಂತಸದಿಂದ ನಲಿಯುತ್ತಾನೆ.

ಈಗ ನಮ್ಮ ಈಗಲ್ ಚಿಕ್ಕ ಮಗುವೇನೂ ಅಲ್ಲ; ಅವನಿಗೆ ಹನ್ನೆರಡರ ಹರೆಯವಾಯಿತು. ತಾನು ದೊಡ್ಡವನಾದೆನೆಂದು ಅವನಿಗೀಗ ಹೆಮ್ಮೆ. ಪಂಗಡದ ಪಾಲುಗಾರರಲ್ಲಿ ಈಗಲ್ ಒಬ್ಬನಾದ. ರೆಡ್ ಇಂಡಿಯನ್ ಪಂಗಡಗಳ ಒಂದು ವಿಶೇಷತೆ ಇದೆ. ಪಂಗಡದೊಳಗಿನ ಯಾವ ವಸ್ತುವೂ ಒಬ್ಬನಿಗೇ ಸೇರಿದ್ದಲ್ಲ. ಎಲ್ಲಾ ವಸ್ತುಗಳೂ ಎಲ್ಲರಿಗೂ ಸೇರಿದವುಗಳು. [illegible]ಕವಾದ ಅಧಿಕಾರ ಯಾರಿಗೂ ಇಲ್ಲ. "ಇದು ನನ್ನ ಅಂಗಿ, [illegible]ಗೆ [illegible] ಇಜಾರ, ಆ ಹೊಲ ಅವನದು, ಈ ತೋಟ ಇವನದು" [illegible]ಂತಾಗಿ ಯಾರೂ ಹೇಳುವುದಿಲ್ಲ. ಪ್ರತಿಯೊಂದು ವಸ್ತುವಿನ [illegible]ಂಗಡಕ್ಕೆ ಸೇರಿದ ಎಲ್ಲಾ ಮಂದಿಗೂ ಸಮಾನವಾದ ಅಧಿಕಾರ [illegible]ದೊಂದು ಬಳಗ ಒಂದೊಂದು ವಿಗ್‌ವಾಮಿನಲ್ಲಿ ನೆಲಸಿರುವು [illegible] ಬಳಗಗಳೆಲ್ಲಾ ಒಂದೇ ಪಂಗಡಕ್ಕೆ ಸೇರಿರುತ್ತದೆ. ಪಂಗಡಕ್ಕೆ [illegible]ಗಳು ಸೇರಿ ಒಂದು ಪಂಗಡವಾಗುತ್ತದೆ. ಪಂಗಡಕ್ಕೆ ಸೇರಿದ [illegible] ಒಂದೇ ತಾಯಿ ಮಕ್ಕಳಂತೆ, ಅಣ್ಣ ತಮ್ಮಂದಿರು ಅಕ್ಕ [illegible] ಇರುತ್ತಾರೆ.

[illegible] ರೆಡ್ ಇಂಡಿಯನರ ಮಕ್ಕಳೂ ಶಾಲೆಗೆ ಹೋಗಿ ಓದು[illegible]ತ್ತಿಗಿದ್ದಾರೆ. ಆದರೆ ಈಗಲ್ ಯಾವ ಶಾಲೆಗೂ

ಹೋಗಲಿಲ್ಲ; ಓದು ಬರಹ ಕಲಿಯಲೂ ಇಲ್ಲ. ಅವನು ತನಗೆ ಬೇಕಾದುದನ್ನೆಲ್ಲಾ ತಂದೆತಾಯಂದಿರಿಂದಲೇ ಕಲಿತಿದ್ದಾನೆ. ಅಡವಿಯಲ್ಲಿ ಅಲೆದಾಡಿ ಅಭ್ಯಾಸ ಮಾಡಿದ್ದಾನೆ. ಈಗಲಿಗೆ ಕತೆಗಳೂ ಗೊತ್ತಿವೆ; ಹಾಡುಗಳೂ ಬರುತ್ತಿವೆ. ಸೊಗಸಾಗಿ ಕತೆ ಹೇಳುತ್ತಾನೆ; ಇಂಪಾಗಿ ಹಾಡುತ್ತಾನೆ; ಬೇಟೆಯಾಡುತ್ತಾನೆ. ಇನ್ನೇನು ಬೇಕವನಿಗೆ? ಎಂತಹ ವೇಗವಾಗಿ ಓಡುವ ಜಿಂಕೆಯನ್ನಾದರೂ ಬಾಣ ಹೊಡೆದು ಬೀಳಿಸಿ ಬಿಡುತ್ತಾನೆ ಈಗಲ್; ಕರಡಿಯನ್ನು ಈಟಿಯಿಂದ ಇರಿದು ಕೊಲ್ಲುವುದರಲ್ಲಿ ಅವನನ್ನು ಮೀರಿಸಿದ ರೆಡ್ ಇಂಡಿಯನ್ ಹುಡುಗ ಇನ್ನೊಬ್ಬನಿಲ್ಲ. ಮೀನು ಹಿಡಿಯುವುದೂ ಈಗಲಿಗೆ ತಿಳಿದಿದೆ. ಬಳ್ಳಿ ಬೀಳಲು ಬಿದಿರುಗಳಿಂದ ಕುಕ್ಕೆ ಚಾಪೆ ಹೆಣೆಯಲೂ ಆತ ಕಲಿತಿದ್ದಾನೆ. ಹೀಗೆ ಈಗಲ್ ಕಲಿತು ಕೊಂಡುದು ಒಂದೆರಡು ವಿದ್ಯೆಯಲ್ಲ; ರೆಡ್ ಇಂಡಿಯನ್ ಒಬ್ಬನಿಗೆ ಏನೆಲ್ಲ ಗೊತ್ತಿರಬೇಕೋ ಅದೆಲ್ಲಾ ಅವನಿಗೆ ಗೊತ್ತಿದೆ.

ಅದೊಂದು ದಿನ ರೆಡ್ ಇಂಡಿಯನರಿಗೆ ಹೊಸ ವರ್ಷದ ಹಬ್ಬ. ಗಂಡಸರೆಲ್ಲಾ ಒಟ್ಟುಗೂಡಿ ನರ್ತನಕ್ಕೆ ಸಿದ್ಧರಾಗುತ್ತಿದ್ದಾರೆ. ಈಗಲ್ ಕೂಡ ತನ್ನ ಸಂಗಡದ ಇತರ ಮಂದಿಯಂತೆ ಮೈತುಂಬಾ ಹಚ್ಚೆಹೊಯ್ಸಿಕೊಂಡಿದ್ದಾನೆ; ತನ್ನ ಮೈಮೇಲೆ ಕೈಕಾಲುಗಳಲ್ಲಿ ತರತರದ ಚಿತ್ರ ಬಿಡಿಸಿಕೊಂಡಿದ್ದಾನೆ. ಹಚ್ಚೆ ಹೊಯ್ಸಿ ಕೊಳ್ಳದ ರೆಡ್ ಇಂಡಿಯನ್ [illegible] ಹೊಸ ವರ್ಷದ ಹಬ್ಬದ ದಿನ ಈಗಲಿನ ಸಂಗಡದವರೆಲ್ಲಾ [illegible] ಕಲೆತರು; ಆಯುಧ ಧರಿಸಿ ಮಾಡುವ ಯುದ್ಧದ ನೃತ್ಯವೆಂದ [illegible] ಮಾಡಿದಂತೆಯೇ. ಜನರೆಲ್ಲಾ ಎರಡು ಗುಂಪುಗಳಾಗಿ ನಿಂತು ಯ[illegible] ನಟಿಸುವುದು. ಅವರ ಯುದ್ಧದ ನೃತ್ಯ ತುಂಬಾ ವಿಚಿತ್ರ; [illegible] ಅದ್ಭುತ. ಹನ್ನೆರಡರ ಹರೆಯದ ಹುಡುಗನಾದರೂ ಈಗ[illegible] ನೃತ್ಯದಲ್ಲಿ ಭಾಗವಹಿಸಿ ಹಿರಿಯರಂತೆ ನಟಿಸಿದ; ನರ್ತನದ [illegible]ಸಿದ. ಅವನ ನರ್ತನವನ್ನು ನೋಡಿದ ಸಂಗಡದ [illegible] ಬಾಯ್ತುಂಬಾ ಹೊಗಳಿದರು. ತಮ್ಮ ಮಗನ ಜಾಣ್ಮೆ ನೋ[illegible] ತಾಯಂದಿರಿಗಂತೂ ಹೇಳಲಾರದ ಆನಂದವಾಯಿತು. ಇ[illegible] ಈಗಲಿನಂತಹ ಮಗ.


ಅಭ್ಯಾಸ

1. 'ರೆಡ್ ಇಂಡಿಯನ್ಸ್' ಎಂದು ಹೆಸರು ಬರಲು ಕಾರಣವೇನು?
2. 'ವಿಗ್‌ವಾಮ್' ಎಂದರೇನು? ವಿವರಿಸಿರಿ.
3. ಈಗಲಿನ ತಾಯಿತಂದೆಯರ ಕೆಲಸಗಳೇನು?
4. ಈಗಲ್ ಏನೆಲ್ಲಾ ಕಲಿತಿದ್ದಾನೆ?
5. ರೆಡ್ ಇಂಡಿಯನರ ಹೊಸ ವರ್ಷದ ಹಬ್ಬವನ್ನು ಬಣ್ಣಿಸಿರಿ.
6. ಈ ಪಾಠದಿಂದ ತಿಳಿದು ಬರುವ ರೆಡ್ ಇಂಡಿಯನರ ವಿಷಯವನ್ನಷ್ಟೆ ಸಂಗ್ರಹಿಸಿ ಒಂದು ಪ್ರಬಂಧ ಬರೆಯಿರಿ.
7. ಮುಂದಿನ ನುಡಿಕಟ್ಟುಗಳಿಂದ ಒಂದೊಂದು ವಾಕ್ಯ ರಚಿಸಿರಿ:— ನಡೆನುಡಿ, ಕಟ್ಟುಪಾಡು, ಸಂತಸದಿಂದ ನಲಿ; ವೈಯಕ್ತಿಕ.
8. ಮುಂದಿನ ವಾಕ್ಯಗಳಲ್ಲಿ ಹಿಂದು ಮುಂದಾಗಿ ಅಚ್ಚಾಗಿರುವ ಪದಗಳನ್ನು ಸರಿಗೊಳಿಸಿ ಬರೆಯಿರಿ:—(ಅ) ಮಗುವಾಗಿದ್ದಾಗ ಅವನ ತಾಯಿ ಈಗಲ್ ಚಿಕ್ಕ ಮಾಡಿದ್ದಳು ತೊಟ್ಟಿಲು ಒಂದು. (ಆ) ಈಗಲಿಗೆ ಬೇಟೆಯಾಡಿ ಮೊದಲು ನೂರಾರು ವರ್ಷಗಳ ರೆಡ್ ಇಂಡಿಯನರು ಮಾತ್ರ ಹಿಡಿದು ಮೀನು ಹೇಳುತ್ತಾಳೆ ಕತೆ ಹಿಂದಿನ ಸಾಗಿಸುತ್ತಿದ್ದರೆಂದು ಜೀವನ.

---

೧೬. ನಾಗಾನಂದ

ಹಿಮಾಲಯದ ಬಡಗು ತಪ್ಪಲಿನಲ್ಲಿ ಕಾಂಚನಪುರವಿತ್ತು. ಅಲ್ಲಿ ಜೀಮೂತಕೇತುವೆಂಬ ಅರಸು ಆಳುತ್ತಿದ್ದನು. ಅವನಿಗೆ ಜೀಮೂತವಾಹನನೆಂಬ ಮಗನಿದ್ದನು. ಮಗನು ಪ್ರಾಯಕ್ಕೆ ಬರುತ್ತಲೇ ಜೀಮೂತಕೇತು ಆತನಿಗೆ ಯುವರಾಜ ಪಟ್ಟವನ್ನು ಕಟ್ಟಿ ತಾನು ತಪಸ್ಸಿಗೆ ತೊಡಗಿದನು.



ಜೀಮೂತವಾಹನನೂ ಗರುಡನೂ

ಜೀಮೂತವಾಹನನು ಪ್ರಜೆಗಳನ್ನು ತನ್ನ ಬಂಧುಗ
ತೊಡಗಿದನು. ಅವನ ಪ್ರಜೆಗಳೆಲ್ಲರೂ ಸುಖಸಂತೋಷಗ
ತ್ತಿದ್ದರು. ಯುವರಾಜನ ಕೀರ್ತಿ ಹತ್ತು ದಿಕ್ಕುಗಳಿಗೂ
ಯುವರಾಜ ಜೀಮೂತವಾಹನನ ಮೇಲ್ಮೆಯನ್ನು ಕಂಡ
ಗಳು ಮತ್ಸರಗೊಂಡರು. ಅವನ ರಾಜ್ಯವನ್ನು

ಬಂದರು. ಯುವರಾಜನು ಹಿಂಸೆಗೆ ಹೇಸಿ ಯುದ್ಧವನ್ನು ಬಯಸದೆ ತಂದೆಯ ಬಳಿ ಬಂದು "ತಾತ! ಈ ದಾಯಾದಿಗಳೇ ರಾಜ್ಯವಾಳುತ್ತಿರಲಿ; ನಾವು ಪರೋಪಕಾರಿಗಳಾಗಿ ಇನ್ನೆಲ್ಲಾದರೂ ಬದುಕೋಣ" ಎಂದನು. ಅದಕ್ಕೆ ತಂದೆಯು "ಮಗನೆ, ನಿನಗಾಗಿ ಈ ರಾಜ್ಯವನ್ನು ಬೆಳೆಸಿದೆನು; ಕಾಪಾಡಿದೆನು. ಈಗ ನೀನೇ ರಾಜ್ಯ ಬೇಡವೆನ್ನುವೆಯಾದರೆ ನನಗೇನು? ನಿನ್ನ ಇಷ್ಟದಂತೆಯೇ ಆಗಲಿ" ಎಂದುಸುರಿದನು. ತಂದೆಯ ಅಪ್ಪಣೆಯಂತೆ ಜೀಮೂತವಾಹನನು ರಾಜ್ಯವನ್ನು ದಾಯಾದ್ಯರಿಗೊಪ್ಪಿಸಿ, ತಂದೆ ತಾಯಿಂದಿರೊಡನೆ ಮಲಯಾಚಲಕ್ಕೆ ನಡೆದನು. ಅಲ್ಲಿ ಹಿರಿಯರ ಸೇವೆ ಮಾಡುತ್ತ ಸುಖದಿಂದ ಇರತೊಡಗಿದನು.

ಜೀಮೂತವಾಹನನು ಮಲಯಾಚಲದಲ್ಲಿ ದಿನಕಳೆಯುತ್ತಿರುವಾಗ ಅದೆಂದು ದಿನ ಸಮೀಪದ ಗೌರೀ ಮಂದಿರಕ್ಕೆ ಹೋದನು. ಆಗ ಅಲ್ಲಿಗೆ ರಾಜಕನ್ಯೆಯೊಬ್ಬಳು ತನ್ನ ಸಖಿಯರೊಂದಿಗೆ ಗೌರೀ ಪೂಜೆಗಾಗಿ ಬಂದಿದ್ದಳು. ಜೀಮೂತವಾಹನನು ಆಕೆಯ ಮಧುರವಾದ ಸಂಗೀತವನ್ನು ಕೇಳಿ, ಮನೋಹರವಾದ ರೂಪವನ್ನು ನೋಡಿ ಅವಳಿಗೆ ಮನಸೋತನು. ಆ ರಾಜಕುಮಾರಿಯ ವೀಣಾನಾದವೇ ಈ ರಾಜಕುಮಾರನ ಮನಸೆಳೆಯಲು ಕಾರಣವಾಯಿತು. ಕೂಡಲೇ ಆತ ರಾಜಕುಮಾರಿಯ ಗೆಳತಿವೈದರ[illegible]ತನೆ "ಇವಳಾರು? ಆರ ಮಗಳು? ಎಲ್ಲಿಂದ ಬಂದವಳು?" ಎಂದು [illegible]ಪ್ರಾಗೆ [illegible]ನು. ಅದಕ್ಕಾಗಿ ಗೆಳತಿಯರಲ್ಲಿ ಒಬ್ಬಾಕೆ "ಇವಳು ಸಿದ್ಧರಾಜ. ಬೃ[illegible]ವಸುವಿನ ಮಗಳು. ಮಲಯವತಿಯೆಂದು ಇವಳ ಹೆಸರು" ನ[illegible]ಜಪುತ್ರಿಯನ್ನು ಪರಿಚಯಮಾಡಿಕೊಟ್ಟಳು. ಹಾಗೆ ಆ ಗೆಳತಿ ಜ[illegible]ನ ಪರಿಚಯವನ್ನೂ ಮಾಡಿಕೊಂಡು ರಾಜಕುಮಾರಿಯೊಡನೆ [illegible] ಕುಮಾರನಾದ ಜೀಮೂತವಾಹನನನ್ನು ನಾವು ತಕ್ಕ [illegible]ರಗಳಿಂದ ಸತ್ಕರಿಸಬೇಕು" ಎಂದು ಕೇಳಿಕೊಂಡಳು. ಸಖಿಯ [illegible]ಹೇಳಿದ ರಾಜಪುತ್ರಿ ಮಲಯವತಿ ತನ್ನ ಕೈಯ್ಯ ಕುಸುಮ[illegible] ರಾಜಕುಮಾರ ಜೀಮೂತವಾಹನನಿಗೆ ಸಮರ್ಪಿಸಿದಳು. [illegible]ನನೂ ಪ್ರತಿಯಾಗಿ ತನ್ನ ಕೈಯ್ಯ ಪುಷ್ಪಹಾರವನ್ನು [illegible] ಇತ್ತನು. ಇಷ್ಟಾದರೂ ಅವರು ಲಜ್ಜೆಯಿಂದಾಗಿ

ಪರಸ್ಪರ ಮಾತನಾಡಿಕೊಳ್ಳಲಿಲ್ಲ. ದೇವೀ ಪೂಜೆ ತೀರುತ್ತಲೇ ಇಬ್ಬರೂ ತಂತಮ್ಮ ಸ್ಥಾನಗಳಿಗೆ ತೆರಳಿದರು.

ಜೀಮೂತವಾಹನನನ್ನು ಕಂಡು ಮಲಯವತಿಯ ಹೃದಯದಲ್ಲಿ ಅಂಕುರಿಸಿದ ಪ್ರೇಮವು ದಿನದಿನವೂ ಬೆಳೆಯತೊಡಗಿತು. ತಾನು ಅವನನ್ನು ಕಂಡಾಗ ಮಾತನಾಡದಿದ್ದುದಕ್ಕಾಗಿ ಆಕೆ ತುಂಬಾ ಮರುಗಿದಳು. ಜೀಮೂತವಾಹನನಿಗೂ ಹೀಗೆಯೇ ಆಯಿತು. ಇನ್ನೊಂದು ದಿನ ಮಲಯವತಿ ಅದೇ ಗೌರೀ ಮಂದಿರಕ್ಕೆ ಬಂದಳು. ಆಗ ಆಕೆಗೆ ಹಿಂದಿನ ಪ್ರಿಯದರ್ಶನದ ನೆನಪಾಯಿತು. ಮನಸ್ಸಿನ ಮರುಕ ಮರುಕೊಳಿಸಿತು. "ಜೀಮೂತವಾಹನನನ್ನು ಪಡೆಯಲಿಲ್ಲವಾದರೆ ನಾನಿನ್ನು ಬದುಕಿ ಪ್ರಯೋಜನವೇನು?" ಎಂದು ಅಳುತ್ತಾ ಆಕೆ ನೇಣುಹಾಕಿ ಕೊಳ್ಳಲು ಸಿದ್ಧಳಾದಳು. ಆಗ ಅಲ್ಲೇ ಬಳಿಯಲ್ಲಿದ್ದ ಜೀಮೂತವಾಹನನು ಮಲಯವತಿಯ ಸಮೀಪಕ್ಕೆ ಬಂದು ತನ್ನ ಪ್ರೇಮವನ್ನು ಪ್ರಕಟಿಸಿ ಆಕೆಯನ್ನು ಸಂತೈಸಿದನು. ಜೀಮೂತವಾಹನ ಮಲಯವತಿಯರೊಳಗಿನ ಪ್ರೇಮವು ಅಣ್ಣನಾದ ಮಿತ್ರಾವಸುವಿಗೆ ತಿಳಿಯಿತು. ಕೂಡಲೇ ಆತನು ಜೀಮೂತವಾಹನನಿಗೆ ತನ್ನ ತಂಗಿಯನ್ನಿತ್ತು ಮದುವೆ ಮಾಡಿಸಿದನು. ಅಂದಿನಿಂದ ಆ ತರುಣ ದಂಪತಿಗಳು ಹಿರಿಯರ ಸೇವೆ ಮಾಡುತ್ತ ಸುಖವಾಗಿ ಇರತೊಡಗಿದರು.

ಮತ್ತದೊಂದು ದಿನ ಜೀಮೂತವಾಹನನು ಮಿತ್ರಾವಸು[illegible] ಸಾಗರ ತೀರದಲ್ಲಿ ವಿಹರಿಸುತ್ತಿದ್ದನು. ಅಲ್ಲಿ ಪರ್ವತದಂತೆ [illegible] ಎಲುಬಿನ ರಾಶಿಯನ್ನು ನೋಡಿ ಮಿತ್ರಾವಸುವಿನೊಡನೆ "ಇದೇ [illegible] ಇಷ್ಟೊಂದು ದೊಡ್ಡ ಎಲುಬಿನ ರಾಶಿ?" ಎಂದು ಪ್ರಶ್ನಿಸಿದನು. [illegible] ವಸು "ಗರುಡನೂ ಸರ್ಪಗಳೂ ಹುಟ್ಟು ಹಗೆಗಳಷ್ಟೆ? ಈ [illegible] ತೀರಿಸುವುದಕ್ಕಾಗಿ ಗರುಡನು ದಿನಂಪ್ರತಿ ಪಾತಾಳ ಲೋ[illegible] ತನಗೆ ಬೇಕಾದಷ್ಟು ಸರ್ಪಗಳನ್ನು ಕೊಂದು ತಿಂದು ಬರುತ್ತಿ[illegible] ಲಿಕ್ಕೆ ಸಾಧ್ಯವಿಲ್ಲದಿದ್ದರೂ ಹಲವಾರು ಸರ್ಪಗಳನ್ನು ಸು[illegible] ಬಿಡುತ್ತಿದ್ದನು. ಇದರಿಂದಾಗಿ ಪಾತಾಳ ಲೋಕದ [illegible] ದಿನದಿಂದ ದಿನಕ್ಕೆ ಕಡಿಮೆಯಾಗುತ್ತ ಬರತೊಡಗಿ[illegible]

ತಪ್ಪಿಸುವುದಕ್ಕಾಗಿ ನಾಗರಾಜನಾದ ವಾಸುಕಿಯು "ಪಕ್ಷಿರಾಜನೇ, ನಾ ನಿನಗೆ ದಿನಕ್ಕೊಂದು ಸರ್ಪದಂತೆ ಒಪ್ಪಿಸುವೆನು. ಉಳಿದ ಸರ್ಪಗಳನ್ನ ವ್ಯರ್ಥವಾಗಿ ಕೊಲ್ಲಬೇಡ; ನಮ್ಮ ಮೇಲೆ ಅಷ್ಟೊಂದು ದಯೆ ತೋ ಎಂದು ಗರುಡನನ್ನು ಪ್ರಾರ್ಥಿಸಿ ಒಪ್ಪಿಸಿದನು. ಅಂದಿನಿಂದ ವಾಸುಕಿಯ ದಿನಕ್ಕೊಂದು ಸರ್ಪದಂತೆ ಗರುಡನ ಬಳಿಗೆ ಕಳುಹಿಸುತ್ತಿದ್ದಾನೆ. ಗರುಡ ಪ್ರತಿನಿತ್ಯ ತಿಂದು ಬಿಸಾಡಿದ ಸರ್ಪಗಳ ಮೂಳೆಗಳು ಹೀಗೆ ಬೆಟ್ಟದ ರಾಶಿಬಿದ್ದಿವೆ." ಎಂದು ವಿವರಿಸಿ ಹೇಳಿದನು. ಮಿತ್ರಾವಸುವಿನ ಮಾ ಕೇಳಿದೊಡನೆಯೇ ಕರುಣಾಶೀಲನಾದ ಜೀಮೂತವಾಹನನ ಕೋಮ ವಾದ ಮನಸ್ಸು ಕರಗಿತು. ಆಗ ಅವನು "ವಾಸುಕಿಯಂತಹ ನಿರ್ದ ರಾದ ರಾಜರೂ ಇರುವರೆ? ಪ್ರಜೆಗಳ ಸಾವನ್ನು ಸಹಿಸಿಕೊಂಡು ಆತ ಹೇ ತಾನೇ ರಾಜನಾಗಿರುವನು? ನಾನೀಗ ನನ್ನ ಶರೀರವನ್ನೇ ಬಲಿಯಿತ್ತು ಒಂ ಸರ್ಪದ ಜೀವವನ್ನಾದರೂ ಉಳಿಸಿ ನನ್ನ ಜೀವವನ್ನು ಸಾರ್ಥಕಗೊಳಿ ಬೇಕು" ಎಂದು ಯೋಚಿಸತೊಡಗಿದನು. ಅಷ್ಟರಲ್ಲಿ ಮಿತ್ರಾವಸುವಿ ಯಾವುದೋ ಒಂದು ಕಾರ್ಯಕ್ಕಾಗಿ ತನ್ನ ತಂದೆಯಿಂದ ಕರೆ ಬಂದ ದರಿಂದ ಆತನು ಜೀಮೂತವಾಹನನನ್ನು ಅಲ್ಲೇ ಬಿಟ್ಟು ಹೊರಟುಹೋದನು ಆಗಲೇ ದುರದೃಷ್ಟವೋ ಎಂಬಂತೆ ಯಾವಳೋ ಹೆಂಗಸಿನ ಅಳುವ ಸದ್ದು ವುದರೋ[illegible]ಜನಕವಾಗಿ ಕೇಳಿಸಿತು.

[illegible]ಗೆ [illegible]ಡಲೇ ಜೀಮೂತವಾಹನನು ಆ ಕೂಗು ಕೇಳಿದ ಸ್ಥಳಕ್ಕೆ ಬ[illegible]ತ್ತಾ [illegible]ನೋಡುವಾಗ ಗರುಡನ ಆಹಾರಕ್ಕಾಗಿ ಶಂಖಚೂಡನೆಂಬ ನಾಗನ ನನ್ನ[illegible]ು ಬಳಿಗೆ ಹೊರಟಿದ್ದನು. ಅವನ ತಾಯಿ ಮಗನ ಮರಣವನ್ನು [illegible]ಳುತ್ತಿದ್ದಳು. ಈ ದುಃಖಕರವಾದ ಪ್ರಸಂಗವನ್ನು ನೋಡಿ [illegible]ವಾಹನನು ಮುಂದೆ ಬಂದು "ತಾಯೇ, ಅಳಬೇಡ. ನಾನೀಗ [illegible]ನನ್ನಾದರೂ ಗರುಡನಿಗೆ ಬಲಿಗೊಟ್ಟು, ನಿನ್ನ ಮಗನನ್ನು ಬದು [illegible] ಎಂದು ತಿಳಿಸಿದನು. ಅದಕ್ಕೆ ಶಂಖಚೂಡನೂ ಅವನ [illegible]ಡಂಬಡಲಿಲ್ಲ. ಶಂಖಚೂಡನು "ನಿನ್ನಂತಹ ರತ್ನವು ನಾಶ [illegible]ಡಕು ಕಲ್ಲು ಉಳಿದು ಪ್ರಯೋಜನವೇನು?" ಎಂದು [illegible] ಅಮ್ಮಾ, ನೀನು ಮನೆಗೆ ಹೋಗು; ನಾನು ಇಲ್ಲೇ

ಬಳಿಯಲ್ಲಿರುವ ಗೋಕರ್ಣೇಶ್ವರನಿಗೆ ವಂದಿಸಿ ಬಂದು ವಧ್ಯಶಿಲೆಯೇರುವೆನು ಎಂದು, ಗೋಕರ್ಣೇಶ್ವರನ ದರ್ಶನಕ್ಕಾಗಿ ನಡೆಯಲು, ಆತನ ತಾಯಿಯೂ ಮಗನೊಡನೆ ನಡೆದಳು.

ಇತ್ತ ಜೀಮೂತವಾಹನನು "ಪರೋಪಕಾರಕ್ಕಾಗಿ ನನ್ನ ದೇಹವು ವ್ಯಯವಾಗುನಂತಿಲ್ಲವಲ್ಲಾ! ಏನು ಮಾಡಲಿ!" ಎಂದು ವ್ಯಾಕುಲಗೊಂಡನು. ಅಷ್ಟರಲ್ಲಿ ವಧ್ಯನಾದ ಶಂಖಚೂಡನಿಗಾಗಿ ವಾಸುಕಿಯು ಕಳುಹಿಸಿದ ಕೆಂಬಟ್ಟೆಯನ್ನು ತೆಗೆದುಕೊಂಡು ನಾಗದೂತನೊಬ್ಬನು ಆ ಮಾರ್ಗವಾಗಿ ಅಲ್ಲಿಗೆ ಬಂದನು. ಜೀಮೂತವಾಹನನು ಆ ದೂತನಿಂದ ಕೆಂಬಟ್ಟೆಯನ್ನು ತಾನು ತೆಗೆದುಕೊಂಡು "ಶಂಖಚೂಡನ ಪ್ರಾಣ ಉಳಿದರೆ ನನ್ನ ಜನ್ಮ ಸಾರ್ಥಕವೇ ಸರಿ" ಎಂದು ಯೋಚಿಸುತ್ತಾ ಆ ವಸ್ತ್ರವನ್ನು ಹೊದ್ದುಕೊಂಡು, ಮಗುವೊಂದು ತಾಯ ತೊಡೆಯನ್ನೇರುವಂತೆ ವಧ್ಯಶಿಲೆಯನ್ನೇರಿದನು.

ವಧ್ಯಶಿಲೆಯನ್ನೇರಿದ ಜೀಮೂತವಾಹನನು ತನ್ನಲ್ಲೆ "ಶಂಖಚೂಡನ ಪ್ರಾಣವುಳಿಸಿದ ಪುಣ್ಯದಿಂದಾಗಿ ಮುಂದೆ ಜನ್ಮ ಜನ್ಮಾಂತರಗಳಲ್ಲಿಯೂ ನನಗೆ ಪರೋಪಕಾರ ಮಾಡುವ ಸುಯೋಗವು ಒದಗಿ ಬರಲಿ" ಎಂದು ಪ್ರಾರ್ಥಿಸತೊಡಗಿದನು. ಆಗ ಕುಲಾಚಲವೇ ಹಾರಿಬರುವಂತೆ ಗರುಡನು ಆಕಾಶ ಮಾರ್ಗದಲ್ಲಿ ಹಾರಿ ಬಂದನು. ರಕ್ತವರ್ಣದ ವಸ್ತ್ರವನ್ನು [illegible] ಕೊಂಡು ಮಲಗಿದವನು ತನಗೆ ಬಲಿಯಾಗುವ ನಾಗನೆಂದೇ ಬಗೆ[illegible] ತೀಕ್ಷ್ಣವಾದ ಚಂಚುವಿನಿಂದ ಜೀಮೂತವಾಹನನ್ನು ಎತ್ತಿದನು. [illegible] ಆ ದೇಹವು ಬಹಳ ಭಾರವಿದ್ದುದರಿಂದ ಗರುಡನು "ಇದು ಸರ್ಪ [illegible] ವಾಸುಕಿಯ ದೇಹವಾಗಿರಬಹುದು. ಇದನ್ನು ಇಲ್ಲಿ ತಿನ್ನದೆ [illegible] ಪರ್ವತದ ಶಿಖರಕ್ಕೆ ಕೊಂಡುಹೋಗಿ ಅಲ್ಲಿ ತಿನ್ನುವೆನು." ಎಂ[illegible] ಕಡೆಗೆ ಕೊಂಡೊಯ್ದನು.

ಸಾಗರ ತೀರಕ್ಕೆ ಹೋದ ಜೀಮೂತವಾಹನನು ಇನ್ನೂ [illegible] ರುಗಲಿಲ್ಲ ಎಂದು ಯೋಚಿಸುತ್ತಾ ಚಿಂತಾಕ್ರಾಂತನಾದ ವಿಶ[illegible] ರಾಜನು ಕೂಡಲೇ ಅಳಿಯನನ್ನು ಹುಡುಕುವುದಕ್ಕಾಗಿ [illegible] ಕಳುಹಿಸಿದನು. ಆ ದೂತನು ಬರುತ್ತಾ ದಾರಿ[illegible]

ಮಡದಿಯೊಡನೆ ಸೂರ್ಯೋಪಾಸನೆ ಮಾಡುತ್ತಿದ್ದ ಜೀಮೂತ ಕೇತುವನ್ನ ಕಂಡು ಜೀಮೂತವಾಹನನು ಅದೃಶ್ಯನಾದ ಸಂಗತಿ ತಿಳಿಸಿದನು. ಅವರು ಇದನ್ನು ಕೇಳಿ ಶೋಕಾಕುಲರಾದರು.

ಅಷ್ಟರಲ್ಲಿ ವಧ್ಯಶಿಲೆಯ ಬಳಿ ಬಂದ ಶಂಖಚೂಡನು ಜೀವಮೂತವಾ ನನ್ನು ಗರುಡನು ಕೊಂಡೊಯ್ಯುವುದನ್ನು ದೂರದಿಂದ ನೋಡಿ "ಅಯ್ಯೋ ಎಂತಹ ಘಾತವಾಯಿತು! ನಾನೆಂತಹ ದುರ್ದೈವಿ! ನಾನು ಬರುವು ರೊಳಗೆ ಗರುಡನು ವಿದ್ಯಾಧರ ಕುಮಾರನನ್ನು ಆಕಾಶಕ್ಕೆ ಒಯ್ದು ಬಿ ನಲ್ಲಾ! ಸರ್ಪರಾಜನ ಆಜ್ಞಾಪಾಲನೆ ನನ್ನಿಂದ ನೆರವೇರಲಿಲ್ಲವಲ್ಲಾ ನನ್ನಂತಹ ಪಾಪಿಯ ಪ್ರಾಣಕ್ಕಾಗಿ ಮಹಾತ್ಮನಾದ ಜೀವಮೂತವಾಹನನ ಗರುಡನಿಗೆ ಬಲಿಯಾಗಬೇಕಾಗಿ ಬಂತಲ್ಲಾ! ಇನ್ನೇನುಗತಿ! ನಾನು ಬದು ಬಾಳಿ ಏನು ಪ್ರಯೋಜನ?" ಎಂದು ಚಿಂತಿಸುತ್ತಾ, ಗರುಡನ ಕೊಂಡೊಯ್ದ ಜೀವಮೂತವಾಹನನ ಶರೀರದಿಂದ ಹೊರಚಿಮ್ಮಿದ ರಕ್ತ ಧಾರೆಯನ್ನೇ ಅನುಸರಿಸಿ, ತನ್ನ ಪ್ರಾಣವನ್ನೇ ಗರುಡನಿಗರ್ಪಿಸಿ, ಜೀವಮೂ ವಾಹನನನ್ನುಳಿಸಬೇಕೆಂಬ ಆತುರದಿಂದ ಜೀವಮೂತಕೇತು ಇದ್ದ ಪ್ರದೇ ಕ್ಕಾಗಿಯೇ ನಡೆದನು. ನಡೆದ ಸಂಗತಿಯನ್ನು ಆತನು ಜೀವಮೂತವಾ [illegible]ನನ ತಂದೆತಾಯಿಂದಿರಿಗೆ ಅವಸರ ಅವಸರವಾಗಿ ಬಿನ್ನವಿಸಲು ಅವರು ವುದರ[illegible]ೋ! ನಮಗಿನ್ನಾರು ಗತಿ!" ಎಂದು ಎದೆ ಬಡಿದುಕೊಂಡು ಅ [illegible]ಗೆ [illegible]ರು. ಮಲಯವತಿ ತನ್ನ ಪ್ರಿಯನ ವಾರ್ತೆಯನ್ನಾಲಿಸಿ ದುಃ ಬ[illegible]ುತ್ತ[illegible]ರದೆ ಅಗ್ನಿಪ್ರವೇಶಮಾಡಿ ಪತಿಯನ್ನು ಸ್ವರ್ಗಧಾಮದಲ್ಲಾದರೂ ನನ[illegible]ಂದು ನಿಶ್ಚಯ ಮಾಡಿದಳು. ತಮ್ಮ ಊರುಗೋಲಿನಂತಿದ್ದ [illegible] ಹೋದ ಮೇಲೆ ಆ ತಂದೆತಾಯಿಂದಿರಿಗೆ ಜೀವದ ಮೇಲೆ ಆಸ [illegible]ದೆ? ಅವರೂ ಮಲಯವತಿಯನ್ನೇ ಅನುಸರಿಸಲು ಸಿದ್ಧರಾ [illegible] [illegible]ಂದಾಗಿ ವಿದ್ಯಾಧರ ಕುಟುಂಬವೇ ನಾಶವಾಗುವುದನ್ನು ಕಂಡ [illegible]ನು ಅವರೆಲ್ಲರನ್ನೂ ಹೇಗಾದರೂ ಸಮಾಧಾನ ಪಡಿಸಿ ಗುರುಡ [illegible] ಕರಕೊಂಡು ಹೊರಟನು. ಅತ್ತ ಗರುಡನು ಕೊಕ್ಕಿನಿಂದ [illegible]ಾಗ ಧೈರ್ಯದಿಂದಲೂ ಆನಂದನಿಂದಲೂ ಇರುವ [illegible] ನೋಡಿ, "ಮಹಾತ್ಮನೆ, ನೀನಾರು?" ಎಂದು

ಕೇಳಿದನು. ಅದಕ್ಕೆ ಜೀಮೂತವಾಹನನು “ಅಯ್ಯಾ, ಹಸಿವೆಯಿಂದ ಬಳಲಿದ ನೀನು ನನ್ನ ರಕ್ತ ಕುಡಿದು ಮಾಂಸ ತಿಂದು ತೃಪ್ತನಾಗು” ಎಂದುತ್ತರವಿತ್ತನು. ಈ ಮಾತನ್ನು ಕೇಳಿದ ಗರುಡನು ಇನ್ನಷ್ಟು ಆಶ್ಚರ್ಯಗೊಂಡನು. ಅಷ್ಟರಲ್ಲಿ ಶಂಖಚೂಡನು ವಿದ್ಯಾಧರ ಬಳಗದೊಡನೆ ಅಲ್ಲಿಗೆ ಓಡಿಬಂದು “ಪಕ್ಷಿ ರಾಜನೇ, ಅವನನ್ನು ಬಿಟ್ಟುಬಿಡು. ಅವನು ನಾಗನಲ್ಲ; ವಾಸುಕಿಯು ಕಳುಹಿಸಿದ ನಾಗನು ನಾನು. ನನ್ನನ್ನು ತಿನ್ನು” ಎಂದು ಬೇಡಿಕೊಂಡನು. ಆಗ ಗರುಡನು ತನ್ನ ತಪ್ಪು ತಿಳಿದು ಜೀಮೂತವಾಹನನ್ನು ಹಿಂಸಿಸುದುದಕ್ಕೆ ಅಗ್ನಿಪ್ರವೇಶವೇ ಸರಿಯಾದ ಪ್ರಾಯಶ್ಚಿತ್ತವೆಂದು ಭಾವಿಸಿದನು. ಪ್ರಾಣಹೋಗುವ ಸ್ಥಿತಿಯಲ್ಲಿದ್ದ ಜೀಮೂತವಾಹನನು ತನ್ನ ಮಾತಾಪಿತೃಗಳೂ ಪ್ರಿಯೆಯೂ ದುಃಖಿಸುತ್ತಿರುವುದನ್ನು ಕಂಡು, ಶರೀರದ ಗಾಯವನ್ನು ವಸ್ತ್ರದಿಂದ ಮರೆಮಾಡಿದನು. ಗರುಡನು ಪಶ್ಚಾತ್ತಾಪದಿಂದಲೂ ನಾಚಿಕೆಯಿಂದಲೂ ಮುಖತೋರಿಸಲಾರದೆ ಆತ್ಮಹತ್ಯೆಗೆ ಪ್ರಯತ್ನಿಸಿದನು. ಜೀಮೂತವಾಹನನು ಗರುಡನನ್ನು ತಡೆದು “ಹಾಗೆ ಮಾಡಬಾರದು” ಎಂದು ಬೇಡಿಕೊಂಡನು. ಆಗ ಗರುಡನು “ಈ ಮಹಾ ಪಾಪಕ್ಕೆ ಪ್ರಾಯಶ್ಚಿತ್ತವೇನೆ”ಂದು ಕೇಳಲು, ಜೀಮೂತವಾಹನನು “ಮಾಡಿದ ಪಾಪಕ್ಕೆ ಪಶ್ಚಾತ್ತಾಪವೇ ಪ್ರಾಯಶ್ಚಿತ್ತ. ಇನ್ನುಳಿದ ನಾಗಗಳಿಗೆ ಅಭಯದಾನ ಮಾಡು” ಎಂದು ಹೇಳಿ ಪ್ರಾಣಬಿಟ್ಟನು. [illegible] ಹಾಗೆಯೇ ಪ್ರತಿಜ್ಞೆ ಮಾಡಿದನು.

ಮಗನ ಮರಣದ ದುಃಖವನ್ನು ತಡೆಯಲಾರದ [illegible] ತಾಯಂದಿರು ಅಗ್ನಿ ಪ್ರವೇಶಕ್ಕೆ ಸಿದ್ಧರಾದರು. ಆಗ ಗರುಡನು [illegible] ತಡೆದು, ಅಮೃತವನ್ನು ತಂದು ಜೀಮೂತವಾಹನನನ್ನು [illegible] ಗೊಳಿಸುವೆನೆಂದು ಸ್ವರ್ಗಕ್ಕೆ ಹಾರಿ ಹೋದನು. ಮಲಯ [illegible] ದೇವಿಯನ್ನು ಪ್ರಾರ್ಥಿಸಿ ಅನುಗ್ರಹ ಪಡೆದು ಪತಿಯ ಜೀವ[illegible] ದಳು. ಗರುಡನು ಅಮೃತವನ್ನು ತಂದು ಸತ್ತ ಸರ್ಪಗ[illegible] ರಾಶಿಯ ಮೇಲೆ ಸುರಿದು ಎಲ್ಲವನ್ನೂ ಜೀವಹೊಂದುವ[illegible]

ಅಂದಿನಿಂದ ಗರುಡನು ಅಹಿಂಸಾವ್ರತ ಕೈಕೊಂ[illegible] ಕ್ಷೇಮವಾಯಿತು. ಜೀಮೂತಕೇತುವೇ ಮೊ[illegible]

ಸಾಗರದಲ್ಲಿ ತೇಲಾಡಿದರು. ಜೀಮೂತವಾಹನನ ಪರೋಪಕಾರ ಬು[illegible]
ಪ್ರಪಂಚಕ್ಕೆ ಆದರ್ಶವಾಯಿತು.

ಅಭ್ಯಾಸ

1. ಜೀಮೂತವಾಹನನು ತಂದೆತಾಯಿಂದಿರೊಡನೆ ಮಲಯ[illegible]ಚಲಕ್ಕೆ ನಡೆಯಲು ಕಾರಣವೇನು?

2. ಜೀಮೂತವಾಹನ ಮಲಯವತಿಯರ ಹೃದಯದಲ್ಲಿ ಪ್ರೇಮ[illegible] ಅಂಕುರಿಸಲು ಕಾರಣವೇನು?

3. ಮಿತ್ರಾವಸು ಜೀಮೂತವಾಹನನಿಗೆ ಹೇಳಿದ ಎಲುಬಿ[illegible] ರಾಶಿಯ ಸಂಗತಿಯೇನು?

4. ಶಂಖಚೂಡನು ಯಾರು? ಆತನು ವ್ಯಾಕುಲಗೊಳ್ಳ[illegible] ಕಾರಣವೇನು?

5. "ಮುಂದೆ ಜನ್ಮ ಜನ್ಮಾಂತರಗಳಲ್ಲಿಯೂ ನನಗೆ ಪರೋಪಕಾ[illegible] ಮಾಡುವ ಸುಯೋಗವು ಒದಗಿಬರಲಿ"—ಈ ಮಾತು ಯಾರದು? ಯಾವ[illegible] ಸಂದರ್ಭದಲ್ಲಿ?


6. ಗರುಡನು ತಾನು ಮಾಡಿದ ಪಾಪಕ್ಕೆ ಮಾಡಿಕೊಂಡ ಪ್ರಾಯ[illegible] [illegible]ವೇನು?

[illegible] ನಾಗಾನಂದದ ಕತೆಯನ್ನು ಸಂಕ್ಷೇಪಿಸಿ ಬರೆಯಿರಿ.

[illegible] ಮುಂದಿನ ಪದಗಳಲ್ಲಿ ತಪ್ಪಾದ ಅಕ್ಷರಗಳನ್ನು ಸರಿಗೊಳಿಸಿ[illegible] —ಆಕ್ಷರ್ಯ, ವಿಧ್ಯಾದರ; ಆದರೊಪಚರ; ವೃತರ್; ನಿರ್ಧಯ; [illegible] ಅಬಯ.

೧೭. ಬಿಜಾಪುರದ ವೈಭವ

ನಮ್ಮ ಭಾರತದ ಉದ್ದಗಲಕ್ಕೂ ಪ್ರಾಚೀನ ಸಂಸ್ಕೃತಿಯ ನೂರಾರು ಕುರುಹುಗಳು ಇಂದಿಗೂ ಅಚ್ಚಳಿಯದೆ ಉಳಿದುಕೊಂಡಿವೆ. ಒಂದೊಂದು



ಗೋಲಗುಂಬಜ

ಕಾಲದ—ಒಬ್ಬೊಬ್ಬ ದೊರೆಯ ಆಳಿಕೆಯ—ಸಂಸ್ಕೃ
ತೆರ ವಿದೇಶೀಯರಾದ ಮಹಮ್ಮದೀಯರು ಭಾರತಕ್ಕೆ
ರಾಜ್ಯ ಕಟ್ಟಿ ಇಲ್ಲಿನವರೇ ಆಗಿ ಆಳಿದರು. ಮ

ಭಾರತದಲ್ಲಿ ಹರಡಿತು. ಆ ಧರ್ಮದೊಂದಿಗೆ ಆ ಸಂಸ್ಕೃತಿಯೂ ಇಲ್ಲಿ ಹಬ್ಬಿತು. ಮುಸಲ್ಮಾನ ಸಂಸ್ಕೃತಿ ಹಿಂದೂ ಸಂಸ್ಕೃತಿಯೊಂದಿಗೆ ಬೆರಕೆಗೊಂಡು ಬೆಳೆದು ಬಂತು. ಭಾರತದ ಹಲವು ಕೇಂದ್ರಗಳಲ್ಲಂತೂ ಶುದ್ಧ ಮುಸಲ್ಮಾನ ಸಂಸ್ಕೃತಿಯೇ ಬೆಳೆದು ಬಂದುದೂ ಇದೆ. ನಮ್ಮ ಕರ್ನಾಟಕದಲ್ಲಿಯೂ ಶುದ್ಧ ಮುಸಲ್ಮಾನ ಸಂಸ್ಕೃತಿ ಬೆಳೆದು ಫಲಿಸಿದ ಕೇಂದ್ರವೊಂದಿದೆ. ಆ ಕೇಂದ್ರದಲ್ಲಿ ನಾವಿಂದಿಗೂ ಮುಸಲ್ಮಾನ ಸಂಸ್ಕೃತಿ ಕಲಾಕೌಶಲಗಳ ಕುರುಹುಗಳನ್ನು ಕಾಣಬಹುದು. ಕರ್ಣಾಟಕದ ಬಿಜಾಪುರವೇ ಮುಸಲ್ಮಾನ ಸಂಸ್ಕೃತಿಯನ್ನು ನಮ್ಮ ಕಣ್ಣ ಮುಂದಿಡುವ ಆ ಒಂದು ಕೇಂದ್ರ. ಮುಸಲ್ಮಾನ ಸಂಸ್ಕೃತಿಯ ಪುಣ್ಯ ತೀರ್ಥ ಅದು.

ಬಿಜಾಪುರದಲ್ಲಿ ಆದಿಲ್‌ಶಾಹೀ ಮನೆತನದ ಕಾಲದ ಅರಮನೆಗಳೂ ಮಸೀದಿಗಳೂ ಮುಸಲ್ಮಾನ ಸಂಸ್ಕೃತಿ ಕಲಾಕೌಶಲಗಳನ್ನು ನಮ್ಮ ಕಣ್ಣಿಗೆ ಕಟ್ಟುತ್ತವೆ. ಕರ್ನಾಟಕದ ಪ್ರಾಚೀನ ವೈಭವವನ್ನು ಎತ್ತಿ ತೋರುವ ಈ ನಗರವು ಭಾರತದ ಬೇರೆ ಬೇರೆ ಭಾಗಗಳಿಂದ ಸಂದರ್ಶಕರನ್ನು ಸದಾಕಾಲವೂ ತನ್ನೆಡೆಗೆ ಸೆಳೆಯುತ್ತಿರುತ್ತದೆ. ಬಿಜಾಪುರದಲ್ಲಿ ಹಲವಾರು ಅರಸು ಮನೆತನಗಳು ಆಳಿ ಮೆರೆದಿವೆ. ಕ್ರಿ. ಶ. 1074ರಲ್ಲಿ ಈ ಮಹಾ ನಗರದ ಶಂಕುಸ್ಥಾಪನೆಯಾಯಿತು. ಅಂದಿನಿಂದ ಈ ನಗರ ಚಾಲುಕ್ಯರು ಮೊದರಾ[illegible]ವರು, ಖಿಲ್ಜಿಮನೆತನದವರು, ಬಹಮನಿ ಸುಲ್ತಾನರು ಮೊದಲಾದ [illegible]ಪ್ರಾಗೆ ಈ[illegible]ರುತ್ತ ಬಂದು, ಕಡೆಗೆ 1489ರಲ್ಲಿ ಆದಿಲಶಾಹಿಯು ವಶವಾ[illegible] ಆದಿಲಶಾಯಿ ದೊರೆಗಳು ಬಿಜಾಪುರವನ್ನು 1568ನೆಯ ಇಸವಿ[illegible]ಗೂ ತಮ್ಮ ಅಧೀನದಲ್ಲಿರಿಸಿಕೊಂಡರು; ಮುಸಲ್ಮಾನ ಸಂಸ್ಕೃತಿ [illegible]ಗಳ ವೈಭವ ಹೆಚ್ಚಿಸಿದರು. ಆದಿಲಶಾಹಿಗಳ ಕಾಲದಲ್ಲಿ [illegible] ವೈಭವ ಉನ್ನತಿಯು ಶಿಖರಕ್ಕೇರಿತು. ಬಿಜಾಪುರದಲ್ಲಿ [illegible]ಕಾಣುತ್ತಿರುವ ಮುಸಲ್ಮಾನ ಸಂಸ್ಕೃತಿ ಕಲಾಕೌಶಲಗಳ [illegible] ಆದಿಲಶಾಹಿಗಳ ಕಾಲದವುಗಳೇ ಆಗಿವೆ. ಇವರ ಹಿಂದೆ ಅಲ್ಲಿ [illegible] ರಾಜಮನೆತನಗಳ ಕುರುಹುಗಳೂ ಇಂದಲ್ಲಿ ಉಳಿದು [illegible]ಾನ ಅರಸು ಮನೆತನಗಳ ಕುರುಹುಗಳನ್ನೆಲ್ಲ ಆದಿಲಶಾಹಿ [illegible]ದೆ.

ಮಹಾನಗರ ಬಿಜಾಪುರದ ನಾಲ್ಕು ಸುತ್ತಲೂ ಕೋಟೆ ಇದೆ. ಇಂದಿಗೆ ಈ ಕೋಟೆ ಹಾಳುಬಿದ್ದು, ಕೆಲವು ಕಡೆ ಕೇವಲ ಕುರುಹು ಮಾತ್ರ ಉಳಿದಿದೆ. ನಗರದೊಳಗೆ ಎಲ್ಲಿ ನೋಡಿದರಲ್ಲಿ ಸಮಾಧಿಗಳೂ, ಪ್ರಾರ್ಥನಾ ಮಂದಿರಗಳೂ ಕಣ್ಣಿಗೆ ಬೀಳುತ್ತವೆ. ಅಂದಿನ ಕಾಲದಲ್ಲಿ ಸತ್ತವರಿಗೆಲ್ಲ ಬಡವಬಲ್ಲಿದರೆಂಬ ಭೇದವಿಲ್ಲದೆ ಸುಂದರವಾದ ಸಮಾಧಿ ಕಟ್ಟುವುದೂ ಮಹಮ್ಮದೀಯರಲ್ಲಿ ಒಂದು ವೈಶಿಷ್ಟ್ಯವೇ ಆಗಿದ್ದಿತು.

ಬಿಜಾಪುರದಲ್ಲಿ ಮಾನವ ನಿರ್ಮಿತ ಮಹೋನ್ನತ ಕೃತಿಯೆಂದರೆ ಗೋಲಗುಂಬಜ. ಭಾರತೀಯ ಇತಿಹಾಸ ಓದಿದವರಿಗೆಲ್ಲ ಗೋಲಗುಂಬಜದ ನೆನಹು ಮಾಸಲಾರದು. ಇತಿಹಾಸದಲ್ಲಿ ಓದುವಾಗ ಈ ಮಹಾಕೃತಿ ಎಷ್ಟೊಂದು ಹಿರಿದಾಗಿ ಕಾಣುವುದೋ, ಕಣ್ಣಿನಿಂದ ನೋಡುವಾಗ ಅದಕ್ಕಿಂತಲೂ ಸಾವಿರ ಪಾಲು ಹಿರಿದಾಗಿಯೂ ಮಹತ್ವಪೂರ್ಣವಾಗಿಯೂ ತೋರುವುದು. ಗೋಲಗುಂಬಜವನ್ನು ದಕ್ಷಿಣದ ತಾಜ್ ಮಹಲ್ ಎಂದೇ ಹೇಳಬಹುದು. ವಾಸ್ತುಶಿಲ್ಪದ ಈ ಮಹಾಪ್ರತೀಕವು ಕ್ರಿ. ಶ. ಹದಿನೇಳನೆಯ ಶತಮಾನದ ಮಾನವ ಕೃತಿ. ಕ್ರಿ. ಶ. 1626ರಿಂದ 56ರ ವರೆಗೆ ಆಳಿದ ಏಳನೆಯ ಆದಿಲಶಾಹೀ ಸುಲ್ತಾನನಾದ ಮಹಮ್ಮದ್ ಆದಿಲ್‌ಶಾಹನ ಪತ್ನಿ ಪುತ್ರಿಯರ ಸಮಾಧಿಯೇ ಗೋಲಗುಂಬಜ. ಈ ಭವ್ಯಕಟ್ಟಡದ ಕೆಲಸ ಎಡೆಬಿಡದೆ ಮೂವತ್ತು ವರ್ಷಗಳ ಕಾಲ ನಡೆಯಿತಂತೆ. ಇದರ ಅಸ್ತಿವಾರವೆಂದರೆ ಅಖಂಡವಾದ ಒಂದೇ ಹಾಸುಗಲ್ಲಾಗಿ ಅಸ್ತಿವಾರದ ಕ್ಷೇತ್ರಫಲ 1837 ಚ. ಅಡಿ. ಕಟ್ಟಡ ತಳದ [illegible] ಅಷ್ಟಕೋಣಾಕೃತಿಯಲ್ಲಿ ರಚಿತವಾಗಿದೆ. ಯಾವ ಕಂಬಗಳ [illegible] ಇಲ್ಲದೆ, ಇಷ್ಟೊಂದು ವಿಶಾಲವಾದ ಗುಂಬಜವನ್ನು ಕಟ್ಟಿ ನಿಲ್ಲಿಸಿದ [illegible] ಜಗತ್ತಿನ ಯಾವ ಭಾಗದಲ್ಲಿಯೂ ಕಂಡು ಬರುವುದಿಲ್ಲ.

ಕಟ್ಟಡದ ನೆಲಮಟ್ಟದಿಂದ 109 ಅಡಿ ಎತ್ತರದಲ್ಲಿ [illegible] ಅಂಚಿನಲ್ಲಿ ಒಂದು 'ಗ್ಯಾಲರಿ' ಇದೆ. ಇದನ್ನು 'ವಿಸ್ಪರಿಂಗ್ [illegible] (ಪಿಸುಗುಟ್ಟುವ ಕಡೆಗಟ್ಟು) ಎನ್ನುವರು. ಈ ಗ್ಯಾಲರಿ[illegible] ವಾಗಿ ನಿಂತು ಮಾತನಾಡಿದರೆ ಆ ಮಾತು ಹತ್ತು ಸ[illegible] ವುದು. ಹೀಗೆ ಹತ್ತು ಸರ್ತಿ ಪ್ರತಿಧ್ವನಿಯಾ[illegible]

ಮಾನವ ಸೃಷ್ಟಿಯ ವೈಚಿತ್ರವೇ ಸರಿ! 'ವಿಸ್ಪರಿಂಗ್ ಗ್ಯಾಲರಿ' ಗುಂಬಜ ಒಳಮೈಯ್ಯಲ್ಲಿದೆ. ಗುಂಬಜದ ಹೊರ ಮೈಯಲ್ಲಿರುವ ಜಗಲಿಯ [illegible] ನಿಂತು ಸುತ್ತಲೂ ದೃಷ್ಟಿಹರಿಯಿಸಿದರೆ ಅಸಂಖ್ಯಾತವಾಗಿ ಗೋ[illegible] ಗುಂಬಜ, ಬುರುಜುಗಳಿಂದ ತುಂಬಿದ ಬಿಜಾಪುರ ನಗರದ ಭವ್ಯ ದೃಷ್ಯ ಕಣ್[illegible] ಮುಂದೆ ನಿಲ್ಲುವುದು. 'ವಿಸ್ಪರಿಂಗ್ ಗ್ಯಾಲರಿ'ಯಿಂದ ಗುಂಬಜದ ಶಿಖರಕ್[illegible] 68 ಅಡಿ ಎತ್ತರವಿದೆ. ಗುಂಬಜದ ಶಿಖರ ನೆಲಮಟ್ಟದಿಂದ 177 ಅ[illegible] ಎತ್ತರದಲ್ಲಿದೆ. ಈ ಮಹಾಕೃತಿಯ ಒಳಭಾಗದ ವ್ಯಾಸ 1245 ಅಡಿ 5 ಅಂಗುಲ; ಗೋಡೆಗಳ ದಪ್ಪ ಕೆಳಕೆಳಗೆ ಹತ್ತು ಅಡಿಗಳಿದ್ದು ಮೇಲೆ ಮೇಲ[illegible] ಒಂಬತ್ತು ಅಡಿ ಎಂದು ಹೇಳಲಾಗಿದೆ.

ಗೋಲಗುಂಬಜದಿಂದ ಮತ್ತೆ ಬಿಜಾಪುರದ ವೈಭವ ಕೃತಿಯೆಂದರೆ ಜಮ್ಮಾ ಮಸೀದಿ. ಈ ಜಮ್ಮಾ ಮಸೀದಿಯಷ್ಟು ಬೃಹದಾಕಾರದ ಚಿತ್ತಾಕರ್ಷಕವಾದ ಹಳೆಯ ಕಟ್ಟಡ ಭಾರತದ ಯಾವ ಭಾಗದಲ್ಲಿಯೂ ಇಲ್ಲವಂತೆ. ಆದಿಲಶಾಹಿಯ ಐದನೆಯ ಸುಲ್ತಾನ ತನ್ನ ಮರಣಕ್ಕೆ ನಲ್ವ[illegible] ತ್ತೈದು ವರ್ಷಗಳ ಮೊದಲು ಈ ಮಂದಿರವನ್ನು ಕಟ್ಟಿಸತೊಡಗಿದನು. ಆ ಸುಲ್ತಾನನ ಅನಂತರ ಪಟ್ಟವೇರಿದ ದೊರೆಗಳಲ್ಲಿ ಪ್ರತಿಯೊಬ್ಬರೂ ಕಟ್ಟಡದ ಕೆಲಸವನ್ನು ಮುಂದುವರಿಸುತ್ತ ಬೆಳೆಯಿಸುತ್ತ ಬಂದರು; ಒಬ್ಬೊಬ್ಬ ವುದರ[illegible] ಒಂದೊಂದು ಭಾಗದ ಕೆಲಸ ಪೂರಯಿಸಿದನು. ಜಮ್ಮಾ [illegible]ಗೆ [illegible]ಳಗೆ ಎಲ್ಲಾ ಸೇರಿ ನಲ್ವತ್ತೈದು ಗುಂಬಜಗಳಿವೆ. ನಡುವಣ ಬೃ[illegible] [illegible]ಲದಿಂದ 110 ಅಡಿ ಎತ್ತರವಾಗಿದೆ. ಸಾಲುಸಾಲಾಗಿ ನಿಲ್ಲಿ [illegible]ದರವಾದ 'ಕಮಾನು'ಗಳಿಂದ ಈ ಪ್ರಾರ್ಥನಾಮಂದಿರದ ನೆಲ [illegible] ಅಂತರಗಳಾಗಿ ವಿಭಾಗಿಸಲ್ಪಟ್ಟಿದೆ. ಈ ನಲ್ವತ್ತೈದು ವಿಭಾಗ [illegible]ಂದು ವಿಭಾಗವೂ ಐವತ್ತು ಚೌಕಗಳಾಗಿ ವಿಂಗಡಿಸಲ್ಪಟ್ಟಿವೆ. [illegible] ಚೌಕವೆಂದರೆ ಒಬ್ಬೊಬ್ಬನಿಗೆ ಪ್ರಾರ್ಥನೆ ಮಾಡಲು ಬೇಕಾಗು [illegible]

[illegible] ಪ್ರ[illegible] ಮಸೀದಿಯ ಪೂರ್ವಪಾರ್ಶ್ವದಲ್ಲಿ ಶಿಲಾನಿರ್ಮಿತವಾದ [illegible]ವಿದೆ. ಈ ದ್ವಾರವನ್ನು ಮೊಗಲ ಚಕ್ರವರ್ತಿ ಔರಂಗ [illegible] ಮಂದಿರದ ಒಳಭಾಗದಲ್ಲಿರುವ ಸ್ವರ್ಣಾಲಂಕೃತ

ಚಿತ್ರಗಳನ್ನು ಆದಿಲಶಾಹಿಗಳಲ್ಲಿ ಆರನೆಯ ಸುಲ್ತಾನನಾದ ಮಹಮ್ಮದ್ ಆದಿಲಶಾಹನು ಬರೆಯಿಸಿದನು. ಈ ಚಿತ್ರಾಲಂಕಾರಗಳು ಮನಮೋಹಕವಾಗಿವೆ.

ಬಿಜಾಪುರದ ಇನ್ನೊಂದು ಸುಂದರವಾದ ಕಟ್ಟಡವೆಂದರೆ 'ಆಸಾರ್ ಮಹಲ್'. ಈ ಮಹಲು ಗೋರಿಯೂ ಅಲ್ಲ; ಪ್ರಾರ್ಥನಾ ಮಂದಿರವೂ ಅಲ್ಲ. ಇದರಲ್ಲಿ ಆದಿಲಶಾಹೀ ಸುಲ್ತಾನರ ನ್ಯಾಯ ಸಭೆ ಜರಗುತ್ತಿದ್ದಿತಂತೆ. ಹಿಂದೆ ಈ ಕಟ್ಟಡಕ್ಕೆ 'ದಾದರ್ ಮಹಲ್' ಎಂದರೆ ನ್ಯಾಯಾಲಯ ಎಂದೇ ಹೆಸರಿದ್ದಿತು. ಆದಿಲಶಾಹಿಗಳಲ್ಲಿ ಏಳನೆಯವನಾದ ಮಹಮ್ಮದ ಆದಿಲಶಾಹನು ಇದನ್ನು ಕಟ್ಟಿಸಿದನು. 'ಆಸಾರ್ ಮಹಾಲ್' ಸುಂದರವೂ ವಿಶಾಲವೂ ಆದ ಕಟ್ಟಡವಾಗಿದೆ. ಮಹಮ್ಮದೀಯರಿಗೆ ಈ ಮಂದಿರ ಅತ್ಯಂತ ಪವಿತ್ರವಾಗಿದೆ. ಪರ್ಷಿಯದ ಪ್ರವಾಸಿಯೊಬ್ಬನು ಮಕ್ಕದಿಂದ ತಂದ ಮಹಮ್ಮದ ಪೈಗಂಬರರ ಕೂದಲನ್ನು ಈ ಮಂದಿರ ಕಟ್ಟಿಸಿದ ಏಳನೆಯ ಆದಿಲಶಹನ ತಂದೆ ಇಬ್ರಾಹಿಮ್ ಆದಿಲಶಹನಿಗೆ ಕೊಟ್ಟಿದ್ದನಂತೆ ಆ ಪವಿತ್ರ ಅವಶೇಷವನ್ನು ಈ ಮಂದಿರದಲ್ಲಿ ಇರಿಸಿದ್ದಾರೆ. ಮಹಮ್ಮದ ಪೈಗಂಬರರ ಕೂದಲು ಅತ್ಯಂತ ಪವಿತ್ರ ಅವಶೇಷವಾದುದರಿಂದ ಅದನ್ನಿರಿಸಿದ ಈ ಕಟ್ಟಡ 'ಆಸಾರ್ ಮಹಲ್' ಎಂದೇ ಪ್ರಸಿದ್ಧವಾಯಿತು.

ಆಸಾರ್ ಮಹಲಿಗೆ ಎರಡು ಅಂತಸ್ತುಗಳಿವೆ. ಮೇಲಂತಸ್ತಿ[illegible] ಉತ್ತರ ದಿಕ್ಕಿನಲ್ಲಿರುವ ಕೊನೆಯ ಕೋಣೆಯಲ್ಲಿ ಮಹಮ್ಮದ ಪೈ[illegible] ಆ ಪವಿತ್ರ ಅವಶೇಷಗಳನ್ನಿಡಲಾಗಿದೆ. ಈ ಕೋಣೆಗೆ ಬೀಗ [illegible] ಕಾರದ ಮುದ್ರೆಯೊತ್ತಲ್ಪಟ್ಟಿದ್ದು, ವರ್ಷಕ್ಕೊಮ್ಮೆ ಪೈಗಂಬರರ [illegible] ಆ ಅವಶೇಷಗಳನ್ನು ಮುಸ್ಲಿಮರಿಗೆ ಮಾತ್ರ ತೋರಿಸಲಾಗುವ[illegible] ದಿನ ಭಾರತದ ಎಲ್ಲೆಡೆಗಳಿಂದಲೂ ಲಕ್ಷಾಂತರ ಮಂದಿ [illegible] ಯಾತ್ರಿಕರು ಅಲ್ಲಿ ನೆರೆದು ತಮ್ಮ ಪೈಗಂಬರರ ಪವಿತ್ರ ಅವಶೇ[illegible] ಮಾಡುವರು. ಈ ಕಟ್ಟಡವು ಹೊರಗಿನಿಂದ ನೋಡುವಾ[illegible] ಕಟ್ಟಡವಾಗಿ ತೋರಿದರೂ, ಮೇಲಂತಸ್ತನ್ನು ಏರಿದರೆ [illegible] ಅರಿವಾಗುವುದು. ಅಲ್ಲಿ ಕಂಡು ಬರುವ ಚಿತ್ರಕಲೆ [illegible] ವಾಗಿದೆ. ಮಹಲಿನ ಗೋಡೆಗಳಲ್ಲಿ ಬರೆದ ಆ[illegible]

ಕಳೆಗೆಟ್ಟು ಹೋಗಿದ್ದರೂ, ಅಲ್ಲಲ್ಲಿ ಮಾಸಿ ಹೋಗಿದ್ದರೂ, ಆ ಚಿತ್ರಗಳನ್ನು ಬರೆದ ಚಿತ್ರಗಾರರ ಸೂಕ್ಷ್ಮ ದೃಷ್ಟಿ ಕಲಾ ಕೌಶಲಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ.

ಆದಿಲಶಾಹೀ ಸುಲ್ತಾನರ ಕಾಲದ ಹಲವಾರು ಅಮೂಲ್ಯ ವಸ್ತುಗಳು ಆಸಾರ್ ಮಹಲಿನಲ್ಲಿ ಇರಿಸಲ್ಪಟ್ಟಿವೆ. ಅಲ್ಲಿರಿಸಿದ ಆ ಕಾಲದ ಜರಿಹೆಣೆದ ಶಾಲುಗಳನ್ನು ನೋಡಿದಾಗ ಇಂದಿನ ನಮಗೆ ಆಶ್ಚರ್ಯವೂ ಹೆಮ್ಮೆಯೂ ಉಂಟಾಗುವುದು. ಇಂದಿನ ಯಾಂತ್ರಿಕ ಯುಗದಲ್ಲಿಯೂ ಕಂಡು ಬಾರದಂತಹ ಸುಂದರ ಶಾಲುಗಳನ್ನು ಆ ಯುಗದಲ್ಲಿ ನಮ್ಮ ದೇಶದಲ್ಲಿ ಕೈಯಿಂದಲೇ ನೂತು ನೇಯುತ್ತಿದ್ದರೆಂದರೆ ನಾವು ಅಭಿಮಾನಪಡಬೇಕಾದ ಸಂಗತಿಯಲ್ಲವೆ?

ಇನ್ನು ಇಬ್ರಾಹಿಮ್ ರೋಜ, ಗಗನ ಮಹಲ್, ಆನಂದ ಮಹಲ್ ಇವೆಲ್ಲ ಬಿಜಾಪುರದಲ್ಲಿ ನೋಡತಕ್ಕ ಕಟ್ಟಡಗಳಾಗಿವೆ. ಈ ಎಲ್ಲಾ ವಾಸ್ತು ಶಿಲ್ಪಗಳಲ್ಲದೆ 'ಮಾಲಿಕ್-ಇ-ಮೈದಾನ್' ಎಂಬೊಂದು ದೊಡ್ಡ ತೋಪು ಅಲ್ಲಿದೆ. 'ಮಾಲಿಕ್-ಇ-ಮೈದಾನ್' ಎಂದರೆ ಯುದ್ಧ ರಂಗದ ಅಧಿಪತಿ ಎಂದರ್ಥ. ಈ ತೋಫನ್ನು ಕಾಣುವಾಗ ಇದನ್ನು ಯಾವ ರೀತಿ ಉಪಯೋಗಿಸುತ್ತಿದ್ದರೆಂದು ನಮಗೆ ಸೋಜಿಗವಾಗುವುದು. ಈ ತೋಫನ್ನು ವುದರಕ್ಕಾದಂತೆ ಬೇಕಾದ ಕಡೆಗೆ ತಿರುಗಿಸಿ ಉಪಯೋಗಿಸಲು ಬೇಕಾದ [illegible]ಗೆ [illegible]ಳು ಹಿಂದೆ ಇದ್ದುವಂತೆ. ಆದರೆ ಇಂದು ಆ ಸಾಧನಗಳೆಲ್ಲ ನಮಗೆ ಬ್ರ[illegible]ರವು. ನಮಗಿಂದು ಕಾಣುವುದು ಭೇತಾಳನಂತೆ ಬಿಜಾಪುರದಲ್ಲಿ ನನ್ನ[illegible]ಂಡಿರುವ ಆ ಬೃಹದಾಕಾರದ ತೋಪು ಮಾತ್ರ. ಈ ತೋಫಿನ ಭಾರ ಜ[illegible]ಗಳು. ಇನ್ನೂ ಅನೇಕ ಹಳೆಯ ತೋಪುಗಳು ಬಿಜಾಪುರದಲ್ಲಿ [illegible]ಗುತ್ತವೆ. ಈ ತೋಪುಗಳನ್ನೆಲ್ಲ ಕಾಣುವಾಗ ಅಂದಿನ [illegible] ಭಯಂಕರ ದೃಶ್ಯಗಳು ನಮ್ಮ ಕಣ್ಣಿಗೆ ಕಟ್ಟಿದಂತಾಗುತ್ತವೆ. [illegible]ಪುರ ನಗರದಲ್ಲಿ ನೋಡತಕ್ಕ ಇನ್ನೊಂದು ವಿಷಯವೆಂದರೆ [illegible] ಸಮೀಪದಲ್ಲಿಯೇ ಇರುವ ಐತಿಹಾಸಿಕ ವಸ್ತು ಸಂಗ್ರ[illegible] ಸಂಗ್ರಹಾಲಯವನ್ನು ನೋಡದಿದ್ದರೆ ಬಿಜಾಪುರ [illegible]ಡದಂತಾಗುವುದು. ಈ ವಸ್ತು ಸಂಗ್ರಹಾಲಯ

ದಲ್ಲಿ ಇತಿಹಾಸ ಕಾಲದ ಕರ್ಣಾಟಕದ ವೈಭವ ಪ್ರಾಣಹೀನವಾಗಿ ಕೇವಲ ಕುರುಹಾಗಿ ಬಿದ್ದುಕೊಂಡಿದೆ. ಕರ್ಣಾಟಕ ಇತಿಹಾಸಕ್ಕೆ ಸಂಬಂಧಿಸಿದ ಅಪಾರ ವಸ್ತುಗಳು ಈ ಸಂಗ್ರಹಾಲಯದಲ್ಲಿವೆ. ನಮ್ಮ ಕನ್ನಡ ನಾಡಿನ ಐತಿಹಾಸಿಕ ಸಂಸ್ಕೃತಿಯ ಕೇಂದ್ರವಾದ ಬಿಜಾಪುರದಲ್ಲಿ ಇಷ್ಟೊಂದು ಸುಯೋಗ್ಯವಾದ ವಸ್ತು ಸಂಗ್ರಹಾಲಯು ಕಳೆದ ನಲ್ವತ್ತು ವರ್ಷಗಳಿಂದ ಅಸ್ತಿತ್ವದಲ್ಲಿದ್ದರೂ ಅದು ಬಹುಜನ ಕನ್ನಡಿಗರಿಗೆ ತಿಳಿಯದಿರುವುದು ದುರ್ಭಾಗ್ಯವಲ್ಲದೆ ಮತ್ತೇನು?

ನಮ್ಮ ಭಾರತದ ಪ್ರಾಚೀನ ರಾಜರುಗಳು ಬಿಜಾಪುರ ವಿಜಯನಗರ ದಂತಹ ಮಹಾಮಹಾ ನಗರಗಳನ್ನು ಕಟ್ಟಿದರು; ವಾಸ್ತುಶಿಲ್ಪ, ಚಿತ್ರಶಿಲ್ಪ ಗಳಿಗೆ ಪ್ರೋತ್ಸಾಹವಿತ್ತು ಸಂಸ್ಕೃತಿ ಕಲಾಕೌಶಲಗಳನ್ನು ಉನ್ನತಿಯ ಶಿಖರ ಕ್ಕೇರಿಸಿದರು; ಭಾರತದ ವೈಭವವನ್ನು ಮೆರೆಯಿಸಿ ಭಾರತದ ಕೀರ್ತಿ ಶಾಶ್ವತ ನಾಗಿ ಉಳಿಯುವಂತೆ ಮಾಡಿದರು. ಇಂದಿನ ನಾವು ಅಂದಿನ ವೈಭವವನ್ನು ನೋಡಿ ನೆನೆದು ಅಭಿಮಾನಪಡುವುದೊಂದೇ ನಮ್ಮ ಕರ್ತವ್ಯವೆ? ನಮ್ಮ ಪ್ರಾಚೀನರು ಹಾಗಿದ್ದರು ಹೀಗಿದ್ದರು, ಪ್ರಾಚೀನ ಭಾರತದ ವೈಭವ ಹಾಗಿತ್ತು ಹೀಗಿತ್ತು ಎನ್ನುತ್ತ ಹಳೆಯ ಹಿರಿಮೆಯನ್ನು ಹಾಡಿ ಹೊಗಳು ವುದಕ್ಕೆ ಮಾತ್ರ ಇರುವವರೇ ನಾವು? ಅಲ್ಲ, ಹಳೆಯದನ್ನು ಹೊಗಳುವ ಹೊಗಳುಭಟ್ಟರು ಮಾತ್ರ ನಾವಾದರೆ ಸಾಲದು. ಅಂದಿನ ಸುವರ್ಣ ಭಾರತ[illegible] ವೈಭವವನ್ನು ನೆನೆಯುತ್ತ ಇಂದಿನ ಸ್ವತಂತ್ರ ಭಾರತವನ್ನೂ ಮತ್ತೆ [illegible] ಲಿನ ವೈಭವದ ಸ್ಥಿತಿಗೆ ಮುಟ್ಟಿಸುವುದು ಪ್ರತಿಯೊಬ್ಬ ಭಾರತೀಯನ [illegible] ವಾಗಿದೆ. ಕಳೆದು ಹೋದ ಆ ವೈಭವವನ್ನು ಇನ್ನೊಮ್ಮೆ ತಂದು[illegible] ಸಂಸ್ಕೃತಿ ಕಲಾಕೌಶಲಗಳಲ್ಲಿ ನಮ್ಮ ಭಾರತ ಮತ್ತೆ ಪ್ರಪಂಚದಲ್ಲಿ[illegible] ಯಾಗುವಂತೆ ಸಾಧಿಸುವುದು ನಮ್ಮ ಹಿರಿಯ ಗುರಿಯಾಗಿರಬೇಕ[illegible] ಮಾತ್ರ ನಮ್ಮ ಭಾರತ ವೈಭವ ಭಾರತವೆಂದು ಲೋಕದಲ್ಲಿ [illegible] ಯಾಗಿ ಬೆಳಗಬಹುದು.

ಅಭ್ಯಾಸ

1. ಮುಸಲ್ಮಾನ ಸಂಸ್ಕೃತಿಯ ಪುಣ್ಯ ತೀರ್ಥ ಯಾವುದು? ಏಕೆ?

2. ಗೋಲಗುಂಬಜವನ್ನು ಬಣ್ಣಿಸಿರಿ.

3. ಬಿಜಾಪುರದ ಜಮ್ಮಾ ಮಸೀದಿಯ ಕುರಿತು ನಿಮಗೇನು ತಿಳಿದಿದೆ?

4. ಬಿಜಾಪುರದ ಆಸಾರ್ ಮಹಲಿಗೆ ಅಷ್ಟೊಂದು ಮಹತ್ವವೇಕೆ?

5. ಬಿಜಾಪುರದ ವೈಭವವನ್ನು ವರ್ಣಿಸಿ ಒಂದು ನಿಬಂಧ ಬರೆಯಿರಿ.

6. ಮುಂದಿನ ಪದಗಳಲ್ಲಿ ದೇಶ್ಯ ಅನ್ಯದೇಶ್ಯಗಳನ್ನು ಗುರುತಿಸಿರಿ:— ಶಾಹೀ; ಕಾಲ; ಕುರುಹು; ಸಮಾಧಿ; ಸುಲ್ತಾನ; ರಚಿತ; ತೋಫು; ಗ್ಯಾಲರಿ; ಮಹಾಲ್; ಪೈಗಂಬರ.

6. ಮುಂದಿನ ವಾಕ್ಯಗಳ ಪದಗಳಲ್ಲಿ ಯಾವ ಯಾವ ವಿಭಕ್ತಿ ಪ್ರತ್ಯಯಗಳಿವೆ? ಗುರುತಿಸಿರಿ:–ಬಿಜಾಪುರದಲ್ಲಿ ಮಾನವ ನಿರ್ಮಿತ ಮಹೋನ್ನತ ಕೃತಿಯೆಂದರೆ ಗೋಲಗುಂಬಜ. ಭಾರತೀಯ ಇತಿಹಾಸ ಓದಿದವರಿಗೆಲ್ಲ ಗೋಲಗುಂಬಜದ ನೆನಹು ಮಾಸಲಾರದು. ಇತಿಹಾಸದಲ್ಲಿ ಓದುವಾಗ ಈ ಮಹಾಕೃತಿ ಎಷ್ಟೊಂದು ಹಿರಿದಾಗಿ ಕಾಣುವುದೋ!

---

೧೮. ವರ್ತಮಾನ ಪತ್ರಿಕೆಗಳು

ಮನುಷ್ಯನು ಸಮಾಜ ಜೀವಿ. ಸಮಾಜವನ್ನು ತ್ಯಜಿಸಿ ಏಕಾಂಗಿಯಾಗಿ ಎಂದೂ ಜೀವಿಸಲಾರ. ಸಮಾಜ ಜೀವಿಯಾದ ಮನುಷ್ಯ ತನ್ನ ಸಮಾಜದ ಇತರ ಮನುಷ್ಯರ ವಿಚಾರಗಳನ್ನು ತಿಳಿದುಕೊಳ್ಳಲು ಬಯಸುತ್ತಾನೆ; ತನ್ನ ವಿಚಾರಗಳನ್ನು ಇತರರಿಗೆ ತಿಳಿಸಲು ಇಚ್ಛಿಸುತ್ತಾನೆ. ಆತ ಸಮಾಜದ ಇತರ ವ್ಯಕ್ತಿಗಳ ಸ್ಥಿತಿಗತಿಗಳನ್ನು ಪರಿಚಯಮಾಡಿಸಿಕೊಳ್ಳಲು ಆಶಿಸುತ್ತಾನೆ; ತನ್ನ ಸ್ಥಿತಿಗತಿಗಳನ್ನು ಇತರರಿಗೆ ಪರಿಚಯಪಡಿಸಲು ಇಷ್ಟಪಡುತ್ತಾನೆ. ಮನುಷ್ಯನ ಈ ಮನೋವೃತ್ತಿಯೇ ವರ್ತಮಾನ ಪತ್ರಿಕೆಯ ಹುಟ್ಟಿಗೆ ಕಾರಣವಾಯಿತು. ಮನುಷ್ಯನು ಮನೆಯಲ್ಲಿಯೇ ಕುಳಿತು ದೂರದೂರದಲ್ಲಿರುವ ತನ್ನ ಸಮಾಜದ ಇತರ ವ್ಯಕ್ತಿಗಳ ಸ್ಥಿತಿಗತಿಗಳ ವರ್ತಮಾನ ತಿಳಿಯುವುದಕ್ಕೆ ವರ್ತಮಾನ ಪತ್ರದಷ್ಟು ಸುಲಭವಾದ ಸಾಧನ ಇನ್ನೊಂದಿಲ್ಲ. ಆದುದರಿಂದ ವರ್ತಮಾನ ಪತ್ರವೆಂದರೆ ಮನುಷ್ಯ ಸಮಾಜದ ಪ್ರತಿಬಿಂಬ ಪ್ರದರ್ಶಿಸುವ ಕನ್ನಡಿಯಾಗಿದೆ ಎನ್ನಬಹುದು.

ಕ್ರಿ. ಶ. ಹದಿನಾರನೆಯ ಶತಮಾನದಲ್ಲಿ ಇಟಲಿಯ ವೆನಿಸ್ ಪ್ರಾಂತದಲ್ಲಿ ವರ್ತಮಾನ ಪತ್ರಿಕೆ ಮೊತ್ತಮೊದಲು ಹುಟ್ಟಿಕೊಂಡಿತು. ಮತ್ತೆ ಅನ್ಯದೇಶಗಳಲ್ಲಿಯೂ ಅನೇಕ ಪತ್ರಿಕೆಗಳು ಹುಟ್ಟಿದುವು. ಹದಿನೇಳನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿಯೂ ವರ್ತಮಾನ ಪತ್ರಿಕೆಗಳು ಪ್ರಕಟವಾಗ ತೊಡಗಿದುವು. ಭಾರತವು ಇಂಗ್ಲಿಷರ ಅಧೀನವಾಗುವ ಮೊದಲು ... ವರ್ತಮಾನ ಪತ್ರಿಕೆಗಳಿರಲಿಲ್ಲ. ಭಾರತದ ಮೊತ್ತಮೊದಲನೆಯ ಸಮಾ... ಪತ್ರವಾದ 'ಇಂಡಿಯಾ ಗಜೇಟ್' ಎಂಬ ಪತ್ರಿಕೆಯನ್ನು ಇಂ... ಹೊರಡಿಸಿದರು. ಆ ಮೇಲೆ ಕ್ರೈಸ್ತ ಮಿಶನರಿಗಳು 'ಸಮಾಚಾರ... ವೆಂಬ ಹಿಂದೀ ಪತ್ರಿಕೆಯೊಂದನ್ನು ಪ್ರಕಟಿಸತೊಡಗಿದರು. ... ಮೊದಲ ವರ್ತಮಾನ ಪತ್ರಿಕೆ ಎನ್ನಿಸಿದ 'ಕನ್ನಡ ಸಮಾ... ಪತ್ರಿಕೆಯನ್ನು ಹೊರಡಿಸಿದವರು ಕ್ರೈಸ್ತ ಮಿಶನರಿಗಳೇ ... ಈ ಮೊತ್ತಮೊದಲ ವರ್ತಮಾನ ಪತ್ರಿಕೆ ಕ್ರಿ. ಶ. 1... ಕಾಲಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನ...

ಇಸವಿಯಲ್ಲಿ ಆ ಕಾಲದ ಗವರ್ನರ್ ಜನರಲನಾಗಿದ್ದ ಲಾರ್ಡ್ ಬೆಂಟೆಂಕನು ಮುದ್ರಣ ಯಂತ್ರಗಳಿಗೆ ಸ್ವಾತಂತ್ರ್ಯವಿತ್ತನು. ಅಂದಿನಿಂದ ನಮ್ಮ ದೇಶದಲ್ಲಿ ವರ್ತಮಾನ ಪತ್ರಿಕೆಗಳು ಪ್ರಕಟವಾಗತೊಡಗಿ ದಿನದಿಂದ ದಿನಕ್ಕೆ ಅವುಗಳ ಪ್ರಗತಿಯಾಗತೊಡಗಿತು.

ಇಂದು ನಮ್ಮ ದೇಶದ ಮೂಲೆಮೂಲೆಗಳಿಂದಲೂ ವರ್ತಮಾನ ಪತ್ರಿಕೆಗಳು ಲೆಕ್ಕವಿಲ್ಲದಷ್ಟು ಪ್ರಕಟವಾಗುತ್ತಿವೆ; ದಿನ ದಿನ ಇವುಗಳ ಸಂಖ್ಯೆ ಏರುತ್ತಾ ಬರುತ್ತಿದೆ. ಕೆಲವು ಪತ್ರಗಳು ಮಧ್ಯದಲ್ಲಿಯೇ ಮಾಯವಾದರೂ, ಮಾಯವಾಗುವವುಗಳಿಗಿಂತ ಹೊಸತಾಗಿ ಪ್ರಕಟವಾಗುವವುಗಳ ಸಂಖ್ಯೆಯೇ ಹೆಚ್ಚಾಗಿದೆ. ಹಾಗೆಯೇ ಪತ್ರಿಕೆ ಓದುವವರ ಸಂಖ್ಯೆಯೂ ಬೆಳೆಯುತ್ತಾ ಬರುತ್ತಿದೆ. ಹತ್ತು ವರ್ಷಗಳ ಹಿಂದೆ ಹತ್ತು ಜನ ಪತ್ರಿಕೆ ಓದುವವರಿದ್ದರೆ ಇಂದು ನೂರು ಜನ ಓದುತ್ತಾರೆನ್ನಬಹುದು. ಈಗ ಕೆಲವರ್ಷಗಳಿಂದಂತೂ ಪ್ರಪಂಚದ ಪರಿಸ್ಥಿತಿ ವಿಚಿತ್ರವಾಗುತ್ತ ಬಂದುದರಿಂದ ಪತ್ರಿಕೆ ಓದುವವರ ಸಂಖ್ಯೆ ಮಿತಿಮೀರಿದೆ.

ವರ್ತಮಾನ ಪತ್ರಿಕೆಗಳನ್ನು ಪ್ರಕಟಿಸುವುದೆಂದರೆ ಅದೊಂದು ಸ್ವತಂತ್ರವಾದ ವ್ಯವಸಾಯವಾಗಿದೆ. ಈ ವ್ಯವಸಾಯದಿಂದ ಇಂದಿಗೆ ಸಾವಿರಾರು ಜನರು ಹೊಟ್ಟೆಹೊರೆಯುತ್ತಿದ್ದಾರೆ. ಲೇಖಕ ಸಂಪಾದಕ ವೃ[illegible]ಂದ ತೊಡಗಿ ಪತ್ರಿಕೆ ಮಾರುವವರ ವರೆಗೆ ಈ ಉದ್ಯೋಗದಿಂದ ಬಾಳುವೆ [illegible]ಗಿಸುತ್ತಾರೆ. ಆಧುನಿಕ ಯುಗದಲ್ಲಿ ಅನೇಕ ಮಂದಿ ಉದ್ಯೋಗಪತಿ ಬೃ[illegible] ವರ್ತಮಾನ ಪತ್ರಿಕೆಗಳನ್ನು ಪ್ರಕಟಿಸಿಯೇ ಕೋಟಿಪತಿಗಳಾಗಿದ್ದಾರೆ; ನ[illegible] ಭಾವೀ ಸಂತಾನಕ್ಕೆ ವರ್ತಮಾನ ಪತ್ರರೂಪದ ಸ್ಥಿರಸಂಪತ್ತನ್ನೇ ಜ[illegible]ಸಿದ್ದಾರೆ. ಪ್ರಾಯಶಃ ದೊಡ್ಡ ದೊಡ್ಡ ವರ್ತಮಾನ ಪತ್ರಿಕೆಗಳನ್ನು [illegible]ರೆ [illegible]ರೇ ನಡೆಯಿಸುವುದಿಲ್ಲ; ಹಲವಾರು ಮಂದಿ ಒಂದುಗೂಡಿ ಸಂಸ್ಥೆ [illegible] ಆ ಮೂಲಕ ಪತ್ರಿಕೆ ನಡೆಸುತ್ತಾರೆ. ಆಧುನಿಕ ಯುಗದಲ್ಲಿ [illegible] ಪತ್ರಿಕೆಯೆಂದರೆ ಉತ್ತಮವಾದ ಒಂದು ಉದ್ಯೋಗವೇ ಎನ್ನ[illegible] ಪ್ರ[illegible]

[illegible] ಪತ್ರಿಕೆಗಳಿಂದ ಹಲವಾರು ಪ್ರಯೋಜನಗಳಿವೆ; [illegible]ಗಳ ರಾಜನೈತಿಕ, ಸಾಮಾಜಿಕ, ಧಾರ್ಮಿಕ,

ಶೈಕ್ಷಣಿಕ, ವ್ಯಾಪಾರಿಕ ವರ್ತಮಾನಗಳನ್ನು ಪ್ರಪಂಚದ ಮೂಲೆಮೂಲೆಗೂ ಹರಡಿಸುತ್ತವೆ. ನಾವಿಂದು ಪ್ರಪಂಚದ ಯಾವ ಮೂಲೆಯಲ್ಲಿ ಏನು ನಡೆದರೂ ಅದನ್ನು ಮನೆಯಲ್ಲಿ ಕುಳಿತೇ ಪತ್ರಿಕೆಗಳ ಮೂಲಕ ತಿಳಿದು ಕೊಳ್ಳುವೆವು. ಪತ್ರಿಕೆಗಳಿಂದಲೇ ಲೋಕದ ಹೊಸಹೊಸ ಸಂಗತಿ ನಮಗೆ ತಿಳಿಯುವುದು. ಇಂದು ವರ್ತಮಾನ ಪತ್ರಗಳೇ ಇಲ್ಲದಿರುತ್ತಿದ್ದರೆ ಲೋಕದಲ್ಲಿ ನಡೆಯುವ ಯಾವ ಘಟನೆಗಳೂ ನಮಗೆ ತಿಳಿಯದೆ ನಾವು ಬಾವಿಯ ಕಪ್ಪೆಗಳಂತೆ ಇರಬೇಕಾಗುತ್ತಿತ್ತು. ಜನರಿಗೆ ಪ್ರಪಂಚ ಜ್ಞಾನ ವನ್ನು ಮಾಡಿಕೊಡುವ ಮುಖ್ಯ ಸಾಧನವೆಂದರೆ ವರ್ತಮಾನ ಪತ್ರ. ಇದರಿಂದ ಬಲು ಬಡವರಾದ ಜನರು ಕೂಡ ವಾಚನಾಲಯಗಳಿಗೆ ಹೋಗಿ ಪತ್ರಿಕೆ ಓದಿ ತಿಳುವಳಿಕೆ ಸಂಪಾದಿಸಿಕೊಳ್ಳಬಹುದು.

ವ್ಯಾಪಾರ ವ್ಯವಹಾರದ ಪ್ರಗತಿಗೆ ವರ್ತಮಾನ ಪತ್ರಿಕೆಯಷ್ಟು ಉಪಯುಕ್ತವಾದ ಸಾಧನ ಬೇರೊಂದಿಲ್ಲ. ವ್ಯಾಪಾರಿಕ ವಸ್ತುವೊಡವೆ ಗಳ ಪ್ರಚಾರವು ಪತ್ರಿಕೆಗಳ ಮೂಲಕ ಆಗುವಷ್ಟು ಬೇರೆ ಯಾವ ಸಾಧನ ಗಳ ಮೂಲಕವೂ ಆಗಲಾರದು. ವ್ಯಾಪಾರಿಯೊಬ್ಬನು ತನ್ನ ವಸ್ತು ವೊಡವೆಗಳ ಕುರಿತಾಗಿ ಪತ್ರಿಕೆಗಳಲ್ಲಿ ಪ್ರಕಟನೆ ಕೊಟ್ಟು ಎಷ್ಟು ಪ್ರಚಾರ ಮಾಡುವನೋ ಅಷ್ಟು ಅವುಗಳ ಮಾರಾಟವಾಗುವುದು. ಯಾವ ವ್ಯಾಪಾ ರಿಯಾದರೂ ತನ್ನ ಸುತ್ತುಮುತ್ತಲಿನ ಸಮೀಪದ ಗ್ರಾಹಕರನ್ನಷ್ಟೆ ನಂಬಿ ಕೊಂಡು ವ್ಯಾಪಾರ ವ್ಯವಹಾರವನ್ನು ವೃದ್ಧಿಪಡಿಸಲು ಸಾಧ್ಯವಿಲ್ಲ; ಹಾಗಿ ದ್ದರೆ ತನ್ನ ವ್ಯಾಪಾರದಲ್ಲಿ ಆತ ಸಫಲನೂ ಆಗಲಾರ; ಆ ವ್ಯಾಪಾರ ದಿಂದ ಅಧಿಕ ಲಾಭವೂ ಅವನಿಗೆ ದೊರಕಲಾರದು. ಹೆಚ್ಚು ಹೆಚ್ಚಾಗಿ ವಸ್ತುವೊಡವೆ ಮಾರಾಟವಾದಾಗ ಮಾತ್ರ ಅಧಿಕ ಲಾಭ ದೊರಕು... ಹೆಚ್ಚು ಹೆಚ್ಚಾಗಿ ಮಾರಾಟವಾಗಬೇಕಾದರೆ ಆ ವಸ್ತುವೊಡವೆಗಳ... ಗಳನ್ನು ಮಾರುವ ಅಂಗಡಿ ಮುಂತಾದುವು ಜನರಲ್ಲಿ ಪ್ರಚಾರವಾಗ... ವ್ಯಾಪಾರಿಯೊಬ್ಬನು ತಾನೇ ಸ್ವತಃ ಮನೆ ಮನೆಗೆ ಹೋಗಿ ... ವೊಡವೆಗಳ ಪ್ರಚಾರ ಮಾಡಲು ಸಾಧ್ಯವಿಲ್ಲ. ಅದಕ... ಚಾರ ಪತ್ರಿಕೆಗಳ ಮರೆಹೋಗಬೇಕಾಗುವುದು. ಪ... ಈ ಕೆಲಸವನ್ನೂ ಸಾಗಿಸುವುವು. ಇಂದಿನ...

ಲಕ್ಷಾಂತರ ಮಂದಿ ವರ್ತಕರು ಪ್ರಕಟನೆಗಳ ಮೂಲಕ ಕೋಟಿಗಟ್ಟ ಲಾಭ ಪಡೆಯುತ್ತಿದ್ದಾರೆ. ಪ್ರಕಟನೆಗಳಿಂದಲೇ ಯಾವ ವಸ್ತು ಎಲ್ಲಿ ಸಿಗ ತ್ತದೆ, ಅದರ ಬೆಲೆಯೇನು, ಗುಣವೇನು ಎಂದು ಮುಂತಾದ ಸಂಗತಿ ಗಳೆಲ್ಲಾ ಜನರಿಗೆ ತಿಳಿಯುತ್ತವೆ.

ವರ್ತಮಾನ ಪತ್ರಿಕೆಗಳು ಸಾಧಿಸುವ ಇನ್ನೊಂದು ಮಹತ್ಕಾರ್ಯ ವೆಂದರೆ ಸರಕಾರ ಹಾಗೂ ಜನತೆಯಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಬೆಳೆಯಿಸುವುದು. ಏನಾದರೊಂದು ರಾಜನೈತಿಕ ಸಮಸ್ಯೆಯುಂಟಾದಾಗ ಪತ್ರಿಕೆಗಳೇ ಸರಕಾರದ ಮತ್ತು ಜನತೆಯ ಅಭಿಪ್ರಾಯುಗಳನ್ನು ಪ್ರಕಟಿಸಿ ತನ್ನ ಟೀಕೆಟಿಪ್ಪಣಿಗಳ ಮೂಲಕ ಆ ಸಮಸ್ಯೆಯನ್ನು ಬಗೆಹರಿಸಲು ಪ್ರಯ ತ್ನಿಸುತ್ತವೆ. ಪತ್ರಿಕೆಗಳೇ ಜನತೆಯ ವಿಚಾರ ಆವಶ್ಯಕತೆಗಳನ್ನು, ಸುಖ ದುಃಖಗಳನ್ನು, ಕಷ್ಟಸೌಲಭ್ಯಗಳನ್ನು, ಸರಕಾರದ ಗಮನಕ್ಕೆ ತಂದು ಅದಕ್ಕೆ ತಕ್ಕ ನಿವೃತ್ತಿಯಾಗುವಂತೆ ಮಾಡುತ್ತವೆ. ಸರಕಾರವು ಜನತೆಯ ಸ್ಥಿತಿಗತಿಗಳ ಕಡೆಗೆ ಲಕ್ಷ್ಯಕೊಡದಿದ್ದರೆ ಆಗಲೂ ಪತ್ರಿಕೆಗಳೇ ಸರಕಾರ ವನ್ನು ಟೀಕಿಸಿ ಬಗ್ಗಿಸುತ್ತವೆ; ನಿರಂಕುಶ ಶಾಸನಗಳನ್ನು ಬೇರು ಕಡಿದು ಕಿತ್ತೊಗೆಯಲು ಪತ್ರಿಕೆಗಳೇ ಜನತೆಗೆ ಸಹಾಯ ಮಾಡುತ್ತವೆ. ಒಟ್ಟಿನಲ್ಲಿ ಹೇಳವುದಾದರೆ ಪತ್ರಿಕೆಗಳೇ ಪ್ರಜೆಗಳ ಕಣ್ಣುಬಾಯಿಗಳೆಂದರೂ ಹೆಚ್ಚಾಗದು.

ರಾಷ್ಟ್ರೀಯ ಜಾಗೃತಿಯುಂಟಾಗುವುದು ವರ್ತಮಾನ ಪತ್ರಿಕೆಗಳಿಂದ. ಬ್ರ[illegible]ಪಂಚದ ರಾಷ್ಟ್ರಗಳನ್ನೆಲ್ಲಾ ಪರಸ್ಪರ ಏಕಸೂತ್ರದಲ್ಲಿ ಬಂಧಿಸಿದವುಗಳೆಂದರೆ ನ[illegible]ರ್ತಮಾನ ಪತ್ರಗಳೇ. ಪತ್ರಿಕೆಗಳು ಸ್ವತಂತ್ರ ರಾಷ್ಟ್ರಗಳ ರೀತಿನೀತಿ, ಜನ[illegible]ವಿಚಾರ, ನಡೆನುಡಿ, ಶಾಸನ ಪದ್ಧತಿ ಜನತೆಯ ಅಧಿಕಾರ ಮುಂತಾ [illegible]ರೆ [illegible]ನ್ನು ಪ್ರಕಾಶಪಡಿಸಿ ಪರತಂತ್ರ ದೇಶಗಳಲ್ಲಿ ಪ್ರಚಾರ ಮಾಡುತ್ತವೆ. [illegible]ವು, ಸ್ವಾತಂತ್ರ್ಯಭಾವ, ರಾಷ್ಟ್ರೀಯ ಭಾವನೆ, ಆತ್ಮಗೌರವ [illegible] ಭಾವನೆಗಳನ್ನು ಜನತೆಯಲ್ಲಿ ಹುಟ್ಟಿಸಲು ಪತ್ರಿಕೆಗಳು ತುಂಬಾ [illegible] ಪ್ರ[illegible] ಇವುಗಳ ಮೂಲಕವೇ ಒಂದು ರಾಷ್ಟ್ರ ಇನ್ನೊಂದು [illegible]ಮಾಡಿಕೊಂಡು ತನ್ನ ಗುಣದೋಷಗಳನ್ನು ತಿಳಿದು, [illegible] ಅವುಗಳಿಗೆ ತಕ್ಕ ನಿವೃತ್ತಿ ಮಾಡುತ್ತದೆ. ಈ

ರೀತಿಯಾಗಿ ಪತ್ರಿಕೆಗಳಿಂದ ರಾಜನೈತಿಕ ಸಾಮಾಜಿಕ ಜೀವನದಲ್ಲಿ ಮಾರ್ಪಾಟಗಳುಂಟಾಗುತ್ತವೆ; ದೇಶದಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಗುತ್ತದೆ; ದೇಶದ ಸಂಸ್ಕೃತಿ ಸಭ್ಯತೆಗಳ ವಿಕಾಸವಾಗುತ್ತದೆ.

ವರ್ತಮಾನ ಪತ್ರಿಕೆಗಳಿಂದ ಇಷ್ಟೆಲ್ಲಾ ಪ್ರಯೋಜನವಿರುವಂತೆ, ಹಲಕೆಲವು ಹಾನಿಗಳೂ ಇಲ್ಲದೆ ಇಲ್ಲ. ಪತ್ರಿಕೆಗಳಿಂದ ಜನತೆಗೆ ಆಗುವ ಉಪಕಾರವಾಗಲೀ ಅಪಕಾರವಾಗಲೀ ಅದು ಸಂಪಾದಕರನ್ನು ಅನುಸರಿಸಿಕೊಂಡಿದೆ. ಪತ್ರಿಕೆಗಳಿಂದಾಗುವ ಹಾನಿ ವೃದ್ಧಿಗಳ ಜವಾಬ್ದಾರಿಕೆ ಸಂಪಾದಕರದು. ಸಂಪಾದಕರು ತಮ್ಮ ಕರ್ತವ್ಯಗಳನ್ನು ತಿಳಿದು ಅವುಗಳನ್ನು ಸರಿಯಾಗಿ ಪಾಲಿಸಿದರೆ, ಪತ್ರಿಕೆಗಳಿಂದ ಉಂಟಾಗುವ ಹಾನಿ ತಪ್ಪುವುದು. ಸಂಪಾದಕರು ಯಾವ ಪಕ್ಷಪಂಗಡಗಳಿಗೂ ಒಳಗಾಗದೆ, ಸಮಾಜದ ಹಿತವನ್ನೇ ಲಕ್ಷಿಸಿ ಕೆಲಸಮಾಡಬೇಕು. ಒಮ್ಮೊಮ್ಮೆ ಪತ್ರಿಕೆಗಳು ಸುಳ್ಳು ಸಮಾಚಾರಗಳನ್ನು ಪ್ರಕಟಿಸಿ ಸಮಾಜದ ಶಾಂತಿಗೆ ಭಂಗವುಂಟುಮಾಡುತ್ತವೆ; ಹೀಗೆ ಸುಳ್ಳು ಸಮಾಚಾರಗಳನ್ನು ಪ್ರಕಟಿಸಿ ಪ್ರಚಾರ ಮಾಡುವುದರಿಂದ ಭಯಂಕರವಾದ ಅನರ್ಥಗಳೇ ಉಂಟಾಗುತ್ತವೆ. ಇನ್ನು ಕೆಲವು ವೇಳೆ ಸಮಾಚಾರ ಪತ್ರಗಳು ಅಶ್ಲೀಲ ಪ್ರಕಟನೆಗಳನ್ನು ಪ್ರಕಟಿಸಿ ಸಾಮಾನ್ಯ ಜನತೆಯ ನೀತಿ ಕೆಡಿಸುತ್ತವೆ; ನೈತಿಕ ಹಾನಿಗೆ ಕಾರಣವಾಗುತ್ತವೆ.

ಒಮ್ಮೊಮ್ಮೆ ಪತ್ರಿಕೆಗಳು ದೇಶದೊಳಗಿನ ಬೇರೆ ಬೇರೆ ಸಂಪ್ರದಾಯಗಳಲ್ಲಿ, ಭಿನ್ನ ಭಿನ್ನ ಪಕ್ಷಗಳಲ್ಲಿ, ಪ್ರತ್ಯಪ್ರತ್ಯೇಕ ಜಾತಿಧರ್ಮಗಳಲ್ಲಿ, ಸರಕಾರ ಜನತೆಗಳಲ್ಲಿ ಮನಸ್ತಾಪ ಭೇದ ಬುದ್ಧಿಗಳನ್ನುಂಟುಮಾಡಿ ದೇಶದ ಶಾಂತಿ ಸಮಾಧಾನಗಳನ್ನೇ ಕೆಡಿಸಿಬಿಡುತ್ತವೆ. ಇದೇ ರೀತಿ [illegible] ಜನಾಂಗಗಳೊಳಗೆ, ರಾಷ್ಟ್ರರಾಷ್ಟ್ರಗಳೊಳಗೆ ಪರಸ್ಪರ ಪ್ರೇಮ ಸಂಬಂ[illegible] ನೆಲೆಗೊಳಿಸಲೂ ಪತ್ರಿಕೆಗಳೇ ಕಾರಣವಾಗುತ್ತವೆ.

ವರ್ತಮಾನ ಪತ್ರಗಳಿಂದ ಇಷ್ಟೆಲ್ಲಾ ಹಾನಿ ವೃದ್ಧಿ[illegible] ಳಿದ್ದು ಆಧುನಿಕ ಪ್ರಪಂಚದಲ್ಲಿ ಇವುಗಳ ಸ್ಥಾನವ[illegible] ಪೂರ್ಣವಾಗಿವೆ. ಇಂದು ಪತ್ರಿಕೆಗಳೆಂದರೆ ಜನತೆ[illegible] ಆಹಾರವೇ ಆಗಿವೆಯೆಂದರೂ ಹೆಚ್ಚಾಗದು.

ಸುಧಾರಣೆ ಪ್ರಗತಿಗಳಿಗೆಲ್ಲಾ ಸಾಧನಗಳಾದವುಗಳೆಂದರೆ ಪತ್ರಿಕೆಗ ತರತರದ ಸಮಾಚಾರಗಳನ್ನು ಪ್ರಕಟಿಸಿ, ಸೂಚನೆಗಳನ್ನು ಸೂಚಿಸಿ ವ ಮಾನ ಪತ್ರಿಕೆಗಳು ಮಾನವ ಸಮಾಜಕ್ಕೆ ಅಪಾರವಾದ ಹಿತವನ್ನು ಮಾಡುತ್ತವೆ; ಇಂದಿನ ಮಾನವ ಸಮಾಜಕ್ಕೆ ಪತ್ರಿಕೆಗಳಿಂದಾಗುವ ಪ್ರಯೋಜನ ಬೇರೆ ಯಾವುದರಿಂದಲೂ ಆಗುವುದಿಲ್ಲವೆಂದು ನಿಸ್ಸಂದೇ ವಾಗಿ ಹೇಳಬಹುದು. ಒಟ್ಟಿನಲ್ಲಿ ಹೇಳುವುದಾದರೆ ವರ್ತಮಾನ ಪತ್ರಿ ಗಳು ಮನುಷ್ಯ ಸಮಾಜದ ಸಂಸ್ಕೃತಿ ಸಭ್ಯತೆಗಳಿಗೆ ಪರಿಪೋಷಕಗಳಾ ಜನತೆಯ ಜ್ಞಾನಭಂಡಾರವನ್ನು ವಿಕಸಿತಗೊಳಿಸುತ್ತವೆ ಎನ್ನಬಹುದು.

ಅಭ್ಯಾಸ

1. ಮೊತ್ತಮೊದಲು ವರ್ತಮಾನ ಪತ್ರಿಕೆ ಎಂದು ಎಲ್ಲಿ ಪ್ರಾರಂ ವಾಯಿತು?

2. ಭಾರತದಲ್ಲಿ ಯಾವಾಗ ಯಾವ ಪತ್ರಿಕೆ ಪ್ರಾರಂಭವಾಯಿತ

3. ವ್ಯಾಪಾರ ವ್ಯವಹಾರದ ಪ್ರಗತಿಗೆ ವರ್ತಮಾನ ಪತ್ರಿಕೆಯಷ ಉಪಯುಕ್ತವಾದ ಸಾಧನ ಬೇರೊಂದಿಲ್ಲವೆಂಬುದೇಕೆ?

4. ವರ್ತಮಾನ ಪತ್ರಿಕೆಗಳಿಂದ ರಾಷ್ಟ್ರೀಯ ಜಾಗೃತಿಯುಂಟಾಗ ವುದು ಹೇಗೆ?

5. ವರ್ತಮಾನ ಪತ್ರಿಕೆಗಳಿಂದಾಗುವ ಹಾನಿಯೇನು?

6. ವರ್ತಮಾನ ಪತ್ರಿಕೆಗಳ ಕುರಿತು ಒಂದು ಪ್ರಬಂಧ ಬರೆಯಿ

7. ಮುಂದಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಕೊಡಿರಿ:— [illegible]ೀಯ; ಗುಣ; ಹಿತ; ಪ್ರಗತಿ; ಅನಿಷ್ಟ; ಸಫಲ.

[illegible] ಮುಂದಿನ ಮಾತುಗಳನ್ನು ಸೇರಿಸಿ ಒಂದೊಂದು ವಾಕ್ಯ ರಚಿ [illegible] ಮೊತ್ತಮೊದಲು; ಹಾನಿವೃದ್ಧಿ; ಕಿತ್ತೊಗೆ; ವಿಕಾಸವಾಗು [illegible] ನಿಸ್ಸಂದೇಹ.

೧೯. ಜನಪದ ಸಾಹಿತ್ಯ

ಪ್ರತಿಯೊಂದು ಭಾಷೆಯಲ್ಲಿಯೂ ಪುರಾತನ ಕಾಲದಿಂದಲೂ ಜನಪದ ಸಾಹಿತ್ಯ-ಹಳ್ಳಿಯ ಹಾಡುಗಳು-ಇದ್ದೇ ಇವೆ. ಹಳ್ಳಿಯ ಹಾಡುಗಳನ್ನು ಕಟ್ಟಿದವರೂ ಹಳ್ಳಿಗರೇ; ಹಾಡುವವರೂ ಹಳ್ಳಿಗರೇ. ಹಳ್ಳಿಯ



ಜನ ರಸಿಕರಲ್ಲ; ಅವರ ಬಾಳುವೆ ನಾಗರಿಕ ಜೀವನವಲ್ಲ ಎಂದು ಸುಶಿಕ್ಷಿತ ರಲ್ಲಿ ಹಲವರ ಭಾವನೆ. ಇದು ಸರಿಯಲ್ಲ. ಹಳ್ಳಿಗರ ಬಾಳುವೆಯಲ್ಲಿಯ ಒಂದು ಸೊಬಗಿದೆ; ರಸವಿದೆ. ನಗರಗಳು ಎಷ್ಟು ಸೊಗಸಾಗಿದ ಹಳ್ಳಿಗರಿಗೆ ಅದು ಹಿಡಿಸುವುದಿಲ್ಲ; ಅವರ ಬಾಳುವೆಯ ಸೊಬಗೆ ಅವರ ಮೆಚ್ಚುಗೆಯೇ ಬೇರೆ. ಹಳ್ಳಿಗರ ಬಾಳುವೆಯ ನಿಜವಾದ ನ್ನರಿಯಬೇಕಾದರೆ ನಾವು ಜನಪದ ಸಾಹಿತ್ಯವನ್ನು-ಹಳ್ಳಿಯ ಹಾಡ ಪರಿಶೀಲಿಸಬೇಕು.

ಆದಿ ಕಾಲದಲ್ಲಿ ಇನ್ನೂ ಕವಿತ್ವವೂ ಶಾಸ್ತ್ರ ದ್ದಾಗ ಹಳ್ಳಿಯಲ್ಲಿ, ಹೊಲದ ಕಣದಲ್ಲಿ, ಹಬ

ದುಃಖದ ಸಂದರ್ಭಗಳಲ್ಲಿ ಹಳ್ಳಿಯ ಜನ ತಮ್ಮ ಮನಸಿನ ಭಾವನೆಗಳ[illegible] ಹಾಡಿನ ರೂಪದಲ್ಲಿ ಹೊರಗೆಡಹತೊಡಗಿದರು. ಕುಯಿಲು, ಕುಡಿ[illegible] ಕೋಲಾಟ, ಬೇಟೆ, ಮದುವೆ, ಸಾವು, ಸೋಲು, ಗೆಲವು ಮುಂತಾ[illegible] ಬಾಳುವೆಯ ಸುಖದುಃಖಗಳ ಸಂದರ್ಭಗಳಲ್ಲಿ ಹಳ್ಳಿಯ ಹಾಡುಗಳು ಹ[illegible] ಗರ ಹೃದಯದಿಂದ ಹೊರಹೊಮ್ಮಿದುವು. ಹೆಂಗಸರೂ ಗಂಡಸರೂ ತಮ[illegible] ದುಡಿತದ ಬಳಲಿಕೆಯನ್ನು ಹಾಡು ಹಾಡುತ್ತ ಮರೆಯುತ್ತಾರೆ. ಉ[illegible] ವಾಗ, ನೆಡುವಾಗ, ಕೊಯ್ಯುವಾಗ, ಕುಟ್ಟುವಾಗ, ಬೀಸುವಾಗ, ಮಗ[illegible] ವನ್ನು ತೂಗುವಾಗ, ಮದುವೆಯಲ್ಲಿ ನಲಿವಾಗ, ಸಾವಿಗಾಗಿ ಅಳುವಾಗ[illegible] ಭಾರ ಹೊರುವಾಗ, ಬಂಡಿ ಹೊಡೆವಾಗ ಹಳ್ಳಿಗರು ಹಳ್ಳಿಯ ಹಾಡ[illegible] ಹಾಡುತ್ತಾರೆ.

ಹಳ್ಳಿಯ ಹಾಡುಗಳೆಂದರೆ ಜನಕವಿಗಳಿಂದಲೇ ರಚಿತವಾದ ಜನಪ[illegible] ಸಾಹಿತ್ಯ. ಜನಪದ ಸಾಹಿತ್ಯವನ್ನು ಸೃಷ್ಟಿ ಮಾಡಿದ ಜನಕವಿಗಳಿಗೆ ಹೆಸರಿಲ್ಲ[illegible] ಕೀರ್ತಿಯಿಲ್ಲ. ಹೆಸರಿನ-ಕೀರ್ತಿಯ-ಬರವಿನ ಆಸೆಯೂ ಅವರಿಗಿಲ್ಲ[illegible] ಜನತೆಯ-ಹಳ್ಳಿಯ ಜನರ-ಆನಂದವೇ ಆ ಕವಿಗಳ ಗುರಿ. ಬಾಳಿನ[illegible] ಸುಖದುಃಖ ಕಹಿಸಿಹಿಗಳನ್ನು ಈ ಹಾಡುಗಳ ಮೂಲಕ ವ್ಯಕ್ತಪಡಿಸುತ್ತ[illegible] ಆ ಕವಿಗಳು ಸಫಲರಾದರು. ಆ ಹಾಡುಗಳು ಬಾಯಿಯಿಂದ ಬಾಯಿಗೆ ಹರಡುತ್ತಾ ತಲೆತಲಾಂತರದ ವರೆಗೂ ನಾಶವಾಗದೆ ಉಳಿದಿವೆ. ಯಾರೂ ಅವನ್ನು ಗ್ರಂಥರೂಪದಲ್ಲಿ ಬರೆದಿಡಲಿಲ್ಲ. ವ್ಯಾಕರಣ, ಛಂದಸ್ಸು, ಅಲಂಕಾ[illegible] ರಗಳ ಕಟ್ಟುನಿಟ್ಟುಗಳಂತೂ ಜನಪದ ಸಾಹಿತ್ಯವನ್ನು ಬಂಧಿಸಲಿಲ್ಲ. [illegible]ಭಾವನಾಸಾಮ್ರಾಜ್ಯದಲ್ಲಿ ಹುಟ್ಟಿ ಬೆಳೆದ ಪ್ರಾಕೃತಿಕ ಸಾಹಿತ್ಯವೆಂದರೆ ಜ[illegible]ಪದ ಸಾಹಿತ್ಯ. ಜನಪದ ಸಾಹಿತ್ಯದ ಭಾಷೆಯೂ ಸರಳ; ಆಡು [illegible] ಅದು. ಹಾಡುವುದನ್ನು ಆಲಿಸುವಾಗಲೇ ಮಕ್ಕಳಿಂದ ಮುದುಕರ [illegible]ಕಲರಿಗೂ ಅರ್ಥವಾಗುತ್ತದೆ ಜನಪದ ಸಾಹಿತ್ಯದ ಭಾಷೆ.

[illegible] ಹಳ್ಳಿಯ ಹಾಡುಗಳು ನಮ್ಮ ದೊಡ್ಡ ದೊಡ್ಡ ಕಾವ್ಯಗಳಂತೆ ದೀರ್ಘ [illegible] ಪ್ರ[illegible]ಸಂವಿಧಾನವನ್ನು ಒಳಕೊಂಡಿರುವುದಿಲ್ಲ. ಬಿಡಿಪದ [illegible]ವನ್ನೋ ಸನ್ನಿವೇಶವನ್ನೋ ಅವು ತಿಳಿಸುತ್ತವೆ. [illegible]ವ ವಿವರಣೆ, ಆಟಪಾಟ, ಜೇಟಿ ಕಾಳಗಗಳ

ಬಣ್ಣನೆ, ಒಗಟುಗಳ ಮೇಲಾಟ ಮುಂತಾದುವು ವರ್ಣಿತವಾಗಿವೆ. ಇನ್ನು ಹಲವು ಹಾಡುಗಳಲ್ಲಿ ಚಾರಿತ್ರಿಕ ಸಂಗತಿಗಳೂ, ಭಕ್ತಿಜ್ಞಾನ ವೈರಾಗ್ಯ ವಿಚಾರಗಳೂ ಕಂಡುಬರುತ್ತವೆ. ಈ ಹಾಡುಗಳಲ್ಲಿ ಯಾವ ಭಾವನೆ ಯಾವ ಕಥೆ ವರ್ಣಿತವಾದರೂ ಅದು ಸ್ವಾಭಾವಿಕವಾಗಿರುತ್ತದೆ; ಕೃತ್ರಿಮತೆಯ ಲವಲೇಶವೂ ಅಲ್ಲಿ ತೋರದು. ಹಳ್ಳಿಯ ಹಾಡುಗಳ ಸ್ವಾರಸ್ಯ ಸವಿಯಬೇಕಾದರೆ ಆ ಹಾಡುಗಳನ್ನು ಹಳ್ಳಿಗರ ಬಾಯಿಯಿಂದಲೇ ಕೇಳಬೇಕು. ಆಗ ಅವುಗಳ ಸ್ವಾಭಾವಿಕತೆ ಸ್ವಾರಸ್ಯಗಳು ವ್ಯಕ್ತವಾಗುತ್ತವೆ.

ಈಗ ಜನಪದ ಸಾಹಿತ್ಯ ಸೊಬಗರಿಯುವುದಕ್ಕಾಗಿ ಹಲವು ಹಾಡುಗಳನ್ನು ಪರಿಶೀಲಿಸುವ. ಬಡತನವನ್ನು ಬಣ್ಣಿಸುವ ಒಂದೆರಡು ಹಾಡು ಹೀಗಿವೆ—

ಬಡತನವೇ ನೀ ಎನ್ನ ಬಿಡದೆ ಬೆನ್ನಿಲಿ ಬಂದೆ
ಕಡುಕಷ್ಟಗೊಳಿಸಿ ದಣಿಸಿದೆ—ಹೊನ್ನುಳ್ಳ
ಹೊಲೆಯಂಗೆ ಕೈಯ್ಯ ಮುಗಿಸಿದೆ.
ಬಿದ್ದರೆತ್ತುವರಿಲ್ಲ ಬೆನ್ನ ತಾಂಗುವರಿಲ್ಲ
ಆನಿದ್ದೆನೆಂಬ ಹಿತರಿಲ್ಲ—ದೇವರೆ
ತಾಯಂತೆ ನೀವೆ ಸಲಹಿರೋ.

ಮೇಲಿನ ಹಾಡುಗಳಲ್ಲಿ ಬಡತನವು ಎಷ್ಟೊಂದು ಸ್ವಾಭಾವಿಕವಾಗಿ ಸರಳವಾಗಿ ವರ್ಣಿತವಾಗಿದೆ! ತುಳುನಾಡಿನ ಸಂಪತ್ಸಮೃದ್ಧಿಯನ್ನು ಬಣ್ಣಿಸುವ ಇನ್ನೆರಡು ಹಾಡುಗಳು ಹೀಗಿವೆ—

ತುಂಬಿ ತುಳುನಾಡಿಂದ ಬಂದವೆರಡು ದನ
ಕೊಂಬಿಂಗೆ ಚೌರಿ ಕಿರುಗೆಜ್ಜೆ ಕಟ್ಟಿಕೊಂಡು
ಬಂದವು ನಮ್ಮ ಬಯಲಿಂಗೆ.
ತುಪ್ಪಶನ ಉಂಬಲೆ ತುಳುನಾಡಿಂಗ್ಹೋಯಕ್ಕ
ಅಕ್ಕಿಯ ಮೇಲೆ ಬರೆಯಿಲ್ಲೆ ತುಳುನಾಡ
ಮಕ್ಕಳ ಮೇಲೆ ಕಲೆಯಿಲ್ಲೆ.

ಇನ್ನೀಗ ಮಕ್ಕಳನ್ನು ಬಣ್ಣಿಸುವ, ಸಂಪತ್ತನ್ನು ಕಿ
ಸೊಬಗನ್ನು ನೋಡುವ—

ಹಸುವಾಯಿತೆಂದರೆ ದೆಸೆಯೊಳೊಬ್ಬರ ಕಾಣೆ
ಹಸುವ ಬಲ್ಲಬ್ಬೆ ಒಳಗಿಲ್ಲೆ ಹೊರಗಿಲ್ಲೆ
ದೆಸೆ ನೋಡಿ ಬಾಲ ಬಡವಾದ.
ಸಂಜೆಯು ಹೊತ್ತಿಂಗೆ ಬೈಯದಿರಿ ಮಕ್ಕಳ
ಎಂಜಲು ಮೈಲಿಗೆಯು ಎಡಕೊತ್ತಿ ಎಡಕೊತ್ತಿ
ಸಂಜೆಯು ನೀರೆರೆದು ದನಿಗೇಳ್ವೊ.
ಮಕ್ಕಳರ್ತಿ ಉಳ್ಳಂಗೆ ಮಕ್ಕಳ ಕೊಡಸ್ವಾಮಿ
ಮಕ್ಳೊ ಬೇಡೆಂದು ಹಲುಬುವ ಬಡವಂಗೆ
ಮಕ್ಕಳ ಕೊಡುಗು ಮನೆತುಂಬ.

ಹಳ್ಳಿಯ ಹೆಂಗಸರಲ್ಲಿ ಗೆಳೆತನ–ನಿಷ್ಕಪಟಪ್ರೇಮ–ನೆಲಸಿದೆ. ನೀರಿ ಹೋಗುವಾಗ ಗೆಳತಿಯರೆಲ್ಲ ಗುಂಪು ಕಟ್ಟಿ ಹೋಗುತ್ತಾರೆ. ಹೆಂಗಸೊಬ್ಬ ನೀರಿಗೆ ಹೋಗುವ ಗೆಳತಿಯನ್ನು ತಾನು ಬರುವ ವರೆಗೂ ನಿಲ್ಲ ಹೇ ಮುಂದಕ್ಕೆ ಹೋಗದಂತೆ ಆಣೆ ಹಾಕಿ ಕಟ್ಟು ಮಾಡಿ ನಿಲ್ಲುವಂತೆ ಮಾಡ ತ್ತಾಳೆ ಈಯೊಂದು ಹಾಡಿನಲ್ಲಿ—

ನೀರಿಗ್ಹೋಗೊಳ್ ಯಾರೆ ನಿಲ್ಲೆ ನಾ ಬಂದೇನು
ನಿನ್ನಾಣೆ ನಿನ್ನ ಕೊಡದಾಣೆ ನೀ ನೆಟ್ಟ
ಪೈರಾಣೆ ಹೊಳೆಯು ನೀರಾಣೆ.

ಪೌರಾಣಿಕ ಕಥಾಸಂದರ್ಭಗಳ ಕೆಲ ಹಾಡುಗಳ ನೋಡುವ ಸೀತಾದೇವಿ ಅಡವಿಯಲ್ಲಿ ಲವಕುಶರನ್ನು ಹಡೆದು ಪಾಲಿಸುವುದನ್ನು ಈಯೊಂದು ಹಾಡು ತಿಳಿಸುತ್ತದೆ—

ಜನಕರಾಯನ ಮಗಳು ಬನಕೆ ತೊಟ್ಟಿಲ ಕಟ್ಟಿ
ಲವಕುಶರನ್ನು ತೂಗ್ಯಾಳೋ ಸೀತಾದೇವಿ
ನಗುತ ವನವಾಸ ಕಳೆದಾಳೊ.

...ದ್ರೌಪದಿಯರ ಮಹತ್ವವನ್ನು–ಅವರು ಜೀವನದಲ್ಲಿ ಪಟ್ಟಕಷ್ಟವನ್ನು ಪ್ರ... ...ಡು ಅದೆಷ್ಟು ಸೊಗಸಾಗಿದೆ—

...ಯಷ್ಟು ಸಿರಿಯುನುಂಡವರಿಲ್ಲ
... ಹರಲೀಯ ಹೊತ್ತವರು
...ಗಾರಿಲ್ಲ.

ಹಾಸ್ಯರಸವಂತೂ ಹಳ್ಳಿಯ ಹಾಡುಗಳ ಜೀವಾಳ. ಜನಪದಕವಿಗಳಂತೆ ಹಾಸ್ಯರಸವನ್ನು ಅಷ್ಟೊಂದು ಸ್ವಾಭಾವಿಕವಾಗಿ-ಕೇಳುವವರ ಹೊಟ್ಟೆ ಹುಣ್ಣಾಗುವಂತೆ ನಗಿಸುವ ಕೃತಿಕಟ್ಟುವುದು ನಮ್ಮ ಮಹಾಕವಿಗಳಿಗೂ ಸಾಧ್ಯವಿಲ್ಲ. ಹಳ್ಳಿಯ ಹಾಡುಗಳಲ್ಲಿ ಕಂಡು ಬರುವ ಸರಳ ಹಾಸ್ಯ ನಮ್ಮ ಸಾಹಿತ್ಯದಲ್ಲಿ ಎಲ್ಲಿಯೂ ಕಂಡು ಬರಲಾರದೆಂದರೂ ಹೆಚ್ಚಾಗದು. ಹಾಸ್ಯ ರಸವನ್ನುಕ್ಕಿಸುವ ಈ ಕೆಲವು ಹಾಡುಗಳನ್ನು ನೋಡುವ—

ಗಂಡಾನ ಕಾಣಿರೋ ಗೆಂಡ್ಗೊಟ್ಟೆ ಮುರುವಾನ
ಉಂಡೇಳು ಮನೆಯ ತಿರುಗೋನ ಗಂಡಯ್ನ
ಕೊಂಡ್ಹೋದ್ರು ನೆನ್ನೆ ಬರದಲ್ಲಿ.
ಹಟ್ಟಿಗೆ ಕುರಿಬಂತು ಕುರಿಗಳಿಗೆ ಜರಬಂತು
ಒಲೆಮೇಗ್ಳ ನೀರು ಉಗೆ ಬಂತು, ಭಾಯ್ನ
ಗೆಂಡ್ಗೊಟ್ಟೆ ಕಂಡು ನಗುಬಂತು.
ಅಕ್ಕನಾ ಗಂಡ ಕುಕ್ಕೇ ಕೊರಮ ಭಾವಯ್ಯ
ಕೊಕ್ಕರೆ ಮಿಸಾಸೆ ಕೊನೆಮೀಸೆ, ಭಾವಯ್ನ
ಕೊಚ್ಚಿಕೊಂಡ್ಹೋಗೊ ಮಳೆದೇವ.

ಹಳ್ಳಿಯ ಹಾಡುಗಳಲ್ಲಿ ಸಾಂಸಾರಿಕ ಸಂಬಂಧ—ತಾಯಿತಂದೆ, ಅಣ್ಣ ತಮ್ಮ, ಅಕ್ಕ ತಂಗಿ, ಸೊಸೆ ಮಗ, ಅಳಿಯ ಮಗಳು ಮುಂತಾದ ನೆಂಟು ತನ—ಅಷ್ಟೊಂದು ಸೊಗಸಾಗಿ ಬಣ್ಣಿಸಲ್ಪಟ್ಟಿವೆ. ಸಾಂಸಾರಿಕ ಸಂಬಂಧ ವನ್ನು ಅಷ್ಟೊಂದು ಸೊಗಸಾಗಿ ಸ್ವಾಭಾವಿಕವಾಗಿ ಬಣ್ಣಿಸುವ ಸಾಹಿತ್ಯ ಇದಲ್ಲದೆ ಬೇರಿಲ್ಲ. ಇಲ್ಲಿ ಹೆಣ್ಣುಮಗಳೊಬ್ಬಳು ತನ್ನ ತವರನ್ನು ತಾಯ್ತಂ ಯರನ್ನು ಕುರಿತು ಹೀಗೆಂದು ಹಾಡುತ್ತಾಳೆ—

ಬೇಸಗೆ ದಿವಸಕ್ಕೆ ಬೇವಿನ ಮರ ತಂಪು
ಭೀಮರಥಿಯೆಂಬ ಹೊಳೆ ತಂಪು ಹಡೆದಮ್ಮ
ನೀ ತಂಪು ನನ್ನ ತವರೀಗೆ.
ಹಲ್ಲು ಸುಲಿಯಲಿ ಬೇಕು ವೀಳ್ಯಮೇಲಿಯ
ಬೇಕು ಮಲ್ಲಿಗೆ ಬೇಕು ತುರುಬಿಗೆ ಹಡೆ
ನೀ ಬೇಕು ನನ್ನ ತವರೀಗೆ.

ತಂದೆಯನೆನೆದರೆ ತಂಗಳ ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವ, ನೆನೆದರೆ
ಮಾಸಿದ ತಲೆಯು ಮಡಿಯಾಯ್ತು.

ಹಳ್ಳಿಯ ಹಾಡುಗಳ ಹುಟ್ಟು ಜನಪದ ಸಾಹಿತ್ಯದ ಹೊನಲು—ಈ ಆಧುನಿಕ ಯುಗದಲ್ಲಿಯೂ ಬತ್ತಿ ಹೋಗಿಲ್ಲ. ಅದು ಸದಾ ಕಾಲವೂ ಹುಟ್ಟಿ ಹರಿಯುತ್ತಲೇ ಇರುತ್ತದೆ. ಹಳ್ಳಿಯ ಕವಿಯ—ಜನಕವಿಯ—ಕವಿತಾ ಸಾಮರ್ಥ್ಯಕ್ಕೆ ಎಂದೂ ಕುಂದು ಬಾರದು. ಅದಕ್ಕೆ ದೃಷ್ಟಾಂತವೆಂದರೆ ಪೂಜ್ಯ ಬಾಪೂಜಿಯ ಜೀವನವನ್ನು ಚಿತ್ರಿಸುವ—ಆ ಮಹಾತ್ಮನ ಮಹಾತ್ಮೆಯನ್ನು ಬಣ್ಣಿಸುವ ಕೆಲವು ಹಾಡುಗಳು.

ಹುಟ್ಟಿದಾರ್ ಹುಟ್ಟಬೇಕು ನಮ್ಮ ದಿಟ್ಟ ಗಾಂಧಿಯಂತೆ
ಗಟ್ಟಿಗರೀ ಲೋಕದಲ್ಲಿ ಹುಟ್ಟಿದರೆ ಹುಟ್ಟಬೇಕು
ನಮ್ಮ ದಿಟ್ಟ ಗಾಧಿಯಂತೆ
ಯರ್ರಾವ್ಡಾ ಜೈಲಿನಲ್ಲಿ ಒರಗಿಕುಳಿತು ಕುಳಿತುಕೊಂಡು
ಥರಥರನೆ ನಡುಗಿಸಿದರ್ ಪರದೇಶೀ ಜನರನ್ನು
ಹುಟ್ಟಿದಾರ್ ಹುಟ್ಟಬೇಕು ನಮ್ಮ ದಿಟ್ಟಗಾಂಧಿಯಂತೆ.

ಗಾಂಧೀಜೀ ನಡೆಯಿಸಿದ ಅದ್ಭುತಕಾರ್ಯವನ್ನು ನಮ್ಮ ಜನಪದ ಕವಿ ಎಷ್ಟೊಂದು ಸೊಗಸಾಗಿ ಹಾಡಿದ್ದಾನೆ!

ಹಳ್ಳಿಯ ಹಾಡುಗಳನ್ನು ಪರಿಶೀಲಿಸಿದರೆ ನಮ್ಮ ಹಳ್ಳಿಯ ಹಳ್ಳಿಗರು ಅದೆಷ್ಟು ಸುಸಂಸ್ಕೃತರು ರಸಿಕರು ಎಂಬುದು ವ್ಯಕ್ತವಾಗುವುದು. ಹಳ್ಳಿಯ [illegible]ಜೀವನವೆಂದರೆ ಅದೆಷ್ಟು ರಸವತ್ತಾಗಿದೆ ಸರಳವಾಗಿದೆ ಎಂಬುದೂ ನಮ್ಮ ಜ[illegible]ನಸ್ಸಿಗೆ ಸ್ಪಷ್ಟವಾಗುವುದು. ಹಳ್ಳಿಯ ಹಾಡು—ಜನಪದ ಸಾಹಿತ್ಯ—[illegible]ಯೂ ನಮ್ಮ ಭಾಷೆಯ ಅಮೂಲ್ಯ ಸಂಪತ್ತು. ಆ ಸಂಪತ್ತನ್ನು [illegible] ನಮ್ಮ ಹಳೆಯ ಸಂಸ್ಕೃತಿಯನ್ನು ರಕ್ಷಿಸುವುದು ಆಧುನಿಕರಾದ [illegible]ರ ಕರ್ತವ್ಯ. ಜನಪದ ಸಾಹಿತ್ಯ ಕೆಲವುಟ್ಟಿಗಾದರೂ ನಮ್ಮ [illegible] ಪ್ರ[illegible]ತೋರಿ ನಮ್ಮ ಹಳ್ಳಿಗರ ಜೀವನವನ್ನು ರಸವತ್ತಾಗಿ [illegible]ನವನ್ನೂ ಸರಸವಾಗಿಸದೆ ಉಳಿಯಲಾರದು.

ಅಭ್ಯಾಸ

1. ಹಳ್ಳಿಯ ಹಾಡುಗಳು ಯಾವ ಯಾವ ಸಂದರ್ಭಗಳಲ್ಲಿ ಹೊರ ಹೊಮ್ಮುತ್ತವೆ?

2. ಹಳ್ಳಿಯ ಹಾಡುಗಳಲ್ಲಿ ಯಾವ ಯಾವುವು ವರ್ಣಿತವಾಗಿರುತ್ತವೆ?

3. ಬಡತನವನ್ನು ಬಣ್ಣಿಸುವ ಹಾಡುಗಳ ಭಾವಾರ್ಥವೇನು?

4. ಪೌರಾಣಿಕ ಕಥೆಗಳನ್ನು ಸೂಚಿಸುವ ಒಂದೆರಡು ಹಾಡುಗಳನ್ನು ವಿವರಿಸಿರಿ.

5. ಹಾಸ್ಯರಸವು ಜನಪದ ಸಾಹಿತ್ಯದಲ್ಲಿ ಯಾವ ರೀತಿ ವ್ಯಕ್ತವಾಗುತ್ತದೆ?

6. ಇಲ್ಲಿ ಇರುವ ಹಳ್ಳಿಯ ಹಾಡುಗಳಂತೆ ಇನ್ನೂ ಹಾಡುಗಳನ್ನು ಸಂಗ್ರಹಿಸಲು ಯತ್ನಿಸಿರಿ.

7. ತುಪ್ಪಶನ, ಉಂಬಲೆ, ದನಿಗೇಳ್ಳೊ, ಹರಲೀಯ, ಮುರುವಾನ, ಬೇಸಗೆ, ಮಡಿಯಾಯ್ತು— ಈ ಪದಗಳ ಅರ್ಥವೇನು?

8. ಮುಂದಿನ ಮಾತುಗಳಲ್ಲಿ ಕಾಣುವ ನಾಮ ವಿಶೇಷಣಗಳನ್ನೂ ಕ್ರಿಯಾ ವಿಶೇಷಣಗಳನ್ನೂ ಹೆಕ್ಕಿತೆಗೆಯಿರಿ:— ದೊಡ್ಡ ದೊಡ್ಡ ಕಾವ್ಯಗಳಂತೆ; ಲವಲೇಶವೂ ಅಲ್ಲಿ ತೋರದು; ಸರಳವಾಗಿ ವರ್ಣಿತವಾಗಿವೆ; ಸ್ವಾಭಾವಿಕವಾಗಿ ಬಣ್ಣಿಸುವ; ಪೂಜ್ಯ ಬಾಪೂಜಿಯು; ಅಮೂಲ್ಯ ಸಂಪತ್ತು.

9. ಸೊಬಗು, ಹೃದಯ, ಭಾಷೆ, ಕಾವ್ಯ, ಬಣ್ಣನೆ, ಸೊಸೆ— ಈ ಮಾತುಗಳಲ್ಲಿ ತತ್ಸಮಗಳಿಗೆ ತದ್ಭವಗಳನ್ನೂ, ತದ್ಭವಗಳಿಗೆ ತತ್ಸಮಗಳನ್ನೂ ಕೊಡಿರಿ.

---

೨೦. ಸ್ವಾತಂತ್ರ್ಯೋದಯ

ಶ್ರೀ. ಬಿ. ಎಂ. ಶರ್ಮಾ.

ಇನ್ನೂರ್ವರ್ಷದ ಅಂಧಂತಮಸಿನ
ಕಾಳರಾತ್ರಿಯದು ಸಂದತ್ತು;
ಬಿಡುಗಡೆ ಬಿಡುಗಡೆ ಬಿಡುಗಡೆ ಬಂದಿತು
ಸ್ವಾತಂತ್ರ್ಯೋದಯವಾದತ್ತು;
ಅಂಧಂತಮಸಿನ ನಿದ್ರಾಜಡತೆಯು
ಜನಮನದಿಂದಲಿ ತೊಲಗಿತ್ತು;
ಬಡತನ ಬವರವೊ ಬರಗಾಲಗಳೋ
ತೊಲಗುವ ಕಾಲವು ಬಂದತ್ತು.
ಸ್ವಾತಂತ್ರ್ಯೋದಯವಾದತ್ತು
ಪಾರತಂತ್ರ್ಯ ನಿಶೆ ಹರಿದತ್ತು.

ನವಿಸ್ಮಾ ರಾಷ್ಟ್ರದ ಬಂಧನ ಬಿಡಿಸಲು
ಹರಣವರ್ಪಿಸಿದ ಅಣ್ಣದಿರೇ,
ಪಾರತಂತ್ರ್ಯದಾ ಸಂಕಲೆ ಕಳಚಲು
ಕಾಳಗವೆಸಗಿದ ಅಕ್ಕದಿರೇ,
ಸತ್ಯಾಹಿಂಸೆಯ ಶಸ್ತ್ರಾಸ್ತ್ರಗಳಿಂ
ಸತ್ಯಾಗ್ರಹ ರಣ ವಿಜಯಿಗಳೇ,
ಸ್ವಾತಂತ್ರ್ಯದ ರಣ ಸೂತ್ರಧಾರಿಯಾ
ಪ್ರ[illegible] ಗಾಂಧಿಮಹಾತ್ಮನ ಸೈನಿಕರೇ,
[illegible]ವಂದನೆ ನಿಮಗೆಲ್ಲ,
[illegible]ಂಜಲಿ ನಿಮಗೆಲ್ಲ.

ಸ್ವಾತಂತ್ರ್ಯದ ನವ ಸೂರ್ಯೋದಯುದಲಿ
ನಾವೀ ಪಣಕೈಕೊಳ್ಳುವೆವು;
ಬುದ್ಧ ಗುರುವಿನಾ ಗಾಂಧಿ ಮಹಾತ್ಮನ
ಉಪದೇಶಾಮೃತ ಹೀರುವೆವು;
ಅಶೋಕ ಚಕ್ರಧ್ವಜ ಹಾರಿಸುತಲಿ
ನೀತಿ ವಿಜಯುವನು ಗಳಿಸುವೆವು;
ಸತ್ಯಾಹಿಂಸೆಯು ಶಸ್ತ್ರಾಸ್ತ್ರಗಳಿಂ
ವಿಶ್ವವಿಜಯುವನು ಪಡೆಯುವೆವು.
ವಿಶ್ವಪ್ರೇಮವ ಸಾರುವೆವು;
ಭ್ರಾತೃಪ್ರೇಮವ ಹರಡುವೆವು.

ನವಿಮ್ಮ ರಾಷ್ಟ್ರದ ಸ್ವಾತಂತ್ರ್ಯದ ರವಿ
ಬೆಳ್ಳಂ ಬೆಳಗಲಿ ವಿಶ್ವದಲಿ!
ಜಾತಿಧರ್ಮದಾ ವರ್ಣ ದ್ವೇಷದ
ಅಂಧಂತಮುವನ್ನೋಡಿಸಲಿ!
ರಾಷ್ಟ್ರ ರಾಷ್ಟ್ರದಲಿ ಜನ ಜನಾಂಗದಲಿ
ಸೋದರ ಭಾವನೆ ಹಬ್ಬಿಸಲಿ!
ಶತಶತಮಾನದ ಮಾನವ ಕೋಟಿಗೆ
ಶಾಂತಿ ಸುಖಗಳನು ಕರುಣಿಸಲಿ!
ತುಷ್ಟಿಯ ಪುಷ್ಟಿಯನ್ನೈದಿಸಲಿ!
ಮಾನವತ್ವವನು ರಕ್ಷಿಸಲಿ!

ಅಭ್ಯಾಸ

1. ಸ್ವಾತಂತ್ರ್ಯೋದಯವಾದ ಮೇಲೆ ಏನಾಗುವುದು?

2. ಸ್ವಾತಂತ್ರ್ಯದ ನವ ಸೂರ್ಯೋದಯುದಲ್ಲಿ ನಾವು ಯಾವ ಕೈಕೊಳ್ಳಬೇಕು?

3. ನಮ್ಮ ಸ್ವಾತಂತ್ರ್ಯದ ರವಿಯಿಂದ ನಾವೇನ

4. ಈ ಗೀತೆಯ ಅರ್ಥವನ್ನು ನಿಮ್ಮ ಮಾ

೨೧. ನೇತ್ರಾವತಿ

ಶ್ರೀ ಅಮ್ಮೆಂಬಳ ಶಂಕರನಾರಾಯಣ

ಪಶ್ಚಿಮ ಪರ್ವತ ಮಾಲೆಯೊಳಿಳಿಯುತ
ಕುದುರೆಯ ಮುಖದಿಂದ,
ಉಚ್ಚಮಹೀರುಹ ನಿಬಿಡಿತ ಘೋರಾ-
ರಣ್ಯದ ನಡುವಿಂದ,

ನೇತ್ರಾವತಿ ನೀ ಹರಿಯುತ ಹಾರುತ
ಇಳೆಯೊಳು ಸುಳಿಯುತ್ತ,
ಎತ್ತರ ಬೆಟ್ಟವ ಸುತ್ತುತ ಮಣ್ಣನು
ಕಲ್ಲನು ಕೊರೆಯುತ್ತ,

ಸಾಗುವುದೆಲ್ಲಿಗೆ ಮೆಲ್ನಡೆಯಿಂದಲಿ
ಸಂತಸದೇಳ್ಗೆಯಲಿ,
ಹೋಗುವುದಾರನು ನೋಡಲು ಕೂಡಲು
ಹಾಡುತ ನಲವಿನಲಿ?

ವಿಶ್ವವಿಶಾಲ ಮಹೋದಧಿಯೊಂದಿಗೆ
ಬೆರಸುತ ಜೀವನವ,
ವಿಶ್ವಾತ್ಮನ ಪದ ಕಮಲದೊಳೈಕ್ಯವ-
ನಾಗಿಪೆಯಾತುಮವ?

ಸಾಗರನಾದದೊಳೇಕೀಭವಿಸಲು
[illegible] ತನ್ನಯ ಮೆಲ್ಲುಲಿಯ,
[illegible] ನೇತ್ರಾವತಿಯೇ ಮೆಲ್ಲನೆ
[illegible]ಸುತ ಕಡಲೆಡೆಯ?

ಉದಯಾದಿತ್ಯನು ಬೀರುವ ಕಿರಣವು
ನೀರಿನ ತೆರೆಯಲ್ಲಿ
ಉದಿಸಲು ಪಳಪಳ ಹೊಳೆಯುತ ಹೋಗುವೆ
ನದಿ ನೀ ಮುದದಲ್ಲಿ 6

ನೇಸರ ಬಿಂಬವು ನೇತ್ರದ ತೆರದಲಿ
ತೋರಲು ನೀರಿನಲಿ
ಹೆಸರನ್ವರ್ಥವೆಯಾದುದು ನಿನಗೆ
ನೇತ್ರಾವತಿ ಈ ರೀತಿಯಲಿ. 7

ಎಂದೂ ಈ ಪರಿಯಿಂದಲಿ ನಿಲ್ಲದೆ
ಹರಿಯುತ ನೀ ಹೊಳೆಯೆ,
ಮುಂದಿಗೆ ಕಾಲಾನಂತತೆಯಂದವ
ಚಂದದಿ ಪೇಳುವೆಯೆ? 8

ಅಭ್ಯಾಸ

1. ನೇತ್ರಾವತಿ ಎಲ್ಲಿ ಹುಟ್ಟಿ ಹರಿಯುವಳು?

2. ನೇತ್ರಾವತಿಯೆಂಬ ಹೆಸರು ಏಕೆ ಅನ್ವರ್ಥವಾಯಿತು?

3. ಈ ಕವನದ ಭಾವವನ್ನು ನಿಮ್ಮ ಮಾತುಗಳಲ್ಲಿ ಸಂಕ್ಷೇಪಿಸಿ ಬರೆಯಿರಿ.

4. ಸಾಗುವುದೆಲ್ಲಿಗೆ, ಹೋಗುವುದಾರನು, ಉದಯಾದಿತ್ಯ, ಹೆ[illegible]ರನ್ವರ್ಥವೆಯಾದುದು, ಕಾಲಾನಂತತೆ—ಈ ಪದಗಳನ್ನು ವಿಂಗಡಿ[illegible]ಯಿರಿ.

5. ಮಹೀರುಹ, ಉದಧಿ, ವಿಶ್ವಾತ್ಮ, ಆತುಮ—[illegible] ಮಾ[illegible] ಅರ್ಥವೇನು?

---

೨೨. ಓದು

ಶ್ರೀ ಸಿ. ಕೆ. ತಿರುಮಲೇಶ.

ಹಳ್ಳಿ ಸಾಲೆಯೊಳೋದಿ ಮುಗಿಯಲೆನ್ನನು ಬಿಡದೆ,
ತಳ್ಳಿದರು ಪಟ್ಟಣದ ಸಾಲೆಗಾಗಿ;
ಹಳ್ಳಿಗನ ವೇಷ, ಕಂಡೆಲ್ಲ ನಗುತಿರಲಂದು,
ಹಳ್ಳಿಯುವನಲ್ಲವೆಂದೆನಿಸಿ ಮೆರೆದೆ.

ಕಲಿತು ನಾನಾ ಕಲಾಶಾಲೆ ತರಗತಿಗಳನು
ನಲಿದ ದಿನವೊಂದು ಜಯಶೀಲನಹೆನೆಂದು;
ತಿಳಿವಹರಿಗೊಟ್ಟು ನಾನಿದ್ದೆನಾದರೆ ಇಂದು
ಕಳೆದ ದಿನಗಳ ನೆನೆವೆ ಕಣ್ಣೀರ ತಂದು

ತಿರುತಿರುಗುತರಸಿದೆನು ವರಿಸಲೊಂದುದ್ಯೋಗ
ಮರುಗಿ ಪದಕೆರಗಿ ಬೇಡಿದನೆಲ್ಲರನ್ನು;
ಪರಿತಾಪವಪ್ಪುದಾ ಸವೆದ ಜೀವನದ ಸವಿ
ಯರಿವ ಸೇರಲು ಮರುಕವುರವಣಿಪುದು. 3

ಹೊರಡುತಿಹರುದ್ಯೋಗ ಹಂಬಲದ ಗೊಂಬೆಗಳು
ವರುಷದೊಳಗೆನ್ನ ತೆರ ತಿರುಗುತಿಹರು;
ಧರೆಯೊಳಿಹ ನರರೆಲ್ಲರುದ್ಯೋಗ ಬಯಸುತಿಹ
ಲಿರವೆಲ್ಲಿ? ಉದ್ಯೋಗ ದೊರೆಕೊಳುವುದೆ? 4

ಕಳೆದ ಜೀವನವ ನಾನುದ್ಯೋಗದಾಸೆಯಿಂ
ಪ್ರ[illegible] ಧನಕನಕ ವ್ಯರ್ಥವಿಂದು;
[illegible] ಬಯ್ಯುವರು, ಬಂಧುಗಳು ನಿಂದಿಪರು,
[illegible]ರೆ ನಡೆಯೊ ನಡೆಯೆನ್ನುತಿಹರು. 5

ಉಳಿಯಲಿಕೆ ಮನೆಯಿಲ್ಲ ಉಳಲಿಕ್ಕೆ ನೆಲವಿಲ್ಲ,
ತಿಳಿದು ತಿಳಿಯದ ಬಾಳು ಬಾಳಿದಲ್ಲ;
ಇಳಿಬೆಳಕು ಕಣ್ಗೆ ಬರೆ ತಿಳಿವಂತರವ ಸೇರೆ,
ಗಳಿಯಿಪುದು ಬಾಳುವೆಯು ನಡೆಯಿಪೋದು. 6

ಹೊತ್ತಗೆಯನೋದಿದರೆ ಹೊತ್ತು ಕಳೆಯಲುಬಹುದು,
ಕತ್ತೆ ಕತ್ತುರಿ ಹೊತ್ತ ಗಾದೆಯಹುದು;
ತುತ್ತು ದೊರಕಿಪ ವಸುಂಧರೆಯು ನೋಡುತಲೋದು,
ಹೊತ್ತುಕೊಂಡಿಹ ತಿಳಿವ ಮೂಸಿ ನೋಡು. 7

ಎತ್ತ ನೋಡಲು ಜನತೆ ಸುತ್ತಿಹುದು ಬಡತನದೆ,
ಎತ್ತಿ ಬಿಕ್ಕೆಯು ಹೊಟ್ಟೆ ಹೊರೆಯುಬಹುದೆ?
ಇತ್ತವರಿಗುಳಿವಿಲ್ಲ ಈಯದರಿಗಳಿವಿಲ್ಲ,
ಸುತ್ತಿ ಸುಳಿಯುವ ಬಾಳು ಜಗದ ಗೋಳು. 8

ಅಭ್ಯಾಸ

1. ಓದಿದವನು ಕಳೆದ ದಿನಗಳನ್ನು ಕಣ್ಣೀರು ತುಂಬಿ ನೆನೆಯುವುದೇಕೆ?

2. ಓದು ಮುಗಿದ ಮೇಲೆ ಓದಿದವನ ಗತಿಯೇನಾಗುವುದು?

3. ಕತ್ತೆ ಕತ್ತುರಿ ಹೊತ್ತ ಗಾದೆಯೆಂದರೇನು?

4. 'ಓದು' ಕವನದ ಅರ್ಥ ವಿವರಿಸಿ ಒಂದು ಪ್ರಬಂಧ ಬರೆಯಿರಿ.

5. ಅಹೆನು, ಉರವಣಿಪುದು, ಅಪ್ಪುದು, ಸಾರ್ದರೆ, ಬರಇಹುದು—ಈ ಕ್ರಿಯಾಪದಗಳ ಧಾತುಗಳಾವುವು?

6. ಹೊತ್ತಗೆ, ಕತ್ತುರಿ, ಸಾಲೆ, ಬಿಕ್ಕೆ—ಈ ಮಾತು[illegible] ಸಂ[illegible]ರೂಪಗಳಾವುವು?

೨೩. ದಯೆಯೇ ಧರ್ಮದ ಮೂಲ

ಶ್ರೀ. ಬಿ. ಶಂಕರ ಭಟ್ಟ.

ಚಿಗುರೆಲೆ ಚಿಗಿದು ಮುಗುಳುಗಳರಳಿ
ಹೂಗಳು ನಗುತಿಹವು;
ಹೀಚವು ಬೆಳೆದು ನಸುಗಾಯಾಗಿ
ಹಣ್ಗಳು ಕಳಿತಿಹವು.

ಹಕ್ಕಿಗಳೆಲ್ಲಾ ಗೂಡನು ಕಟ್ಟಿ
ಮೊಟ್ಟೆಯನಿಟ್ಟಿಹವು;
ಮೊಟ್ಟೆಗಳೊಡೆದು ಮರಿಗಳು ಬಳೆದು
ಚಿಲಿಪಿಲಿಗುಟ್ಟುವುವು.

ತಣ್ಣನೆಯೆಲರು ಎಲ್ಲೆಲ್ಲಲೆದು
ಅಲರಿನ ಪರಿಮಳವ,
ಬೆರಸುತ ಬಂದು ಬೇಸಗೆ ಬೇಗೆಯ
ಒರಸುತ ಸುಳಿಯುವುದು.

ಸುಗ್ಗಿಯ ಕಾಲವೆ ಹಿಗ್ಗಿನ ಕಾಲ
ಲೋಕದ ಜನಗಳಿಗೆ;
ನೆಲತಾಯಿಯು ತಾನ್ ಸಿಂಗರಗೊಂಡು
ಸಂತಸ ಪಡುತಿಹಳು.

ಗೌತಮ ಕುವರನು ಅನುಜನ ಕೂಡಿ
ತೋಟದೊಳಾಡುವನು;
[illegible] ಸೊಬಗನು ಸವಿಯುತಲವರು
[illegible]ದುಬ್ಬಿನಲಿಹರು.

ಸೊಬಗಿನ ಸುಗ್ಗಿಯು ಹಬ್ಬಕ್ಕೆಂದು
ಕಟ್ಟಿದ ಮೇಲ್ಗಾಪೊ,
ಭೂವಿತಾಯಿಯಾ ಜಾತ್ರೆಯ ಸಮಯದಿ
ಎತ್ತಿದ ಬೆಳ್ಗೊಡೆಯೊ 6

ಬೆಣ್ಣೆಯ ಮುದ್ದೆಗೆ ರೆಕ್ಕೆಯೆ ಬಂದಿತೊ,
ಮಲ್ಲಿಗೆ ಮಾಲೆಗಳೊ,
ಎನ್ನುವ ತೆರದಿಂ ಹಾರುತ ಬಂದಿತು
ಹಂಸೆಯ ಸಾಲೊಂದು. 7

ದೇವದತ್ತ ತಾನ್ ತೋಟದೊಳಾಡುತ
ಕಂಡನು ಹಂಸೆಗಳ:
ಬಿಲ್ಲನು ಬಾಗಿಸಿ ಬಾಣವನೇರಿಸಿ
ಎಸೆದನು ಗುರಿಯಿಟ್ಟು. 8

ಹರಿಯುವ ಅಲಗದು ಬಾನಲಿ ಹರಿಯಿತು
ಬಳ್ಳಿ ಮಿಂಚಿನಂತೆ;
ಹಾರುವ ಹಂಸೆಯ ಮೈಯಲಿ ನಾಟಿತು
ಸಿಡಿಲ ಬಾಳಿನಂತೆ. 9

ರೆಕ್ಕೆಯು ಬಿಚ್ಚಿತು ಕಾಲ್ಗಳ ಬಿಟ್ಟಿತು
ಮೈಯನು ಜೋಲಿಸಿತು;
ತಲೆಕೆಳಗಾಗುತ ನೆಲದಲಿ ಬಿದ್ದಿತು
ಹಗಲಚಂದ್ರನಂತೆ.

ಗೌತಮ ಕುವರನ ಕಾಲ್ಗಳ ಬಳಿಯಲಿ
ಹೊರಳಾಡಿತು ಹಂಸೆ;
ಗಾಯದ ನೋವನು ಮಾಯಿಸುವೈ
ಎಂದು ಬೇಡುವಂತೆ.

ಹಕ್ಕಿಯು ಮರುಕವು ಮನುಜನ ಹೃದಯವ
ಚುಚ್ಚದೆ ಬಿಟ್ಟೀತೆ?
ಗೌತಮ ಕುವರನ ಎದೆಯೇ ಕರಗಿತು
ಹಂಸೆಯು ಮರುಕಕ್ಕೆ.

ನೋವಿಗೆ ನೋಯುತ ಸಾವಿಗೆ ಬೇಯುತ
ಲೋಕದ ಮರುಕವನು,
ಪರಿಹರಿಸಲು ಸತತವು ಯತ್ನಿಪ
ದಯೆಯು ರೂಪನವನು.

ತಾವರೆ ಹೂವನು ತೆಗೆಯುವ ತೆರದಲಿ
ಗಾಯದ ಹಂಸೆಯನು,
ಮೆಲ್ಲನೆತ್ತಿದನು ಬಾಣವ ಸೆಳೆದನು
ನೋವಾಗದತೆರದಿ.

ಸುರಿಯುವ ನೆತ್ತರ ಗಾಯುವ ತೊಳೆದನು
ಮದ್ದನು ಹಚ್ಚಿದನು;
ಗಾಳಿ ಬೀಸುತಲಿ ಕುಟುಕನು ಕೊಡುತಲಿ
ಉಪಚರಿಸಿದನವನು.

ಮಾತೆಯು ಮಡಿಲಿನ ಮಗುವಿನ ತೆರದಲಿ
ಹಂಸೆಗಾಯ್ತು ಸೊಗವು;
ದಯೆಯೇ ಧರ್ಮದ ಮೂಲವೆಂಬುವಾ
ನುಡಿಯು ಸತ್ಯವಾಯ್ತು.

ನೋವದು ಮಾಸಿತು ಗಾಯುವು ಕೂಡಿತು
ಹಂಸೆ ದಿನದಿನಕ್ಕೆ
... ನೈದಿತು ಗೌತಮ ಕುವರನ
... ಲು ನೆಳಲ ಕೆಳಗೆ.

ಜೀವವ ತೆಗೆಯುವ ಜೀವಿಗೆ ಆ ಬಡ
ಜೀವಿ ಸೇರಬೇಕೆ?
ಜೀವವ ಕಾಯುವ ಮನುಜನ ಪಾಲಿಗೆ
ಹಂಸೆ ಸೇರಬೇಕೆ? 18

ಹಕ್ಕಿಯು ನೆವವೇ ಹುಳುಕನು ಹೆಚ್ಚಿಸೆ
ಕಲಹವು ಹಿರಿದಾಯ್ತು;
ಅರಸನ ಎದುರಲಿ ತಂದೆಯು ಬಳಿಯಲಿ
ದೂರನು ಕೊಟ್ಟಾಯ್ತು. 19

ಕಿರಿಯರ ಕಿರುಕುಳ ತೀರಿಸಲಾರದೆ
ಹಿರಿಯನಮಾತ್ಯನನು
ಬರಿಸಿದ ಬೇಗನೆ ಕಿರಿಯರ ಕಿರುಕುಳ
ತೀರಿಸ ಹೇಳಿದನು. 20

ಅರಸನ ಮಂತ್ರಿಯು ಬುದ್ಧಿಯ ತಂತ್ರಿಯು
ಮಕ್ಕಳ ನೋಡಿದನು;
ತಲೆಯನು ಬಾಗುತ ಕೈಗಳ ಮುಗಿಯುತ
ಬಿನ್ನವಿಸಿದ ದೊರೆಗೆ. 21

"ದೊರೆಯೇ, ಲಾಲಿಸು, ಹಕ್ಕಿಯು ಹೊಡೆದವ
ದೇವದತ್ತನಲ್ಲೆ?
ಸಾಯುವ ಹಂಸೆಗೆ ಜೀವವನಿತ್ತವ
ಶಾಕ್ಯ ಕುವರನಲ್ಲೆ?

ಹಂಸೆಯು ಒಲವದು ಆರನು ಒಲಿವುದೊ
ನೋಡಬೇಕು ನಾವು;
ಹಕ್ಕಿಗೆ ಯಾರಲಿ ಇಷ್ಟವಿರುವುದೋ
ಸೇರಲವರ ಬಳಿಯು.

ಹಿರಿಯರ ನ್ಯಾಯದ ಹೊತ್ತಿಗೆಯಲ್ಲೀ
ಬೇರೆ ದಾರಿ ಇಲ್ಲ;
ದಯೆಯೇ ಧರ್ಮದ ಮೂಲವೆಂಬುದನು
ತಿಳಿದು ನೋಡಬಹುದು."

ಕೂಡಲೆ ಅರಸಾಳಂಚೆಯು ತಂದನು
ಸಭೆಯ ಮುಂದೆ ಬಿಟ್ಟ;
ದೇವದತ್ತನಾ ಕಾಣುತ ಹಕ್ಕಿಯು
ದೂರ ಸರಿಯಿತಲ್ಲ?

ಗೌತಮ ಕುವರನು ಬಾ ಬಾ ಎನ್ನಲು
ಕರುವು ತಾಯ ಬಳಿಗೆ;
ನೆಗೆನೆಗೆದೋಡುತ ತಾ ಬರುವಂತೆಯೆ
ಹಕ್ಕಿ ಹಾರಿ ಬಂತು.

ಕುವರನ ಮುದ್ದಿಸಿ ಹೆಗಲಲಿ ಕುಳಿತಿತು
ರೆಕ್ಕೆಗಳಗಲಿಸುತ;
ಸಂತಸದಲಿ ನಲಿದಾಡಿತು ಹಕ್ಕಿ
ರಾಜ ಸಭೆಯ ಮುಂದೆ.

ಬೆಳೆಯ ಸಿರಿಯು ತಾನ್ ಮೊಳೆಯಲೆ ಕಾಂಬುದು
ಎಂಬ ಜನರ ಮಾತು;
ಗೌತಮ ಮುಂದಕೆ ಬುದ್ಧನಾದನಲ
ಲೋಕವನುದ್ಧರಿಸೆ?

ಅಭ್ಯಾಸ

1. ಸುಗ್ಗಿಯ ಕಾಲವನ್ನು ಬಣ್ಣಿಸಿರಿ.

2. ಹಂಸೆಯ ಸಾಲು ಯಾವ ರೀತಿ ಹಾರುತ್ತ ಬಂದಿತು?

3. ಹಗಲ ಚಂದ್ರನಂತೆ ಏನಾಯಿತು?

4. ಮಂತ್ರಿಯು ಮಕ್ಕಳ ಕಲಹ ತೀರಿಸಲು ಏನು ಉಪಾಯ ಹೂಡಿದನು?

5. ಬೆಳೆಯ ಸಿರಿಯು ತಾನ್ ಮೊಳೆಯಲೆ ಕಾಂಬುದು'–ಎಂಬುದು ಈ ಕಥನಕವನದಿಂದ ಹೇಗೆ ತಿಳಿದು ಬರುವುದು?

6. ಮುಂದಿನ ವಾಕ್ಯಗಳನ್ನು ಸಂದರ್ಭದೊಡನೆ ವಿವರಿಸಿರಿ:—(ಅ) ಮಾತೆಯ ಮಡಿಲಿನ ಮಗುವಿನ ತೆರದಲಿ. (ಆ) ದಯೆಯೇ ಧರ್ಮದ ಮೂಲವೆಂಬುವಾ ನುಡಿಯು ಸತ್ಯವಾಯ್ತು. (ಇ) ಹಿರಿಯರ ನ್ಯಾಯದ ಹೊತ್ತಗೆಯಲ್ಲೆ ಬೇರೆ ದಾರಿ ಇಲ್ಲ. (ಈ) ಕರುವು ತಾಯ ಬಳಿಗೆ ನೆಗೆನೆಗೆ ದೋಡುತ ತಾ ಬರುವಂತೆಯೆ.

7. ಈ ಕವನವನ್ನು ಕಥಾರೂಪದಲ್ಲಿ ಬರೆಯಿರಿ.

8. ನಸುಗಾಯಿ, ಬೆಳ್ಗೊಡೆ, ರೂಪನವನು, ಹಿರಿದಾಯ್ತು—ಈ ಪದಗಳನ್ನು ಬಿಂಗಡಿಸಿ ಯಾವ ಸಂಧಿ ಎಂದು ಹೇಳಿರಿ.

ಹಲವು ಮಕ್ಕಳ ತಾಯಿ ಹೊಳೆ ನೀರಿಗೆ ಹೋದಳು
ಅಳದಿರು ರಾಮ–ಲಕ್ಷ್ಮಣ,–
ನಿನ ತಾಯಿ ಹೊಳೆಯಿಂದ ತಪ್ಪಳು ಅಮೃತಃ

ಕಲ್ಲಾಸೆ ಕಟ್ಟಣಕೆ ಮುಳ್ಳಾಸೆ ಬೇಲಿಗೇ,
ಬಲ್ಲಿದನ ಆಸೆ ಬಡವಗೆ;
ಶ್ರೀ ದೇವರೇ ನಿಮ್ಮಾಸೆ ನ

೨೪. ಎನ್ನವನು ಕರೆಯ ಬನ್ನಿ

ಮುಪ್ಪಿನ ಷಡಕ್ಷರಿ.

ಹೆಮ್ಮಗಳು ನಾ ನಿಮ್ಮ ನಂಬಿ ನಂಬಿರುವೆನು
ಗಮ್ಮನೇ ಎನ್ನವನು ಕರೆಯ ಬನ್ನಿ!

ನೀರ ಹೊಳೆಯಲಿ ನಿಂದು ದಾರಿಯನು ನೋಡುವೆನು
ಬಾರದಿರೆ ಮನದೊಳಗೆ ಕೊರಗಿ ಕರಗಿ,
ಆರೈದು ಮತ್ತೊಮ್ಮೆ ದೂರದೃಷ್ಟಿಯನಿತ್ತು
ಸಾರಿ ನೋಡುವೆ ನಿಲುಕಿ ಅಳಲಿ ಬಳಲಿ.

ಬಂದವರ ಬರುವವರ ನಿಂದವರ ನೆರೆದವರ
ಕುಂದದಲೆ ಕೇಳುವೆನು ನಮ್ಮವರನು;
ಹಿರಿದಾದ ದುಃಖದಲಿ ನೊಂದಿಹೆನು ನಮ್ಮವರು
ಎಂದಿಗದು ಕರೆಯ ಬಹರೋ ಎಂಬೆನು.

ಪದುಳವೇ ನಮ್ಮವರ ಪದಪದ್ಮವೆನ್ನವೆನು
ಪದಪಿಂದೆ ಕರೆದೊಯ್ಯಲೊಲ್ಲರೇಕೆ?
ಉದಯಾಸ್ತಮಾನದಲಿ ಕುದಿದು ಕೋಟಲೆಗೊಂಬೆ
ಹೃದಯ ತಾ ಕರಗದೇ ನಮ್ಮವರಿಗೆ?

ಅಳಲುವೆನು ಮನದೊಳಗೆ ಬಳಲುವೆನು ಬಾರದಿರೆ,
ಕಳೆಯೇರುವೆನು ಒಮ್ಮೆ ನೆನೆದು ನೆನೆದು;
ಮಲಹರಣ ಶರಣರಾ ಬರವ ನೋಡುವರೊಮ್ಮೆ
ಸಲೆ ಎನ್ನ ಕನಸಿಂಗೆ ಬಾರರೆನುತ.

ಹಿಂದುಳಿಯಿತಮವಾಸ್ಯೆ ಮುಂದೆ ಹುಣ್ಣಿಮೆ ಬಂತು
[illegible] ನ್ನ ಕರೆಯಬಹರೋ!
[illegible] ಕರೆಯುವೆನು ಬೆಂದು ಬೆಂಡಾಗುವೆನು
[illegible] ನೋಡದಿಹುದು?

ತರಗೆಲೆಯು ಸರಕೆನಲು ಹೊರಗೆ ನಾನಾಲಿಸುವೆ
ಬರವಿಲ್ಲದಿರೆ ಮನದೆ ಸೊಪ್ಪುಗರೆವೆ;
ಪರರಶಿಶುವೆಂದೆನ್ನ ಶರಣರೂ ನನ್ನನ್ನು
ಮರೆದರೋ ಎಂದೆನುತ ಹೆದರುತಿಹೆನು. 6

ಅಭ್ಯಾಸ

1. ಈ ಹಾಡಿನಲ್ಲಿ ಶಿವಭಕ್ತೆಯು ಏನೆಂದು ಮರುಗುವಳು? ಆಕೆಯ ಮಾತುಗಳಲ್ಲಿಯೇ ವಿವರಿಸಿರಿ.

2. ಇಂತಹ ಬೇರೆ ಹಾಡುಗಳನ್ನೂ ಸಂಗ್ರಹಿಸಿ ಹಾಡಲು ಕಲಿಯಿರಿ.

3. ಮುಂದಿನ ಮಾತುಗಳಲ್ಲಿ ನಾಮಪದಗಳನ್ನೂ ಕ್ರಿಯಾಪದಗಳನ್ನು ಸರ್ವನಾಮಗಳನ್ನೂ ಪ್ರತ್ಯೇಕಿಸಿ ಬರೆಯಿರಿ:—ಆರೈದು; ಪದುಳವೇ ನಮ್ಮವರು; ಅಳಲು; ಕನಸಿಗೆ; ಸಯ್; ಮನದೆ; ಶರಣರು.

4. ಈ ಪದಗಳಲ್ಲಿ ಪ್ರಕೃತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರಿಯಿರಿ:- ಹೊಳೆಯಲಿ; ನಮ್ಮವರಿಗೆ; ಶರಣರ; ತರಗೆಲೆಯು; ಸೊಪ್ಪುಗರೆವೆ; ಮರೆದರೋ.

5. ಪದುಳ, ಪದಪು, ಅಳಲು, ಸಲೆ, ಶರಣ—ಈ ನುಡಿಗಳ ಅರ್ಥವೇನು?

ಹಾಲ ಬಟ್ಟಲು ಕೊಂಬೊ ಹಲಗೆ ತೊಟ್ಟಿಲ ಕೊಂಬೊ,
ದೇವೇಂದ್ರ ರಕ್ಷೆ ಮನೆಕೊಂಬೊ;
ಮಗುವಿಗೇ ಆಯುಷ್ಯ ಕೊಂಬೊ ಶಿವನಲ್ಲಿ

ಕಂಚಿಗೇ ಕಾಯ್‌ಭಾರ ಲಿಂಬೆಗೇ ಹೂಭಾರ
ತೆಂಗಿಗೇ ಭಾರ ಎಳೆ ಬೊಂಡ;
ಮಗುವಿನಾ ಬೆರಳಿಂಗೆ ಭಾ

೨೫. ಹೆಣ್ಮಕ್ಕಳ ಹಿರಿಮೆ

ಸಂಚಿಯ ಹೊನ್ನಮ್ಮ

ಹೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ?
ಹೆಣ್ಣಲ್ಲವೆ ಹೊರೆದವಳು?
ಹೆಣ್ಣುಹೆಣ್ಣೆಂದೇತಕೆ ಬೀಳುಗಳೆವರು?
ಕಣ್ಣುಕಾಣದ ಗಾವಿಲರು?

ಹೆಣ್ಣ ಹೆತ್ತವರ ಬಳಗ ಬಳೆವುದು ಬೇಗ
ಹೆಣ್ಣ ಹೆತ್ತವರು ಹೆಚ್ಚುವರು;
ಹೆಣ್ಣ ಹೆತ್ತುದರಿಂದ ಹೆಸರೆನಿಸಿತು ಮಿಗೆ
ಬಣ್ಣವೇರಿತು ಹಾಲ್ಗಡಲು.

ಹೆಣ್ಣಿಂದೆ ಹೆಮ್ಮೆಗೊಂಡನು ಹಿಮವಂತನು
ಹೆಣ್ಣಿಂದ ಭೃಗು ಹೆಚ್ಚಿದನು;
ಹೆಣ್ಣಿಂದ ಜನಕ ರಾಯನು ಜಸವಡೆದನು
ಹೆಣ್ಣನಿಂದಿಸಲೇಕೆ ಹೆರರು?

ಕುವರನಾದೊಡೆ ಬಂದ ಗುಣವೇನದರಿಂದ
ಕುವರಿಯಾದೊಡೆ ಕುಂದೇನು?
ಇವರಿರ್ವರೊಳೇಳ್ಗೆವಡೆದವರಿಂದ
ಸವನಿಪುದಿಹಪರ ಸೌಖ್ಯ.

ಕುಲಪುತ್ರನೋದಿ ತಿಳಿದು ನಡೆದಲ್ಲದೆ
ಕುಲವನುದ್ಧರಿಸಲರಿಯನು;
[illegible]ಳಿ,ಯೊಳ್ಗವರನಿಗಿತ್ತ ಮಾತ್ರಕೆ
[illegible]ಕೋಟಿಯನುದ್ಧರಿಪಳು.

ಹುಟ್ಟಿದ ಮನೆಯೊಳು ಹೋರಿ ಹುರುಳುಗೊಂಬ
ದಿಟ್ಟಗಂಡುಗಳಂತಿರಲಿ,
ಕೊಟ್ಟುದರಿಂದ ತಣಿಪ ಕುವರಿಗೆ ಮನ
ಮುಟ್ಟಿಕೊಡುವುದು ಕೋಪಿದರು. 6

ಅರಿತು ನಿಟ್ಟಿಸೆ ಗಂಡು ಮಕ್ಕಳಿಂದತಿಶಯ-
ದೆರಕವೊಳೆಸೆವ ಪೆಣ್ಗಳನು
ಹೊರನೋಟದಿಂದ ನೆರೆಡದ ಪೋಲೆನಿಸದ,
ಮರುಕವೆರಸಿ ಮನ್ನಿಪುದು. 7

ಸುಗುಣನಾವನು ಸುಚರಿತ್ರನಾವನು ಕಣ್ಗೆ
ಸೊಗಸುವ ಸೊಬಗನಾರೆಂದು
ಬಗೆದು ಭಾವಿಸಿ ಪೆಣ್ಣನೀವುದು ವಂಶದೊ-
ಳೊಗೆದೊಳ್ಗುಪರನಿಗೊಲಿದು. 8

ಜಡನಿಗೆ ಜಾತಿಹೀನನಿಗೆ ಚಂಚಲನಿಗೆ
ಕಡು ಮೂರ್ಖನಿಗೆ ಗಾಂಪನಿಗೆ
ಬಡತನದೊಳು ಬಲು ಬವಣೆಗೊಂಬವನಿಗೆ
ಕೊಡಲಾಗದು ಕುವರಿಯನು. 9

ತನ್ನ ಮನೆಯೊಳುಂಡು ತವರುಮನೆಯ ಸಂ-
ಪನ್ನವಕ್ಕೆಂಬ ಹೆಣ್ಗಳಿಗೆ
ಹೊನ್ನ ತೊಡಿಗೆ ಹೊಸದುಗುಲಂಗಳನಿತ್ತು
ಮನ್ನಿಸುವುದು ಮನವರಿತು.

ಅಭ್ಯಾಸ

1. ಮುಂದಿನ ಮಾತುಗಳನ್ನು ವಿವರಿಸಿರಿ:—(ಅ) ಹೆಣ್ಣಿಂದೆ ಹೆ ಗೊಂಡನು ಹಿಮವಂತನು. (ಆ) ಹೆಣ್ಣಿಂದೆ ಜನಕರಾಯನು ಜಸವಡೆದನ (ಇ) ಹೆಣ್ಣಿಂದೆ ಭೃಗು ಹೆಚ್ಚಿದನು.

2. ಕುಲಪುತ್ರನಿಗೂ ಕುಲಪುತ್ರಿಗೂ ಇರುವ ಭೇದವೇನು?

3. ಹೆಣ್ಮಕ್ಕಳನ್ನು ಹೇಗೆ ಮನ್ನಿಸಬೇಕು.

4. ಎಂತೆಂತಹರಿಗೆ ಹೆಣ್ಣು ಕೊಡಲಾಗದು?

5. 'ಹೆಣ್ಮಕ್ಕಳ ಹಿರಿಮೆ' ಈ ಪದ್ಯದ ಆಧಾರದಿಂದ ಒಂದು ಪ್ರಬಂ ಬರೆಯಿರಿ.

6. ಮುಂದಿನ ಸಮಾಸ ಪದಗಳನ್ನು ಬಿಡಿಪದಗಳಾಗಿ ಬರೆಯಿರಿ:— ಹಾಲ್ಗಡಲು; ಕುಲಪುತ್ರ; ಒಳ್ಗವರ; ಮನವರಿ.

7. ಜಸ, ಕುವರಿ, ಕುವರ, ಹೊನ್ನು, ದುಗುಲ—ಈ ಮಾತುಗಳ ಸಂಸ್ಕೃತ ರೂಪಗಳಾವುವು?

ಏನೇನು ಬಂದರೂ ಕಾಯ್ವಳಮ್ರುತೇಶ್ವರಿ,
ಮಾಯದಿಂದ್ಬಂದ್ರೆ ಆಪತ್ತು,
ದೇವಿಯೇ, ಕಾದುಕೋ ನಿನ್ನ ಮಗುವನ್ನು.

ಅಜ್ಜಿಗರಸಿನವೇಕೆ ಕಬ್ಬೇಕೆ ಬೋಡಗೇ?
ದಿಬ್ಬಣವೇಕೆ ಮುದುಕಂಗೆ?
ಹೆಣ್ಣು-ಮಕ್ಕಳಿಗೇ ಗಬ್ಬುತನವೇಕೆ ಪರಮಾತ್ಮ.

೨೬. ಅರಣ್ಯ ಸಂಚಾರ

ಕುಮುದೇಂದು

ಶ್ರೀನಿಲಯನಖಿಲ ವಿ-
ದ್ಯಾನಿಲಯನನುಜನುಂ
ತಾನು ಜಗವಿನುತ ಸೀತಾದೇವಿಯುಂ
ಭಾನುಕುಲತಿಲಕರ-
ತ್ಯಾನಂದದಿಂ ಪಾಯ್ದ-
ನೂನ ಗಂಭೀರ ತಾರಂಗಿಣಿಯನು 1

ಹಸಿಯು ತಾಳೆಲೆಗಳಿಂ
ಬಿಸಿಲ ಪರಿಹರಿಸುತುಂ
ಹಸಿವನಮೃತೋಪಮ ಫಲಂಗಳಿಂದ
ರಸವದಸಿತೇಕ್ಷುರಸ
ವಿಸರದಿಂ ತೃಷೆಯನಾ-
ರಿಸುತಂದು ಮೂವರುಂ ನಡೆತಂದರು 2

ನಡೆದು ಕೆಲವೆಡೆಗಳಂ
ತಡೆದು ತಡೆದಲ್ಲಲ್ಲಿ
ಎಡೆಯೆಡೆಯ ತರುಚಯಂಗಳ ತೋರುತ
ಅಡಿಗಡಿಗೆ ನಮಗಿನ್ನು
ಬಿಡುವ ಠಾವಾವುದೆಂ
ದೊಡರಿಸಿದಳಳಲನವನಿಜೆ ರಾಮಗೆ 3

ತೊಳಪ ಪಳುಕಿನ ಠಾದ
ಶಿಲೆಯೊಳಗೆ ನಡೆಯುತಂ
ದಲಘುತರ ದೇಹಭಾರದೆ ಬಳಲುತ
ಸುಲಲಿತ ಲತಾಂಗಿ ಕೋ-
ಮಲೆ ಸೀತೆ ರಾಘವನ
ಬಳಿವಳಿಯು ನೆಳಲಂತೆ ಬರುತಿರ

ಕೆಲಕೆಲಾವೆಡೆಯು ಕೆಂ
ದಳಿರ ನಲವಿಂದ ಕೆಂ-
ದಳಕೆ ಪಡಿಯಿಡುವಂತೆ ಲಕ್ಷ್ಮೀಧರಂ
ಲಲಿತತರ ಭಕ್ತಿಯಿಂ
ನಲಿನಲಿದು ಪಸರಿಸುತಿ-
ರಲು ಸೀತೆ ಮೆಲ್ಲಮೆಲ್ಲನೆ ನಡೆದಳು
ಎಸೆವ ಶಶಿಮುಖಸುಧಾ-
ರಸವಿಸರವೆಂಬಂತೆ
ಪಸರಿಸುವ ಬೆಮರ ಬಿಂದುಗಳ ತಳೆದು
ನಸುಬಾಡಿದಂಗಲತೆ-
ಯಸದಳಂ ಸೊಗಸೆ ತ-
ನ್ನಸಿಯಳಂ ನೋಡುತಂ ರಾಮ ನಡೆದಂ.
ಹಸಿವು ಬಳಿಲಿಕೆ ತೃಷೆಯ
ದೆಸೆಯನರಿಯಂ ನೀರ
ದೆಸೆಯುಮಂ ನೆಳಲ ದೆಸೆಯಂ ನೋಡುತ
ಅಸುಗೆ ದಳದಿಂದ ವಿರ-
ಚಿಸುತ ಶಯನೀಯಮಂ
ಮಿಸುಪ ಭಕ್ತಿಯೊಳು ಲಕ್ಷ್ಮಣ ನಡೆದನು.
ತುಂಗ ಪರ್ವತರ್ಪುಕ ವ-
ನಂಗಳ ಲತಾಮಂಟ-
ಪಂಗಳ ಸರಿತ್ಸರೋವರ ಕೋಟಿಯು
ರಂಗದ್ವಿಶಾಲ ಕೂ-
ಟಂಗಳ ವಿಶಾಲದೆ ಮ-
ನಂಗೊಳಿಪ ಚಿತ್ರಕೂಟವ ಕಂಡರು

೨೭. ಚಿರಕಾರಿಯು ಕತೆ

ತಿಮ್ಮಣ್ಣ ಕವಿ (ಭಾರತ)

ಅರಸ ಮೇಧಾತಿಥಿಯೆನಿಪ ಮುನಿ
ವರನ ಸುತ ಚಿರಕಾರಿ ನಾಮವ
ಧರಿಸಿಹನು ಕೇಳೊಬ್ಬನವ ಚಿರಕಾಲ ನಿಶ್ಚಯಿಸಿ
ವಿರಚಿಸುವ ನಿಜಕಾರ್ಯಗಳನಾ
ಧರಣಿಸುರಗದರಿಂದಲಾಯಿತು
ತ್ವರೆಯೊಳಾ ಚಿರಕಾರಿ ಎಂಬಭಿಧಾನ ದೃಢವಾಗಿ 1

ಒಂದು ಕಾರಣದಿಂದ ಮುನಿಪತಿ
ನೊಂದು ಪತ್ನಿಯ ಮೇಲೆ ಕೋಪಿಸಿ
ಕೊಂದು ಬಾ ನೀನೆಂದು ಕಳುಹಿದನಾಗ ತತ್ಸುತನ
ಬಂದು ವಿಜನಸ್ಥಳದೊಳೊಬ್ಬನೆ
ನಿಂದು ಕಾರ್ಯವ ಚಿರವಿಚಾರಗ-
ಳಿಂದ ಮಾಡುವ ಕತದಿನಾ ಚಿರಕಾರಿ ಚಿಂತಿಸಿದ 2

ಜನಕನಾಜ್ಞೆಯ ಮೀರಬಾರದು
ಜನನಿಯನು ತಾ ವಧಿಸ ಸಲ್ಲದು
ತನುಜನಿಗೆ ಪಿತೃವಾಕ್ಯವನು ಮೀರಿದರೆ ಅಘವಹುದು
ಅನವರತ ಗುರುದೈವದಿಂದತಿ
ಘನವೆನಿಸುವಳು ತಾಯಿ ಪುತ್ರಗೆ
ಮನುಜಗಸ್ವಾತಂತ್ರ್ಯ ಕೆಡೆಯೆಂದೆನುತ ಚಿಂತಿಸಿದ

ಜನನಿಯನು ವಧಿಸಿದೊಡೆ ದೋಷಗ-
ಳೆನಗೆ ಸಿದ್ಧಿಪವೆಂದು ಬಿಟ್ಟರೆ
ಘನವೆನಿಸಿ ಜನಕಾವಮಾನದಿ ದುರಿತ ಸಿ

ಎನಗೆ ಸರಿಯಿವರಿಬ್ಬರಿನ್ನಾ-
ರನು ಬಿಡುವೆ ನಿನ್ನಾರ ಸೇವಿಸಿ
ಮನವ ಮೆಚ್ಚಿಪೆನಕಟನುತ ಚಿರಕಾರಿ ಚಿಂತಿಸಿದ.

ಎನುತ ಹಲವಂದದಲಿ ಚಿಂತಿಸಿ
ಮನದೊಳಗೆ ಮರುಗುತ್ತ ವಿಷ್ನಗ-
ಳನೆ ಬಯಸಿ ತಾ ಹೊತ್ತುಗಳೆವುತಲಿದ್ದನಿರಲಿರಲು
ಜನಕನಿಗೆ ಸಡಿಲಿದುದು ಮೆಲ್ಲನೆ
ಮನದೊಳಡಸಿದ ಕೋಪವಾಸತಿ
ಯನು ಕೊಲಲು ನಿಯಮಿಸಿದೆನಕಟಕಟನುತ ದುಃಖಿಸಿದ

ಮುನಿದು ಮದ್ಭಾರ್ಯೆಯನು ಕೊಲುವರೆ
ತನುಜನನು ಕಳುಹಿದೆನು ಕೋಪದೊ-
ಳೆನಗೆ ಬಹುದೋಷಾಪಯಶಗಳು ಬಂದವಕಟನುತ
ಮುನಿಪ ಬಂದನು ಬೇಗದಲಿ ಕಂ-
ಬನಿಗಳವು ತೊಟ್ಟಿಡಲು ತನ್ನಯ
ತನುಜನವ ಚಿರಕಾರಿ ಬೇಗವ ಮಾಡನೆಂದೆನುತ

ಬಂದು ಕಂಡನು ದೂರದಲಿ ನಿಜ
ನಂದನನ ಚಿರಕಾರಿ ನಾಮದ
ಲಿಂದು ಮಾಡಲು ಮರೆದು ಜನನಿಯನುಳುಹಿದ್ಯೆ ಮಗನೆ
ನಿಂದೆಯನು ತಪ್ಪಿಸಿದೆ ಎನಗಘ-
ವೃಂದವನು ನೀ ಗೆಲಿದೆಯಹುದೋ
ಕಂದ ಎಂದಪ್ಪಿದನು ಹಲವಂದದಲಿ ಹೊಗಳುತ್ತ

[illegible] ನಥೆ ಸಾಧನವ ಬಿಸುಟಾ
[illegible] ಕಾರಿ ನಮಿಸಿದ
[illegible] ರ್ಯೆಯೆರಗಿದಳಾತ್ಮವಲ್ಲಭಗೆ

ಮುನಿಪತಿಗೆ ಆ ಶೋಕ ಬಾಷ್ಪಗ-
ಳನಿತು ಬೇಗವುದಾಶ್ರು ಸಂಚಯ
ವೆನಿಸಿದುದು ನಿಜನಂದನನಿಗಿಂತೆಂದ ಕುಳ್ಳಿರ್ದು 8

ತನುಜ ಕೇಳ್ ಧೈರ್ಯವನು ಸ್ಥೈರಿಸಿ
ಮನಕೆ ಸರಿಯುಹ ಕಾರ್ಯವನು ವಿರ-
ಚನವ ಮಾಡುತಲಿಹರು ನಿನ್ನಂದದಲಿ ಸಜ್ಜನರು
ಅನುವನರಿಯದೆ ಮೂರ್ಖ ಭಾವದಿ
ನೆನೆದ ಕಾರ್ಯವ ಬೇಗವಿರಚಿಸಿ
ಮನದೊಳಗೆ ಮರುಗುವರು ನೀಚರೆನುತ್ತ ಬೋಧಿಸಿದ 9

ಅಭ್ಯಾಸ

1. ಚಿರಕಾರಿಗೆ ಆ ಹೆಸರು ಬರಲು ಕಾರಣವೇನು?

2. ತಂದೆಯು ಅಪ್ಪಣೆಯನ್ನು ಕೇಳಿ ಚಿರಕಾರಿ ಏನೆಂದು ಚಿಂತಿಸಿದನು?

3. ಚಿರಕಾರಿಯು ಕತೆಯಿಂದ ನಾವು ಪಡೆಯುವ ಬುದ್ಧಿವಾದವೇನು?

4. ಮೇಲಿನ ಪದ್ಯಭಾಗವನ್ನು ನಿಮ್ಮ ಮಾತುಗಳಲ್ಲಿ ಕಥೆಯಾಗಿ ಬರೆಯಿರಿ.

5. ಮುಂದಿನ ಕರ್ತೃ ಕರ್ಮ ಕ್ರಿಯೆಗಳು ಅನುಕ್ರಮವಾಗಿ ಬರುವಂತೆ ಗದ್ಯರೂಪದಲ್ಲಿ ಬರೆಯಿರಿ:—(ಅ) ಧರಣಿ ಸುರಗದರಿಂದಲಾಯಿತು ತ್ವರೆಯೊಳಗೆ ಚಿರಕಾರಿ ಎಂಬಭಿದಾನ ದೃಢವಾಗಿ. (ಆ) ಅನಘೆಯಾದಾ ಭಾರ್ಯೆ ಎರಗಿಡಳಾತ್ಮವಲ್ಲಭಗೆ. (ಇ) ನಿಂದೆಯನು ತಪ್ಪಿಸಿದೆ ಎನಗಘ ವೃಂದವನು ನೀ ಗೆಲಿದೆಯುಹುದೋ ಕಂದ ಎಂದಪ್ಪಿದನು ಹಲವಂದಗ ಹೊಗಳುತ್ತ.

6. ಮುಂದಿನ ಪದಗಳ ಅವಯವಾರ್ಥವೇನು:— [illegible]ರ; ಕಾರಿ; ಮುನಿಪ; ತನುಜ.

೨೮. ಹಿರಣ್ಯ ಪ್ರಹ್ಲಾದ ಸಂವಾದ

ಚಾಟು ವಿಠಲನಾಥ (ಕನ್ನಡ ಭಾಗವತ)

ಮಗನೆ ನೀನಾರೆಲ್ಲಿಯವ ಹರಿ
ಹಗೆ ನಮಗೆ ನೀನರಿಯೆ ನಿರ್ಜರ
ರುಗಳ ಮಾತನು ಕೇಳ್ದು ನಿನ್ನಯ ಕಿರಿಯ ತಂದೆಯನು
ಜಗವರಿಯೆ ವಾರಾಹ ರೂಪಿಂ
ದೊಗೆದು ಕೊಂದ ದುರಾತ್ಮನವನನು
ಹೊಗಳುವರೆ ಪ್ರಹ್ಲಾದ ಬೇಡೆನ್ನಾಣೆ ಬೇಡೆಂದ

ತಂದೆ ಕೇಳ್ಳೈ ಹರಿಗೆ ಹಗೆಕೆಳೆ
ಬಂಧುಬಳಗಗಳೆಂಬ ಭೇದಗ
ಳೊಂದುಮಿಲ್ಲ ಕಣಾ ದಯಾಂಬುಧಿಯಾತ ನನ್ನವನ
ಕೊಂದನೆಂದೆನಬೇಡ ಪೂರ್ವದ
ಲಂದು ಮಾಡಿದ ದುಷ್ಕೃತದ ಫಲ
ದಿಂದಳಿದ ನಿನ್ನನುಜ ನೀನಿದ ತಿಳಿದುಕೋ ಎಂದ.

ಅರಿಯೆ ಸಣ್ಣವ ನೀನು ಹರಿ ನಮ
ಗುರುವ ಹಗೆ ಕೇಳೆನ್ನ ಮಾತನು
ಪಿರಿದು ಮೂಜಗದೊಳಗೆ ವೇದವ್ರಾತವನನವರತ
ಒರಲುತಿದೆ ಹರಿ ದೈತ್ಯರಿಪುವೆಂ
ದಿರದೆ ಸಂತತ ಮಗನೆ ನೀನರಿ
ದರಿದು ಹೊಗಳ್ವರೆ ಹಗೆಯ ಬೇಡ ಬೇಡೆಲವೊ ಛಲವೆಂದ

[illegible] ವನನು ಬಿಡಹೇಳುವರೆ ಸುರ
[illegible] ಡದು ಗಡ ವೇದ
[illegible] ಣದ ಮುನೀಂದ್ರರ ಮತಿಗೆ ವೈಗುಡದ

ಶ್ರೀತರುಣಿ ವಲ್ಲಭನು ಕರುಣದ
ಲೋತುಬಂದನು ನನ್ನ ಭಾಗ್ಯದಿ
ತಾತ ನೀ ಬಿಡಹೇಳಿದರೆ ನಾನೆಂತು ಬಿಡಲೆಂದ. 4

ಆದೊಡೆಲೆ ಪ್ರಹ್ಲಾದ ಕೇಳ್ಳೈ
ಬೂದಿ ಮುಚ್ಚಿದ ಕೆಂಡವಾಮಧು
ಸೂದನನ ನಂಬದಿರು ತಿಮಿರದ ರವಿಯು ಸಖತನದ
ಗಾದೆಯಂತಹುದಂತ್ಯದಲಿ ನೀ
ವಾದಿಸದೆ ಬಿಡು ಬೇಗದಲಿ ಲ
ಕ್ಷ್ಮೀಧವನನೆಂದಸುರ ಬೋಧಿಸಿದ ಕುಮಾರಂಗೆ. 5

ಅರಸುತಿಹ ಲತೆ ಕಾಲ ತೊಡಕಲು
ಹರಿದು ಬಿಸುಡುವರುಂಟೆ ಸಿರಿಬರ
ಲರಿದರಿದು ಪದದಿಂದಲೊದೆದವರುಂಟೆ ಹಸಿದಿರಲು
ಕರೆದು ಮೃಷ್ಟಾನ್ನವನ್ನು ಬಡಿಸಲು
ಹೊರಗೆ ಸೂಸುವರುಂಟೆ ವಿಷ್ಣು
ಸ್ಮರಣೆ ಬಾಯಿಗೆ ಬರಲು ನಾನದನೆಂತು ಬಿಡಲೆಂದ. 6

ಆವ ಹಿರಿಯನದಾವ ಗುರುವವ
ನಾವ ಬಂಧು ಪ್ರೀತಿಯುಳ್ಳವ
ದೈವಗುಣಸಂಪನ್ನನೆಂದನವರತವೆನ್ನೊಡನೆ
ಶ್ರೀವರನ ಕೊಂಡಾಡುತಿಹೆ ಮುಸಿ
ಗಾವಲಿಯು ಕನ್ನಡಿಗೆ ಸಮವೆನ-
ಲೀವಸುಧೆ ಮೆಚ್ಚುವುದೆ ಮರುಳೇ ಮಗನೆ ನಿನಗೆಂದ.

ಚೆಲುವನೆಂಬೆನೆ ಕಾಡ ಕೊಳ್ಳಿಯು
ತೊಳೆದ ಕೆಂಡದ ಪರಿಯು ದೇಹದ
ಬೆಳಗು ಗುಣವುಂಟೆಂಬೆನೇ ಮರೆವೊ

ಸಲಹಬೇಕೆಂಬವರ ಹುಟ್ಟಿನ
ವೊಳಗೆ ಬಿಸಿನೀರೆರೆವವನೊಳು
ಗೆಳೆತನವ ಮಾಡುವರೆ ಬೇಡೆಲೆ ಮಗನೆ ನಿನಗೆಂದ

ತಾತ ಕೇಳಂಧಕನು ಜರೆದೊಡೆ
ಖ್ಯಾತಿಗೆಡುವುದೆ ಮುಕುರ ಸಂತತಿ
ಜಾತಿಮರ್ಕಟ ಪಳಿದೊಡೇನಿಳಿವುದೆ ನಿಶಾಪತಿಯ
ಮೂತಿಯೊಳಗಣ ಚೆಲುವು ನೀನೀ
ಮಾತಿನಲಿ ಹಳಿದರೆ ಹರಿಯ ವಿ-
ಖ್ಯಾತಿ ಜಗದೊಳು ಹಿಂಗಿತೇ ಕೇಳೆಂದೆನಾ ಬಕುತ

ಹಿಂದೆ ಹರಿಯನು ನೆನೆಯಲೊಲ್ಲದೆ
ಬೆಂದು ಸೀಕರಿಯಾಗಿ ಭವದಲಿ
ಬಂದು ಬಂದತಿ ಬಳಲಿದೆನು ನಾನಿಂದು ಸಿರಿದರನ
ಕುಂದದಂಘ್ರಿಯ ನೆನೆದು ಭವಗಳ
ಕೊಂದು ಮುಕ್ತಿಯನೈದ ಬೇಕಿ-
ನ್ನೊಂದು ಕ್ಷಣವೆನ್ನೊಡೆಯ ನಾರಾಯಣನ ಬಿಡೆನೆಂದ. 1

ಅಭ್ಯಾಸ

1. ಹರಿಯು ವರಾಹ ರೂಪಿಂದ ಕೊಂದ ದುರಾತ್ಮನು ಯಾರು
ಆತನ ಕತೆ ಬರೆಯಿರಿ.

2. ಪ್ರಹ್ಲಾದನು ಹೇಳುವಂತೆ ಶ್ರೀ ತರುಣಿ ವಲ್ಲಭನು ಎಂತಹನು

3. [illegible]ಧ ರವಿಯ ಸಖತನದ ಗಾದೆಯೇನು? ವಿವರಿಸಿರಿ.

[illegible]ಣೆ ಬಾಯಿಗೆ ಬರಲು ನಾನದನೆಂತು ಬಿಡಲಿ ಎನ್
[illegible] ದೃಷ್ಟಾಂತ ಕೊಡುವನು?

5. ಮುಂದಿನ ಮಾತುಗಳನ್ನು ಸಂದರ್ಭದೊಡನೆ ವಿವರಿಸಿರಿ:—
(ಅ) ಮಸಿಗಾವಲಿಯು ಕನ್ನಡಿಗೆ ಸಮವೆನಲೀ ವಸುಧೆ ಮೆಚ್ಚುವುದೆ? (ಆ) ಅಂಧಕನು ಜರೆದೊಡೆ ಖ್ಯಾತಿಗೆಡುವುದೆ ಮುಕುರ ಸಂತತಿ? (ಇ) ಜಾತಿ ಮರ್ಕಟ ಪಳಿದೊಡೇನಿಳಿವುದೆ ನಿಶಾಪತಿಯ ಮೂತಿಯೊಳಗಣ ಚೆಲುವು?

6. ಈ ಪದ್ಯ ಭಾಗವನ್ನು ನಿಮ್ಮ ಮಾತುಗಳಲ್ಲಿ ಸಂವಾದ ರೂಪದಲ್ಲಿ ಬರೆಯಿರಿ.

7. ಸಿರಿದರ, ನಿರ್ಜರ, ದೈತ್ಯರಿಪು, ಲಕ್ಷ್ಮೀಧರ, ಶ್ರೀತರುಣಿವಲ್ಲಭ, ನಿಶಾಪತಿ—ಈ ಹೆಸರುಗಳ ಅವಯವಾರ್ಥವೇನು?

8. ಈ ಪದ್ಯಭಾಗದಲ್ಲಿ ಹರಿಗೆ ಬರುವ ಬೇರೆ ಬೇರೆ ಹೆಸರುಗಳಾವುವು?

ವೀರತನ, ವಿತರಣವು, ಸಾರಗನ ಚಪಲತೆಯು
ಚಾರುತರ ರೂಪು ಚದುರತನವೆಲ್ಲರಿಗೆ
ಹೋರಿದರೆ ಬಹುದೆ? ಸರ್ವಜ್ಞ.

ಬೆರೆವಂಗೆ ಭೋಗವು ಮೊರೆವಂಗೆ ರಾಗವು
ಬರೆವಂಗೆ ಓದುಬರುವಂತೆ ಸಾಧಿಪಗೆ
ಬಾರದಿಹುದುಂಟೆ? ಸರ್ವಜ್ಞ.

ವಿದ್ಯವೇ ತಾಯ್ತಂದೆ ಬುದ್ಧಿಯೇ ಸೋದರನು
ಅಧ್ವಾನಕಾದರವ ನೆಂಟ, ಸುಖದಿ ತಾ-
ನಿದ್ದುದೇ ರಾಜ್ಯ ಸರ್ವಜ್ಞ.

ಒಡಲಡಗಿದಾ ವಿದ್ಯೆ ನಡೆದೊಡನೆ ಬರುತಿಹುದ
ಒಡಹುಟ್ಟಿದವರು, ಕಳ್ಳರು, ನೃಪರದನು
ಪಡೆಯರೆಂದರಿಗು! ಸರ್ವಜ್ಞ.

೨೯. ಚಂದ್ರಹಾಸನ ಬಾಲ್ಯ

ಲಕ್ಷ್ಮೀಶ (ಜೈಮಿನಿ ಭಾರತ)

ಇನ್ನೊರೆವೆನಾಲಿಸಾದೊಡೆ ಪಾರ್ಥ ಧಾರ್ಮಿಕಂ
ಮುನ್ನೊರ್ವನುಂಟು ಕೇರಳ ದೇಶದವನಿಪಂ
ಸನ್ನುತ ಗುಣೋದಯಂ ಮೇಧಾವಿಯೆಂಬವಂ ಬಲಯುತಂ ಬಳಿಕವಂ
ತನ್ನ ಪಟ್ಟದ ರಾಣಿಯೊಳ್ ಬಹಳ ಭಾಗ್ಯ ಸಂ
ಸನ್ನನೆಡದಂಘ್ರಿಗರುವೆರಳಾಗಿ ದಿವದೊಳು
ತ್ಪನ್ನನಾದಂ ಮೂಲ ನಕ್ಷತ್ರದಿಂದರಿಷ್ಟಾಂಶದೊಳ್ ಸುಕುಮಾರನು

ಪುತ್ರೋತ್ಸವಂ ಮಾಡಿ ಕೆಲವು ದಿನವಿರೆ ನೃಪಂ
ಶತ್ರುಗಳ್ ಬಂದು ನಿಜನಗರಮಂ ಮುತ್ತಿದೊಡೆ [ಕೇಳ
ಕ್ಷತ್ರಧರ್ಮದೊಳವರೊಡನೆ ಯುದ್ಧರಂಗದೊಳ್ ಪೊಯ್ದಾಡಿ ಮಡಿಯೆ
ಚಿತ್ರಭಾನು ಪ್ರವೇಶಂಗೈದಳಂದು ಶತ
ಪತ್ರಲೋಚನೆ ಪತಿವ್ರತೆಯಾಗಿ ಬಳಿಕಿಲೆ ಧ
ರಿತ್ರೀಶ್ವರನ ರಾಜ್ಯಮಂ ತೆಗೆದು ಕೊಂಡಹಿತರಾಳ್ದರದನೇವೇಳ್ವೆನು

ಬಳಿಕೊರ್ವ ಧಾತ್ರಿ ಶಿಶುವಂ ಕೊಂಡು ಪೊರಮಟ್ಟು
ತೊಳಲಿ ಬಳಲುತೆ ಮೆಲ್ಲಮೆಲ್ಲನೆಯ್ತಂದು ಕುಂ
ತಳ ನಗರಮಂ ಪೊಕ್ಕಳಲ್ಲಿ ಸಾಕಿದಳರ್ಭಕನನತಿಸ್ನೇಹದಿಂದ
ಎಳೆಯಂಗೆ ಬೇಕಾದುದಿಲ್ಲದಿರೆ ಮರುಗುವಳ್
ಪೊಳಲೊಳಗೆ ತಿಂದು ಹೊರೆದಳಲುವಳ್ ಮುದ್ದಿಸಿ ಪ
[illegible]ಸುಳೆಯ ಬಿನದಂಗಳ್ಗೆ ಹಿಗ್ಗಿ ಬಿಸುಸುಯ್ವಳವಳನು

[illegible]ಯಿ[illegible] ದಿನದೊಳಾರ್ತೆಯಾಗಿ 3

[illegible]ಡೆ ತೊ[illegible]ಡಿಸುವರಿಲ್ಲ ನಿನಗೆ ಪೊಂ
[illegible]ವಿಲ್ಲ ಬಿಡಡೆರೆವ ನೀ
[illegible]ಲಿ ಲಾಲಿಸಿ ನಲಿವ ತಂದೆತಾಯ್ಗಳಿಲ್ಲ

ಪೊಡವಿಪತಿ ಕೇರಳಾಧೀಶ್ವರಂ ಪರಕೆಯೊಳ್
ಪಡೆದನಿದಕೀಗ ನಿನ್ನಂ ನೋಡುವೆನ್ನ ಕಣ್ಣೊ
ಒಡೆಯುದಿರದಕಟೆಂದು ಬಿಸುಸುಯ್ದುಳಲ್ದು ಮರುಗುವಳಾಕೆ
ದಿನದಿನದೊಳು 4

ಮೊಳೆವಲ್ಲೊಗುವ ಜೊಲ್ಲು ದಟ್ಟಡಿ ತೊದಲ್ವ ನುಡಿ
ತೊಳತೊಳಗುತಿಹ ಸೊಬಗು ಮೆರೆವ ನಗೆಮೊಗದ ಬಗೆ
ಪೊಳೆವ ಕಣ್ ಮಿಸುಪ ನುಣ್ಗದಪಿನೆಡೆ ಚೆಲ್ವ ಪಣೆ ಕುರುಳು
ಜೋಲ್ವಂಬೆಗಾಲು
ಸುಳಿನಾಭಿಮಿಗೆ ಶೋಭಿಪಧರದೆಡೆ ಒಟ್ಟಿದೊಡೆ
ನಳಿತೋಳಿಡಿದ ಧೂಳಿ ಸೊಗಯಿಸುವ ವರ ಶಿಶುವ
ನಲಿದಾಡಿಸುವ ರೂಢಿಯಿಲ್ಲೆಂದು ನೆರೆನೊಂದು ಮರುಗುವಳಜಸ್ರಮವಳು

ಬಾಲಕನ ಲೀಲೆಯುಂ ಕಂಡು ಹಿಗ್ಗುವಳೊಮ್ಮೆ
ಲಾಲನೆಗಳಿಲ್ಲೆಂದಳಲ್ದು ಮರುಗುವಳೊಮ್ಮೆ
ಪಾಲಿಸಿದಳಿಂತು ನಡೆನುಡಿಗಳಂ ಕಲಿವಲ್ಲಿ ಪರಿಯಂತಮಾಶಿಶುವನು
ಮೇಲೆರುಜೆ ಬಂದಡಸೆ ವಿಧಿವಶದೊಳಾ ಧಾತ್ರಿ
ಕಾಲನರಮನೆಗೈದಿದಳ್ ಬಳಿಕ ಹಸುಳೆಗೆ ನಿ
ರಾಲಂಬಮಾಗಲಾ ಪಟ್ಟಣೊದೊಳೆಲ್ಲರ್ಗೆ ಕಾರುಣ್ಯಕೀಡಾದನು 6

ಚೆಲ್ವ ಶಿಶು ಬೀದಿಯೊಳ್ ಬಂದು ದೇಶಿಗನಾಗಿ
ನಿಲ್ವಿನಂ ಕಂಡಕಂಡಬಲೆಯರ್ ಕರೆಕರೆದು
ಮೆಲ್ವ ತನಿವಣ್ಗಳಂ ಕಜ್ಜಾಯ ಸಕ್ಕರೆಗಳಂ ಕೊಡುವರೆತ್ತಿಕೊಂಡು
ಸೊಲ್ವ ಮಾತುಗಳನಾಡಿಸಿ ಮುದ್ದುಗೈವರವ
ರೊಲ್ವುದಕ ಮಜ್ಜನಂ ಗೆಯ್ಸಿ ಮಡಿಯುಂ ಪೊದೆಸಿ
ಮೆಲ್ಪಾಸಿನೊಳ್ ಮಲಗಿಸುವರಳ್ತಿಯಿಂದೊಸೆ

ಆಡುವೆಳಮಕ್ಕಳೊಡನಾಡುವಂ ಲೀಲೆ ಮಿಗೆ
ನೋಡುವಚ್ಚರಿಗಳಂ ನೋಡುವಂ ಬಾಲಕರ
ಕೂಡೆ ಮನೆಮನೆಗಳೊಳಗಾಡುತಿಹನೆಲ್ಲರ್ಗೆ ಮುದ್ದು ಮೋಹಿಸುತಿರ್ಪ
ಪಾಡುವರ ನೋಡುವರನಾಡೆ ಸಾಧನೆಗಳಂ
ಮಾಡುವರ ನೆರವಿಯೊಳ್ ಕ್ರೀಡಿಸುವನಾಪುರದ
ರೂಢಿಸಿದ ಬೀದಿಯೊಳ್ ಕೂಡದೆಲ್ಲೆಡೆಯೊಳಂ ಪಸುಳೆ ಪರಪುಟ್ಟನಾಗಿ

ಅಭ್ಯಾಸ

1. ಚಂದ್ರಹಾಸನು ಅನಾಥನಾಗಲು ಕಾರಣವೇನು?

2. ಮರುಗುವಳಾಕೆ ದಿನದಿನದೊಳು—ಹೇಗೆಂದು ಮರುಗುವಳು

3. ಚಂದ್ರಹಾಸನು ಎಲ್ಲರ್ಗೆ ಕಾರುಣ್ಯಕೀಡಲು ಕಾರಣವೇನು?

4. ಪಸುಳೆ ಪರಪುಟ್ಟನಾಗಿ ಏನೇನು ಮಾಡುವನು?

5. ಚಂದ್ರಹಾಸನ ಬಾಲ್ಯವನ್ನು ಬಣ್ಣಿಸಿ ಬರೆಯಿರಿ.

6. ಮುಂದಿನ ಮಾತುಗಳಲ್ಲಿರುವ ಕನ್ನಡ ಸಂಸ್ಕೃತಗಳನ್ನು ಹೆಕ್ಕಿ ತೆಗೆಯಿರಿ:—ಧಾರ್ಮಿಕ; ಕೆಲವು; ಬಳಿಕ; ರಾಜ್ಯ; ಅರ್ಭಕ; ನುಡಿ ಪರಕೆ; ಪಟ್ಟಣ.

7. ಶಿಶು, ಪತಿವ್ರತೆ, ಧಾತ್ರಿ, ಅರ್ಭಕ, ವಿಧಿ—ಈ ಶಬ್ದಗಳ ತದ್ಭವ ರೂಪಗಳಾವುವು?

8. ಬಟ್ಟೆದೊಡೆ, ನಡೆನುಡಿ, ಕಜ್ಜಾಯಸಕ್ಕರೆಗಳು, ಮೆಲ್ವಾಸು, ಪರಪುಟ್ಟ—ಇವು ಯಾವ ಸಮಾಸಗಳು?

9. ಮುಂದಿನ ನಾಮಪದಗಳಲ್ಲಿ ರೂಢನಾಮ, ಅಂಕಿತನಾಮ, [illegible] ನಾಮಗಳನ್ನು ಪ್ರತ್ಯಪ್ರತ್ಯೇಕಿಸಿ ಬರೆಯಿರಿ:—ಮೇಧಾವಿ; ನೃಪ; [illegible] ಬಿನದ; ಶಿಶು; ಮಾತು; ಬೀದಿ; ಲಾಲನೆ; ಅಳ್ತಿ.